ಮಂಗಳವಾರ, ಮೇ 20, 2025 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

150 ವಿಕೆಟ್ ಮೈಲಿಗಲ್ಲು

ಸನ್‌ರೈಸರ್ಸ್ ಹೈದರಾಬಾದ್ ತಂಡದ ವೇಗದ ಬೌಲರ್ ಹರ್ಷಲ್ ಪಟೇಲ್ ಸೋಮವಾರ ಐಪಿಎಲ್‌ನಲ್ಲಿ 150 ವಿಕೆಟ್ ಪೂರೈಸಿದರು. 117ನೇ ಪಂದ್ಯ ಆಡಿದ ಅವರು ಲಸಿತ್ ಮಾಲಿಂಗ (105 ಪಂದ್ಯ) ನಂತರ ಅತಿ ವೇಗವಾಗಿ 150 ವಿಕೆಟ್ ಪಡೆದ ಎರಡನೇ ಬೌಲರ್ ಎನಿಸಿದರು.

ನಗರಾಭಿವೃದ್ಧಿ ಇಲಾಖೆ
ಪೌರಾಡಳಿತ ನಿರ್ದೇಶನಾಲಯ

ಪ್ರಗತಿಯತ್ತ ಕರ್ನಾಟಕ

ಅಭಿವೃದ್ಧಿಯ 2 ವರ್ಷಗಳು

ಇಂದಿರಾ ಕ್ಯಾಂಟೀನ್

ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ **197** ಇಂದಿರಾ ಕ್ಯಾಂಟೀನ್‌ಗಳ ಜೊತೆಗೆ ಹೆಚ್ಚುವರಿ **186** ಹೊಸ ಕ್ಯಾಂಟೀನ್ ಅನುಷ್ಠಾನ

ಮೂಲಸೌಕರ್ಯ ಅಭಿವೃದ್ಧಿ

ಅಮೃತ ನಗರೋತ್ಥಾನ (ಮುನಿಸಿಪಾಲಿಟಿ)– 4ನೇ ಹಂತದ ಯೋಜನೆಯಡಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು **ರೂ. 3885.00** ಕೋಟಿಗಳ ಅನುದಾನ ಹಂಚಿಕೆ.

ಇ–ಖಾತಾ ಅಭಿಯಾನ

ನಗರ ವ್ಯಾಪ್ತಿಯಲ್ಲಿನ ಎಲ್ಲಾ ಸ್ವತ್ತುಗಳಿಗೆ ಇ–ಖಾತಾ ಭಾಗ್ಯ

ಇದುವರೆಗೆ ವಿತರಿಸಲಾದ
ಎ–ಖಾತಾ : **1,47,497**
ಬಿ–ಖಾತಾ : **1,07,133**

ಪೌರಕಾರ್ಮಿಕರ ಗೃಹಭಾಗ್ಯ ಯೋಜನೆ

ವಸತಿರಹಿತ ಖಾಯಂ ಪೌರಕಾರ್ಮಿಕರಿಗೆ ನೆಮ್ಮದಿಯ ಸ್ವಂತ ಸೂರು.

ಪೌರಕಾರ್ಮಿಕರ ಸಕ್ರಮಾತಿ

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಪೌರಕಾರ್ಮಿಕರಿಗೆ ಖಾಯಮಾತಿ ಭಾಗ್ಯ.

ಎರಡು ವರ್ಷಗಳ ಸಾಧನೆಯ ಸಮರ್ಪಣೆ
ಮತ್ತಷ್ಟು ಜನಪರ ಸೇವೆಯ ಪ್ರತಿಜ್ಞೆ
20ನೇ ಮೇ, 2025, ಮಂಗಳವಾರ
ಜಿಲ್ಲಾ ಕ್ರೀಡಾಂಗಣ,
ಹೊಸಪೇಟೆ, ವಿಜಯನಗರ ಜಿಲ್ಲೆ

ಸರ್ವರಿಗೂ ಆದರದ ಸುಸ್ವಾಗತ



ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯರವರು ಹಾಗೂ ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್ ರವರೊಂದಿಗೆ ಶ್ರೀ ರಹೀಂ ಖಾನ್, ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿರುವುದು.

ಕರ್ನಾಟಕದ ನವ ನಿರ್ಮಾಣಕ್ಕೆ
ಗ್ಯಾರಂಟಿ ಸರ್ಕಾರ

ಶಕ್ತಿ ಗೃಹ ಜ್ಯೋತಿ ಅನ್ನಭಾಗ್ಯ ಗೃಹಲಕ್ಷ್ಮಿ ಯುವನಿಧಿ

''ನಮ್ಮ ವೈವಿಧ್ಯಮಯ ಸಂಸ್ಕೃತಿಯ ಶ್ರೇಷ್ಠ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು'' – ಇದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಕರ್ತವ್ಯ.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಂಚಾರ ನಿಯಮ ಉಲ್ಲಂಘನೆ ವಸೂಲಾಗದ ಶೇ 75ರಷ್ಟು ದಂಡ

₹12,000 ಕೋಟಿ ದೇಶದಾದ್ಯಂತ 2024ರಲ್ಲಿ ವಿಧಿಸಲಾದ ದಂಡದ ಒಟ್ಟು ಮೊತ್ತ

₹3,000 ಕೋಟಿ ವಸೂಲಾದ ದಂಡದ ಮೊತ್ತ

₹9,000 ಕೋಟಿ ವಸೂಲಾಗದ ದಂಡದ ಮೊತ್ತ

8 ಕೋಟಿ: ನೋಟಿಸ್ ನೀಡಲಾದ ಪ್ರಕರಣಗಳ ಸಂಖ್ಯೆ

* 475 ಪ್ರತ್ಯೇಕ ಪ್ರಕರಣಗಳಲ್ಲಿ ಬೆಂಗಳೂರಿನ ದ್ವಿಚಕ್ರ ವಾಹನ ಸವಾರರೊಬ್ಬರಿಗೆ ₹2.91 ಲಕ್ಷ ದಂಡ ವಿಧಿಸಲಾಗಿದೆ

ಆಧಾರ: 'ಕಾರ್ಸ್24' ಕಂಪನಿ ವರದಿ

ಆಳ-ಅಗಲ

ಅಲ್ಪಾವಧಿ ಸಿಜೆಐ: ಸಾಂವಿಧಾನಿಕ ತೀರ್ಮಾನಕ್ಕೆ ಅಡ್ಡಿ?

ರೈತರ ವಿದ್ಯುತ್ ಸಬ್ಸಿಡಿ: ಹೈಕೋರ್ಟ್ ಗಡುವು 8

ಬೆಂಗಳೂರು ಮುಂದೆ, ಜಿಲ್ಲೆಗಳು ಹಿಂದೆ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
82,059	24,945	₹98,880 (ಬೆಂಗಳೂರು)	₹1.02 ಲಕ್ಷ (ಬೆಂಗಳೂರು)	85.42

ಯುಕೊ ಬ್ಯಾಂಕ್ ಮಾಜಿ ಸಿಎಂಡಿ ಗೋಯಲ್ ಬಂಧನ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಯುಕೊ ಬ್ಯಾಂಕ್‌ನ ಮಾಜಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ (ಸಿಎಂಡಿ) ಸುಬೋಧ್ ಕುಮಾರ್ ಗೋಯಲ್ ಅವರನ್ನು ₹6,200 ಕೋಟಿಗೂ ಹೆಚ್ಚು ಹಣದ ಅಕ್ರಮ ವರ್ಗಾವಣೆ ಆರೋಪದಡಿ ಬಂಧಿಸಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಸೋಮವಾರ ತಿಳಿಸಿದೆ.

16

ಸಿ.ಟಿ. ರವಿ ಪ್ರಕರಣ ವಿಚಾರಣೆಗೆ ಸುಪ್ರೀಂ ಕೋರ್ಟ್ ತಡೆ

ನವದೆಹಲಿ: 'ಬೆಳಗಾವಿಯ ವಿಧಾನಮಂಡಲ ಅಧಿವೇಶನದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರನ್ನು ಅಶ್ಲೀಲ ಪದಬಳಕೆ ಮೂಲಕ ನಿಂದಿಸಲಾಗಿದೆ' ಎಂಬ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ವಿಧಾನ ಪರಿಷತ್ ಬಿಜೆಪಿ ಸದಸ್ಯ ಸಿ.ಟಿ.ರವಿ ಅವರ ವಿರುದ್ಧದ ವಿಚಾರಣೆಗೆ ಸುಪ್ರೀಂ ಕೋರ್ಟ್ ಸೋಮವಾರ ತಡೆಯಾಜ್ಞೆ ನೀಡಿದೆ.

9

ಚಿನಕುರುಳಿ

ಪ್ರಕಾಶ್ ಶೆಟ್ಟಿ



ನಾಲ್ಕು ಗಂಟೆ ಸುರಿದ ಬಿರುಸು ಮಳೆ, ಬಡಾವಣೆಗಳು ಜಲಾವೃತ • ಉರುಳಿ ಬಿದ್ದ ಬೃಹತ್ ಮರಗಳು

ಭಾರಿ ಮಳೆ, ರಾಜಧಾನಿ ಹೊಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ಭಾನುವಾರ ತಡರಾತ್ರಿಯಿಂದ ಸೋಮವಾರ ಮುಂಜಾನೆವರೆಗೆ ಗುಡುಗು, ಮಿಂಚು ಸಹಿತ ಸುರಿದ ಭಾರಿ ಮಳೆಯಿಂದ ನಗರದ ಅರ್ಧಭಾಗ ಜಲಾವೃತಗೊಂಡಿತು.

ನಗರದ ವಿವಿಧ ಭಾಗಗಳಲ್ಲಿ ಸುಮಾರು ನಾಲ್ಕು ಗಂಟೆ ಸುರಿದ ಬಿರುಸಾದ ಮಳೆಯಿಂದ ಹಲವು ಪ್ರದೇಶಗಳ ಮನೆಗಳಿಗೆ ನೀರು ನುಗ್ಗಿ, ನಿವಾಸಿಗಳ ರಾತ್ರಿಯ ನಿದ್ದೆಗೆಡಿಸಿತು. ಪ್ರಮುಖ ರಸ್ತೆಗಳು ಜಲಾವೃತವಾಗಿದ್ದರಿಂದ ಸೋಮವಾರ ಬೆಳಿಗ್ಗೆ ಕಚೇರಿಗೆ ತೆರಳುವ ನಾಗರಿಕರು ಸಂಕಷ್ಟಕ್ಕೊಳಗಾದರು. ಬಿಎಂಟಿಸಿ ಬಸ್ ಸೇರಿದಂತೆ ಹಲವು ವಾಹನಗಳು ರಸ್ತೆ ಮಧ್ಯದಲ್ಲಿಯೇ ನಿಂತಿದ್ದವು.

ಮಹದೇವಪುರದ ಶ್ರೀಸಾಯಿ ಲೇಔಟ್ ಸಂಪೂರ್ಣ ಜಲಾವೃತಗೊಂಡಿದ್ದು, ಜನರನ್ನು ಬೋಟ್ ಹಾಗೂ ಟ್ರ್ಯಾಕ್ಟರ್ ಮೂಲಕ ಸುರಕ್ಷಿತ ಸ್ಥಳಗಳಿಗೆ ಕರೆದೊಯ್ಯಲಾಯಿತು. ಹೆಣ್ಣೂರಿನ ನೆಲಮಹಡಿಯಲ್ಲಿದ್ದ ಅನಾಥಾಶ್ರಮವೊಂದಕ್ಕೆ ಭಾನುವಾರ ರಾತ್ರಿ ಮಳೆನೀರು ನುಗ್ಗಿದ್ದು, ಅಂಗವಿಕಲರೂ ಸೇರಿದಂತೆ 55 ವೃದ್ಧರು ಸೋಮವಾರದ ಮಧ್ಯಾಹ್ನದವರೆಗೂ ಹೊರಬರಲಾಗದೆ ಪರಿತಪಿಸಿದರು.

ನಗರದ ಎಲ್ಲ ಭಾಗಗಳಲ್ಲೂ ಭಾರಿ ಮಳೆಯಾಗಿದ್ದು, ಕೆಂಗೇರಿ ವ್ಯಾಪ್ತಿಯಲ್ಲಿ ಅತಿಹೆಚ್ಚು (13.2 ಸೆಂ.ಮೀ) ಮಳೆಯಾಗಿದೆ. ಗೊಟ್ಟಿಗೆರೆಯಲ್ಲಿ 3.2 ಸೆಂ. ಮೀ ಮಳೆಯಾಗಿದ್ದು, ಸರಾಸರಿ 6.6 ಸೆಂ. ಮೀ ಮಳೆಯಾಗಿದೆ.

ಸಿ.ಎಂ, ಡಿಸಿಎಂ ಅವಲೋಕನ: ಮಳೆಯಿಂದ ತೊಂದರೆಗೊಳಗಾದ ಜನರ ಅಹವಾಲು ಆಲಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪ್ರದೇಶಗಳ ವೀಕ್ಷಣೆಗೆ ಬಸ್‌ನಲ್ಲಿ ಹೊರಟಿದ್ದರು.

4ನೇ ಪುಟ ನೋಡಿ

ಭಾರಿ ಮಳೆಯಿಂದಾಗಿ ಜಲಾವೃತಗೊಂಡಿದ್ದ ಬೆಂಗಳೂರಿನ ಸಾಯಿ ಲೇಔಟ್‌ನಲ್ಲಿ ಸೋಮವಾರ ವ್ಯಕ್ತಿಯೊಬ್ಬರು ಮರದ ಹಲಗೆಯನ್ನೇ ದೋಣಿಯನ್ನಾಗಿ ಮಾಡಿಕೊಂಡು ಸಾಗಿದರು ಚಿತ್ರ: ಬಿ.ಕೆ.ಜನಾರ್ದನ್

ಐವರ ಸಾವು

ರಾಜ್ಯದಾದ್ಯಂತ ಭಾನುವಾರ ರಾತ್ರಿಯಿಂದ ಸುರಿದ ಭಾರಿ ಮಳೆಗೆ ಬೆಂಗಳೂರಿನಲ್ಲಿ ಮೂವರು ಸೇರಿದಂತೆ ಒಟ್ಟು ಐದು ಮಂದಿ ಮೃತಪಟ್ಟಿದ್ದಾರೆ.

ನಗರದಲ್ಲಿ ಹನ್ನೆರಡು ವರ್ಷದ ಬಾಲಕ ಸೇರಿ ಮೂವರು ಮೃತಪಟ್ಟಿದ್ದಾರೆ. ಮಹದೇವಪುರ ನಿವಾಸಿ ಶಶಿಕಲಾ (35), ಬಿಟಿಎಂ ಎರಡನೇ ಹಂತದ ಡಾಲರ್ಸ್ ಕಾಲೊನಿ ಬಳಿಯ ಎನ್. ಎಸ್. ಪಾಳ್ಯ ನಿವಾಸಿ ಮನಮೋಹನ್ ಕಾಮತ್ (63) ಹಾಗೂ ದಿನೇಶ್ (12) ಮೃತಪಟ್ಟವರು.

ಮಹದೇವಪುರದಲ್ಲಿರುವ ಐಜೆಡ್ ಎಂಬ ಕಂಪನಿಯ ಕಾಂಪೌಂಡ್ ಕುಸಿದು ಸ್ವಚ್ಛತಾ ಕೆಲಸ ಮಾಡುತ್ತಿದ್ದ ಯಾದಗಿರಿ ಜಿಲ್ಲೆಯ ಶಹಾಪುರದ ಶಶಿಕಲಾ ಅವರು ಮೃತಪಟ್ಟಿದ್ದಾರೆ.

4ನೇ ಪುಟ ನೋಡಿ

ಸಿಸಿಬಿ, ಪೊಲೀಸ್ ಠಾಣೆ ಜಲಾವೃತ

ಶಾಂತಿನಗರದಲ್ಲಿರುವ ಕೇಂದ್ರ ಅಪರಾಧ ಪತ್ತೆ ದಳದ (ಸಿಸಿಬಿ) ಕಚೇರಿ ಹಾಗೂ ಸಂಪಂಗಿ ರಾಮನಗರ ಪೊಲೀಸ್ ಠಾಣೆ ಸಂಪೂರ್ಣ ಜಲಾವೃತಗೊಂಡಿವೆ.

ಸಿಸಿಬಿ ಕಚೇರಿಗೆ ಮಳೆ ನೀರು ನುಗ್ಗಿ ಕಡತಗಳಿಗೆ ಹಾನಿಯಾಗಿದೆ. ಅಧಿಕಾರಿಗಳು ಹಾನಿಯ ಕುರಿತು ಮೌಲ್ಯಮಾಪನ ಮಾಡುತ್ತಿದ್ದಾರೆ. ಕಚೇರಿಯ ಕೆಳ ಮಹಡಿಯಲ್ಲಿ ಮೊಣಕಾಲುವರೆಗೂ ನೀರು ನಿಂತಿದ್ದು, ಸಂಜೆವರೆಗೂ ನೀರಿನ ಮಟ್ಟ ಕಡಿಮೆ ಆಗಿರಲಿಲ್ಲ.

ಚಾಮರಾಜಪೇಟೆಯಲ್ಲಿದ್ದ ಸಿಸಿಬಿ ಕಚೇರಿಯ ಹಳೆ ಕಟ್ಟಡ ಶಿಥಿಲಾವಸ್ಥೆ ತಲುಪಿದ್ದರಿಂದ ಶಾಂತಿನಗರದಲ್ಲಿರುವ ಕಟ್ಟಡಕ್ಕೆ ಕಚೇರಿಯನ್ನು ಸ್ಥಳಾಂತರಿಸಲಾಗಿತ್ತು. ಲಕ್ಷಾಂತರ ರೂಪಾಯಿ ಬಾಡಿಗೆ ನೀಡಿದರೂ ಮಳೆ ಸಂದರ್ಭದಲ್ಲಿ ಸೂಕ್ತ ನಿರ್ವಹಣೆ ಸೌಲಭ್ಯ ಇಲ್ಲದಿರುವುದು ಕಚೇರಿ ಸಿಬ್ಬಂದಿಗೆ ಸಂಕಷ್ಟ ತಂದೊಡ್ಡಿದೆ.

ರಾಜಕಾಲುವೆಗಳು ಒತ್ತುವರಿಯಾಗಿ, ಹೂಳು ತುಂಬಿರುವುದರಿಂದ ತೊಂದರೆಯಾಗಿದೆ. ತೆರವು ಮಾಡಲು ನಗರಪಾಲಿಕೆಗೆ ಸೂಚಿಸಲಾಗಿದೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಸಿಲ್ಕ್ ಬೋರ್ಡ್, ಹೆಬ್ಬಾಳ ಜಂಕ್ಷನ್‌ಗಳಲ್ಲಿ ಮಳೆನೀರು ಹರಿದುಹೋಗುವಂತೆ ದಾರಿ ಮಾಡಲು ರೈಲ್ವೆಯವರಿಗೆ ಕೆಲಸ ವಹಿಸಲಾಗಿದೆ

ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ

7 ಜಿಲ್ಲೆಗಳಿಗೆ ರೆಡ್ ಅಲರ್ಟ್

ರಾಜ್ಯದ ವಿವಿಧೆಡೆ ಮಂಗಳವಾರ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಏಳು ಜಿಲ್ಲೆಗಳಿಗೆ 'ರೆಡ್ ಅಲರ್ಟ್', ಮೂರು ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಘೋಷಿಸಿದೆ.

ಬೆಳಗಾವಿ, ಉತ್ತರ ಕನ್ನಡ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆ ಇದೆ. ಧಾರವಾಡ, ಹಾವೇರಿ ಮತ್ತು ಹಾಸನ ಜಿಲ್ಲೆಗಳಲ್ಲಿ ಬಿರುಗಾಳಿ ಸಹಿತ ಭಾರಿ ಮಳೆಯಾಗುವ ಸಾಧ್ಯತೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಬೆಂಗಳೂರಿನಲ್ಲಿ ಮುಂದಿನ ಮೂರು ದಿನಗಳು ಭಾರಿ ಗಾಳಿ ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. 20ರಿಂದ 22ರವರೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ.

ಸಮಾವೇಶ ಇಂದು

ಸರ್ಕಾರ 2 ವರ್ಷ ಪೂರೈಸಿದ ಸಂಭ್ರಮ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಪಂಚ ಗ್ಯಾರಂಟಿಗಳ ಯಶಸ್ವಿ ಅನುಷ್ಠಾನದ ಜತೆಗೇ ಎರಡು ವರ್ಷಗಳನ್ನು ಪೂರೈಸಿದ ಸಂಭ್ರಮದಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ, ತನ್ನ ಸಾಧನೆಗಳನ್ನು ಜನರ ಮುಂದಿಡುವ ಹಾಗೂ 'ಭೂ ಗ್ಯಾರಂಟಿ'ಗೆ ಚಾಲನೆ ನೀಡುವ ಉದ್ದೇಶದಿಂದ 'ಸಮರ್ಪಣಾ ಸಂಕಲ್ಪ ಸಮಾವೇಶ'ವನ್ನು ಮಂಗಳವಾರ ಇಲ್ಲಿ ಆಯೋಜಿಸಿದೆ.

ಮೂರು ಲಕ್ಷಕ್ಕೂ ಹೆಚ್ಚು ಜನರನ್ನು ಸೇರಿಸಿ, ಮಧ್ಯ ಕರ್ನಾಟಕದಲ್ಲಿ ತನ್ನ ಬಲವನ್ನು ಪ್ರದರ್ಶಿಸುವ ಆಶಯದಡಿ ವಿಜಯನಗರ ಜಿಲ್ಲೆಯನ್ನು ಆಯ್ದುಕೊಂಡಿದ್ದು, ಪುನೀತ್ ರಾಜ್‌ಕುಮಾರ್ ಜಿಲ್ಲಾ ಕ್ರೀಡಾಂಗಣದಲ್ಲಿ ಬೃಹತ್ ವೇದಿಕೆಯನ್ನು ನಿರ್ಮಿಸಲಾಗಿದೆ. ನಗರದಾದ್ಯಂತ ಕಾಂಗ್ರೆಸ್ ಬಾವುಟಗಳು, ಪಕ್ಷದ ಅಸ್ಮಿತೆ ಬಿಂಬಿಸುವ ತೋರಣಗಳು, ನಾಯಕರ ಬೃಹತ್ ಕಟೌಟ್‌ಗಳು ರಾರಾಜಿಸುತ್ತಿವೆ.

ಕಾಂಗ್ರೆಸ್ ಪಕ್ಷದ ಶಕ್ತಿ ಪ್ರದರ್ಶನವನ್ನೇ ಸಾಕ್ಷಿಯಾಗುವಂತೆ ಈ ಸಮಾರಂಭದ ತಯಾರಿ ನಡೆದಿದೆ. 'ನುಡಿದಂತೆ ನಡೆದಿದ್ದೇವೆ; ನುಡಿದಂತೆ ನಡೆಯುತ್ತಿದ್ದೇವೆ' ಎಂಬ ಘೋಷಣೆಯನ್ನು ಕಾಂಗ್ರೆಸ್ ನಾಯಕರು ಪುನರುಚ್ಚರಿಸಿದ್ದು, 'ಸಮರ್ಪಣಾ ಸಂಕಲ್ಪ' ಎಂಬ ಹೊಸ ಆಶಯವನ್ನು ಮೊಳಗಿಸಿದ್ದಾರೆ.

8ನೇ ಪುಟ ನೋಡಿ

ಕ್ಷಮಾಪಣೆ ಬೇಡ: ಎಸ್‌ಐಟಿ ರಚಿಸಿ– 'ಸುಪ್ರೀಂ' ಸೂಚನೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ (ಪಿಟಿಐ): ಕರ್ನಲ್ ಸೋಫಿಯಾ ಖುರೇಷಿ ಅವರ ಕುರಿತು ಆಕ್ಷೇಪಾರ್ಹ ಹೇಳಿಕೆ ನೀಡಿದ್ದ ಮಧ್ಯ ಪ್ರದೇಶದ ಸಚಿವ ವಿಜಯ್ ಶಾ ಪ್ರಕರಣಕ್ಕೆ ಸಂಬಂಧಿಸಿ ಮೂವರು ಸದಸ್ಯರ ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ರಚಿಸಲು ಮಧ್ಯಪ್ರದೇಶ ಪೊಲೀಸ್ ಮಹಾನಿರ್ದೇಶಕರಿಗೆ ಸುಪ್ರೀಂ ಕೋರ್ಟ್ ಸೋಮವಾರ ಸೂಚಿಸಿದೆ.

'ವಿಜಯ್ ಶಾ ಅವರ ವಿರುದ್ಧ ಎಫ್‌ಐಆರ್ ದಾಖಲಿಸಿ' ಎಂಬ ಮಧ್ಯಪ್ರದೇಶ ಹೈಕೋರ್ಟ್‌ನ ಆದೇಶವನ್ನು ಪ್ರಶ್ನಿಸಿ, ವಿಜಯ್ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ನ್ಯಾಯಮೂರ್ತಿಗಳಾದ ಸೂರ್ಯಕಾಂತ್

ವಿಜಯ್ ಶಾ

ಮತ್ತು ಎನ್. ಕೋಟಿಶ್ವರ್ ಸಿಂಗ್ ಅವರಿದ್ದ ಪೀಠವು ಅರ್ಜಿಯ ವಿಚಾರಣೆ ನಡೆಸಿತು.

'ನಾನು ಕ್ಷಮಾಪಣೆಕೇಳಿದ್ದೇನೆ. ಆದ್ದರಿಂದ ನನ್ನ ಮೇಲೆ ಯಾವುದೇ ಕ್ರಮ ಕೈಗೊಳ್ಳಬಾರದು' ಎನ್ನುವುದು ವಿಜಯ್ ಶಾ ಅವರ ವಾದ. ಈ ಬಗ್ಗೆ ಪ್ರತಿಕ್ರಿಯಿಸಿದ ಪೀಠ, 'ಕ್ಷಮಾಪಣೆ ಕೇಳಿದ ವಿಡಿಯೊವನ್ನು ನಾವು ನೋಡಿದ್ದೇವೆ. ನೀವು ಮೊಸಳೆ ಕಣ್ಣೀರು ಹಾಕಿದ್ದೀರಿ ಅಥವಾ ಕಾನೂನು ಕ್ರಮಗಳನ್ನು ತಪ್ಪಿಸಿಕೊಳ್ಳಲು ಕ್ಷಮೆ ಕೇಳಿದ್ದೀರಿ' ಎಂದಿತು

4ನೇ ಪುಟ ನೋಡಿ

ಕ್ಷಮಾಪಣೆ ಪದಕ್ಕೆ ಅರ್ಥವಿದೆ. ಕೆಲವೊಮ್ಮೆ ಜನರು ಅತಿ ನಯವಾದ ಭಾಷೆಯಲ್ಲಿ ಬಹಳ ಕೃತಕವಾಗಿ ಕ್ಷಮೆ ಕೇಳುತ್ತಾರೆ. ಕಾನೂನು ಕ್ರಮದಿಂದ ತಪ್ಪಿಸಿಕೊಳ್ಳಲು ಕೆಲವರು ಮೊಸಳೆ ಕಣ್ಣೀರು ಹಾಕುತ್ತಾರೆ. ನಿಮ್ಮದು ಯಾವ ರೀತಿಯ ಕ್ಷಮಾಪಣೆ? ಇದನ್ನು ತಿಳಿದುಕೊಳ್ಳುವ ಕುತೂಹಲ ನಮಗಿದೆ

ಸುಪ್ರೀಂ ಕೋರ್ಟ್ ಪೀಠ

ಸಮಾಜ ಕಲ್ಯಾಣ ಇಲಾಖೆ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಗೌರವಾನ್ವಿತ ನ್ಯಾಯಮೂರ್ತಿ
ಡಾ. ಹೆಚ್.ಎನ್.ನಾಗಮೋಹನ ದಾಸ್
ಏಕ ಸದಸ್ಯ ಆಯೋಗ
ಯವನಿಕಾ, ನೃಪತುಂಗ ರಸ್ತೆ, ಬೆಂಗಳೂರು.

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

ಪರಿಶಿಷ್ಟ ಜಾತಿ ಸಮಗ್ರ ಸಮೀಕ್ಷೆ - 2025
ಆನ್‌ಲೈನ್ ಮೂಲಕ ಸ್ವಯಂ ಘೋಷಣೆ
https://schedulecastesurvey.karnataka.gov.in/selfdeclaration
19.05.2025 ರಿಂದ 28.05.2025 ರವರೆಗೆ ಮರು ನಿಗದಿಪಡಿಸಲಾಗಿದೆ
ನಿಮ್ಮ ಸಾಮಾಜಿಕ ಜವಾಬ್ದಾರಿಯಲ್ಲಿ ಪಾಲ್ಗೊಳ್ಳಲು ಒಂದು ಸುವರ್ಣಾವಕಾಶ

- ಮನೆ ಮನೆಯ ಭೇಟಿ ಸಂದರ್ಭದಲ್ಲಿ ತಮ್ಮ ಮಾಹಿತಿಯನ್ನು ನೀಡದವರು ನೇರವಾಗಿ ಆನ್ ಲೈನ್ ಮೂಲಕ (https://schedulecastesurvey.karnataka.gov.in/selfdeclaration) ಸ್ವಯಂ ಘೋಷಣೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.
- ಆನ್ ಲೈನ್ ನೋಂದಣಿಗಾಗಿ ಆಧಾರ್ ಕಾರ್ಡ್ ಹಾಗೂ ಜಾತಿ ಪ್ರಮಾಣ ಪತ್ರದ ಆರ್.ಡಿ ನಂಬರ್ ಅವಶ್ಯಕ.
- ನಿಮ್ಮ ಮುಂದಿನ ಪೀಳಿಗೆ ಮೀಸಲಾತಿ ಸೌಲಭ್ಯಗಳಿಂದ ವಂಚಿತರಾಗದಿರಲಿ.
- ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರನ್ನು ಗುರುತಿಸಲು ಪರಿಶಿಷ್ಟ ಜಾತಿಗಳಲ್ಲಿ (ಎಸ್‌ಸಿ) ಆಂತರಿಕ ಮೀಸಲಾತಿಯ ಬೇಡಿಕೆಗಳನ್ನು ಪರಿಹರಿಸಲು ಸರ್ಕಾರ ಕೈಗೊಂಡ ಒಂದು ಮಹತ್ವಾಕಾಂಕ್ಷಿ ಹಾಗೂ ದಿಟ್ಟ ಹೆಜ್ಜೆಯಾಗಿದೆ.
- ನ್ಯಾಯಯುತ ಮೀಸಲಾತಿ ಹಂಚಿಕೆಗಾಗಿ ಸಮೀಕ್ಷಾದಾರರಿಗೆ ಪರಿಶಿಷ್ಟ ಜಾತಿಗೆ ಸೇರಿದವರು ತಮ್ಮ ಮೂಲ ಜಾತಿ, ಶಿಕ್ಷಣ, ವರಮಾನ, ಉದ್ಯೋಗ ಮತ್ತು ಇನ್ನಿತರ ನಿಖರ ಮಾಹಿತಿ ನೀಡುವುದು ನಿಮ್ಮೆಲ್ಲರ ಆದ್ಯ ಕರ್ತವ್ಯ.

ನಿಮ್ಮ ಜಾತಿ,
ಆದಿ ಕರ್ನಾಟಕ
ಆದಿ ದ್ರಾವಿಡ
ಆದಿ ಆಂಧ್ರ
ಎಂದು ಇದ್ದಲ್ಲಿ ಮೂಲ ಜಾತಿಯನ್ನು ಒದಗಿಸುವುದು

ಮಾನ್ಯ ಸಮಾಜ ಕಲ್ಯಾಣ ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪ ರವರು ಕಾರ್ಯಕ್ರಮವೊಂದರಲ್ಲಿ ಮಾತನಾಡುತ್ತಿರುವುದು.

ಸಹಾಯವಾಣಿ 9481359000

ನಮ್ಮ ಕರ್ನಾಟಕ ಗ್ಯಾರಂಟಿ ಕರ್ನಾಟಕ
ಶಕ್ತಿ ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ | ಅನ್ನಭಾಗ್ಯ 10kg | ಗೃಹಜ್ಯೋತಿ ಪ್ರತಿ ಮನೆಗೆ 200 | ಗೃಹಲಕ್ಷ್ಮಿ ₹2000 | ಯುವನಿಧಿ ₹3000 | ₹1500

ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು - ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ನಿಮ್ಮ ಹೂಡಿಕೆಯ ಆದಾಯವನ್ನು ವೇಗಗೊಳಿಸಿ

ಎಲ್ಐಸಿಯ ಇಂಡೆಕ್ಸ್ ಪ್ಲಸ್
UIN: 512L354V01 | Plan No.: 873

ಆನ್‌ಲೈನ್‌ನಲ್ಲೂ ಲಭ್ಯ

ಮಾರುಕಟ್ಟೆಯ ಆದಾಯಕ್ಕೆ ಜೀವ ವಿಮೆಯ ಲಾಭವನ್ನು ಸೇರಿಸಿರಿ

ನಾನ್-ಪಾರ್, ಲಿಂಕ್ಡ್, ಲೈಫ್, ಇಂಡಿವಿಜುವಲ್, ಉಳಿತಾಯ ಯೋಜನೆ

- ಅತ್ಯಂತ ಕಡಿಮೆ ಮಾಸಿಕ ಪ್ರೀಮಿಯಂ ₹2500/- ನೊಂದಿಗೆ ಪ್ರಾರಂಭಿಸಿ
- ಆಯ್ಕೆಗೆ ಎರಡು ಫಂಡ್‌ಗಳಿವೆ – ನಿಫ್ಟಿ 50 (ಫ್ಲೆಕ್ಸಿ ಸ್ಮಾರ್ಟ್ ಗ್ರೋಥ್ ಫಂಡ್) ಅಥವಾ ನಿಫ್ಟಿ 100 (ಫ್ಲೆಕ್ಸಿ ಗ್ರೋಥ್ ಫಂಡ್)ನ ಆಯ್ದ ಸ್ಟಾಕ್‌ಗಳಲ್ಲಿ 100% ವರೆಗೆ ವಿನಿಯೋಜನೆ
- ಖಾತರಿ ಪಡಿಸಿದ ಸೇರ್ಪಡೆಯೊಂದಿಗೆ*

* ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ

LIC
ಲೈಫ್ ಇನ್ಶೂರೆನ್ಸ್ ಕಾರ್ಪೊರೇಶನ್ ಆಫ್ ಇಂಡಿಯಾ
LIFE INSURANCE CORPORATION OF INDIA
ಪ್ರತಿ ಕ್ಷಣವೂ ನಿಮ್ಮೊಂದಿಗೆ

LIC/P1/2024-25/22/KAN

ವಿವರಗಳಿಗಾಗಿ ನಿಮ್ಮ ಏಜಂಟರನ್ನು /ಸಮೀಪದ ಎಲ್ಐಸಿ ಶಾಖೆಯನ್ನು ಸಂಪರ್ಕಿಸಿರಿ ಅಥವಾ ನಿಮ್ಮ ನಗರದ ಹೆಸರನ್ನು 56767474ಗೆ SMS ಮಾಡಿ

ಡೌನ್‌ಲೋಡ್ ಮಾಡಿರಿ ಎಲ್ಐಸಿ ಮೊಬೈಲ್ ಆ್ಯಪ್ LIC digital | ಸಂದರ್ಶಿಸಿರಿ: licindia.in | ಕಾಲ್ ಸೆಂಟರ್ ಸರ್ವಿಸ್ (022) 6827 6827 | ನಮ್ಮ ವಾಟ್ಸ್ಆ್ಯಪ್ ನಂ. 8976862090 'Hi' ಹೇಳಿರಿ | ನಮ್ಮನ್ನು ಫಾಲೋ ಮಾಡಿರಿ: LIC India Forever | IRDAI Regn No.: 512

ಕೃತ್ರಿಮ ಫೋನ್ ಕಾಲ್‌ಗಳ ಬಗ್ಗೆ ಮತ್ತು ನಕಲು/ಮೋಸದ ಆಫರ್‌ಗಳ ಬಗ್ಗೆ ಎಚ್ಚರಿಕೆ. ಐಆರ್‌ಡಿಎಐ ಅಥವಾ ಅದರ ಅಧಿಕಾರಿಗಳು ವಿಮಾ ಪಾಲಿಸಿಗಳನ್ನು ಮಾರಾಟ ಮಾಡುವ, ಬೋನಸ್‌ಗಳನ್ನು ಘೋಷಿಸುವ ಅಥವಾ ಪ್ರೀಮಿಯಮ್‌ಗಳನ್ನು ವಿನಿಯೋಜಿಸುವ, ಮೊಬಲಗುಗಳನ್ನು ಹಿಂತಿರುಗಿಸುವಂಥ ಈ ತರಹದ ಯಾವುದೇ ವಿಮಾ ವ್ಯವಹಾರದ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದಿಲ್ಲ. ಇಂಥ ಫೋನ್‌ಕಾಲ್‌ಗಳನ್ನು ಪಡೆಯುವ ಪಾಲಿಸಿಧಾರಕರು ಅಥವಾ ಭಾವೀ ಗ್ರಾಹಕರು ಪೋಲೀಸರಲ್ಲಿ ದೂರು ಸಲ್ಲಿಸಬೇಕಾಗಿ ವಿನಂತಿ ಅಪಾಯ ಸಾಧ್ಯತೆಗಳು, ನಿಯಮ ಹಾಗೂ ಷರತ್ತುಗಳ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಮಾರಾಟ ಪೂರ್ತಿಗೊಳ್ಳುವ ಮೊದಲು ಸೇಲ್ಸ್ ಬ್ರೋಶರ್ ಎಚ್ಚರಿಕೆಯಿಂದ ಓದಿರಿ.

ಲಿಂಕ್ಡ್ ಮಾಡಲಾದ ಉತ್ಪನ್ನಗಳು ಸಾಂಪ್ರದಾಯಿಕ ವಿಮಾ ಉತ್ಪನ್ನಗಳಿಗಿಂತ ಭಿನ್ನವಾಗಿರುತ್ತವೆ ಮತ್ತು ಅಪಾಯದ ಅಂಶಗಳಿಗೆ ಒಳಪಟ್ಟಿರುತ್ತವೆ.
ಲಿಂಕ್ ಮಾಡಲಾದ ವಿಮಾ ಪಾಲಿಸಿಗಳಲ್ಲಿ ಪಾವತಿಸಿದ ಪ್ರೀಮಿಯಂ ಬಂಡವಾಳ ಮಾರುಕಟ್ಟೆಗಳು ಮತ್ತು ಸಾರ್ವಜನಿಕವಾಗಿ ಲಭ್ಯವಿರುವ ಸೂಚ್ಯಂಕದೊಂದಿಗೆ ಸಂಬಂಧಿಸಿದ ಹೂಡಿಕೆ ಅಪಾಯಗಳಿಗೆ ಒಳಪಟ್ಟಿರುತ್ತದೆ. ಫಂಡ್‌ಗಳ ಕಾರ್ಯಕ್ಷಮತೆ ಮತ್ತು ಬಂಡವಾಳ ಮಾರುಕಟ್ಟೆ/ಸಾರ್ವಜನಿಕವಾಗಿ ಲಭ್ಯವಿರುವ ಸೂಚ್ಯಂಕದ ಮೇಲೆ ಪ್ರಭಾವ ಬೀರುವ ಅಂಶಗಳ ಆಧಾರದ ಮೇಲೆ ಘಟಕಗಳ NAVಗಳು ಹೆಚ್ಚಾಗಬಹುದು ಅಥವಾ ಕಡಿಮೆಯಾಗಬಹುದು ಮತ್ತು ವಿಮಾದಾರನು ಅವನ / ಅವಳ ನಿರ್ಧಾರಗಳಿಗೆ ಜವಾಬ್ದಾರನಾಗಿರುತ್ತಾನೆ.
ಭಾರತೀಯ ಜೀವ ವಿಮಾ ನಿಗಮವು ಜೀವವಿಮಾ ಕಂಪನಿಯ ಹೆಸರು ಮಾತ್ರ ಮತ್ತು ಇಂಡೆಕ್ಸ್ ಎಂಬುದು ಲಿಂಕ್ ಮಾಡಲಾದ ವಿಮಾ ಒಪ್ಪಂದದ ಹೆಸರಾಗಿದೆ ಮತ್ತು ಯಾವುದೇ ರೀತಿಯಲ್ಲಿ ಒಪ್ಪಂದದ ಗುಣಮಟ್ಟ, ಅದರ ಭವಿಷ್ಯದ ನಿರೀಕ್ಷೆಗಳು ಅಥವಾ ಆದಾಯವನ್ನು ಸೂಚಿಸುವುದಿಲ್ಲ.
ನಿಮ್ಮ ವಿಮಾ ಏಜೆಂಟ್ ಅಥವಾ ಮಧ್ಯವರ್ತಿ ಅಥವಾ ವಿಮಾ ಕಂಪನಿಯಿಂದ ನೀಡಲಾದ ಪಾಲಿಸಿ ದಾಖಲೆಯಿಂದ ಸಂಬಂಧಿಸಿದ ಅಪಾಯಗಳು ಮತ್ತು ಅನ್ವಯವಾಗುವ ಶುಲ್ಕಗಳನ್ನು ದಯವಿಟ್ಟು ತಿಳಿದುಕೊಳ್ಳಿ.
ಈ ಒಪ್ಪಂದದ ಅಡಿಯಲ್ಲಿ ನೀಡಲಾಗುವ ವಿವಿಧ ಫಂಡ್‌ಗಳು ಹೆಸರಾಗಿವೆ ಮತ್ತು ಯಾವುದೇ ರೀತಿಯಲ್ಲಿ ಈ ಯೋಜನೆಗಳ ಗುಣಮಟ್ಟ ಅವುಗಳ ಭವಿಷ್ಯದ ನಿರೀಕ್ಷೆ ಮತ್ತು ಆದಾಯವನ್ನು ಸೂಚಿಸುವುದಿಲ್ಲ.
[illegible]
[illegible]

ಹೆಣ್ಣೂರು ರಸ್ತೆಯಲ್ಲಿ ಸ್ಪರ್ಶ್ ಆಸ್ಪತ್ರೆಯ ನೂತನ ಶಾಖೆಯನ್ನು ಸಂಸದ ಬಸವರಾಜ ಬೊಮ್ಮಾಯಿ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶಾಸಕ ಶಾಮನೂರು ಶಿವಶಂಕರಪ್ಪ, ದಿನೇಶ್ ಗುಂಡೂರಾವ್, ತೋಟಗಾರಿಕೆ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಶಿವರಾಜ ವಿ.ಪಾಟೀಲ, ಶಾಸಕ ಬಿ.ಎ.ಬಸವರಾಜ ಅವರು ಉದ್ಘಾಟಿಸಿದರು

ಸರ್ಕಾರಿ ಆಸ್ಪತ್ರೆಗಳಲ್ಲಿ ಕಿಮೋಥೆರಪಿ ಸೌಲಭ್ಯ ಶೀಘ್ರ: ಸಚಿವ ದಿನೇಶ್

ಬೆಂಗಳೂರು: ಸರ್ಕಾರಿ ಆಸ್ಪತ್ರೆಗಳಲ್ಲಿ ಕಿಮೋಥೆರಪಿ ಸೌಲಭ್ಯವನ್ನು ಪರಿಚಯಿಸಲಾಗುತ್ತದೆ. ಶೀಘ್ರದಲ್ಲಿಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದಕ್ಕೆ ಚಾಲನೆ ನೀಡಲಿದ್ದಾರೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ನಗರದ ಹೆಣ್ಣೂರು ರಸ್ತೆಯಲ್ಲಿ ಸ್ಪರ್ಶ್ ಆಸ್ಪತ್ರೆಯ ನೂತನ ಶಾಖೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಬಡರೋಗಿಗಳು ಕಿಮೋಥೆರಪಿ ಮಾಡಿಸಲು ಸಾವಿರಾರು ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಸರ್ಕಾರಿ ಆಸ್ಪತ್ರೆಗಳಲ್ಲಿಯೇ ಈ ಸೌಲಭ್ಯವನ್ನು ಪ್ರಾರಂಭಿಸಿದರೆ ಸಾರ್ವಜನಿಕರಿಗೆ ಅನುಕೂಲವಾಗಲಿದೆ. ಸರ್ಕಾರಿ ಆಸ್ಪತ್ರೆಗಳನ್ನು ಖಾಸಗಿ ಆಸ್ಪತ್ರೆಗಳ ರೀತಿಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನಾಗಿ ಮಾಡುವುದು ಕಷ್ಟ, ಆದರೆ ಆಧುನಿಕ ತಂತ್ರಜ್ಞಾನಗಳೊಂದಿಗೆ ಸುಧಾರಿತ ಚಿಕಿತ್ಸೆ ನೀಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ. ಈಗಾಗಲೇ ಸರ್ಕಾರಿ ಆಸ್ಪತ್ರೆಗಳಲ್ಲಿ ಹಲವಾರು ಸೌಲಭ್ಯಗಳನ್ನು ನೀಡಲಾಗುತ್ತದೆ ಎಂದು ಹೇಳಿದರು.

ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ ಪಾಟೀಲ ಮಾತನಾಡಿ, 'ನಮ್ಮ ರಾಜ್ಯದಲ್ಲಿ ಬಡ ಮಕ್ಕಳೂ ಸಹ ವೈದ್ಯರಾಗಬೇಕು ಎಂಬ ಕನಸು ನನಸು ಆಗುತ್ತಿದೆ. ಸರ್ಕಾರಿ ಕೋಟಾದಡಿ ಲಭ್ಯವಿರುವ ವೈದ್ಯಕೀಯ ಸೀಟುಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ಸರ್ಕಾರಿ ಕೋಟಾದಡಿ ಹೆಚ್ಚು ವೈದ್ಯಕೀಯ ಸೀಟುಗಳನ್ನು ಮೀಸಲಿಡಲಾಗಿದೆ' ಎಂದರು.

ಸ್ಪರ್ಶ್ ಆಸ್ಪತ್ರೆ ಸಮೂಹದ ಅಧ್ಯಕ್ಷ ಡಾ. ಶರಣ್ ಶಿವರಾಜ ಪಾಟೀಲ ಮಾತನಾಡಿ, 'ಹೆಣ್ಣೂರಿನಲ್ಲಿ ನೂತನವಾಗಿ ಉದ್ಘಾಟಿಸಿರುವ ಸ್ಪರ್ಶ್ ಆಸ್ಪತ್ರೆಯೂ 300 ಹಾಸಿಗೆ ಸಾಮರ್ಥ್ಯ ಹೊಂದಿದೆ. ಈ ಆಸ್ಪತ್ರೆಯು ಮೂಳೆ, ನರ ವಿಜ್ಞಾನ, ಹೃದ್ರೋಗ, ಕ್ಯಾನ್ಸರ್ ಚಿಕಿತ್ಸೆ ಸೇರಿದಂತೆ ಅಂಗಾಂಗ ಕಸಿ ವಿಭಾಗಗಳನ್ನು ಒಳಗೊಂಡಿದೆ. ಸ್ತ್ರೀಯರು, ಮಕ್ಕಳಿಗಾಗಿ ಪ್ರತ್ಯೇಕ ಕೇಂದ್ರಗಳಿವೆ. ಇಲ್ಲಿ ರೊಬೋಟಿಕ್ ನೆರವಿನ ಶಸ್ತ್ರಚಿಕಿತ್ಸೆ, ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ತಂತ್ರಜ್ಞಾನ, 3ಡಿ ಮುದ್ರಣ ತಂತ್ರಜ್ಞಾನ ಸೇರಿದಂತೆ ಅತ್ಯಾಧುನಿಕ ಸೌಲಭ್ಯವಿದೆ' ಎಂದರು.

ಖಾಸಗಿ ಸಹಭಾಗಿತ್ವದಲ್ಲಿ ಅನುಷ್ಠಾನ: ಗೃಹ ಸಚಿವ ಪರಮೇಶ್ವರ

'ಸರ್ಕಾರದ ಹೂಡಿಕೆ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಮಕೂರು–ಬೆಂಗಳೂರು ಮೆಟ್ರೊ ಮಾರ್ಗವನ್ನು ಖಾಸಗಿ ಸಹಭಾಗಿತ್ವದಲ್ಲಿ ಅನುಷ್ಠಾನಗೊಳಿಸಲಾಗುವುದು. ಸರ್ಕಾರ ಹೂಡಿಕೆ ಮಾಡುವುದಿಲ್ಲ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ಬೆಂಗಳೂರು ನಗರದ ಒತ್ತಡ, ಬೆಂಗಳೂರು–ತುಮಕೂರು ರಸ್ತೆ ಮಾರ್ಗದ ವಾಹನ ದಟ್ಟಣೆ ಕಡಿಮೆ ಮಾಡಲು ತುಮಕೂರಿಗೆ ಮೆಟ್ರೊ ಮಾರ್ಗ ವಿಸ್ತರಣೆಯಾಗಬೇಕಿದೆ. ತುಮಕೂರಿನ ಅಭಿವೃದ್ಧಿಯ ದೃಷ್ಟಿಯಿಂದಲೂ ಯೋಜನೆ ಅಗತ್ಯವಿದೆ ಎಂದರು.

ಮುಖ್ಯಮಂತ್ರಿಯವರ ಮನವೊಲಿಸಿ, ಕಳೆದ ಬಜೆಟ್‌ನಲ್ಲಿ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸಲು ಅವಕಾಶ ಕಲ್ಪಿಸಲಾಗಿತ್ತು. ಹೈದರಾಬಾದ್ ಮೂಲದ ಕಂಪನಿ ಕಾರ್ಯಸಾಧ್ಯತಾ ವರದಿಯನ್ನು ಸಿದ್ಧಪಡಿಸಿ, ಸರ್ಕಾರಕ್ಕೆ ಸಲ್ಲಿಸಿದೆ. ಸಾಧಕ-ಬಾಧಕಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

'ತುಮಕೂರು ಮೆಟ್ರೊ ಯೋಜನೆ ಕುರಿತು ಬೆಂಗಳೂರಿನ ಇಬ್ಬರು ಸಂಸದರು ಅರ್ಥವಿಲ್ಲದ ಹೇಳಿಕೆ ನೀಡಿದ್ದಾರೆ. ತುಮಕೂರಿನಲ್ಲಿ 20 ಸಾವಿರ ಎಕರೆಯಲ್ಲಿ ಕೈಗಾರಿಕಾ ಪ್ರದೇಶವಿದೆ. ರಸ್ತೆ ಮೂಲಕ ತುಮಕೂರಿಗೆ ಹೋಗಲು ಎರಡು ಗಂಟೆ ಆಗುತ್ತಿದೆ. ಬೆಂಗಳೂರಿನ ಎರಡನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಯ್ಕೆ ಮಾಡಿದ ಕೆಲ ಸ್ಥಳಗಳಲ್ಲಿ ನೆಲಮಂಗಲವೂ ಇದೆ. ದಾಬಸ್‌ಪೇಟೆ– ದೊಡ್ಡಬಳ್ಳಾಪುರ ಮಧ್ಯೆ ಕ್ವಿನ್‌ಸಿಟಿ ಬರುತ್ತಿದೆ. ಈ ಎಲ್ಲ ಕಾರಣಗಳಿಂದ ಮೆಟ್ರೊ ಯೋಜನೆಯ ವಿಸ್ತರಣೆ ಆಗಬೇಕಿದೆ' ಎಂದರು.

'ಕೇಂದ್ರದ ಸಚಿವ ವಿ. ಸೋಮಣ್ಣ ತುಮಕೂರಿನ ವಿಚಾರ ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ. ಮೆಟ್ರೊ ಯೋಜನೆಗೆ ಅವರ ಸಹಮತವಿದೆ' ಎಂದು ಹೇಳಿದರು.

ತುಮಕೂರು ಬೆಂಗಳೂರು ಮೆಟ್ರೊ ಮಾರ್ಗ

ಬೆಲ್ಲದ ಪತ್ರ; ತಕ್ಷಣ ಕ್ರಮ

ಜಿ.ಪರಮೇಶ್ವರ

ಶಾಸಕ ಅರವಿಂದ ಬೆಲ್ಲದ ಅವರು ಧಾರವಾಡ ಪೊಲೀಸ್ ಆಯುಕ್ತರಿಗೆ ಬರೆದ ಪತ್ರವನ್ನು ಗಂಭೀರವಾಗಿ ಪರಿಗಣಿಸಲಾಗಿದೆ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಗುಪ್ತಚರ ಇಲಾಖೆ ಮಾಹಿತಿ ಸಂಗ್ರಹಿಸುತ್ತಿದೆ. ರಾಜ್ಯದ ಎಲ್ಲ ಎಸ್‌.ಪಿಗಳಿಗೂ ಸೂಚನೆ ಕೊಟ್ಟಿದ್ದೇವೆ. ಶಂಕಿತರು ಕಂಡುಬಂದರೆ ಪರಿಶೀಲಿಸಿ, ಅವರನ್ನು ವಾಪಸ್ ಕಳುಹಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದರು.

ಕರ್ನಾಟಕ ಗೃಹ ಮಂಡಳಿ
ಬೆಂಗಳೂರು ನಗರ ಜಿಲ್ಲಾ ಯೋಜನಾ ಕಛೇರಿ, ಕಾವೇರಿ ಭವನ, ಬೆಂಗಳೂರು

ಸಂಖ್ಯೆ: ಬೆಂನಜಿಯೋಕ/54/2024-25 | **ಸಾರ್ವಜನಿಕ ಪ್ರಕಟಣೆ** | ದಿನಾಂಕ: 19.05.2025

ಕರ್ನಾಟಕ ಗೃಹ ಮಂಡಳಿಯಿಂದ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ಬ್ಯಾಲಾಳು ಗ್ರಾಮದಲ್ಲಿ ಅಭಿವೃದ್ಧಿಪಡಿಸಿರುವ ಬಡಾವಣೆಯಲ್ಲಿನ ನಿವೇಶನ ಸಂಖ್ಯೆ: B1-372-EWS ನ್ನು ಶ್ರೀ. ಶ್ರೀಧರ್.ಬಿ ಎಂಬುವವರಿಗೆ ದಿನಾಂಕ: 17.02.2025 ರಂದು ಹಂಚಿಕೆ ಮಾಡಲಾಗಿರುತ್ತದೆ. ಸದರಿ ನಿವೇಶನದ ಹಂಚಿಕೆದಾರರಾದ ಶ್ರೀ. ಶ್ರೀಧರ್.ಬಿ ರವರು ದಿನಾಂಕ: 23.01.2023 ರಂದು ಮರಣ ಹೊಂದಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ನಿವೇಶನದ ಹಂಚಿಕೆಯನ್ನು ದಿವಂಗತರ ಪತ್ನಿಯವರಾದ ಶ್ರೀಮತಿ ಯೋಗಾಕ್ಷಿ ರವರ ಹೆಸರಿಗೆ ನಿಯಮಾನುಸಾರ ವರ್ಗಾವಣೆ ಮಾಡಲು ಕೋರಿರುತ್ತಾರೆ. ಆದ್ದರಿಂದ ಅರ್ಜಿದಾರರ ಮನವಿಯಂತೆ ಸದರಿ ನಿವೇಶನದ ಹಂಚಿಕೆ ವರ್ಗಾವಣೆ ಪ್ರಕ್ರಿಯೆ ಆರಂಭಿಸಿದ್ದು, ಈ ಸಂಬಂಧ ಯಾವುದೇ ತಕರಾರು/ಆಕ್ಷೇಪಣೆ ಇದ್ದಲ್ಲಿ ಈ ಪ್ರಕಟಣೆ ಪ್ರಕಟಗೊಂಡ ದಿನಾಂಕದಿಂದ 7 (ಏಳು) ದಿನಗಳೊಳಗಾಗಿ ಸೂಕ್ತ ದಾಖಲೆಗಳೊಂದಿಗೆ ತಕರಾರು ಅರ್ಜಿಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ನಗರ ಜಿಲ್ಲಾ ಯೋಜನಾ ಕಛೇರಿ, 5ನೇ ಮಹಡಿ, ಕಾವೇರಿ ಭವನ, ಬೆಂಗಳೂರು – 560009 ರವರ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ನಿಗಧಿತ ದಿನಾಂಕದೊಳಗೆ ಯಾವುದೇ ತಕರಾರು/ಆಕ್ಷೇಪಣೆ ಬಾರದಿದ್ದಲ್ಲಿ ಸದರಿ ಸ್ವತ್ತನ್ನು ಮೃತರ ಪತ್ನಿಯವರಾದ ಶ್ರೀಮತಿ ಯೋಗಾಕ್ಷಿ ರವರ ಹೆಸರಿಗೆ ವರ್ಗಾವಣೆ ಮಾಡಿ ಕ್ರಯಪತ್ರವನ್ನು ನಿರ್ವಹಿಸಿಕೊಡಲು ಯಾವುದೇ ತಂಟೆ ತಕರಾರು ಇರುವುದಿಲ್ಲ ಎಂದು ಪರಿಗಣಿಸಲಾಗುವುದು ಹಾಗೂ ಸದರಿಯವರಿಗೆ ಶುದ್ಧ ಕ್ರಯಪತ್ರವನ್ನು ನೀಡಲಾಗುವುದು. ನಿಗದಿತ ದಿನಾಂಕದ ನಂತರ ಬರುವ ಯಾವುದೇ ತಕರಾರು/ಆಕ್ಷೇಪಣೆ ಮನವಿಗಳನ್ನು ಪರಿಗಣಿಸುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಿದೆ.

ಸಹಿ/– ಸಹಾಯಕ ಕಂದಾಯ ಅಧಿಕಾರಿ, ಕರ್ನಾಟಕ ಗೃಹ ಮಂಡಳಿ

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

PUBLIC NOTICE

NOTICE
I, Syed Ali Raza S/o Itrat Bano, is applying to the Secretary to the Government of India in the Ministry of Home Affairs for naturalization and that any person who knows any reason why naturalization should not be granted should send a written signed statement of the facts to the said secretary. Vide affidavite dated:19-05-2025, before notary S. I. Balaguru, Bengaluru

Rangadore Memorial Hospital
1st cross, Shankarapuram, Bangalore- 560 004
Ph:080- 26983465/322
Email: info@rmhospital.in
DISPOSAL OF HOSPITAL MEDICAL RECORDS
Hospital Medical Records of IN-PATIENTS pertaining to the period 01.01.2019 to 31.12.2019 (IP No. 7831 to 1908108) will be disposed. For retrieval of any specific case record, contact the Hospital's Medical Records Department within 30 days from the date of this notification. These records will not be available after that.
Note:Not applicable for MLC, Death, Birth & Paediatric Medical Records.

EDUCATION CORNER

R.E.S. POLYTECHNIC
Estd: 1986 - Recognised by Govt. of Karnataka & AICTE
10th Pass / What Next ???
JOIN DIPLOMA IN: Computer Science, IS, Civil, Mechanical, Automobile, Electrical, Electronics, Fashion Tech, Commerce (CP)
After Diploma can join JOB / 2nd year Engg OR Any Degree through LATERAL ENTRY QUOTA
PUC Pass Join 2 yrs Diploma Engineering
PUC Fail Join 3 yrs Diploma Engineering
EVENING / WEEKEND CLASSES
Available for working Professionals to EE
5, Sunkadakatte, Magadi Road, Hegganahalli Cross, B-91
Call: Secretary-99166 46466 / Principal-9916639466
RES-25603

I, SUDHEENDRA. B.A. r/a, #.31 6th cross, Gurudatta layout B.S.K 3rd Stage Bangalore-85 have changed my minor daughter's name from ADITI BYCHAPURA to ADITI SUDHEENDRA vide affidavit dated 15/03/25 before notary T. Venkate Gowda Bangalore.

BUSINESS

Business to Business

Business

VIZAG (VISAKHAPATNAM) Biggest City of Andhra. Want to start Any Business/ Buy Apartments/ RE/ Schools Arranging Big Finances. Excellent Guidance. Radhika Projects/ Services. Dr Swamy Naidu:- 9342247637. Bangalore.

PUBLIC NOTICE
HDFC BANK
Dear Customer,
we are pleased to inform you that your HDFC Bank Prashanth Nagar Branch will be relocating
From Address :
HDFC Bank Ltd, Ground Floor, Hariram Aildas Layout, Prashant Nagar, near Shobha Hospital, Bangalore.
To ADDRESS
HDFC Bank Ltd., Ground Floor, No.4/58, PID No 36-49-4-58, 2nd Main Road, Thimmenahalli, Govindraj Nagar, Opp D Mart Ready, Bangalore, Karnataka- 560040.
Proposed date of relocation 15th June 2025

PERSONAL

Change of Name

CHANGE OF NAME
I, ANUSHKA & ANUSHKA HITESH SHAH D/o Hitesh Kantilal Shah, R/at No. 118, East Trinity Woods And Acres Amblipura Sarjapur Road, Bengaluru - 560102, declare that above names pertain to me only, vide affidavit dated:14-07-2023, before notary B.M.Chandrashekar, Benglauru

CHANGE OF NAME
I, ANTONY JUDE V @ ANTONY JUDE S/o Anthony Jokiam Valentine, R/at No.11A, AVE MARIA, 4th B Street, Muniswamappa Road, Banjara Layout, Horamavu, Bengaluru- 560043, declare that above names pertain to me only, and henceforth I shall be called as ANTONY JUDE V only, vide affidavit dated:19-05-2025, before notary B. Seshagiri, Benglauru

I SUPRIYA C V W/O Pramod Vishwanathan R/O Flat No 42054, Prestige Jindal City, Tumkur Road, Chikkabidarakallu, Nagasandra, Bangaluru, Karnataka 560073, Have Changed My Minor Daughter's Name from Krishnapriya Pramod Aged 14 Year to Krishna S Pramod and Shall Hereafter Be Known as Krishna S Pramod for All Future Purposes

I, SUDHEENDRA. B.A. R/a, #.31 6th cross, Gurudatta layout B.S.K 3rd Stage Bangalore-85 have changed my minor son's name from ABHAY BYCHAPURA to ABHAY SUDHEENDRA vide affidavit dated 15/03/25 before notary T. Venkate Gowda Bangalore

Business Offers

Finance

NRI'S Investment And Finance Available On Low Interest Against Properties,Land& Building,Sites,Flats,Converted& Agriculture Lands Call:7204995189

Lost

DOCUMENT LOST
I, Venkatesh N, S/o J Narayanappa, aged 45 years, R/at Samandur Village, Attibele Hobli, Anekal Taluk, Bangalore District, Karnataka have lost Original sale deed no 6045/2024 dated 08.06.2024 register in Anekal P.S C-Miss No 215/2025 Survey No. 287, measuring 35 cents situated at kelamangalam sub-register office. while transit finders Contact 8073723161

TOURS & TRAVEL

Travel

VISIT BHUTAN, the most Wonderful Country with Expert Guide and Best Arrangements. GANESH SHENOY 8970126393

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH DECCAN HERALD Classifieds More value, more impact | EDUCATION | ಪ್ರಜಾವಾಣಿ
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
*Conditions apply
For more details contact:
+91 9731810277 | +91 9845114560 | +91 9900428036

ನೈರುತ್ಯ ರೈಲ್ವೆ

ತಿದ್ದುಪಡಿ ಟೆಂಡರ್ ಸೂಚನೆ ಸಂಖ್ಯೆ. 08/2025/ಎಸ್‌ಬಿಸಿ ದಿನಾಂಕ: 14.05.2025
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಟೆಂಡರ್ ನಂ.	ಸಂಕ್ಷಿಪ್ತ ವಿವರಣೆ (ಇ-ಮುಕ್ತ ಟೆಂಡರ್)	ಪ್ರಮಾಣ	ಘಟಕ
1	ಎಲ್ 8255765	ಸಿಎಎಂಸಿ ಸ್ಥಿತಿಯೊಂದಿಗೆ ಸಂಯೋಜಿತ ಸ್ವಯಂಚಾಲಿತ ಆಕ್ಸಲ್ ಬಾಕ್ಸ್ ತಾಪಮಾನ ರೆಕಾರ್ಡಿಂಗ್ ವ್ಯವಸ್ಥೆ (ಎಚ್‌ಎಬಿಡಿ) ಪೂರೈಕೆ, ಸ್ಥಾಪನೆ ಮತ್ತು ಕಾರ್ಯಾರಂಭ.	12	ಸೆಟ್

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 09-06-2025 ರಂದು 10.30 ಗಂಟೆಯವರೆಗೆ.
ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ

ಹಿರಿಯ ವಿಭಾಗೀಯ ಸಾಮಗ್ರಿಗಳ ವ್ಯವಸ್ಥಾಪಕರು, ಬೆಂಗಳೂರು
ಪಿಯುಬಿ/122/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2025–26
South Western Railway - SWR | SWRRLY | SWRRLY

ಜಿಲ್ಲಾ ಆಸ್ಪತ್ರೆ
ಜಿಲ್ಲಾ ಶಸ್ತ್ರ ಚಿಕಿತ್ಸಕರ ಕಾರ್ಯಾಲಯ, ರಾಮನಗರ – 562 159.
ದೂ.: 080–2991 3667, ಇ–ಮೇಲ್: dsramanagaram@gmail.com

ಸಂಖ್ಯೆ : ಜಿ.ಆ.ರಾ./ಟೆಂಡರ್/ಗ್ರೂಪ್–ಡಿ/02/2024–25
ದಿನಾಂಕ : 17–05–2025

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್

ಜಿಲ್ಲಾ ಆಸ್ಪತ್ರೆ, ರಾಮನಗರ ಜಿಲ್ಲೆ, ರಾಮನಗರ ಇಲ್ಲಿಗೆ 2025–26ನೇ ಸಾಲಿನ ಅವಧಿಗೆ 14 ಹೊರ ಗುತ್ತಿಗೆ ಗ್ರೂಪ್–ಡಿ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ಅರ್ಹ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ.

1) ಟೆಂಡರ್ ಫಾರಂಗಳನ್ನು ಆನ್‌ಲೈನ್ ಮೂಲಕ ಡೌನ್‌ಲೋಡ್ ಮಾಡುವ ದಿನಾಂಕ : 17–05–2025 ರಿಂದ, 2) ಟೆಂಡರ್ ಫಾರಂಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : 24–05–2025 ರ ಸಂಜೆ 5.30 ಗಂಟೆಯವರೆಗೆ, 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 26–05–2025 ರ ಬೆಳಿಗ್ಗೆ 11.00 ಗಂಟೆಯ ನಂತರ, 4) ಹಣಕಾಸಿನ ಬಿಡ್ ತೆರೆಯುವ ದಿನಾಂಕ : 29–05–2025 ರ ಬೆಳಿಗ್ಗೆ 11.00 ಗಂಟೆಯ ನಂತರ, 5) ಟೆಂಡರ್‌ನ ಅಂದಾಜು ಮೊತ್ತ : ರೂ. 37.00 ಲಕ್ಷಗಳು, 6) ಇ.ಎಂ.ಡಿ. ಮೊತ್ತ : ರೂ. 92,500.00/– ಗಳು.

ಸಹಿ/– ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ರಾಮನಗರ.
ಡಿಐಪಿಆರ್/ರಾಮನಗರ/88/ಮಣಿಪಾಲ್/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ)ರವರ ಕಚೇರಿ,
ಬೃಬೆಂಮಪಾಲಿಕೆ ನರಸಿಂಹರಾಜ ಚೌಕ, ಬೆಂಗಳೂರು – 02

ಸಂಖ್ಯೆ: ಮು.ಆ.ಅ(ಸಾ.ಆ)/ಪಿಆರ್/22/2025–26 | ದಿನಾಂಕ: 19.05.2025

ಪ್ರಕಟಣೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರೋಗ್ಯ ಇಲಾಖೆಯ ಡೆಂಗ್ಯೂ ನಿಯಂತ್ರಣ ಕಾರ್ಯಕ್ರಮವನ್ನು ಮೇಲ್ವಿಚಾರಣೆ ಮಾಡಲು ವಲಯವಾರು ಒಬ್ಬರಂತೆ 08 ಕೀಟಶಾಸ್ತ್ರಜ್ಞರನ್ನು 01 ವರ್ಷದ ಅವಧಿಗೆ ಸಂಪೂರ್ಣ ಗುತ್ತಿಗೆ ಆಧಾರದ ಮೇಲೆ ನಿಯೋಜಿಸಿಕೊಳ್ಳಲು ವಾಕ್ ಇನ್ ಪ್ರಕ್ರಿಯೆ ಮೂಲಕ ಮೆರಿಟ್ ಕಮ್ ರೋಸ್ಟರ್ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಹುದ್ದೆ	ಹುದ್ದೆಗಳ ಸಂಖ್ಯೆ & ಮೀಸಲಾತಿ	ವಿದ್ಯಾರ್ಹತೆ	ಅನುಭವ		ವಯಸ್ಸು	ಸಂಬಳ ತಿಂಗಳಿಗೆ	ವಾಕ್–ಇನ್ ದಿನಾಂಕ ಮತ್ತು ಸಮಯ
1	Consultant Entomology	8 ((HK-1) (RPC-7 (SC-1, GM-3,ST-1, Category 1-1,2A-1)	Post Graduate in Zoology (with Entomology as one of the subjects), Public Health Entomology/Medical Entomology/Life Science, Life science candidates Must have Zoology/Entomology as one the subject at Graduate Level	Desirable	Preference will be given	25-45	30,000	Date : 23-05-2025 10.30 a.m to 4,00 p.m. CPMO, Room No. 304 3rd Floor, Annex-3, Bruhath Bengaluru Mahanagara Palike, N.R. Square, Bengaluru-560 002
				Minimum 3 Years of Experience in Implementing Vector Borne Diseases contra strategies	Candidates having Experience in Health Program Monitoring shall be given preference			

ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಜ್ಞಾನದ ಅವಶ್ಯಕತೆ ಕಡ್ಡಾಯವಾಗಿರುತ್ತದೆ. ಆಸಕ್ತರು ಬಿಬಿಎಂಪಿ ವೆಬ್‌ಸೈಟ್‌ನಲ್ಲಿರುವ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿದ ಅರ್ಜಿಯೊಂದಿಗೆ 02 ಪ್ರತಿ Checklist ಹಾಗೂ ಸಂಬಂಧಿಸಿದ ವಿದ್ಯಾರ್ಹತೆಯ ಮೂಲ ದಾಖಲೆಗಳನ್ನು, ಒಂದು ಸ್ವಯಂ ದೃಢೀಕೃತ ಜೆರಾಕ್ಸ್ ಪ್ರತಿ ಹಾಗೂ ಎರಡು ಭಾವಚಿತ್ರಗಳೊಂದಿಗೆ ಮೇಲೆ ಸೂಚಿಸಿರುವ ಸ್ಥಳ ಮತ್ತು ದಿನಾಂಕದಂದು ವಾಕ್ ಇನ್ ಪ್ರಕ್ರಿಯೆಗೆ ಹಾಜರಾಗಲು ಸೂಚಿಸಲಾಗಿದೆ. ಸದರಿ ಹುದ್ದೆಗಳ ಸಂಖ್ಯೆಯನ್ನು ಹೆಚ್ಚಿಸುವ ಅಥವಾ ಕಡಿಮೆಗೊಳಿಸುವ ಅಧಿಕಾರವನ್ನು ಪಾಲಿಕೆಯು ಹೊಂದಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್‌ಸೈಟ್: www.bbmp.gov.in ನ್ನು ಸಂಪರ್ಕಿಸಲು ಸೂಚಿಸಲಾಗಿದೆ.

ಸಹಿ/– ಮುಖ್ಯ ಆರೋಗ್ಯಾಧಿಕಾರಿ (ಸಾ.ಆ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರು (ಯೋಜನಾ ಕೇಂದ್ರ–9) ರವರ ಕಛೇರಿ,
ನೆಲ ಮಹಡಿ, ಅನೆಕ್ಸ್ ಕಟ್ಟಡ–2, ನರಸಿಂಹರಾಜ ಚೌಕ, ಬೆಂಗಳೂರು–560002

ಸಂಖ್ಯೆ: ಕಾ.ಪಾ.ಅ/ಯೋ.ಕೇಂ–9/ಪಿಆರ್/06/2025–26 | ದಿನಾಂಕ : 17.05.2025

ಸಾರ್ವಜನಿಕರಿಂದ ಸ್ಥಳ ಆಯ್ಕೆಗಾಗಿ ಆಹ್ವಾನ

'ಬಯಸಿದಂತೆ ಬಯಲು' ಬೆಂಗಳೂರಿನ ಸಾರ್ವಜನಿಕ ಸ್ಥಳಗಳನ್ನು ಪುನರುಜ್ಜೀವನಗೊಳಿಸುವುದು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸದ್ಬಳಕೆಯಾಗದೇ ಉಳಿದಿರುವಂತಹ ಪುನರುಜ್ಜೀವನಗೊಳಿಸಲು ಯೋಗ್ಯವಿರುವ ನೆರೆಹೊರೆಯ ಸಾರ್ವಜನಿಕ ಸ್ಥಳಗಳನ್ನು ಗುರುತಿಸಿ ವಿನೂತನ ಪರಿಕಲ್ಪನೆಯೊಂದಿಗೆ ಸಾರ್ವಜನಿಕರಿಗೆ ಸದ್ಬಳಕೆಯಾಗುವಂತೆ ಅಭಿವೃದ್ಧಿಪಡಿಸುವುದು ಪಾಲಿಕೆಯ ಮುಖ್ಯ ಗುರಿಯಾಗಿದೆ. ಸಾರ್ವಜನಿಕರು ತಾವು ಪ್ರತಿನಿತ್ಯ ಓಡಾಡುವಂತಹ ಸ್ಥಳಗಳಲ್ಲಿ ಅಂದರೆ ರಸ್ತೆಗಳ ಮೂಲೆಗಳು, ಜಂಕ್ಷನ್‌ಗಳು ಅಥವಾ ಬಳಕೆಯಾಗದೇ ಉಳಿದಿರುವಂತಹ ಸಾರ್ವಜನಿಕ ಸ್ಥಳಗಳನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಉತ್ತಮಪಡಿಸಬಹುದೆಂದು ಬಯಸಿದ್ದಲ್ಲಿ ಅಥವಾ ಆಲೋಚಿಸಿದ್ದಲ್ಲಿ ಅಂತಹ ಸ್ಥಳಗಳನ್ನು ಪಾಲಿಕೆಗೆ ತಿಳಿಸುವಂತಹ ಒಂದು ಉತ್ತಮ ಅವಕಾಶವನ್ನು ಸಾರ್ವಜನಿಕರಿಗೆ ಕಲ್ಪಿಸಲಾಗಿದೆ. ಸದರಿ ಪರಿಕಲ್ಪನೆಯಂತೆ ಈ ಕೆಳಗೆ ತಿಳಿಸಿರುವಂತೆ ಸ್ಥಳಗಳನ್ನು ಸೂಚಿಸಬಹುದಾಗಿದೆ.

- **ಧಾರ್ಮಿಕ ಸ್ಥಳಗಳು** :ಕಟ್ಟೆಗಳು, ನಗರ/ಗ್ರಾಮ ಚೌಕಗಳು, ಐತಿಹಾಸಿಕ ವೃತ್ತಗಳು
- **ಬಳಸದೇ ಉಳಿದ ಸ್ಥಳಗಳು** : ಮೇಲ್‌ಸೇತುವೆ/ಮೆಟ್ರೋ ಮಾರ್ಗಗಳ ಕೆಳಭಾಗದ ಪ್ರದೇಶ, ಬಫರ್ ಪ್ರದೇಶ
- **ಬಹುಪಯೋಗಿ ಬೀದಿಗಳು** : ತಿನಿಸು ಬೀದಿಗಳು, ಶಾಪಿಂಗ್/ಮಾರುಕಟ್ಟೆ ಬೀದಿಗಳು, ನಡಿಗೆಗೆ ಬಳಸಲಾಗುತ್ತಿರುವ ಬೀದಿಗಳು, ಶಾಲೆಗಳ ಸುತ್ತಮುತ್ತಲಿನ ಪ್ರದೇಶಗಳು, ಕನ್ಸರ್ವೆನ್ಸಿ ಲೇನುಗಳು
- **ಸಾಗಣೆ ಮತ್ತು ಸಂಚಾರ ಸ್ಥಳಗಳು** : ಸಂಪರ್ಕಿಸುವ ಬೀದಿಗಳು, ಜಂಕ್ಷನ್‌ಗಳು, ರಸ್ತೆ ಐಲ್ಯಾಂಡ್‌ಗಳು, ಪಾದಚಾರಿ ಅಂಡರ್‌ಪಾಸ್ ಮತ್ತು ಓವರ್‌ಪಾಸ್‌ಗಳು

ಸಮುದಾಯ ಆಧಾರಿತ ಸಂಸ್ಥೆಗಳಾದ ಸ್ಥಳೀಯ ಕ್ಷೇಮಾಭಿವೃದ್ಧಿ ಸಂಘಗಳು/ಅಪಾರ್ಟ್‌ಮೆಂಟ್ ಸಂಘಗಳು/ಎನ್‌ಜಿಒ/ಟ್ರಸ್ಟ್ ಅಥವಾ ವೈಯಕ್ತಿಕವಾಗಿ ಯಾವುದೇ ವಾಸ್ತುಶಿಲ್ಪಿ/ನಗರ ವಿನ್ಯಾಸಗಾರರು ಈ ಮೇಲೆ ತಿಳಿಸಿರುವ ರೀತಿಯಲ್ಲಿ ಯಾವುದೇ ಸ್ಥಳಗಳನ್ನು ಪುನರುಜೀವನಗೊಳಿಸುವ ಸಲುವಾಗಿ ಸಾರ್ವಜನಿಕ ಸ್ಥಳಗಳನ್ನು ತಿಳಿಸಲು ಪಾಲಿಕೆಯು ನಿಮ್ಮನ್ನು ಆಹ್ವಾನಿಸುತ್ತಿದೆ. ಪಾಲಿಕೆಯ ಅಧೀಕೃತ ವೆಬ್‌ಸೈಟ್ **www.bbmp.gov.in** ಸಂಪರ್ಕಿಸಿ ಅಳವಡಿಸಲಾಗಿರುವ ನಮೂನೆಯನ್ನು **ದಿನಾಂಕ 19.05.2025 ರಿಂದ 19.06.2025 ಗಂಟೆಯೊಳಗೆ** ಭರ್ತಿ ಮಾಡಿ ಉತ್ತಮಗೊಳಿಸಬೇಕಾಗಿರುವ ಸಾರ್ವಜನಿಕ ಸ್ಥಳಗಳನ್ನು ತಿಳಿಸುವ ಮೂಲಕ "ಬಯಸಿದಂತೆ ಬಯಲು" ನಿರ್ಮಾಣ ಮಾಡಲು ಸಾರ್ವಜನಿಕರು ಭಾಗವಹಿಸುವಂತೆ ಆಹ್ವಾನಿಸಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ.

ಸಹಿ/–
ಕಾರ್ಯಪಾಲಕ ಅಭಿಯಂತರರು,
ಯೋಜನಾ ಕೇಂದ್ರ–9

'ಬರಹದ ಸಮುಚ್ಚಯವೇ ಸಾಹಿತ್ಯ'

ರಾಜ್ಯ ಮಟ್ಟದ ಪ್ರಥಮ ಜೈನ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷರ ನುಡಿ

ಪ್ರಜಾವಾಣಿ ವಾರ್ತೆ

ಕಳಸ(ಬಾಳೆಹೊನ್ನೂರು): 'ಪದ, ಶಬ್ದ, ಕಾವ್ಯ, ಗದ್ಯ, ತ್ರಿಪದಿ, ಸಾಂಗತ್ಯ ಸೇರಿದಂತೆ ಎಲ್ಲವೂ ಲಿಪಿಯಿಂದ ಸಂಯೋಜನೆಗೊಳ್ಳುತ್ತವೆ. ಲಿಪಿಯೇ ಬರಹಕ್ಕೆ ಮೂಲ. ಬರಹದ ಸಮುಚ್ಚಯವೇ ಸಾಹಿತ್ಯ' ಎಂದು ಜೈನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಶ್ರೀವರ್ಮ ಹೆಗ್ಗಡೆ ಹೇಳಿದರು.

ಇಲ್ಲಿನ ಬೈರವರಸರ ವೇದಿಕೆಯಲ್ಲಿ ಭಗವಾನ್ ಚಂದ್ರನಾಥಸ್ವಾಮಿ ಬಸದಿ ಜೀರ್ಣೋದ್ಧಾರ ಸಮಿತಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ ಸಂಯುಕ್ತವಾಗಿ ಆಯೋಜಿಸಿದ್ದ ರಾಜ್ಯ ಮಟ್ಟದ ಪ್ರಥಮ ಜೈನ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಸಾಹಿತ್ಯ ಪರಿಷತ್ ರಾಜ್ಯ ಘಟಕದ ಅಧ್ಯಕ್ಷ ಮಹೇಶ್ ಜೋಷಿ ಮಾತನಾಡಿ, 'ಜಗತ್ತು ಶಾಂತಿಯನ್ನು ಬಯಸುತ್ತಿದೆ. ವಚನದ ಮೇಲೂ ಜೈನ ಧರ್ಮ ಆಗಾಧ ಪ್ರಭಾವ ಬೀರಿದೆ. ಲೌಕಿಕ ಮತ್ತು ಆಗಮಿಕ ಆರಂಭವಾಗಿದ್ದು ಜೈನ ವಿದ್ವಾಂಸರಿಂದ' ಎಂದರು.

ಸಮ್ಮೇಳನದ ಅಧ್ಯಕ್ಷ ಶ್ರೀವರ್ಮ ಹೆಗ್ಗಡೆ ಅವರನ್ನು ತೆರದ ವಾಹನದಲ್ಲಿ ಅರಳಿಕಟ್ಟೆಯಿಂದ ಮೆರವಣಿಗೆ ಮೂಲಕ ವೇದಿಕೆಗೆ ಕರೆತರಲಾಯಿತು.

ಪ್ರೇಮ್ ಕುಮಾರ್ ರಚಿಸಿದ 'ಮಾರ್ನಳ್ಳಿ ಅಂಚೆ ಕಚೇರಿ', ಮೇಗುಂದದ ಸುಧಾಕರ್ ಜೈನ್ ರಚಿಸಿದ 'ಜಿನತತ್ವ ಚಿಂತನ- ಮಂಥನ' ಚಿಕ್ಕಬಾಸೂರು ಅನಂತು ರಚಿಸಿದ ಮತ್ತೆ ದ್ವಂದ್ವ, ಬಿ.ಕೆ. ವಿಜಯಲಕ್ಷ್ಮೀ ನಾಡಿಗ್ ರಚಿಸಿದ 'ಕಾವ್ಯ ಸಿಂಚನ' ಪುಸ್ತಕಗಳು ಹಾಗೂ ಜ್ಯೋತಿ ನಾಗೇಂದ್ರ ಅವರ ಯೂಟ್ಯೂಬ್ ಚಾನಲ್ ಬಿಡುಗಡೆ ಮಾಡಲಾಯಿತು.

ಮೂವರಿಗೆ ಸಾಹಿತ್ಯ ಸಿರಿ ಪ್ರಶಸ್ತಿ ಹಾಗೂ ಜಿಲ್ಲೆಯ 19 ಜನರಿಗೆ 'ಕನ್ನಡ ಸಿರಿ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಳಸದ ಬೈರವರಸರ ವೇದಿಕೆಯಲ್ಲಿ ಭಗವಾನ್ ಚಂದ್ರನಾಥಸ್ವಾಮಿ ಬಸದಿ ಜೀರ್ಣೋದ್ಧಾರ ಸಮಿತಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ ಸಂಯುಕ್ತವಾಗಿ ಆಯೋಜಿಸಿದ್ದ ರಾಜ್ಯ ಮಟ್ಟದ ಪ್ರಪ್ರಥಮ ಜೈನ ಸಾಹಿತ್ಯ ಸಮ್ಮೇಳನದಲ್ಲಿ ಗದಗದ ವಿದ್ವಾಂಸ ಅಪ್ಪಣ್ಣ ಹಂಜೆ, ಬೆಂಗಳೂರಿನ ಪ್ರಾಧ್ಯಾಪಕಿ ಪದ್ಮಿನಿ ನಾಗರಾಜು ಹಾಗೂ ವಿಜಯಪುರ ಇಂಡಿಯ ಮಕ್ಕಳ ಸಾಹಿತಿ ದೇವೆಂದ್ರಪ್ಪ ಎಸ್.ಅಕ್ಕಿ ಅವರಿಗೆ ಸಾಹಿತ್ಯ ಸಿರಿ ಪ್ರಶಸ್ತಿ ನೀಡಿ ಗೌರವಿಸಲಾಯಿತು

ಬಸ್ ಡಿಕ್ಕಿ; ಸಂಚಾರ ಠಾಣೆ ಎಸ್‌ಐ ಸಾವು

ಪ್ರಜಾವಾಣಿ ವಾರ್ತೆ

ರಾಮನಗರ: ಮಗಳನ್ನು ಕಾಲೇಜಿಗೆ ಬಿಡಲು ಹೊರಟಿದ್ದ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ಸಂಚಾರ ಪೊಲೀಸ್ ಠಾಣೆ ಪೊಲೀಸ್ ಸಬ್ ಇನ್‌ಸ್ಪೆಕ್ಟರೊಬ್ಬರು ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ನಾಗರಾಜ್

ಪಿಎಸ್‌ಐ ನಾಗರಾಜ್ (52) ಮೃತಪಟ್ಟ ದುರ್ದೈವಿ. ಬೈಕ್ ಹಿಂದಿದ್ದ ಅವರ ಪುತ್ರಿ ಕಾವ್ಯಾ ಗಾಯಗೊಂಡಿದ್ದಾರೆ. ಇದೇ ಘಟನೆಯಲ್ಲಿ ಇತರ ಮೂವರೂ ಗಂಭೀರವಾಗಿ ಗಾಯಗೊಂಡಿದ್ದಾರೆ. ಕಾವ್ಯಾ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಬಸ್ ಕನಕಪುರ ಕಡೆಯಿಂದ ಬೆಂಗಳೂರಿಗೆ ಹೊರಟಿತ್ತು. ಕಗ್ಗಲಿಪುರ ಪೊಲೀಸ್ ಠಾಣೆ ವ್ಯಾಪ್ತಿಯ ಬೆಂಗಳೂರು–ಕನಕಪುರ ರಸ್ತೆಯಲ್ಲಿ ಚಾಲಕನ ನಿಯಂತ್ರಣ ಕಳೆದುಕೊಂಡು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆಯಿತು. ನಂತರ ವಿಭಜಕ ದಾಟಿ ಎದುರಿಗೆ ಬರುತ್ತಿದ್ದ ಎರಡು ಬೈಕ್‌ಗಳಿಗೆ ಡಿಕ್ಕಿ ಹೊಡೆಯಿತು. ನಂತರ ಪಕ್ಕದ ಮೋರಿಗೆ ಪಲ್ಟಿಯಾಯಿತು ಎಂದು ಕಗ್ಗಲಿಪುರ ಠಾಣೆ ಪೊಲೀಸರು ತಿಳಿಸಿದರು.

ಕೃತ್ತಿಮ್ ಉದ್ಯೋಗಿ ಆತ್ಮಹತ್ಯೆ

ಬೆಂಗಳೂರು: ಓಲಾ ಕಂಪನಿಯ ಕೃತಕ ಬುದ್ಧಿಮತ್ತೆ ಅಂಗಸಂಸ್ಥೆಯಾದ ಕೃತ್ರಿಮ್‌ನ ಉದ್ಯೋಗಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ನಿಖಿಲ್ ಸೋಮವಂಶಿ ಮೃತ ಉದ್ಯೋಗಿ. ಕೆಲಸದ ಒತ್ತಡವೇ ಆತ್ಮಹತ್ಯೆಗೆ ಕಾರಣ ಎಂದು ಸಹೋದ್ಯೋಗಿ ಜಾಲತಾಣದಲ್ಲಿ ಆರೋಪಿಸಿದ್ದಾರೆ. ಮೇ 8ರಂದು ಘಟನೆ ನಡೆದಿದೆ.

ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ)ಯಲ್ಲಿ ಪದವಿ ಪಡೆದಿದ್ದ ನಿಖಿಲ್, ವರ್ಷದ ಹಿಂದೆಯಷ್ಟೇ ಕೃತ್ರಿಮ್ ಕಂಪನಿ ಸೇರಿದ್ದರು. ನಿಖಿಲ್‌ಗೆ ಪ್ರಾಜೆಕ್ಟ್ ಕೊಟ್ಟು, ಇಬ್ಬರು ಸಹಾಯಕ ರನ್ನು ನೀಡಲಾಗಿತ್ತು. ಅವರಿಬ್ಬರೂ ಕೆಲಸ ಬಿಟ್ಟಿದ್ದರಿಂದ ಎಲ್ಲ ಕೆಲಸವೂ ನಿಖಿಲ್ ಮೇಲೆ ಬಿದ್ದಿತ್ತು ಎಂದು ಹೇಳಲಾಗಿದೆ.

ಅಮೆರಿಕದಲ್ಲಿರುವ ಕಂಪನಿಯ ವ್ಯವಸ್ಥಾಪಕ, ಮೀಟಿಂಗ್‌ನಲ್ಲಿ ಅವರನ್ನು ನಿಂದಿಸುತ್ತಿದ್ದರು ಎಂದು ಸಹೋದ್ಯೋಗಿ ಆರೋಪಿಸಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ಕೃತ್ರಿಮ್ ಕಂಪನಿ, ನಿಖಿಲ್ ಆತ್ಮಹತ್ಯೆ ಮಾಡಿಕೊಂಡಿರುವುದು ದುರದೃಷ್ಟಕರ. ಅವರ ಕುಟುಂಬಕ್ಕೆ ಎಲ್ಲ ಸಹಾಯದ ಭರವಸೆ ನೀಡಿದೆ.

ಘಟನೆ ನಡೆದಾಗ ನಿಖಿಲ್ ವೈಯಕ್ತಿಕ ಕಾರಣಕ್ಕೆ ರಜೆ ಪಡೆದಿದ್ದರು. ಏ. 8 ರಂದು ವಿಶ್ರಾಂತಿಗೆ ರಜೆ ಬೇಕೆಂದು ವ್ಯವಸ್ಥಾಪಕರಿಗೆ ತಿಳಿಸಿದ್ದರು. ಏ.17ರಂದು ಮತ್ತಷ್ಟು ವಿಶ್ರಾಂತಿ ಬೇಕಿದೆ ಎಂದ ಕಾರಣ ರಜೆ ವಿಸ್ತರಿಸಲಾಗಿತ್ತು ಎಂದು ಕಂಪನಿ ತಿಳಿಸಿದೆ.

ನಗರದಲ್ಲಿ ಇಂದು

'ಮುಖ್ಯಮಂತ್ರಿ ಸಿದ್ದರಾಮಯ್ಯ ಗ್ಯಾರಂಟಿ ಪ್ರಶಸ್ತಿ' ಪ್ರದಾನ: ಉದ್ಘಾಟನೆ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಎಚ್.ಎಂ. ರೇವಣ್ಣ, ಪ್ರಶಸ್ತಿ ಪ್ರದಾನ: ಪ್ರಭಾಕರ್, ಉಪಸ್ಥಿತಿ: ಎನ್. ಕೃಷ್ಣಪ್ಪ, ಅತಿಥಿಗಳು: ಶ್ರೀಧರ್ ಲಕ್ಷ್ಮಣ್, ಮದನ್‌ಪಟೇಲ್, ಎಂ. ಆಂಜನಪ್ಪ, ವಿ. ರಘುನಾಥ ನಾಯ್ಡು, ಜಿ. ನಾಗೇಶ್, ಡಿ. ಹರೀಶ್ ಬಾಬು, ಆಯೋಜನೆ: ಕರ್ನಾಟಕ ರಾಜ್ಯ ಸವಿತಾ ಸಮಾಜ, ಉದ್ಘಾಟನಾ ಸ್ಥಳ: ಪುರಭವನದ ಮುಂಭಾಗ, ಕಾರ್ಯಕ್ರಮದ ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಬೆಳಿಗ್ಗೆ 10.30

ಉಪನ್ಯಾಸ, ಪತ್ರಿಕೆ ಬಿಡುಗಡೆ, ಪುಸ್ತಕ ಪ್ರದರ್ಶನ: 'ಸಾಹಿತ್ಯ ಮತ್ತು ಸಿನಿಮಾ' ಉಪನ್ಯಾಸ: ಗಿರೀಶ್ ಕಾಸರವಳ್ಳಿ, ಅತಿಥಿ: ನ. ರವಿಕುಮಾರ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಉಪಸ್ಥಿತಿ: ಎಸ್.ಎನ್. ವೆಂಕಟೇಶ್, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು, ಯಲಹಂಕ ಉಪನಗರ, ಬೆಳಿಗ್ಗೆ 10.30

ಗಿರೀಶ್ ಕಾಸರವಳ್ಳಿ

ಜನಾಗ್ರಹ ಸಮಾವೇಶ: ಆಯೋಜನೆ: ಸಂಯುಕ್ತ ಹೋರಾಟ ಕರ್ನಾಟಕ, ಸ್ಥಳ: ಬಾಪು ಸಭಾಂಗಣ, ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ದತ್ತಿ ಕಾರ್ಯಕ್ರಮ: ಅತ್ಯುತ್ತಮ ಲೇಖನಗಳಿಗೆ ಬಹುಮಾನ, ಉತ್ತಮ ಸಂಶೋಧನಾರ್ಥಿ ಬಹುಮಾನ ಪ್ರದಾನ ಸಮಾರಂಭ: ಬಹುಮಾನ ಪಡೆಯುವವರು: ದಯಾನಂದ, ವಸುಂಧರಾ, ಪಾಟೀಲ ಶೋಭಾ, ಉಪಸ್ಥಿತಿ: ರಾ.ಕೃ. ಶ್ರೀಧರಮೂರ್ತಿ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5

ಮಕ್ಕಳ ರಂಗ ಹಬ್ಬ: ಉದ್ಘಾಟನೆ: ಗಿರಿಜಾ ಲೋಕೇಶ್, ಮಕ್ಕಳ ಹಬ್ಬದ ಬಲೂನ್ ಆರೋಹಣ: 'ಮುಖ್ಯಮಂತ್ರಿ' ಚಂದ್ರು, ಸುಂದರ್‌ರಾಜ್, ಅತಿಥಿಗಳು: ಕೆ.ಎಂ. ಗಾಯತ್ರಿ, ಜಯಕರ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಉಪಸ್ಥಿತಿ: ಕೆ. ರಾಮಕೃಷ್ಣಯ್ಯ, ನಾಗರತ್ನ ಸತೀಶ್, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

ಗಿರಿಜಾ ಲೋಕೇಶ್

ಬಿ.ವಿ. ಕಾರಂತ–90 ನೆನಪಿನ ರಾಜ್ಯಮಟ್ಟದ ನಾಟಕೋತ್ಸವ: 'ಎದೆಗೆ ಬಿದ್ದ ಅಕ್ಷರ' ನಾಟಕ ಪ್ರದರ್ಶನ: ರಚನೆ: ದೇವನೂರ ಮಹಾದೇವ, ತಂಡ: ಮೈಸೂರಿನ ಕಾವಲುಮನೆ ಸಾಂಸ್ಕೃತಿಕ ಕೇಂದ್ರ, ರಂಗರೂಪ: ಎಸ್. ನಟರಾಜ ಬೂದಾಳ್, ಆರ್. ಸಂತೋಷ್ ನಾಯ್ಕ್, ನಿರ್ದೇಶನ: ಸಿ. ಬಸವಲಿಂಗಯ್ಯ, ಆಯೋಜನೆ: ಭಾಗವತರು, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.10

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಸರ್ಕಾರಿ ಆಯುರ್ವೇದ ಆಸ್ಪತ್ರೆಯ ಪಂಚಕರ್ಮ ಕೇಂದ್ರದ ಒಳಾಂಗಣ ಮಾತ್ರ ನವೀಕರಣ

ಹೈಟೆಕ್ ಘಟಕಕ್ಕಿಲ್ಲ ಚಿಕಿತ್ಸಾ ಸಾಧನ

● ವರುಣ ಹೆಗಡೆ

ಬೆಂಗಳೂರು: ನಗರದ ಜಯಚಾಮರಾಜೇಂದ್ರ ಸರ್ಕಾರಿ ಆಯುರ್ವೇದ ಆಸ್ಪತ್ರೆಯಲ್ಲಿರುವ ಪಂಚಕರ್ಮ ಚಿಕಿತ್ಸಾ ಘಟಕದ ಕೊಠಡಿಗಳಿಗೆ ಮಾತ್ರ ಹೈಟೆಕ್ ಸ್ಪರ್ಶ ನೀಡಲಾಗಿದ್ದು, ಮೇಲ್ದರ್ಜೆಗೆ ಏರಿಸಲಾದ ಈ ಘಟಕಕ್ಕೆ ಅಗತ್ಯ ಚಿಕಿತ್ಸಾ ಸಾಧನಗಳನ್ನು ಒದಗಿಸಿಲ್ಲ. ಇದರಿಂದಾಗಿ ಗುಣಮಟ್ಟದ ಪಂಚಕರ್ಮ ಚಿಕಿತ್ಸೆ ಸಾಧ್ಯವಾಗುತ್ತಿಲ್ಲ.

ಧನ್ವಂತರಿ ರಸ್ತೆಯಲ್ಲಿರುವ ಸರ್ಕಾರಿ ಆಯುರ್ವೇದ ಆಸ್ಪತ್ರೆಯ ಪಂಚಕರ್ಮ ಚಿಕಿತ್ಸಾ ಘಟಕವನ್ನು ಇತ್ತೀಚೆಗೆ ನವೀಕರಿಸಲಾಗಿದೆ. 2009ರಲ್ಲಿ ಉದ್ಘಾಟನೆಗೊಂಡಿದ್ದ, ಆಸ್ಪತ್ರೆಯ ಹೊರ ರೋಗಿ ವಿಭಾಗ ಹಾಗೂ 'ಪುನರ್ನವ' ಪಂಚಕರ್ಮ ಒಳ ರೋಗಿ ವಿಭಾಗದ ಕಟ್ಟಡದ ಮೂರು ಮಹಡಿಗಳನ್ನು ಪಂಚಕರ್ಮ ಚಿಕಿತ್ಸೆಗೆ ಮೀಸಲಿಡಲಾಗಿದೆ. ಇಲ್ಲಿ 18 ಕೊಠಡಿಗಳಿದ್ದು, ಎಲ್ಲ ಕೊಠಡಿಗಳನ್ನು ಒಟ್ಟು ₹2.96 ಕೋಟಿ ವೆಚ್ಚದಲ್ಲಿ ನವೀಕರಣ ಮಾಡಲಾಗಿದೆ. ಆದರೆ, ಚಿಕಿತ್ಸೆಗೆ ಅಗತ್ಯವಿರುವ ಶಿರೋಧರ, ಸ್ಟೀಮ್ ಬಾಕ್ಸ್‌ನಂತಹ ಸಾಧನಗಳನ್ನು ಅಳವಡಿಸಿಲ್ಲ.

ನವೀಕರಣಕ್ಕೆ ರಾಷ್ಟ್ರೀಯ ಆಯುಷ್ ಮಿಷನ್ ಅಡಿ ಅನುದಾನ ಭರಿಸಲಾಗಿದೆ. 18 ಕೊಠಡಿಗಳಿಗೂ ಹೈಟೆಕ್ ಹೆಸರಿನಲ್ಲಿ ವಿದ್ಯುತ್ ದೀಪಗಳನ್ನು ಅಳವಡಿಕೆ

ಕೊಠಡಿಗಳ ನವೀಕರಣದ ಕಾರಣ ಚಿಕಿತ್ಸೆಯ ದರ ಪರಿಷ್ಕರಿಸಲಾಗಿದೆ. ಇರುವ ವ್ಯವಸ್ಥೆಯಡಿ ಗುಣಮಟ್ಟದ ಚಿಕಿತ್ಸೆ ನೀಡುತ್ತಿದ್ದೇವೆ
ಡಾ. ವೆಂಕಟರಾಮಯ್ಯ, ಆರ್‌ಎಂಒ

ಮಾಡಲಾಗಿದ್ದು, ಗೋಡೆಗಳಿಗೆ ಮರದ ಹೊದಿಕೆಯ ವಿನ್ಯಾಸ ಮಾಡಲಾಗಿದೆ. ಚಾವಣಿಗೂ ಅಲಂಕಾರ ಮಾಡಿದ್ದು, ಹೊರಗಡೆ ಸಹಾಯಕರಿಗೆ ವಿಶ್ರಾಂತಿಗೆ ಸೋಫಾ ಇರಿಸಲಾಗಿದೆ. ಸ್ನಾನ ಕೊಠಡಿ, ಶೌಚಾಲಯವನ್ನೂ ಮರುವಿನ್ಯಾಸ ಮಾಡಲಾಗಿದೆ. ಮಸಾಜ್ ಟೇಬಲ್, ಹಾಸಿಗೆಯನ್ನು ಹಾಗೇ ಉಳಿಸಿಕೊಳ್ಳಲಾಗಿದೆ. ಕಟ್ಟಡದ ಕೊಠಡಿಗಳ ಒಳಾಂಗಣ ವಿನ್ಯಾಸಕ್ಕೆ ಮಾತ್ರ ಹೈಟೆಕ್ ಸ್ಪರ್ಶ ನೀಡಿ, ಚಿಕಿತ್ಸೆಗೆ ಸೌಲಭ್ಯ ಒದಗಿಸದಿರುವುದು ಸಿಬ್ಬಂದಿಯ ಅಸಮಾಧಾನಕ್ಕೆ ಕಾರಣವಾಗಿದೆ.

'ಪಾರ್ಶ್ವವಾಯು ಸೇರಿ ವಿವಿಧ ಸಮಸ್ಯೆ ಎದುರಿಸುತ್ತಿರುವವರು ಪಂಚಕರ್ಮ ಚಿಕಿತ್ಸೆಗೆ ಬರುತ್ತಾರೆ. ಈ ಚಿಕಿತ್ಸಾ ವಿಧಾನವು ದೇಹದಲ್ಲಿನ ಎಲ್ಲ ತ್ಯಾಜ್ಯಗಳನ್ನು ಹೊರಹಾಕಲು ಸಹಕಾರಿಯಾಗಿದೆ. ಈ ಹೈಟೆಕ್ ಘಟಕಕ್ಕೆ ಮಸಾಜ್ ಸೇರಿ ವಿವಿಧ ಚಿಕಿತ್ಸೆಗೆ ಅಗತ್ಯವಿರುವ ಸಾಧನಗಳನ್ನು ಒದಗಿಸಿಲ್ಲ' ಎಂದು ಘಟಕದ ಸಿಬ್ಬಂದಿ ತಿಳಿಸಿದರು.

ಘಟಕದಲ್ಲಿ ರೋಗಿಯೊಬ್ಬರಿಗೆ ಸಿಬ್ಬಂದಿ ಪಂಚಕರ್ಮ ಚಿಕಿತ್ಸೆ ನೀಡುತ್ತಿರುವುದು
–ಪ್ರಜಾವಾಣಿ ಚಿತ್ರ

ದರ ಹೆಚ್ಚಳಕ್ಕೆ ಅಸಮಾಧಾನ: ನವೀಕೃತ ಕೊಠಡಿಗಳಿಗೆ ದಿನವೊಂದಕ್ಕೆ ₹375 ನಿಗದಿಪಡಿಸಲಾಗಿದೆ. ಸಿಬ್ಬಂದಿ ವೆಚ್ಚ ಪ್ರತ್ಯೇಕವಾಗಿ ಇರಲಿದೆ. ಈ ಮೊದಲು ₹100 ನಿಗದಿಪಡಿಸಲಾಗಿತ್ತು. ನವೀಕರಣದ ಬಳಿಕ ದರ ಪರಿಷ್ಕರಣೆ ಮಾಡಲಾಗಿದೆ. ಚಿಕಿತ್ಸೆಗೆ ಅಗತ್ಯವಿರುವ ಸಾಧನಗಳನ್ನು ಒದಗಿಸದೆ, ದರ ಹೆಚ್ಚಳ ಮಾಡಿರುವುದು ರೋಗಿಗಳ ಅಸಮಾಧಾನಕ್ಕೆ ಕಾರಣವಾಗಿದೆ. ಸರ್ಕಾರಿ ಆಯುರ್ವೇದ ವೈದ್ಯಕೀಯ ವಿದ್ಯಾಲಯದಡಿ ಕಾರ್ಯನಿರ್ವಹಿಸುತ್ತಿರುವ ಆಸ್ಪತ್ರೆಯ ಈ ಘಟಕಕ್ಕೆ ಹೊರ ರಾಜ್ಯಗಳಿಂದಲೂ ಪಂಚಕರ್ಮ ಚಿಕಿತ್ಸೆಗೆ ರೋಗಿಗಳು ಬರುತ್ತಾರೆ.

ಒಂದೇ 'ಸ್ಟೀಮ್ ಬಾಕ್ಸ್'

ಪಂಚಕರ್ಮ ಚಿಕಿತ್ಸೆ ಪಡೆಯುವವರಿಗೆ ಹಬೆ ಪಡೆಯಲು 'ಸ್ಟೀಮ್ ಬಾಕ್ಸ್' ಅತ್ಯಗತ್ಯ. ಆದರೆ, ಈ ಘಟಕದ 18 ಕೊಠಡಿಗಳಲ್ಲಿ ಒಂದು ಕೊಠಡಿಯಲ್ಲಿ ಮಾತ್ರ ಈ ಬಾಕ್ಸ್ ಇದೆ. ಅದು ಕೂಡ ಈ ಹಿಂದೆ ಖರೀದಿಸಿದ್ದು, ಹಾಗೇ ಉಳಿಸಿಕೊಳ್ಳಲಾಗಿದೆ. ಈ ಬಾಕ್ಸ್‌ಗೆ ಹಬೆ ಪಡೆಯಲು ಸೂಕ್ತ ಸಂಪರ್ಕ ಕಲ್ಪಿಸದ ಪರಿಣಾಮ ನಿರುಪಯುಕ್ತವಾಗಿದೆ. ಪಂಚಕರ್ಮ ಘಟಕದಲ್ಲಿ ಅತ್ಯಾಧುನಿಕ ಸಾಧನಗಳು ಇರದಿರುವುದು ವಿದ್ಯಾರ್ಥಿಗಳ ಕಲಿಕೆಗೂ ತೊಡಕಾಗಿದೆ.

'ಖಾಸಗಿ ಕೇಂದ್ರಗಳಲ್ಲಿ ಪಂಚಕರ್ಮ ಚಿಕಿತ್ಸೆ ದುಬಾರಿ ಎಂಬ ಕಾರಣ ಸರ್ಕಾರಿ ಆಸ್ಪತ್ರೆಯ ಈ ಘಟಕಕ್ಕೆ ಬರುತ್ತಿದ್ದೇವೆ. ಹೈಟೆಕ್ ಘಟಕಗಳಲ್ಲಿ ಇರುವ ಚಿಕಿತ್ಸಾ ಸೌಲಭ್ಯಗಳು ಇಲ್ಲಿ ಸಿಗುತ್ತಿಲ್ಲ. ಉತ್ತಮವಾಗಿದ್ದ ಕೊಠಡಿಗಳನ್ನು ಅನಗತ್ಯ ನವೀಕರಣ ಮಾಡಲಾಗಿದೆ. ಕಟ್ಟಡದ ನವೀಕರಣದ ಬದಲು, ವೈದ್ಯಕೀಯ ಸಾಧನಗಳ ಅಳವಡಿಕೆಗೆ ಆದ್ಯತೆ ನೀಡಬೇಕಿತ್ತು' ಎಂದು ರೋಗಿಗಳು ತಿಳಿಸಿದರು.

ಜಿಬಿಎ: ಜನಾಭಿಪ್ರಾಯ

'ಜಿಬಿಎ ರಚನೆಯ ನಂತರ ಮುಂದೇನಾಗಬೇಕು'– ಈ ಪ್ರಶ್ನೆಗೆ ಸಾರ್ವಜನಿಕರು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಇಲ್ಲಿವೆ.

ರಾಜಧಾನಿ ಬೆಂಗಳೂರಿನ ಜನಸಂಖ್ಯೆಗೆ ಅನುಗುಣವಾಗಿ ಮೂಲಸೌಕರ್ಯ ಅಭಿವೃದ್ಧಿ ಮಾಡಲು ಜಿಬಿಎಯಿಂದ ಸಾಧ್ಯವಾಗಲಿದೆ. ಇತ್ತೀಚೆಗೆ ಬೆಂಗಳೂರಿನಲ್ಲಿ ವಲಸಿಗರ ಸಂಖ್ಯೆ ಹೆಚ್ಚುತ್ತಿದೆ. ಇವರು ನಗರದ ಅಕ್ಕಪಕ್ಕದ ಪ್ರದೇಶಗಳಾದ ಬಿಡದಿ, ಆನೇಕಲ್‌ಗಳಲ್ಲಿ ವಾಸಿಸುತ್ತಿದ್ದರು. ಈಗ ಜಿಬಿಎ ವ್ಯಾಪ್ತಿ ಈ ಪ್ರದೇಶಗಳನ್ನು ಒಳಗೊಳ್ಳುವುದರಿಂದ ಬಡ ವಲಸಿಗರಿಗೂ ತೆರಿಗೆಯ ಬರೆ ಬೀಳುವ ಸಾಧ್ಯತೆ ಇದೆ. ಜಿಬಿಎ ಸಾಧಕ–ಬಾಧಕಗಳನ್ನು ಸಾರ್ವಜನಿಕವಾಗಿ ಚರ್ಚಿಸಿ ನಂತರ ಅದನ್ನು ಅನುಷ್ಠಾನಗೊಳಿಸಬೇಕು.
ಕಿರಣ್ ಮೌರ್ಯ, ಅತ್ತಿಗುಪ್ಪೆ

ಬೆಂಗಳೂರು ನಗರ ಪಾಲಿಕೆಯಿಂದ ಮಹಾನಗರ ಪಾಲಿಕೆಯಾಯಿತು. ನಂತರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಗಿ, ಈಗ ಜಿಬಿಎ ಆಗುತ್ತಿದೆ. ಬೆಂಗಳೂರಿನ ರಸ್ತೆಗಳು ಮಳೆ ಬಂದರೆ ಕೆರೆಗಳಾಗಿ ಮಾರ್ಪಡುತ್ತಿವೆ. ರಸ್ತೆ ಗುಂಡಿ, ಸಂಚಾರ ದಟ್ಟಣೆ ಸೇರಿದಂತೆ ಮೂಲಸೌಲಭ್ಯ ಅಭಿವೃದ್ಧಿಗೆ ಗ್ಯಾರಂಟಿ ನೀಡಿದ ನಂತರ, ಹೆಸರು ಬದಲಾವಣೆಗೆ ಆದ್ಯತೆ ನೀಡಬೇಕು.
ಪತ್ತಂಗಿ ಎಸ್. ಮುರಳಿ, ಕುಮಾರಸ್ವಾಮಿ ಬಡಾವಣೆ

ಕ್ಷೇತ್ರಗಳು ಪುನರ್ ವಿಂಗಡಣೆ ಆದ ನಂತರ ಜಿಬಿಎ ಮಾಡಿದ್ದರೆ ಹೆಚ್ಚು ಅನುಕೂಲವಾಗುತ್ತಿತ್ತು. ಈಗಲೇ ಜಿಬಿಎ ಅನುಷ್ಠಾನ ಮಾಡಿದರೆ, ಮತ್ತೆ 2028–29ರಲ್ಲಿ ಕ್ಷೇತ್ರ ವಿಂಗಡಣೆ ಸಮಯದಲ್ಲಿ ವಾರ್ಡ್‌ಗಳು ಮತ್ತು ಬೇರೆ–ಬೇರೆ ಕ್ಷೇತ್ರಗಳಲ್ಲಿ ಹರಿದು ಹಂಚಿ ಹೋಗಲಿದೆ. ಇದರಿಂದ ಚುನಾಯಿತ ಪ್ರತಿನಿಧಿಗಳು ಕ್ಷೇತ್ರ ಹಾಗೂ ವಾರ್ಡ್‌ಗಳ ಅಭಿವೃದ್ಧಿ ಮಾಡುವ ಬಗ್ಗೆ ಆಸಕ್ತಿ ಕಳೆದುಕೊಳ್ಳುವ ಸಾಧ್ಯತೆ ಇದೆ. ಇದರಿಂದ ಬೆಂಗಳೂರು ಅಭಿವೃದ್ಧಿಗೆ ಹಿನ್ನಡೆ ಆಗಲಿದೆ.
ಪಿ.ಎಸ್. ಪ್ರಕಾಶ್, ಅರಳೆಪೇಟೆ



ಬಿಬಿಎಂಪಿ ಹೋಗಿ ಜಿಬಿಎ ಎಂಬ ಹೆಸರು ಬದಲಾದರೆ ಅಷ್ಟೇ ಸಾಲದು, ಮೂಲ ಬೆಂಗಳೂರಿನ ಸೊಗಡನ್ನು ಉಳಿಸಿಕೊಳ್ಳಬೇಕು. ನಗರದ ಸ್ವಚ್ಛತೆಗೆ, ಸೌಂದರ್ಯಕ್ಕೆ ಆದ್ಯತೆ ನೀಡಬೇಕು. ರಸ್ತೆ ಗುಂಡಿ ಮುಚ್ಚುವುದು, ಗುಣಮಟ್ಟದ ರಸ್ತೆ, ಪಾದಚಾರಿ ಮಾರ್ಗಗಳನ್ನು ನಿರ್ಮಿಸಬೇಕು. ಉದ್ಯಾನಗಳ ಸೊಬಗನ್ನು ಹೆಚ್ಚಿಸಬೇಕು. ಕಸದ ಸಮಸ್ಯೆಗೆ ಮುಕ್ತಿ ನೀಡಬೇಕು. ವಾಯು ಮಾಲಿನ್ಯ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು. ನಂತರ ಜಿಬಿಎ ಅನುಷ್ಠಾನಗೊಳಿಸಿ, ನಾಡಪ್ರಭು ಕೆಂಪೇಗೌಡರ ಕನಸಿನ ಬೆಂಗಳೂರನ್ನು ಉಳಿಸಿ, ಬೆಳೆಸಬೇಕಿದೆ.
ಎಂ.ಚಂದ್ರಶೇಖರ್, ಹನುಮಂತನಗರ

ಜಿಬಿಎ ಆಯ್ತು: ಮುಂದೇನಾಗಬೇಕು

'ಗ್ರೇಟರ್ ಬೆಂಗಳೂರು ಪ್ರದೇಶ' ಘೋಷಣೆಯಾಗಿದೆ. ಮುಂದೆ ಏನಾಗಬೇಕು? ಪ್ರತಿಕ್ರಿಯಿಸಿ. ಮಾಹಿತಿ ಸಂಕ್ಷಿಪ್ತವಾಗಿರಲಿ.ಜೊತೆಗೆ ವಿಳಾಸ, ಭಾವಚಿತ್ರವಿರಲಿ.

9606038256

ಸಾಹಿತಿ ಜಿ.ಎಸ್. ಸಿದ್ಧಲಿಂಗಯ್ಯ ಸ್ಮರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಿ.ಎಸ್. ಸಿದ್ಧಲಿಂಗಯ್ಯ ಅವರು ಹಳಗನ್ನಡ, ಹೊಸಗನ್ನಡ, ಪಾಶ್ಚಿಮಾತ್ಯ ಸಾಹಿತ್ಯದ ಸಂಶೋಧನೆ, ವಿಮರ್ಶೆ ಹಾಗೂ ಅನುವಾದ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಪಾಂಡಿತ್ಯ ಹೊಂದಿದ್ದರು' ಎಂದು ಸಾಹಿತಿ ಹಂ.ಪ. ನಾಗರಾಜಯ್ಯ ಹೇಳಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಡಾ.ಎಸ್. ವಿದ್ಯಾಶಂಕರ ಸಾಂಸ್ಕೃತಿಕ ಪ್ರತಿಷ್ಠಾನದ ಸಹಯೋಗದಲ್ಲಿ ಸೋಮವಾರ ನಡೆದ ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ ಅವರ ಸ್ಮರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಜಿ.ಎಸ್. ಸಿದ್ಧಲಿಂಗಯ್ಯ ಅವರು ಕುವೆಂಪು ಅವರ ಮೆಚ್ಚಿನ ಶಿಷ್ಯ ಮಾತ್ರವಲ್ಲ, ಉತ್ತಮ ಅಧ್ಯಾಪಕರೂ ಆಗಿದ್ದರು. ಅವರಿಗಿಂತ ಕಿರಿಯನಾದ ನಾನು ಅವರೊಂದಿಗೆ ಸರ್ಕಾರಿ ಕಲಾ ಕಾಲೇಜು ಹಾಗೂ ಇತರೆಡೆ ಸಹೋದ್ಯೋಗಿಯಾಗಿ ಕೆಲಸ ಮಾಡಿದ್ದೇನೆ' ಎಂದು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಪ್ರೊ.ಜಿ.ಎಸ್. ಸಿದ್ಧಲಿಂಗಯ್ಯ ಅವರ ಭಾವಚಿತ್ರಕ್ಕೆ ಹಂ.ಪ. ನಾಗರಾಜಯ್ಯ, ಎಸ್. ಜಿ. ಸಿದ್ಧರಾಮಯ್ಯ, ಕೆ.ವಿ. ನಾಗರಾಜಮೂರ್ತಿ, ಎಲ್. ಎನ್. ಮುಕುಂದರಾಜ್, ಎಚ್. ಆರ್. ಸುಜಾತ ಅವರು ಪುಷ್ಪ ನಮನ ಸಲ್ಲಿಸಿದರು

ಸಾಹಿತಿ ಎಸ್.ಜಿ. ಸಿದ್ಧರಾಮಯ್ಯ ಮಾತನಾಡಿ, 'ಜಿ.ಎಸ್. ಸಿದ್ಧಲಿಂಗಯ್ಯ ಅವರು ಕಾಲೇಜು ಶಿಕ್ಷಣ ಇಲಾಖೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿಗೆ ಘನತೆ ಮತ್ತು ಗೌರವ ತಂದುಕೊಟ್ಟರು. ಇಲಾಖೆಯಲ್ಲಿ ಭ್ರಷ್ಟಾಚಾರ ನಡೆಯುತ್ತಿದ್ದ ಸಂದರ್ಭದಲ್ಲಿ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡು, ಅದರ ಶುದ್ಧೀಕರಣ ಮಾಡುವ ಕೆಲಸ ಮಾಡಿದರು' ಎಂದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್, ವಿಮರ್ಶಕಿ ಎಂ.ಎಸ್. ಆಶಾದೇವಿ, ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ಪ್ರಾಧ್ಯಾಪಕ ರುದ್ರೇಶ್ ಅದರಂಗಿ, ಕವಿ ಕಾ.ವೆಂ. ಶ್ರೀನಿವಾಸಮೂರ್ತಿ, ಲೇಖಕಿ ಸುಜಾತ ಎಚ್.ಆರ್. ಉಪಸ್ಥಿತರಿದ್ದರು.

ಜ್ಞಾನಭಾರತಿ: ಪಾರಂಪರಿಕ ತಾಣ ಪ್ರಸ್ತಾವನೆ ಸಲ್ಲಿಕೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿರುವ ಹಸಿರು ಪರಿಸರವನ್ನು ಕಾಪಾಡುವ ಉದ್ದೇಶದಿಂದ ಜೀವ ವೈವಿಧ್ಯ ಕಾಯ್ದೆ 2002 ರ ಅಡಿ 'ಪಾರಂಪರಿಕ ತಾಣ' ಎಂದು ಘೋಷಿಸಲು ಪ್ರಸ್ತಾವನೆ ಸಲ್ಲಿಸುವಂತೆ ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಅವರು ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿಗೆ ಸೂಚಿಸಿದ್ದಾರೆ.

ಜ್ಞಾನಭಾರತಿ ಅವರಣದಲ್ಲಿ ಲಕ್ಷಾಂತರ ಬೃಹತ್ ಮರಗಳಿದ್ದು, ಮುಂದಿನ ಪೀಳಿಗೆಗೆ ಇಲ್ಲಿನ ಜೀವವೈವಿಧ್ಯತೆಯನ್ನು ಕಾಪಾಡುವ ಮತ್ತು ಬೆಂಗಳೂರು ಮಹಾನಗರದ ಹಸಿರು ವಲಯ ರಕ್ಷಿಸುವ ಹೊಣೆ ಇಲಾಖೆ ಮೇಲಿದೆ ಎಂದು ಹೇಳಿದ್ದಾರೆ.

ಆದರೆ, ಜ್ಞಾನಭಾರತಿ ಪ್ರದೇಶದಲ್ಲಿ ಮರಗಳನ್ನು ಕಡಿದು ವಿವಿಧ ನಿರ್ಮಾಣ ಕಾರ್ಯ ಕೈಗೊಳ್ಳಲು ಪ್ರಯತ್ನ ನಡೆಯುತ್ತಿದ್ದು, ಇದನ್ನು ತಡೆದು ಜೀವ ವೈವಿಧ್ಯ ರಕ್ಷಿಸುವಂತೆ ಪರಿಸರ ಪ್ರೇಮಿಗಳು ಮನವಿ ಮಾಡಿದ್ದಾರೆ ಎಂದು ತಿಳಿಸಿದ್ದಾರೆ.

ಈಶ್ವರ ಬಿ. ಖಂಡ್ರೆ

ಜ್ಞಾನಭಾರತಿ ವಾಯುವಿಹಾರಿಗಳ ಸಂಘ ಸಲ್ಲಿಸಿದ್ದ ದೂರಿನ ಮೇರೆಗೆ, ವೈಜ್ಞಾನಿಕ ವರದಿ ಸಲ್ಲಿಸಲು ರಾಜ್ಯಪಾಲರು ಸೂಚಿಸಿದ್ದರು. ಅದರಂತೆ ಮೌಲ್ಯಮಾಪನ ಕುಲಸಚಿವರ ಅಧ್ಯಕ್ಷತೆಯಲ್ಲಿ 2024ರ ಸೆಪ್ಟೆಂಬರ್ 26ರಂದು ಸಮಿತಿ ರಚಿಸಲಾಗಿತ್ತು. ಜ್ಞಾನಭಾರತಿ ಆವರಣವನ್ನು ಜೀವ ವೈವಿಧ್ಯ ಕಾಯ್ದೆ–2002ರಂತೆ 'ಪಾರಂಪರಿಕ ತಾಣ' ಎಂದು ಘೋಷಿಸಬೇಕು' ಎಂದು ಸಮಿತಿ ವರದಿ ನೀಡಿತ್ತು. ಅದನ್ನು ರಾಜ್ಯಪಾಲರಿಗೆ ತಲುಪಿಸಿರಲಿಲ್ಲ. ಈ ಬಗ್ಗೆ 'ಪ್ರಜಾವಾಣಿ'ಯ ಮೇ 10ರ ಸಂಚಿಕೆಯಲ್ಲಿ 'ಪಾರಂಪರಿಕ ತಾಣ' ಆಗಲಿ ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟವಾಗಿತ್ತು.

ಮೂವರ ಮೇಲೆ ಹಲ್ಲೆ

ಮಾಗಡಿ: ಕಲ್ಯಾ ಗೇಟ್ ಬಳಿ ಸೋಮವಾರ ಯುವಕರ ನಡುವೆ ಕ್ಷುಲ್ಲಕ ವಿಷಯಕ್ಕೆ ಜಗಳ ನಡೆದು ಮೂವರ ಮೇಲೆ ಹಲ್ಲೆಯಾಗಿದೆ. ತಾಲ್ಲೂಕಿನ ಶ್ರೀಪತಿಹಳ್ಳಿಯ ಯಶವಂತ್, ಪ್ರದೀಪ್ ಹಾಗೂ ಲೋಕೇಶ್ ಹಲ್ಲೆಗೊಳಗಾದವರು. ಯಶವಂತ್ ಸ್ನೇಹಿತರು ರಾಮನಗರದಲ್ಲಿ ಕಾರು ಖರೀದಿಸಿದ್ದರು. ಅವರೊಂದಿಗೆ ಬಂದಿದ್ದ ಯುವಕರು ಟೆಂಪೊ ಟ್ರಾವೆಲರ್‌ನಲ್ಲಿ ಗ್ರಾಮಕ್ಕೆ ತೆರಳುತ್ತಿದ್ದಾಗ ಬೈಕ್ ಸವಾರನಿಗೆ ಕಿಚಾಯಿಸಿದ್ದರಿಂದ ಚಕಮಕಿ ನಡೆದಿದೆ ಎಂದು ಮಾಗಡಿ ಪೊಲೀಸರು ತಿಳಿಸಿದರು.

'ರೈಲು ಡಿಕ್ಕಿ ಹೊಡೆದು ಬಾಲಕಿ ಸಾವು'

ಪ್ರಜಾವಾಣಿ ವಾರ್ತೆ

ಬಿಡದಿ (ರಾಮನಗರ): ಹೋಬಳಿಯ ಭದ್ರಾಪುರದ ಹಕ್ಕಿಪಿಕ್ಕಿ ಕಾಲೊನಿಯಲ್ಲಿ ವಾರದ (ಮೇ 12) ಹಿಂದೆ ರೈಲು ಹಳಿ ಬಳಿ ಶವವಾಗಿ ಪತ್ತೆಯಾಗಿದ್ದ ಗ್ರಾಮದ 15 ವರ್ಷದ ಬಾಲಕಿಯದ್ದು ಕೊಲೆಯಲ್ಲ, ಬದಲಿಗೆ ರೈಲು ಅಪಘಾತ ಎಂಬುದು ಪೊಲೀಸ್ ತನಿಖೆಯಿಂದ ಗೊತ್ತಾಗಿದೆ. ಇದರೊಂದಿಗೆ ಬಾಲಕಿ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಲಾಗಿದೆ ಎಂಬ ಗಂಭೀರ ಆರೋಪಗಳಿಗೆ ತೆರೆ ಬಿದ್ದಿದೆ.

ಬಾಲಕಿ ಶವದ ಮರಣೋತ್ತರ ಪರೀಕ್ಷೆಯ ವರದಿ ಸೋಮವಾರ ಪೊಲೀಸರ ಕೈ ಸೇರಿದೆ. ಅಲ್ಲದೆ, ಬಾಲಕಿ ರೈಲು ಡಿಕ್ಕಿ ಹೊಡೆದಿದ್ದರಿಂದ ಮೃತಪಟ್ಟಿದ್ದಾಳೆ ಎಂದು ಖಚಿತಪಡಿಸುವ ಸಿ.ಸಿ. ಟಿ.ವಿ ಕ್ಯಾಮೆರಾ ದೃಶ್ಯಾವಳಿ ವಾಟ್ಸ್‌ಆ್ಯಪ್ ಸೇರಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ. ಪೊಲೀಸರು ಸಹ ವಿಡಿಯೊ ನಿಜವೆಂದು ಹೇಳಿದ್ದಾರೆ.

ತಲೆಗೆ ಪೆಟ್ಟು ಬಿದ್ದು ಸಾವು: 'ಬಾಲಕಿ ಶವದ ಮರಣೋತ್ತರ ಪರೀಕ್ಷೆಯ ವರದಿ ಕೈ ಸೇರಿದೆ. ತಲೆಗೆ ಬಲವಾದ ಪೆಟ್ಟು ಬಿದ್ದಿದ್ದರಿಂದ ಬಾಲಕಿ ಮೃತಪಟ್ಟಿರುವುದಾಗಿ ವೈದ್ಯರು ವರದಿಯಲ್ಲಿ ತಿಳಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಬಂದಿರುವ ಎಫ್‌ಎಸ್‌ಎಲ್ ವರದಿಯಲ್ಲಿ ಅತ್ಯಾಚಾರ ನಡೆದಿಲ್ಲ ಎಂಬುದು ಸ್ಪಷ್ಟವಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ಶ್ರೀನಿವಾಸ ಗೌಡ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದರು.

ಕಾರು ಅಪಘಾತ ಮೂವರು ಸಾವು

ಪ್ರಜಾವಾಣಿ ವಾರ್ತೆ

ಹುಳಿಯಾರು: ಆಂಧ್ರದ ಕರ್ನೂಲ್ ಬಳಿ ಭಾನುವಾರ ರಾತ್ರಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಕಾರಿನಲ್ಲಿದ್ದ ಕೆಂಕೆರೆ ಗ್ರಾಮದ ಮೂವರು ಮೃತಪಟ್ಟಿದ್ದಾರೆ. ಇತರ ಮೂವರು ಗಾಯಗೊಂಡಿದ್ದಾರೆ.

ಕಾರು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಪಲ್ಟಿಯಾಗಿದೆ. ಚಿಕ್ಕನಾಯಕನಹಳ್ಳಿ ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ, ಕೆಂಕೆರೆ ಗ್ರಾಮದ ಕೆ.ಎಂ.ನವೀನ್ (45), ಬಿಜೆಪಿ ಯುವಮೋರ್ಚಾ ಉಪಾಧ್ಯಕ್ಷ ಸಂತೋಷ್ ಕುಮಾರ್ (37), ತೆಂಗಿನ ಚಿಪ್ಪಿನ ವ್ಯಾಪಾರಿ ಲೋಕೇಶ್ ಕಾಮಶೆಟ್ಟಿ (38) ಮೃತರು.

ಭಾನುವಾರ ಸಂತೋಷ್‌ಕುಮಾರ್ ಹುಟ್ಟುಹಬ್ಬ ಇತ್ತು. ಹುಟ್ಟುಹಬ್ಬ ಆಚರಿಸಿಕೊಳ್ಳಲು ಶುಕ್ರವಾರ ಮಂತ್ರಾಲಯಕ್ಕೆ ತೆರಳಿದ್ದರು. ಬಳಿಕ ಭಾನುವಾರ ಬೆಳಗ್ಗೆ ಶ್ರೀಶೈಲಕ್ಕೆ ಹೋಗಿ ನಂತರ ಮಹಾನಂದಿ ದರ್ಶನ ಮಾಡಿ ವಾಪಸ್ ಬರುವಾಗ ಆಂಧ್ರಪ್ರದೇಶದ ಕರ್ನೂಲ್ ಬಳಿ ಅಪಘಾತ ನಡೆದಿದೆ.

ಕೆನರಾ ಬ್ಯಾಂಕ್ केनरा बैंक Canara Bank
भारत सरकार का उपक्रम A Government of India Undertaking
सिंडिकेट Syndicate
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರ. ಕ., 112, ಜೆ. ಸಿ. ರಸ್ತೆ, ಬೆಂಗಳೂರು –560 002
www.canarabank.com

ಮೂಲ ಡಿವಿಡೆಂಡ್ ಮೊತ್ತದಲ್ಲಿ ತೆರಿಗೆ ಕಡಿತಗೊಳಿಸುವ ಬಗ್ಗೆ ಷೇರುದಾರರಿಗೆ ಮಾಹಿತಿ ನೀಡುವ ಕುರಿತು

ಬ್ಯಾಂಕಿನ ನಿರ್ದೇಶಕರ ಮಂಡಳಿಯು 08/05/2025ರಂದು 2024–25ರ ಹಣಕಾಸು ವರ್ಷದ ಡಿವಿಡೆಂಡ್‌ನ್ನು ಬ್ಯಾಂಕಿನ ಮುಂದಿನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ (ಎಜಿಎಂ) ಷೇರುದಾರರ ಅನುಮೋದನೆಗೆ ಒಳಪಟ್ಟು ಶಿಫಾರಸು ಮಾಡಿದೆ. 2024–25ರ ವರ್ಷಕ್ಕೆ ಪ್ರತಿ ಇಕ್ವಿಟಿ ಷೇರಿಗೆ ರೂ.4/ರಂತೆ (ಅಂದರೆ, ರೂ.2/ರ ಮುಖಬೆಲೆಯ ಪ್ರತಿ ಷೇರಿನ 200%) 13ನೇ ಜೂನ್ 2025ಕ್ಕೆ ಎನ್‌ಎಸ್‌ಡಿಎಲ್/ಸಿಡಿ ಎಸ್‌ಎಲ್‌ನಲ್ಲಿ ನಮೂದಿಸಲ್ಪಟ್ಟಂತೆ, ಷೇರುದಾರರ /ಫಲಾನುಭವಿ ಮಾಲೀಕರ ರಿಜಿಸ್ಟರ್‌ನಲ್ಲಿ ಲಭ್ಯವಿರುವ ಷೇರುದಾರರಿಗೆ ಡಿವಿಡೆಂಡ್‌ನ್ನು ಪಾವತಿಸಲಾಗುವುದು. (ಇನ್ನು ಮುಂದೆ ರೆಕಾರ್ಡ್ ದಿನಾಂಕ ಎಂದು ಕರೆಯಲಾಗುತ್ತದೆ). ವಾರ್ಷಿಕ ಸಾಮಾನ್ಯ ಸಭೆಯಲ್ಲಿ (26 ಜೂನ್ 2025) ಘೋಷಣೆಯ ದಿನಾಂಕದಿಂದ 30 ದಿನಗಳಲ್ಲಿ ಷೇರುದಾರರಿಗೆ ಡಿವಿಡೆಂಡ್‌ನ್ನು ಪಾವತಿಸಲಾಗುವುದು.

ಇದಲ್ಲದೆ, ಆದಾಯ ತೆರಿಗೆ ಕಾಯ್ದೆ 1961 (ಕಾಯಿದೆ)ಯ ನಿಬಂಧನೆಗಳ ಪ್ರಕಾರ, ಹಣಕಾಸು ಕಾಯಿದೆ 2020 ರಲ್ಲಿ ತಿದ್ದುಪಡಿ ಮಾಡಿದಂತೆ, ಏಪ್ರಿಲ್ 1, 2020ರಂದು ಅಥವಾ ನಂತರ ಕಂಪನಿಯು ಪಾವತಿಸಿದ ಅಥವಾ ವಿತರಿಸಿದ ಡಿವಿಡೆಂಡ್‌ಗಳಿಗೆ ಷೇರುದಾರರ ಮೂಲಕ ಸದರಿ ಮೊತ್ತಕ್ಕೆ ತೆರಿಗೆ ವಿಧಿಸಲಾಗುತ್ತದೆ. ಆದ್ದರಿಂದ ಕಂಪನಿಯು ಡಿವಿಡೆಂಡ್ ಪಾವತಿಸುವ ಸಮಯದಲ್ಲಿ ಮೂಲ ಡಿವಿಡೆಂಡ್ ಮೊತ್ತಕ್ಕೆ (ಟಿಡಿಎಸ್) ತೆರಿಗೆಯನ್ನು ಕಡಿತಗೊಳಿಸುವುದು ಅನಿವಾರ್ಯವಾಗಿರುತ್ತದೆ. ಟಿಡಿಎಸ್ ಕಡಿತವು ಷೇರುದಾರರ ವಾಸ ಸ್ಥಿತಿ ಮತ್ತು ಕಾಯಿದೆಯಲ್ಲಿ ಸೂಚಿಸಲಾಗಿರುವ ನಿಬಂಧನೆಗಳಿಗನುಸಾರವಾಗಿ ಅವರು ಸಲ್ಲಿಸಿದ ಮತ್ತು ಬ್ಯಾಂಕ್ ಸ್ವೀಕರಿಸಿದ ಅವಶ್ಯ ದಾಖಲೆಗಳ ಮೇಲೆ ಅವಲಂಬಿತವಾಗಿರುತ್ತದೆ. ಅದರಂತೆಯೇ, ಅನ್ವಯಿಸಲ್ಪಡುವ ಟಿಡಿಎಸ್ ಕಡಿತಗೊಳಿಸಿದ ನಂತರವಷ್ಟೇ ಬ್ಯಾಂಕ್ ಡಿವಿಡೆಂಡ್‌ನ್ನು ಪಾವತಿಸುತ್ತದೆ. ಆದ್ದರಿಂದ, ಷೇರುದಾರರು ತಮ್ಮ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್, ಕೆಎಫ್‌ಐಎನ್ ಟೆಕ್ನಾಲಜೀಸ್ ಲಿಮಿಟೆಡ್‌ನ ವೆಬ್‌ಸೈಟ್ www.kfintech.comನಲ್ಲಿ ಸೂಕ್ತ ದಾಖಲೆ ಪತ್ರಗಳನ್ನು ಸಲ್ಲಿಸಲು ಕೋರಲಾಗಿದೆ.

ಆರ್‌ಟಿಎ ಮೂಲಕ ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ಟಿಡಿಎಸ್ ಕಡಿತಗೊಳಿಸಲು ಬ್ಯಾಂಕ್ ಬಾಧ್ಯಸ್ಥವಾಗಿದೆ ಮತ್ತು ನಂತರ ಯಾವುದೇ ರೀತಿಯ ಟಿಡಿಎಸ್ ಮರುಪರಿಶೀಲನೆ ಮನವಿಗಳಿಗೆ ಅವಕಾಶವಿರುವುದಿಲ್ಲ.

ಈ ನಿಟ್ಟಿನಲ್ಲಿ, ಒಂದು ಇ-ಮೇಲ್ ಸಂದೇಶವನ್ನು ಎಲ್ಲಾ ಷೇರುದಾರರಿಗೆ ಅವರು ಬ್ಯಾಂಕ್/ಠೇವಣಿಗಳೊಂದಿಗೆ ನೋಂದಾಯಿಸಿರುವ ಇ-ಮೇಲ್ ಐಡಿಗಳಿಗೆ ಟಿಡಿಎಸ್ ಕಡಿತಗೊಳಿಸಲು ಅನ್ವಯವಾಗುವ ಷರತ್ತುಗಳನ್ನು ವಿವರಿಸಿ ಅದಕ್ಕೆ ಸಂಬಂಧಪಟ್ಟ ವಿವಿಧ ರೂಪದ ಲಿಂಕ್‌ಗಳೊಂದಿಗೆ ಕಳುಹಿಸಲಾಗುತ್ತಿದೆ.

ಕೆನರಾ ಬ್ಯಾಂಕ್ ಪರವಾಗಿ,
ಸಹಿ /-
ಸಂತೋಷ್ ಕುಮಾರ್ ಬರಿಕ್
ಕಂಪನಿ ಸೆಕ್ರೆಟರಿ

ದಿನಾಂಕ : 20.05.2025
ಸ್ಥಳ: ಬೆಂಗಳೂರು



ತುಮಕೂರು ತಾಲ್ಲೂಕಿನ ಮುದ್ದರಾಮಯ್ಯನ ಪಾಳ್ಯದಲ್ಲಿ ಸುರಿದ ಮಳೆಗೆ ಕುಸಿದ ಮನೆ (ಎಡ ಚಿತ್ರ). ಆನೇಕಲ್ ತಾಲ್ಲೂಕಿನ ವೀರಸಂದ್ರ ಕೈಗಾರಿಕಾ ಪ್ರದೇಶದ ರಸ್ತೆಯಲ್ಲಿ ಮೊಳಕಾಲವರೆಗೆ ಹರಿದ ನೀರು

ಆನೇಕಲ್: ನಾಲ್ಕು ಕಿ.ಮೀ.ವರೆಗೆ ವಾಹನ ಸಾಲು • ಚೀಲದಲ್ಲೇ ಮೊಳಕೆಯೊಡೆದ ಜೋಳ

ಬಿಟ್ಟೂ ಬಿಡದ ಮಳೆ: ಕೃಷಿ ಚಟುವಟಿಕೆಗೆ ಅಡ್ಡಿ

ಪ್ರಜಾವಾಣಿ ವಾರ್ತೆ

ತುಮಕೂರು/ಮೈಸೂರು/ಕಲಬುರಗಿ: ರಾಜ್ಯದ ವಿವಿಧೆಡೆ ಭಾನುವಾರ ರಾತ್ರಿ ಮತ್ತು ಸೋಮವಾರ ಧಾರಾಕಾರ ಮಳೆಯಾಗಿದೆ.

ಮೈಸೂರು ಮತ್ತು ಹಾಸನ ಜಿಲ್ಲೆಯಲ್ಲಿ ಕೆಲವೆಡೆ ಭಾನುವಾರ ರಾತ್ರಿಯಿಂದ ಸೋಮವಾರ ಬೆಳಿಗ್ಗೆವರೆಗೆ ಜಿಟಿ ಜಿಟಿ ಮಳೆಯಾಗಿದ್ದು, ಹಿರೀಸಾವೆ ಹೋಬಳಿಯಲ್ಲಿ ಎರಡು ಮನೆಗಳಿಗೆ ಹಾನಿಯಾಗಿದೆ.

ಮೈಸೂರು ನಗರ, ಹೊರವಲಯದ ಗ್ರಾಮಗಳಲ್ಲಿ, ಹಾಸನದ ಚನ್ನರಾಯ ಪಟ್ಟಣ ತಾಲ್ಲೂಕಿನ ಹಿರೀಸಾವೆ, ನುಗ್ಗೇಹಳ್ಳಿ, ಬಾಗೂರು ಹೋಬಳಿಯಲ್ಲಿ ಮಳೆಯಾಗಿದೆ.

ತುಮಕೂರು ಜಿಲ್ಲೆಯ ವಿವಿಧ ಕಡೆ ಉತ್ತಮ ಮಳೆ ಸುರಿಯಿತು. ಸೋಮವಾರ ಬೆಳಗಿನ ಜಾವದಿಂದಲೇ ತುಂತುರು ಮಳೆ ಶುರುವಾಯಿತು. ಬೆಳಿಗ್ಗೆ 10 ಗಂಟೆಯ ತನಕ ನಿರಂತರವಾಗಿ ಸುರಿಯಿತು. ಇಡೀ ದಿನ ಮೋಡ ಕವಿದ ವಾತಾವರಣ ಇತ್ತು.

ಕಳೆದ ಕೆಲ ದಿನಗಳಿಂದ ಜಿಲ್ಲೆಯಾದ್ಯಂತ ಮಳೆಯಾಗುತ್ತಿದ್ದು, ಕೃಷಿ ಕೆಲಸಗಳು ಬಿರುಸು ಪಡೆದಿವೆ. ಪೂರ್ವ ಮುಂಗಾರಿನಲ್ಲಿ ಹೆಸರು, ಅಲಸಂದೆ ಸೇರಿದಂತೆ ಇತರೆ ಬೆಳೆಗಳ ಬಿತ್ತನೆ ಕಾರ್ಯ ಚುರುಕು ಪಡೆದಿದೆ. ಭಾನುವಾರ ರಾತ್ರಿ ಸುರಿದ ಮಳೆಗೆ ತುಮಕೂರು ತಾಲ್ಲೂಕಿನ ಕೋರ ಹೋಬಳಿಯ ಮುದ್ದರಾಮಯ್ಯನ ಪಾಳ್ಯದಲ್ಲಿ ರಂಗಮಣಿ ಎಂಬುವರಿಗೆ ಸೇರಿದ ಮನೆ ಸಂಪೂರ್ಣವಾಗಿ ಕುಸಿದಿದೆ. ಮನೆಯ ಗೋಡೆ, ಛಾವಣಿ ನೆಲಕ್ಕುರುಳಿವೆ. ಆದರೆ, ಯಾವುದೇ ಹಾನಿ ಸಂಭವಿಸಿಲ್ಲ.

ಆನೇಕಲ್ ತಾಲ್ಲೂಕಿನಾದ್ಯಂತ ಮಧ್ಯಾಹ್ನ 3ಕ್ಕೆ ಸುರಿಯಲು ಆರಂಭವಾದ ಮಳೆ ಸಂಜೆ ಏಳು ಗಂಟೆಯಾದರೂ ಒಂದೇ ಸಮನೆ ಸುರಿಯುತ್ತಿತ್ತು. ರಸ್ತೆಗಳಲ್ಲಿ ಮೊಳಕಾಲುವರೆಗೂ ಮಳೆ ನೀರು ನಿಂತಿತ್ತು. ಇದರಿಂದ ರಸ್ತೆಗಳೆಲ್ಲ ಹೊಳೆಯಂತಾಗಿದ್ದವು.

ರಸ್ತೆಯಲ್ಲಿ ನೀರು ತುಂಬಿದ್ದರಿಂದ ವಾಹನ ಸವಾರರು ಪರದಾಡಿದರು. ರಾಷ್ಟ್ರೀಯ ಹೆದ್ದಾರಿ 44ರಲ್ಲಿ ನಾಲ್ಕು ಕಿಲೋ ಮೀಟರಿಗೂ ಹೆಚ್ಚು ದೂರ ವಾಹನಗಳು ಸಾಲುಗಟ್ಟಿ ನಿಂತಿದ್ದವು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನಲ್ಲಿ ತೋಟಗಳಿಗೆ ಮಳೆ ನೀರು ನುಗ್ಗಿದೆ. ಫಸಲಿಗೆ ಬಂದ ಹೂವು, ತರಕಾರಿ ಸೇರಿ ಬೆಳೆಗಳಿಗೆ ಹಾನಿಯಾಗಿದೆ. ಹೊಸಕೋಟೆಯಲ್ಲಿ ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗಿದೆ.

ಮಂಗಳೂರು ವರದಿ: ನಗರ ಸೇರಿದಂತೆ ಜಿಲ್ಲೆಯ ವಿವಿಧ ಭಾಗಗಳಲ್ಲಿ ಸೋಮವಾರ ಮಳೆಯಾಗಿದೆ. ಮುಂಜಾನೆಯಿಂದಲೇ ಜಿಲ್ಲೆಯಲ್ಲಿ ಮೋಡ ಕವಿದ ವಾತಾವರಣವಿತ್ತು. ಮಧ್ಯಾಹ್ನದ ವೇಳೆಗೆ ಕೆಲವೆಡೆ ದಟ್ಟ ಮೋಡಗಳು ಆವರಿಸಿ ತುಂತುರು ಮಳೆಯಾಯಿತು.

ಮಂಗಳೂರು ನಗರದಲ್ಲಿ ಸಂಜೆಯ ವರೆಗೆ ಬಿಟ್ಟುಬಿಟ್ಟು ಮಳೆಯಾಗಿದೆ. ಬಂಟ್ವಾಳ, ಅಡ್ಯಾರು ಮುಂತಾದಡೆ ಸಾಮಾನ್ಯದಿಂದ ಭಾರಿ ಮಳೆಯಾಗಿದೆ.

ಉಡುಪಿ ಜಿಲ್ಲೆಯಲ್ಲೂ ಹಗಲಿಡೀ ಮೋಡ ಕವಿದ ವಾತಾವರಣವಿದ್ದು, ಬೆಳಿಗ್ಗೆ ಹಾಗೂ ಸಂಜೆ ಸಾಧಾರಣ ಮಳೆಯಾಗಿದೆ. ಉಡುಪಿ ನಗರ ವ್ಯಾಪ್ತಿಯ ಕೆಲವೆಡೆ ರಸ್ತೆಗಳಲ್ಲಿ ಮಳೆ ನೀರು ಸಂಗ್ರಹಗೊಂಡು ವಾಹನ ಸವಾರರಿಗೆ ಸಮಸ್ಯೆಯಾಯಿತು. ಕುಂದಾಪುರ, ಬ್ರಹ್ಮಾವರ, ಕಾಪು, ಹೆಬ್ರಿ, ಕಾರ್ಕಳ ವ್ಯಾಪ್ತಿಯಲ್ಲೂ ಮಳೆಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್.ಪುರ ಹಾಗೂ ಬಾಳೆಹೊನ್ನೂರು ಭಾಗದಲ್ಲಿ ಸಾಮಾನ್ಯ ಮಳೆಯಾಗಿದೆ.

ರಾಯಚೂರು ಜಿಲ್ಲೆಯ ಸಿರವಾರದಲ್ಲಿ ಸುಮಾರು ಎರಡು ಗಂಟೆ ಕಾಲ ಭಾರಿ ಮಳೆಯಾಗಿದೆ. ಲಿಂಗಸುಗೂರು ತಾಲ್ಲೂಕಿನ ಜಾಂತಾಪೂರ ಗ್ರಾಮದಲ್ಲಿ ಭಾನುವಾರ ರಾತ್ರಿ ಸಿಡಿಲು ಬಡಿದು ಎತ್ತು ಮೃತಪಟ್ಟಿದೆ.

ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ರಾವೂರ ಗ್ರಾಮದಲ್ಲಿ ಸೋಮವಾರ ಬೆಳಿಗ್ಗೆ 8ಕ್ಕೆ ಅಂತ್ಯಗೊಂಡಂತೆ ಕಳೆದ 24 ಗಂಟೆ ಅವಧಿಯಲ್ಲಿ 10.8 ಸೆಂ.ಮೀ ಮಳೆಯಾಗಿದೆ.

ಜೇವರ್ಗಿ ತಾಲ್ಲೂಕಿನ ಮಂದೇವಾಲ ಗ್ರಾಮದಲ್ಲಿ ಸಿಡಿಲು ಬಡಿದು ದೇವಸ್ಥಾನದ ಶಿಖರಕ್ಕೆ ಹಾನಿಯಾಗಿದೆ.

ಕೊಪ್ಪಳ ಜಿಲ್ಲೆಯಲ್ಲಿ ಭಾನುವಾರ ತಡರಾತ್ರಿ ಸುರಿದ ಭಾರಿ ಮಳೆಗೆ ಗಂಗಾವತಿ ತಾಲ್ಲೂಕು ವ್ಯಾಪ್ತಿಯಲ್ಲಿ ನಾಟಿಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದ ಭತ್ತದ ಸಸಿಗಳಿಗೆ ಹಾನಿಯಾಗಿವೆ. ಎರಡು ತಿಂಗಳಲ್ಲಿ ಭತ್ತದ ನಾಟಿ ಮಾಡಲಿದ್ದು, ಅದಕ್ಕೆ ಸಸಿಗಳನ್ನು ಬೆಳೆಸಿಕೊಳ್ಳುವ ಕಾರ್ಯ ನಡೆದಿತ್ತು. ಕೊಪ್ಪಳ, ಕುಷ್ಟಗಿ, ಕನಕಗಿರಿ, ಕುಕನೂರು ತಾಲ್ಲೂಕು ವ್ಯಾಪ್ತಿಯಲ್ಲಿ ಮಳೆಯಾಗಿದೆ.

ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನಲ್ಲಿ ಸಿಡಿಲಿಗೆ ಎತ್ತು ಮೃತಪಟ್ಟಿದೆ. ಔರಾದ್, ಸಂತಪೂರ ಸೇರಿದಂತೆ ಹಲವೆಡೆ ಬಿರುಸಿನ ಮಳೆಯಾಗಿದೆ.

ಹುಲಸೂರು ಪಟ್ಟಣ ಹಾಗೂ ಗ್ರಾಮೀಣ ಭಾಗಗಳಲ್ಲೂ ವರ್ಷಧಾರೆ ಆಗಿದೆ. ಬೀದರ್, ಭಾಲ್ಕಿಯಲ್ಲೂ ಗುಡುಗು ಸಹಿತ ಮಳೆಯಾಗಿದೆ.

ಯಾದಗಿರಿ ಜಿಲ್ಲೆಯ ಹುಣಸಗಿ, ಸುರಪುರ ತಾಲ್ಲೂಕಿನಲ್ಲಿ ಭಾನುವಾರ ತಡರಾತ್ರಿ ಉತ್ತಮವಾಗಿ ಮಳೆಯಾಗಿದೆ.

ಮಳೆಗೆ ತುಂಬಿದ ಬ್ಯಾರೇಜ್, ಮನೆಗಳಿಗೆ ಹಾನಿ

ಹುಬ್ಬಳ್ಳಿ ವರದಿ: ಬಳ್ಳಾರಿ, ವಿಜಯನಗರ, ವಿಜಯಪುರ, ಬಾಗಲಕೋಟೆ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಸೋಮವಾರ ಮಳೆಯಾಯಿತು.

ಉತ್ತರ ಕನ್ನಡ ಜಿಲ್ಲೆಯ ಭಟ್ಕಳ, ಹೊನ್ನಾವರದಲ್ಲಿ ಬಿರುಸಿನ ಮಳೆ ಮತ್ತು ಕುಮಟಾ, ಶಿರಸಿಯಲ್ಲಿ ತುಂತುರು ಮಳೆ ಆಗಿದೆ. 'ಮೇ 23ರವರೆಗೆ ಕರಾವಳಿ ಭಾಗದಲ್ಲಿ ಪ್ರತಿ ಗಂಟೆಗೆ 35 ರಿಂದ 45 ಕಿ.ಮೀ ವೇಗದಲ್ಲಿ ಗಾಳಿ ಬೀಸಲಿದೆ. ಈ ವೇಳೆ ಮೀನುಗಾರಿಕೆ ನಡೆಸಬಾರದು' ಎಂದು ಕೇಂದ್ರ ಹವಾಮಾನ ಇಲಾಖೆ ಮೀನುಗಾರರಿಗೆ ಸೂಚಿಸಿದೆ.

ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನ ಹುನಗುಂದ, ಅಮೀನಗಡ ಮತ್ತು ಕರಡಿ ಹೋಬಳಿಗಳ ವ್ಯಾಪ್ತಿಯಲ್ಲಿ ಭಾನುವಾರ ಸಂಜೆಯಿಂದ ಸೋಮವಾರ ಬೆಳಿಗ್ಗೆವರೆಗೆ 4.1 ಸೆಂ.ಮೀ ಮಳೆಯಾಗಿದೆ. ತಾಲ್ಲೂಕಿನ ಕೆಲ ಗ್ರಾಮಗಳಲ್ಲಿ ಮನೆಗಳಿಗೆ ಹಾನಿಯಾಗಿವೆ. ಹುನಗುಂದ ಸಾರ್ವಜನಿಕ ಆಸ್ಪತ್ರೆ ಕೊಠಡಿಗಳಿಗೂ ಮಳೆ ನೀರು ನುಗ್ಗಿತ್ತು.

ಬಳ್ಳಾರಿ ಜಿಲ್ಲೆಯಲ್ಲಿ ಮಳೆಯಿಂದ ಹಳ್ಳಕೊಳ್ಳಗಳು ತುಂಬತೊಡಗಿವೆ. ಮಳೆಗೆ ಕಂಪ್ಲಿ ತಾಲ್ಲೂಕಿನಲ್ಲಿ ಏಳು ಮನೆಗಳಿಗೆ ಹಾನಿ ಆಗಿದೆ. ಹೊಸಪೇಟೆ ತಾಲ್ಲೂಕಿನ ಎರಡು ಮನೆಗಳಿಗೆ ಹಾನಿಯಾಗಿದ್ದು, ಐದು ಪರಿವರ್ತಕಗಳು ಸುಟ್ಟಿವೆ. ಎಂಟು ವಿದ್ಯುತ್ ಕಂಬಗಳು ಉರುಳಿ ಬಿದ್ದಿವೆ.

ಬಳ್ಳಾರಿ ಜಿಲ್ಲೆ ಸಿರುಗುಪ್ಪದ ಜೋಳ ಖರೀದಿ ಕೇಂದ್ರದಲ್ಲಿ ರೈತರಿಂದ ಖರೀದಿಸಿದ್ದ ಜೋಳ ಮಳೆಯಲ್ಲಿ ನೆನೆದು ಚೀಲದಲ್ಲೇ ಮೊಳಕೆಯೊಡೆದಿದೆ. ನಾಲ್ಕೈದು ದಿನ ನಿರಂತರ ಸುರಿದ ಮಳೆಯಿಂದ ಸುಮಾರು 250ಕ್ಕೂ ಹೆಚ್ಚು ಚೀಲದಲ್ಲಿ ಜೋಳ ಮೊಳಕೆಯೊಡೆದಿದೆ. ಕನಿಷ್ಠ 12 ಟನ್ ಜೋಳ ಹಾನಿಯಾದ ಸಾಧ್ಯತೆಯಿದೆ.

ಬಳ್ಳಾರಿ ಜಿಲ್ಲೆ ಸಿರುಗುಪ್ಪ ಪಟ್ಟಣದ ಜೋಳ ಖರೀದಿ ಕೇಂದ್ರದಲ್ಲಿ ರೈತರಿಂದ ಖರೀದಿಸಿದ್ದ ಜೋಳ ಮಳೆಯಲ್ಲಿ ನೆನೆದು ಚೀಲದಲ್ಲೇ ಮೊಳಕೆಯೊಡೆದಿದೆ

ಭಾರಿ ಮಳೆ ರಾಜಧಾನಿ ಹೊಳೆ

ಒಂದನೇ ಪುಟದಿಂದ...

ಮಳೆ ಹೆಚ್ಚಳ ಹಾಗೂ ಸಂಚಾರ ದಟ್ಟಣೆ ಉಂಟಾಗಬಹುದೆಂಬ ಕಾರಣಕ್ಕೆ ಸ್ಥಳ ಭೇಟಿ ಕೈಬಿಟ್ಟ ಇಬ್ಬರೂ ನಾಯಕರು, ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿರುವ 'ವಾರ್‌ರೂಮ್'ಗೆ ತೆರಳಿ ಪರಿಸ್ಥಿತಿಯನ್ನು ಅವಲೋಕಿಸಿದರು.

ಮಂಗಳವಾರ ನಡೆಯಲಿರುವ ಸಾಧನಾ ಸಮಾವೇಶದ ಸಿದ್ಧತೆಗಾಗಿ ಹೊಸಪೇಟೆಯಲ್ಲಿದ್ದ ಡಿ.ಕೆ. ಶಿವಕುಮಾರ್ ಅವರು, ಪ್ರವಾಸ ಮೊಟಕುಗೊಳಿಸಿ ಬೆಂಗಳೂರಿಗೆ ದೌಡಾಯಿಸಿದರು. ಮಳೆಯಿಂದ ಹಾನಿಗೊಳಗಾದ ಸಿಲ್ಕ್ ಬೋರ್ಡ್ ಹಾಗೂ ರಾಜರಾಜೇಶ್ವರಿನಗರ ಕೆಲವು ಸ್ಥಳಗಳಿಗೆ ಸೋಮವಾರ ರಾತ್ರಿ ಭೇಟಿ ನೀಡಿದ ಅವರು, ಸ್ಥಳೀಯರ ಅಹವಾಲು ಆಲಿಸಿದರು.

ಐವರ ಸಾವು

ಒಂದನೇ ಪುಟದಿಂದ...

ಠಾಣಾ ವ್ಯಾಪ್ತಿಯ ಚನ್ನಸಂದ್ರದಲ್ಲಿರುವ ಕಂಪನಿಗೆ ಸೋಮವಾರ ಬೆಳಿಗ್ಗೆ 7 ಗಂಟೆಗೆ ಅವರು ಕೆಲಸಕ್ಕೆ ಬಂದಿದ್ದರು. ಸ್ವಚ್ಛತಾ ಸಾಮಗ್ರಿಗಳನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಅವರ ಮೇಲೆ ಗೋಡೆ ಕುಸಿದಿದೆ. ರಾತ್ರಿಯಿಡೀ ಸುರಿದ ಮಳೆಗೆ ಕಾಂಪೌಂಡ್ ನೆನೆದಿತ್ತು.

ಎನ್.ಎಸ್.ಪಾಳ್ಯದ ಮಧುವನ ಅಪಾರ್ಟ್‌ಮೆಂಟ್ ಫ್ಲ್ಯಾಟ್‌ನಲ್ಲಿ ವಾಸವಿದ್ದ ಮನಮೋಹನ್ ಅವರು ಅಪಾರ್ಟ್‌ಮೆಂಟ್ ಸೆಲ್ಲಾರ್‌ನಲ್ಲಿ ಸಂಗ್ರಹಗೊಂಡಿದ್ದ ನೀರನ್ನು ಹೊರ ತೆಗೆಯಲು ಮೋಟಾರು ಪಂಪ್ ಸ್ವಿಚ್ ಆನ್ ಮಾಡಿದ್ದಾರೆ. ನೀರು ಹೊರ ತೆಗೆಯುವ ವೇಳೆ ಶಾರ್ಟ್ ಸರ್ಕಿಟ್‌ನಿಂದಾಗಿ ವಿದ್ಯುತ್ ತಗುಲಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಶಶಿಕಲಾ

ಇದೇ ಅಪಾರ್ಟ್‌ಮೆಂಟ್‌ನಲ್ಲಿ ಭದ್ರತಾ ಸಿಬ್ಬಂದಿ ಆಗಿರುವ ನೇಪಾಳ ಪ್ರಜೆ ಭರತ್ ಅವರ ಮಗ ದಿನೇಶ್‌ಗೂ ವಿದ್ಯುತ್ ತಗುಲಿ ಮೃತಪಟ್ಟಿದ್ದಾನೆ.

ಶಶಿಕಲಾ ಅವರು ಕುಟುಂಬ ಸಮೇತ ಕೆಲವು ವರ್ಷಗಳಿಂದ ನಗರದಲ್ಲಿ ವಾಸಿಸುತ್ತಿದ್ದರು.

ಶಶಿಕಲಾಗೆ ಇಬ್ಬರು ಮಕ್ಕಳಿದ್ದು, ಪತಿ ಕೂಲಿ ಕೆಲಸ ಮಾಡುತ್ತಿದ್ದಾರೆ. ಮೃತ ಮಹಿಳೆ ಕುಟುಂಬಕ್ಕೆ ₹5 ಲಕ್ಷ ಪರಿಹಾರ ಘೋಷಿಸಲಾಗಿದೆ.

ಸಿಡಿಲು ಬಡಿದು ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಜಾಲಹಳ್ಳಿಯ ಬಳಿಯ ಬಿ.ಆರ್. ಗುಂಡ ಗ್ರಾಮದ ಕುರಿಗಾಹಿ ಬಾಲಕ ಹನುಮಗೌಡ ನಾಯಕ (16) ಮತ್ತು ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಉಳುವರೆ ಗ್ರಾಮದಲ್ಲಿ ಸೋಮವಾರ ಸಂಜೆ ಸಿಡಿಲು ಬಡಿದು ತಮ್ಮಣ್ಣಿ ಅನಂತ ಗೌಡ (65) ಎಂಬುವರು ಮೃತಪಟ್ಟಿದ್ದಾರೆ.

ಅನಂತ ಗೌಡ ಅವರು ಮನೆಯ ಜಗುಲಿಯಲ್ಲಿ ಕೂತಿದ್ದ ವೇಳೆ ಸಿಡಿಲು ಬಡಿದಿದೆ ಎಂದು ಅಂಕೋಲಾ ಠಾಣೆಯ ಪೊಲೀಸರು ತಿಳಿಸಿದ್ದಾರೆ.

ಕೊಡಗು ಜಿಲ್ಲೆಯ ವಿರಾಜಪೇಟೆಯಲ್ಲಿ ಸೋಮವಾರ ಮಧ್ಯಾಹ್ನದಿಂದ ಸಂಜೆಯವರೆಗೂ ಸಾಧಾರಣ ಮಳೆ ಸುರಿದಿದೆ.

ಮಡಿಕೇರಿಯ ಕೆಲವೆಡೆ ತುಂತುರು ಮಳೆಯಾಗಿದೆ.

ಮಂಗಳೂರು ನಗರ ಸೇರಿದಂತೆ ಜಿಲ್ಲೆಯ ವಿವಿಧ ಭಾಗಗಳಲ್ಲಿ, ಉಡುಪಿ ಜಿಲ್ಲೆಯ ಕೆಲವೆಡೆ ಮಳೆ ಆಗಿದೆ.

ಬೀದರ್ ಜಿಲ್ಲೆಯಲ್ಲಿ ಮಳೆಯ ಅರ್ಭಟ ಸೋಮವಾರವೂ ಮುಂದುವರಿಯಿತು.



ಕ್ಷಮಾಪಣೆ ಬೇಡ: ಎಸ್‌ಐಟಿ ರಚಿಸಿ- 'ಸುಪ್ರೀಂ' ಸೂಚನೆ

ಒಂದನೇ ಪುಟದಿಂದ...

'ಇಂಥ ಹೇಳಿಕೆಯಿಂದ ಇಡೀ ದೇಶಕ್ಕೆ ನಾಚಿಕೆಯಾಗಿದೆ... ನೀವು ಕಾರ್ಯಕ್ರಮದಲ್ಲಿ ಮಾತನಾಡಿದ ವಿಡಿಯೊವನ್ನೂ ನೋಡಿದ್ದೇವೆ. ಅದ್ಯಾವ ಶಕ್ತಿ ನಿಮ್ಮನ್ನು ತಡೆಯಿತೊ ಗೊತ್ತಿಲ್ಲ. ನೀವು ಇನ್ನಷ್ಟು ಕೆಟ್ಟ ಮಾತು ಆಡಲು ನಿಮಗೆ ಪದಗಳೂ ಸಿಗದಿರಬಹುದು. ನಿಮಗೆ ನಾಚಿಕೆಯಾಗಬೇಕು' ಎಂದು ಪೀಠ ಅಭಿಪ್ರಾಯಪಟ್ಟಿತು.

'ಇದು ಯಾವ ಸೀಮೆಯ ಕ್ಷಮಾಪಣೆ? ನಮಗೆ ನಿಮ್ಮ ಕ್ಷಮಾಪಣೆ ಬೇಡ. ಕಾನೂನಿನಡಿಯಲ್ಲಿ ನಿಮ್ಮ ಜೊತೆ ಹೇಗೆ ವ್ಯವಹರಿಸಬೇಕು ಎಂದು ನಮಗೆ ಗೊತ್ತು. ಕ್ಷಮಾಪಣೆ ಕೇಳಲು ನೀವೇನು ನ್ಯಾಯಾಂಗ ನಿಂದನೆ ಮಾಡಿಲ್ಲ. ತಪ್ಪು ಮಾಡುವುದು ಆಮೇಲೆ ಕೋರ್ಟ್‌ಗೆ ಬಂದು ಕ್ಷಮಾಪಣೆ ಕೇಳುವುದು, ಇದೆಂಥಾ ವರ್ತನೆ?' ಎಂದು ಪೀಠ ಹೇಳಿತು.

'ಮಂಗಳವಾರ ಬೆಳಿಗ್ಗೆ 10ರ ಒಳಗೆ ಎಸ್‌ಐಟಿ ರಚಿಸಬೇಕು. ಐ.ಜಿ ಸ್ಥಾನಮಾನದ ಅಧಿಕಾರಿಯೊಬ್ಬರು ಇದರ ನೇತೃತ್ವ ವಹಿಸಬೇಕು. ಈ ತಂಡದಲ್ಲಿ ಮಹಿಳಾ ಅಧಿಕಾರಿಯೂ ಇರಬೇಕು. ತಂಡವು ತನ್ನ ಮೊದಲ ವರದಿಯನ್ನು ಮೇ 28ರ ಒಳಗಾಗಿ ಸಲ್ಲಿಸಬೇಕು' ಎಂದು ಪೀಠ ಆದೇಶಿಸಿದೆ.

ಪೀಠ ಹೇಳಿದ್ದು?

- ನೀವು ಇನ್ನಷ್ಟು ಕೆಟ್ಟ ಮಾತುಗಳನ್ನು ಆಡಲು ಬಯಸಿದ್ದಿರಿ ಎಂದು ಜನರಿಗೆ ಗೊತ್ತಾಗಲಿಲ್ಲ. ಯಾಕೆಂದರೆ, ಮಾಧ್ಯಮದವರು ಕೇವಲ ನಿಮ್ಮ ಎರಡು ಪದಗಳನ್ನು ಮಾತ್ರ ತೋರಿಸುತ್ತಿದ್ದಾರೆ
- ಜನರ ಮುಂದೆ ನೀವು ಸಂಪೂರ್ಣವಾಗಿ ಬೆತ್ತಲಾಗಿದ್ದೀರಿ. ಜನರ ಭಾವನೆಗೆ ತೀವ್ರ ಪೆಟ್ಟು ಬಿದ್ದಿದೆ. ಹೌದು ನಾನು ತಪ್ಪು ಮಾಡಿದ್ದೇನೆ ಎಂದು ಒಪ್ಪಿಕೊಳ್ಳುವಷ್ಟು ಉತ್ತಮರು ನೀವಾಗಬೇಕಿತ್ತು. ಆದರೆ ನೀವು, 'ನನ್ನಿಂದ ತಪ್ಪಾಗಿದ್ದರೆ', 'ಅದು.. ಇದು..' ಎನ್ನುತ್ತಿದ್ದೀರಿ
- ಈ ಸನ್ನಿವೇಶದಿಂದ ಹೇಗೆ ಪಾರಾಗುತ್ತೀರಿ ಎನ್ನುವುದು ನಿಮಗೇ ಬಿಟ್ಟಿದ್ದು. ಕಾನೂನಿನ ಮೇಲೆ ವಿಶ್ವಾಸವಿಟ್ಟಿರುವ ದೇಶ ನಮ್ಮದು. ನಾವೆಲ್ಲರೂ ಒಂದೇ ಕಾನೂನನ್ನು ಪಾಲಿಸುತ್ತೇವೆ

ಮೂಡುಬಿದಿರೆಯ ನ್ಯೂ ವೈಬ್ರೆಂಟ್ ಪಿಯು ಕಾಲೇಜು

ಮಕ್ಕಳ ಸದೃಢ ಭವಿಷ್ಯಕ್ಕೆ ಉತ್ತಮ ಆಯ್ಕೆ

ಮೂಡುಬಿದಿರೆ(ದಕ್ಷಿಣ ಕನ್ನಡ): ಪದವಿ ಪೂರ್ವ ಶಿಕ್ಷಣದ ಜೊತೆಗೆ ರಾಷ್ಟ್ರಮಟ್ಟದಲ್ಲಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಗ್ರಾಮೀಣ ಪ್ರದೇಶದ ಪ್ರತಿಭಾವಂತ ವಿದ್ಯಾರ್ಥಿಗಳು ಉತ್ತಮ ರ್‍ಯಾಂಕ್ ಪಡೆದು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಸರ್ಕಾರಿ ಮೆಡಿಕಲ್ ಮತ್ತು ಎಂಜಿನಿಯರಿಂಗ್ ಸೀಟ್ ಪಡೆಯಬೇಕೆನ್ನುವ ಉದ್ದೇಶದಿಂದ ಸಮಾನ ಮನಸ್ಸಿನ ಆರು ಮಂದಿ ಅನುಭವಿ ಶಿಕ್ಷಕರು ಕಟ್ಟಿದ ಶಿಕ್ಷಣ ಸಂಸ್ಥೆಯೇ ಕಲ್ಲಬೆಟ್ಟುವಿನ 'ನ್ಯೂ ವೈಬ್ರೆಂಟ್ ಪಿಯು ಕಾಲೇಜು'.

VIBRANT MOODUBIDIRE

2023-24ರಲ್ಲಿ ಸ್ಥಾಪನೆಯಾದ ಈ ಶಿಕ್ಷಣ ಸಂಸ್ಥೆಯ ಮೊದಲ ಫಲಿತಾಂಶದ ನೀಟ್ 2023, ಜೆಇಇ 2024ರ ಪರೀಕ್ಷೆಯಲ್ಲಿ ರಾಜ್ಯದ ಗಮನ ಸೆಳೆಯುವಂತಹ ದಾಖಲೆಯ ಫಲಿತಾಂಶವನ್ನು ನೀಡಿದೆ. 2024ರ ಪಿಯು ಬೋರ್ಡ್ ಪರೀಕ್ಷೆಯಲ್ಲಿ ಶೇ 100 ಫಲಿತಾಂಶದೊಂದಿಗೆ ಗಮನಾರ್ಹ ಸಾಧನೆ ಮಾಡಿದೆ.

300ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಮೆಡಿಕಲ್ ಸೀಟ್: 2023ರಲ್ಲಿ ಕಾಲೇಜಿನಿಂದ ನೀಟ್ ತರಬೇತಿ ಪಡೆದ 151 ವಿದ್ಯಾರ್ಥಿಗಳು ಹಾಗೂ 2024ರಲ್ಲಿ 165 ವಿದ್ಯಾರ್ಥಿಗಳು ಸರ್ಕಾರಿ ಮೆಡಿಕಲ್, ದಂತ ವೈದ್ಯಕೀಯ ಸೀಟ್ ಪಡೆದು ಸಾಧನೆ ಮಾಡಿರುತ್ತಾರೆ.

ವಿದ್ಯಾರ್ಥಿವೇತನ

ವೈಬ್ರೆಂಟ್ ಕಾಲೇಜಿನಲ್ಲಿ ದಾಖಲಾತಿ ಬಯಸುವ ಪ್ರತಿಯೊಬ್ಬ ವಿದ್ಯಾರ್ಥಿಯು ಕಾಲೇಜಿನ ವತಿಯಿಂದ ನಡೆಸುವ ಸ್ಕಾಲರ್‌ಶಿಪ್ ಪರೀಕ್ಷೆ ಬರೆದು ಉತ್ತಮ ಅಂಕಗಳಿಸಿ ಕಾಲೇಜು ನೀಡುವ ವಿದ್ಯಾರ್ಥಿ ವೇತನಕ್ಕೆ ಅರ್ಹರಾಗಬಹುದು.

ಇಂಟಿಗ್ರೇಟೆಡ್ ಕೋಚಿಂಗ್ ಸಿಸ್ಟಮ್: ವಿದ್ಯಾರ್ಥಿಗಳು ಪಿಯು ಬೋರ್ಡ್ ಪರೀಕ್ಷೆಯ ತಯಾರಿಯೊಂದಿಗೆ ನೀಟ್, ಜೆಇಇ, ಸಿಇಟಿಗೆ ಉತ್ತಮ ತರಬೇತಿ ನೀಡುವ ಇಂಟಿಗ್ರೇಟೆಡ್ ಶಿಕ್ಷಣದೊಂದಿಗೆ ವಿದ್ಯಾರ್ಥಿಗಳನ್ನು ದೇಶದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಮೆಡಿಕಲ್ ಮತ್ತು ಎಂಜಿನಿಯರಿಂಗ್ ಸೀಟು ಪಡೆಯಲು ಸಾಧ್ಯವಾಗುವಂಥ ತರಬೇತಿ ನೀಡಲಾಗುತ್ತಿದೆ.

5 ಗಂಟೆಗಳ ಗೈಡೆಡ್ ಸ್ಟಡಿ ಅವರ್: ಪ್ರತಿದಿನದ ನಿಗದಿತ ಕಾಲೇಜು ತರಗತಿಗಳನ್ನು ಹೊರತುಪಡಿಸಿ ವಿದ್ಯಾರ್ಥಿಗಳಿಗೆ 5 ಗಂಟೆಗಳ ಅಧ್ಯಯನ ಸಮಯ ನಿಗದಿಪಡಿಸಿ ಓದಿಸಲಾಗುವುದು. ಈ ಸಮಯದಲ್ಲಿ ವಿದ್ಯಾರ್ಥಿಗಳಲ್ಲಿ ಮೂಡುವ ಸಂದೇಹ, ಗೊಂದಲಗಳನ್ನು ಗಮನಿಸಿ ನಿವಾರಿಸುವ ಅನುಭವಿ ಶಿಕ್ಷಕರು ಕ್ಯಾಂಪಸ್‌ನಲ್ಲಿರುತ್ತಾರೆ. ಹೆಚ್ಚಿನ ಮಾಹಿತಿಗೆ ಮೊ: 7411417028, 7411649881 ಸಂಪರ್ಕಿಸಬಹುದು ಎಂದು ಕಾಲೇಜು ಪ್ರಕಟಣೆ ತಿಳಿಸಿದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಸುದ್ದಿ 2 ನಿಮಿಷ

ಒಳಮೀಸಲಾತಿಯೇ ನನಗೆ ದೊಡ್ಡ ಸ್ಥಾನಮಾನ: ಆಂಜನೇಯ

ಕೊಪ್ಪಳ: 'ವಿಧಾನಪರಿಷತ್ ಸದಸ್ಯ, ಸಚಿವ ಸ್ಥಾನ ಸೇರಿದಂತೆ ಯಾವ ಸ್ಥಾನಮಾನವೂ ಬೇಡ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಳಮೀಸಲಾತಿ ಜಾರಿ ಮಾಡಿದರೆ ಅದೇ ನನಗೆ ದೊಡ್ಡ ಸ್ಥಾನಮಾನ ಕೊಟ್ಟಂತೆ' ಎಂದು ಕೆಪಿಸಿಸಿ ಉಪಾಧ್ಯಕ್ಷ ಎಚ್. ಆಂಜನೇಯ ಹೇಳಿದರು.

'ಒಳಮೀಸಲಾತಿಗಾಗಿ ಮಾದಿಗ ಸಮುದಾಯದ ಸಾಕಷ್ಟು ಜನ ಪ್ರಾಣ ತೆತ್ತಿದ್ದಾರೆ. ಇದಕ್ಕಾಗಿಯೇ ನಾನು ಸಚಿವನಾಗಬೇಕಿತ್ತು. ಈಗ ಅದು ಸಿಕ್ಕರೆ ಉಳಿದ ಯಾವ ಸ್ಥಾನಮಾನಗಳೂ ನಗಣ್ಯ. ನಮ್ಮ ಈಗಿನ ಸರ್ಕಾರದ ಅವಧಿಯಲ್ಲಿಯೇ ಒಳಮೀಸಲಾತಿ ಜಾರಿಯಾಗಲಿದೆ' ಎಂದು ಸೋಮವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ವಿಶ್ವಾಸ ವ್ಯಕ್ತಪಡಿಸಿದರು.

'ಸಾಮಾಜಿಕ ನ್ಯಾಯಕ್ಕೆ ಬದ್ಧರಾಗಿರುವ ಹಾಗೂ ಬಿ.ಆರ್. ಅಂಬೇಡ್ಕರ್ ಅವರ ತತ್ವಾದರ್ಶಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡಿರುವ ಸಿದ್ದರಾಮಯ್ಯ ಅವರೇ ನನ್ನ ಪಾಲಿಗೆ ಎರಡನೇ ಅಂಬೇಡ್ಕರ್ ಇದ್ದಂತೆ. ಅವರು ಜೇನುಗೂಡಿಗೆ ಕೈ ಹಾಕಿಲ್ಲ. ಜೇನಿನ ಸಿಹಿಯನ್ನು ಎಲ್ಲರಿಗೂ ಹಂಚಲು ಮುಂದಾಗಿದ್ದಾರೆ' ಎಂದರು.

ಸಿಇಟಿ: ಅಂಗವಿಕಲರ ವೈದ್ಯಕೀಯ ತಪಾಸಣೆ 28ರಿಂದ 30ರವರೆಗೆ

ಬೆಂಗಳೂರು: ಎಂಜಿನಿಯರಿಂಗ್, ವೈದ್ಯಕೀಯ ಸೇರಿದಂತೆ ಇತರ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಸಲ್ಲಿಸಿರುವ ಅಂಗವಿಕಲ ಅಭ್ಯರ್ಥಿಗಳ ವೈದ್ಯಕೀಯ ತಪಾಸಣೆ ಮೇ 28ರಿಂದ ಮೂರು ದಿನ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಚೇರಿಯಲ್ಲಿ ನಡೆಯಲಿದೆ.

ಮೇ 28ರಿಂದ 30ರವರೆಗೆ ನಡೆಯುವ ವೈದ್ಯಕೀಯ ತಪಾಸಣೆಗೆ ಸೂಕ್ತ ದಿನಾಂಕ, ಸಮಯವನ್ನು ಕಾಯ್ದಿರಿಸಲು ಮೇ 26ರಂದು ಕೆಇಎ ವೆಬ್‌ಸೈಟ್‌ನಲ್ಲಿ ಲಿಂಕ್ ಬಿಡುಗಡೆ ಮಾಡಲಾಗುವುದು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ತಜ್ಞ ವೈದ್ಯರ ಸಮಿತಿ ವೈದ್ಯಕೀಯ ತಪಾಸಣೆ ನಡೆಸುತ್ತದೆ. ನಮೂದಿಸಿದ ನ್ಯೂನತೆಗಳ ಪ್ರಕಾರ ಅರ್ಹರಾಗಿದ್ದಾರೆಯೇ ಎಂಬುದನ್ನು ಸಮಿತಿಯೇ ತೀರ್ಮಾನಿಸುತ್ತದೆ. ಅಭ್ಯರ್ಥಿಗಳು ಸೂಕ್ತ ದಾಖಲೆಗಳ ಸಮೇತ ತಪಾಸಣೆಗೆ ಹಾಜರಾಗಬೇಕು ಎಂದು ಸೂಚಿಸಿದ್ದಾರೆ.

ಸೈನಿಕರ ನಿಧಿಗೆ ಹಣ ನೀಡಿದ ಬಾಲಕ

ಪ್ರಜಾವಾಣಿ ವಾರ್ತೆ

ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಮಲ್ಲಾಪುರ ಕೆಐ ಗ್ರಾಮದ 9 ವರ್ಷದ ಸಚಿನ್ ಗಂಗಪ್ಪ ಯರಗುದ್ದಿ ದೇಶದ ಸೈನಿಕರ ನಿಧಿಗೆ ₹5,151 ನೀಡಿದ್ದಾನೆ.

ಸಚಿನ್ ಯರಗುದ್ದಿ

'ವಾಹಿನಿಗಳಲ್ಲಿ ಯುದ್ಧದ ಸನ್ನಿವೇಶಗಳು, ಸೈನಿಕರು ಪಡುತ್ತಿರುವ ಶ್ರಮ ಮತ್ತು ತ್ಯಾಗ ನೋಡಿದೆ. ಸೋಮವಾರ ಚನ್ನಮ್ಮನ ಕಿತ್ತೂರಿನ ಎಸ್‌ಬಿಐ ಬ್ಯಾಂಕ್ ಶಾಖೆಗೆ ತಂದೆಯ ಜತೆ ತೆರಳಿ ಸೈನಿಕರ ನಿಧಿಗೆ ಹಣ ಜಮೆ ಮಾಡಿದೆವು' ಎಂದು ಸಚಿನ್ ಯರಗುದ್ದಿ 'ಪ್ರಜಾವಾಣಿ'ಗೆ ತಿಳಿಸಿದ.

'ಜನ್ಮದಿನಾಚರಣೆಯಲ್ಲಿ ಕಾಣಿಕೆ ನೀಡಿದ ಮತ್ತು ಜಾತ್ರೆ ಸಂದರ್ಭದಲ್ಲಿ ಇಷ್ಟದ ವಸ್ತು ಖರೀದಿಸಲು ಪಾಲಕರು ಮತ್ತು ಸಂಬಂಧಿಕರು ನೀಡಿದ ಹಣವನ್ನು ಹುಂಡಿಯಲ್ಲಿ ಹಾಕಿ ಸಂಗ್ರಹಿಸಿದ್ದೆ. ಈಚೆಗೆ ತೆಗೆದು ಲೆಕ್ಕ ಹಾಕಿದೆ. ಅದು ₹5,151 ಸಂಗ್ರಹವಾಗಿತ್ತು' ಎಂದು ಆತ ಹೇಳಿದ.

'ಮಗನ ಮಾತು ಕೇಳಿ ನಮಗೂ ಆಶ್ಚರ್ಯವಾಯಿತು. ಅವನಿಷ್ಟದಂತೆ ಬ್ಯಾಂಕ್‌ಗೆ ಹೋಗಿ ಸೋಮವಾರ ದುಡ್ಡು ಕಟ್ಟಿ ಬಂದೆವು' ಎಂದು ತಂದೆ ಗಂಗಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

ಈಜಲು ತೆರಳಿದ್ದ ಬಾಲಕ ಸಾವು

ಗಂಗಾವತಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಚಿಕ್ಕಜಂತಕಲ್ ಗ್ರಾಮದ ಸಮೀಪದಲ್ಲಿ ತುಂಗಭದ್ರಾ ನದಿಯಲ್ಲಿ ಸೋಮವಾರ ಈಜಲು ತೆರಳಿದ್ದ ಇಬ್ಬರು ಬಾಲಕರು ನೀರಿನಲ್ಲಿ ಮುಳುಗಿದ್ದು, ಒಬ್ಬನ ಮೃತದೇಹ ಪತ್ತೆಯಾಗಿದೆ. ಇನ್ನೊಬ್ಬನಿಗಾಗಿ ಶೋಧ ನಡೆದಿದೆ.

ಗಂಗಾವತಿಯ ಪವನಕುಮಾರ ಶರಣಪ್ಪ ಕಟ್ಟಿಮನಿ (14) ಮೃತದೇಹ ಪತ್ತೆಯಾಗಿದೆ. ಕೊಪ್ಪಳ ತಾಲ್ಲೂಕಿನ ಬಹದ್ದೂರ್ ಬಂಡಿ ಗ್ರಾಮದ ಗೌತಮ ನಾಗರಾಜ (15) ಎಂಬಾತನಿಗಾಗಿ ಹುಡುಕಾಟ ನಡೆದಿದೆ.

ಬಾಲಕರ ಸಂಬಂಧಿಕರ ಮನೆಯಲ್ಲಿದ್ದ ಮದುವೆ ಕಾರ್ಯಕ್ರಮ ಮುಗಿಸಿಕೊಂಡು ಪೂಜಾ ಸಾಮಗ್ರಿಗಳನ್ನು ನದಿಯಲ್ಲಿ ಬಿಟ್ಟು ಬರಲು ಹೋಗಿದ್ದಾಗ ಈ ಘಟನೆ ನಡೆದಿದೆ. ಕುಟುಂಬಸ್ಥರು ಪೂಜೆ ಸಲ್ಲಿಸುವ ವೇಳೆ ಬಾಲಕರು ಈಜಾಡಲು ಹೋಗಿದ್ದಾರೆ. ಬಾಲಕರು ನೀರಿನಲ್ಲಿ ಮುಳುಗಿದ ಬಗ್ಗೆ ಕುಟುಂಬಸ್ಥರಿಗೆ ಮೊದಲು ಮಾಹಿತಿ ತಿಳಿದಿಲ್ಲ. ಹೀಗಾಗಿ ಗಂಟೆಗೂ ಅಧಿಕ ಕಾಲ ಹುಡುಕಾಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಇ–ಸ್ವತ್ತು: ಹೆಸರು ಸೇರ್ಪಡೆಗೆ ₹1,000 ಶುಲ್ಕ

ಬೆಂಗಳೂರು: ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸರ್ಕಾರಿ, ಕಂದಾಯ ಭೂಮಿಗಳಲ್ಲಿ ವಾಸವಿದ್ದು, ಕರ್ನಾಟಕ ಭೂ ಕಂದಾಯ ಕಾಯ್ದೆಯ ಅನ್ವಯ ಸಕ್ರಮಗೊಂಡ ನಿವೇಶನ, ಮನೆಗಳಿಗೆ ನೀಡಿದ ಇ–ಸ್ವತ್ತುಗಳಲ್ಲಿ ಮಾಲೀಕರ ಹೆಸರು ಸೇರ್ಪಡೆ, ಬದಲಾವಣೆಗೆ ₹1,000 ಶುಲ್ಕ ವಿಧಿಸುವಂತೆ ಗ್ರಾಮೀಣಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

ಸಕ್ರಮಗೊಂಡ ನಿವೇಶನ, ಮನೆಗಳಿಗೆ ಅಧಿಕೃತ ಖಾತೆ ನೀಡಲು ಅನುಕೂಲವಾಗುವಂತೆ ಕಂದಾಯ ಇಲಾಖೆ ಇ–ಸ್ವತ್ತು ತಂತ್ರಾಂಶ ಅಭಿವೃದ್ಧಿಪಡಿಸಿದ್ದು, ಎಲ್ಲ ಪಂಚಾಯಿತಿಗಳ ಪಿಡಿಒಗಳು ಈ ತಂತ್ರಾಂಶದ ಮೂಲಕ ಇ–ಸ್ವತ್ತು (ನಮೂನೆ–9 ಮತ್ತು ನಮೂನೆ 11–ಎ) ನೀಡಬೇಕು. ಆಸ್ತಿ ವಿವರಗಳ ಕಾಲಂನಲ್ಲಿ ಹೆಸರು ಸೇರ್ಪಡೆ ಹಾಗೂ ಬದಲಾವಣೆಗೆ ವಿಧಿಸುವ ಶುಲ್ಕವನ್ನು ಇ–ಸ್ವತ್ತು ವಿತರಿಸಿದ ಒಂದು ವರ್ಷದ ಒಳಗೆ ಗರಿಷ್ಠ ನಾಲ್ಕು ಕಂತುಗಳಲ್ಲಿ ಸಂಗ್ರಹಿಸಬೇಕು ಎಂದು ಸೂಚಿಸಲಾಗಿದೆ.

ಇಪಿಎಫ್ ನಿಯಮ: ಹಲವು ತಿದ್ದುಪಡಿ

ನವದೆಹಲಿ: ನೌಕರರ ಭವಿಷ್ಯ ನಿಧಿ (ಇಪಿಎಫ್) ನಿಯಮಗಳಿಗೆ ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯವು ಹಲವು ತಿದ್ದುಪಡಿಗಳನ್ನು ತಂದಿದೆ. ನಿಯಮಗಳ ಕಟ್ಟುನಿಟ್ಟಿನ ಜಾರಿಗೆ ಅನುಕೂಲವಾಗುವಂತೆ ಮತ್ತು ಇಡೀ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ತರುವ ಉದ್ದೇಶದಿಂದ ಈ ತಿದ್ದುಪಡಿಗಳನ್ನು ಮಾಡಲಾಗಿದೆ.

'ಒಂದೊಮ್ಮೆ ಉದ್ಯೋಗದಾತ ಸಂಸ್ಥೆಯು ತನ್ನ ಪಾಲಿನ ಕೊಡುಗೆಯನ್ನು ಸಕಾಲದಲ್ಲಿ ನೀಡದಿದ್ದರೆ ಉದ್ಯೋಗಿಗೆ ಬಡ್ಡಿ ನೀಡಲಾಗುತ್ತದೆ ಮತ್ತು ಸಂಸ್ಥೆಗೆ ದಂಡ ವಿಧಿಸಲಾಗುತ್ತದೆ. ಸಂಸ್ಥೆಯು ಪದೇ ಪದೇ ಇದೇ ರೀತಿ ಮಾಡಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಸಚಿವಾಲಯ ಹೇಳಿದೆ.

'ಉದ್ಯೋಗದಾತ ಸಂಸ್ಥೆಯು ಇಪಿಎಫ್ ಅನ್ನು ಪಾವತಿ ಮಾಡಿದ ಕೂಡಲೇ ಉದ್ಯೋಗಿ ಮೊಬೈಲ್‌ಗೆ ಮಸೇಜ್ ಮತ್ತು ಇ–ಮೇಲ್ ಸಂದೇಶ ಬರುತ್ತದೆ. ಅಲ್ಲದೆ ಉದ್ಯೋಗಿಯ ಪಿಎಫ್ ಖಾತೆಗೆ ಬಡ್ಡಿ ಹಣ ಪಾವತಿಯಾದ ಮಾಹಿತಿಯೂ ಬರಲಿದೆ' ಎಂದು ತಿಳಿಸಿದೆ.

'ಖಾಸಗಿ ಒತ್ತಡಕ್ಕೆ ಜನೌಷಧಿ ಬಂದ್'

ನವದೆಹಲಿ: ರಾಜ್ಯ ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿರುವ ಪ್ರಧಾನಮಂತ್ರಿ ಜನಔಷಧಿ ಕೇಂದ್ರಗಳನ್ನು ಮುಚ್ಚುವಂತೆ ರಾಜ್ಯ ಕಾಂಗ್ರೆಸ್ ಸರ್ಕಾರ ಹೊರಡಿಸಿರುವ ಆದೇಶ ಜನವಿರೋಧಿ ನಡೆ. ಖಾಸಗಿಯವರ ಒತ್ತಡಕ್ಕೆ ಮಣಿದು ಸರ್ಕಾರ ಈ ಕ್ರಮ ಕೈಗೊಂಡಿದೆ ಎಂದು ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ ಇಲ್ಲಿ ಟೀಕಿಸಿದರು.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಕರ್ನಾಟಕ ಸರ್ಕಾರ

ಸಾರಿಗೆಯ 2 ವರ್ಷದ ಸಾರ್ಥಕ ಸಾಧನೆಯ ಮೈಲಿಗಲ್ಲು

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಹೊಸ ಬಸ್ಸುಗಳ ಸೇರ್ಪಡೆ
- 5800 ಹೊಸ ಬಸ್ಸುಗಳ ಸೇರ್ಪಡೆಗೆ ಅನುಮೋದನೆ
- ಈಗಾಗಲೇ 5009 ಬಸ್ಸುಗಳ ಸೇರ್ಪಡೆ (ಕರಾರಸಾನಿ–1165, ಬಿಎಂಟಿಸಿ–1955, ವಾಕರಸಾಸಂ –856, ಕಕರಸಾನಿ –1033)

ಹೊಸ ನೇಮಕಾತಿ
- 10000 ಹುದ್ದೆಗಳ ನೇಮಕಾತಿಗೆ ಚಾಲನೆ
- ಈಗಾಗಲೇ 4700 ಹೊಸ ನೇಮಕಾತಿ ಮತ್ತು 1000 ಅನುಕಂಪದ ನೇಮಕಾತಿ ಪೂರ್ಣ
- ಉಳಿದ 4300 ನೇಮಕಾತಿಗಳು ಇನ್ನೆರಡು ತಿಂಗಳಲ್ಲಿ ಪೂರ್ಣಗೊಳ್ಳಲಿದೆ

ಕೆಎಸ್ಆರ್‌ಟಿಸಿ ಆರೋಗ್ಯ
- 350ಕ್ಕೂ ಹೆಚ್ಚು ಆಸ್ಪತ್ರೆಗಳು, 1.39 ಲಕ್ಷ ಸಿಬ್ಬಂದಿ ಹಾಗೂ ಅವಲಂಬಿತರಿಗೆ ವೆಚ್ಚದ ಮಿತಿಯಿಲ್ಲದೆ ನಗದು ರಹಿತ ವೈದ್ಯಕೀಯ ಚಿಕಿತ್ಸೆ, ಇಲ್ಲಿಯವರೆಗೆ ಒಟ್ಟು 69,185 ಕ್ಲೈಮುಗಳು
- ವಾಕರಸಾಸಂಸ್ಥೆಯ ಸಿಬ್ಬಂದಿಗಳಿಗೆ ಕಿಮ್ಸ್‌ನೊಂದಿಗೆ 'ನಗದು ರಹಿತ' ವೈದ್ಯಕೀಯ ಸೌಲಭ್ಯ

ಸಾರಿಗೆ ಸುರಕ್ಷಾ ವಿಮಾ ಯೋಜನೆ
- ಅಪಘಾತದಲ್ಲಿ (ಆನ್ ಡ್ಯೂಟಿ / ಆಫ್ ಡ್ಯೂಟಿ) ಮೃತಪಟ್ಟ ಸಿಬ್ಬಂದಿಯ ಅವಲಂಬಿತರಿಗೆ ರೂ.1 ಕೋಟಿ ಚೆಕ್ ವಿತರಣೆ
- ಇದೇ ಮೊದಲ ಬಾರಿಗೆ ಅಪಘಾತದಲ್ಲಿ ಕಾಲು ಕಳೆದುಕೊಂಡ ಸಿಬ್ಬಂದಿಗೆ ರೂ.25 ಲಕ್ಷ ಪರಿಹಾರ ಮೊತ್ತ ವಿತರಣೆ

ಡಿಜಿಟಲ್ ಉಪಕ್ರಮಗಳು
- ಬಸ್ಸುಗಳಲ್ಲಿ ಯುಪಿಐ ಡಿಜಿಟಲ್ ಪಾವತಿ
- ಸಾರಿಗೆ ಮಿತ್ರ (ಹೆಚ್ಆರ್ಎಂಎಸ್), ಇನ್ವೆಂಟರಿ ಮ್ಯಾನೇಜ್‌ಮೆಂಟ್ (ಇ–ಉಗ್ರಾಣ), 'ನಮ್ಮ ಬಿಎಂಟಿಸಿ' ಮೊಬೈಲ್ ಅಪ್ಲಿಕೇಶನ್

ಕುಟುಂಬ ಕಲ್ಯಾಣ ವಿಮಾ ಯೋಜನೆ
ಅಪಘಾತ ಹೊರತುಪಡಿಸಿ ಇತರೆ ಕಾರಣಗಳಿಂದ ಮೃತಪಟ್ಟ ಸಿಬ್ಬಂದಿಗಳ ಕುಟುಂಬಕ್ಕೆ ಪರಿಹಾರ ಮೊತ್ತ ರೂ. 3 ಲಕ್ಷದಿಂದ ರೂ. 10 ಲಕ್ಷಕ್ಕೆ ಏರಿಕೆ

ಹೊಸ ಟ್ರಕ್ ಟರ್ಮಿನಲ್‌ಗಳು
ಮೈಸೂರು, ದಾಸನಪುರ, ಹೊಸಪೇಟೆ, ರಾಯಚೂರು, ಗುಂಡ್ಲುಪೇಟೆ, ದಾಂಡೇಲಿ, ಹುಬ್ಬಳ್ಳಿಗಳಲ್ಲಿ ಟ್ರಕ್ ಟರ್ಮಿನಲ್‌ಗಳ ನಿರ್ಮಾಣ

ಸಾರಿಗೆ ವಿದ್ಯಾ ಚೇತನ
ಸಿಬ್ಬಂದಿಗಳ ಮಕ್ಕಳಿಗೆ ಅತ್ಯಧಿಕ ಮೊತ್ತದ ವಿದ್ಯಾರ್ಥಿ ವೇತನ, ಇಲ್ಲಿಯವರೆಗೆ ರೂ. 2.84 ಕೋಟಿ ಪಾವತಿ

ಹೃದ್ರೋಗ ತಪಾಸಣೆ
ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಅವರೊಂದಿಗೆ ಕರಾರಸಾ ನಿಗಮ, ಬಿಎಂಟಿಸಿ ಮತ್ತು ಕಕರಸಾ ನಿಗಮದ ಸಿಬ್ಬಂದಿಗಳಿಗಾಗಿ ಉಚಿತ ಹೃದ್ರೋಗ ತಪಾಸಣೆ

ಹೊಸ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥ
- 38 ಸ್ಥಳಗಳಲ್ಲಿ ರೂ. 274 ಕೋಟಿ ವೆಚ್ಚದಲ್ಲಿ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಗಳ ನಿರ್ಮಾಣ
- ರೂ.71 ಕೋಟಿ ವೆಚ್ಚದಲ್ಲಿ 11 ಸ್ಥಳಗಳಲ್ಲಿ ಪ್ರಾದೇಶಿಕ ಸಾರಿಗೆ ಕಛೇರಿ ನಿರ್ಮಾಣ

ನಮ್ಮ ಕಾರ್ಗೋ
20 ಸರಕು ಸಾಗಣೆ ವಾಹನಗಳ ಮೂಲಕ ಲಾಜಿಸ್ಟಿಕ್ಸ್ ಸೇವೆ ಆರಂಭ

ಬಸ್ಸುಗಳ ಪುನಶ್ಚೇತನ ಕಾರ್ಯ
1748 ಹಳೆಯ ಬಸ್ಸುಗಳ ಪುನಶ್ಚೇತನ ಕಾರ್ಯ

ಹೊಸ ಬಸ್ಸು ನಿಲ್ದಾಣ/ಘಟಕ ನಿರ್ಮಾಣ
- ಮೈಸೂರು ನಗರದಲ್ಲಿ (ಬನ್ನಿಮಂಟಪ) ರೂ.120 ಕೋಟಿ ವೆಚ್ಚದಲ್ಲಿ ಬಸ್ ನಿಲ್ದಾಣ ನಿರ್ಮಾಣಕ್ಕೆ ಕ್ರಮ
- ರಾಜ್ಯಾದ್ಯಂತ 24 ಬಸ್ ನಿಲ್ದಾಣಗಳು, 08 ಬಸ್ ಘಟಕಗಳ ನಿರ್ಮಾಣ/ಮೇಲ್ದರ್ಜೆಗೇರಿಸಲಾಗಿದೆ

ಮೊಬೈಲ್ ವ್ಯಾನ್/ಮೆಟ್ರೋ ಫೀಡರ್ ವ್ಯವಸ್ಥೆ
- ಬೆಂಗಳೂರು ನಗರದಲ್ಲಿ ಬಸ್ ಆಕಸ್ಮಿಕ ಅವಘಡಕ್ಕೀಡಾದಾಗ ಸಂಚಾರಿ ಕಾರ್ಯಾಗಾರ ಪ್ರಮುಖ ಬಸ್ ನಿಲ್ದಾಣಗಳಿಗೆ ನಿಯೋಜನೆ
- 70 ಮೆಟ್ರೋ ಫೀಡರ್ ಬಸ್ಸುಗಳು, 212 ಅನುಸೂಚಿಗಳ ಕಾರ್ಯಾಚರಣೆ

ಬಸ್ಸುಗಳ ಬ್ರಾಂಡಿಂಗ್/ ಬಸ್ ಟ್ರಿಪ್‌ಗಳ ಹೆಚ್ಚಳ
- ಅಶ್ವಮೇಧ, ಪಲ್ಲಕ್ಕಿ, ಅಂಬಾರಿ ಉತ್ಸವ, ಕಲ್ಯಾಣ ರಥ, ಐರಾವತ ಕ್ಲಬ್ ಕ್ಲಾಸ್ 2.0, ಅಮೋಘವರ್ಷ
- ಪ್ರತಿದಿನ ನಾಲ್ಕು ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ 21,832 ಬಸ್ ಟ್ರಿಪ್‌ಗಳ ಹೆಚ್ಚಳ ಹಾಗೂ 32 ಲಕ್ಷ ಪ್ರಯಾಣಿಕರ ಏರಿಕೆ

ಶ್ರೀ ರಾಮಲಿಂಗಾರೆಡ್ಡಿ, ಮಾನ್ಯ ಸಾರಿಗೆ ಹಾಗೂ ಮುಜರಾಯಿ ಸಚಿವರು ರೂ.1 ಕೋಟಿ ಚೆಕ್ ಅನ್ನು ಮೃತ ಸಾರಿಗೆ ಸಿಬ್ಬಂದಿಗಳ ಅವಲಂಬಿತರಿಗೆ ವಿತರಣೆ ಮಾಡಿದ ಸಂದರ್ಭ

ಅಪಘಾತ ಪರಿಹಾರ ನಿಧಿ
ಬಸ್ಸಿನಲ್ಲಿ ಪ್ರಯಾಣಿಸುತ್ತಿರುವ ಪ್ರಯಾಣಿಕರು ಬಸ್ ಅಪಘಾತಕ್ಕೆ ಒಳಗಾಗಿ ಮೃತಪಟ್ಟಲ್ಲಿ ನೀಡಲಾಗುತ್ತಿದ್ದ ಪರಿಹಾರ ಮೊತ್ತ ರೂ.3 ಲಕ್ಷದಿಂದ ರೂ.10 ಲಕ್ಷಕ್ಕೆ ಏರಿಕೆ

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಿಗೆ ಕಳೆದ 2 ವರ್ಷದಲ್ಲಿ 181 ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪ್ರಶಸ್ತಿಗಳು ಲಭಿಸಿರುತ್ತವೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳು
ಸುರಕ್ಷತೆ, ವಿಶ್ವಾಸಾರ್ಹ ಪ್ರಯಾಣದ ಪ್ರತೀಕ

ನುಡಿದಂತೆ ನಡೆದಿದ್ದೇವೆ

ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಕ್ಷೇಮ ಕುಶಲ



ಡೊಪಮೈನ್ ಮಾಂತ್ರಿಕ ರಸಾಯನ

ಎಸ್. ಎನ್. ಹೆಗಡೆ

ಬೆಳಿಗ್ಗೆ ಏಳುವಷ್ಟರಲ್ಲಿಯೇ ಒಮ್ಮೊಮ್ಮೆ ನಿಮ್ಮ ಮನಸ್ಸು ಆಹ್ಲಾದಕರವಾಗಿರುತ್ತದೆ; ಸಂತೋಷವಿರುತ್ತದೆ. ಕೆಲವು ದಿನ ಏಳುವಾಗ ಸೋಮಾರಿತನವವ್ರೊ, ಆಲಸ್ಯವ್ರೊ, ಮಾನಸಿಕ ಕ್ಷೋಭೆಯೊ – ಅಂತೂ ಹೇಳಲಾಗದ ಸ್ಥಿತಿಯಲ್ಲಿರುತ್ತೀರಿ. ಏಕೆ ಹೀಗೆ? ಕೆಲವು ದಿನ ಇದ್ದ ಸಂತೋಷ ಎಲ್ಲ ದಿನವೂ ಏಕಿರುವುದಿಲ್ಲ? ಇದಕ್ಕೆ ನಮ್ಮ ಶರೀರದಲ್ಲಿ ಉತ್ಪನ್ನವಾಗುವ 'ಡೊಪಮೈನ್' ಎಂಬ ರಸಾಯನವೇ ಕಾರಣ.

ಏನಿದು ಡೊಪಮೈನ್?

ಇದೊಂದು ನರಪ್ರೇಷಕ. ನರಪ್ರೇಷಕ ಎಂದರೆ ನರಜೀವಕೋಶಗಳಲ್ಲಿ ಸಂವೇದನೆಯನ್ನು ಒಂದು ನರಕೋಶದಿಂದ ಇನ್ನೊಂದು ನರಕೋಶಕ್ಕೆ ವರ್ಗಾಯಿಸುವ ರಸಾಯನ. ಎಲ್ಲ ಆರೋಗ್ಯವಂತ ವ್ಯಕ್ತಿಗಳ ಮಿದುಳಿನಲ್ಲಿಯೂ ಡೊಪಮೈನ್ ಇರುತ್ತದೆ. ಮಾನವ ದೇಹದಲ್ಲಿ ಅದರದು ಬಹುಮುಖಿ ಪಾತ್ರ. ಡೊಪಮೈನ್ ಮಿದುಳಿನ ವಿವಿಧ ಸ್ಥಳಗಳಲ್ಲಿ ಸಂಶ್ಲೇಷಣೆಯಾಗುತ್ತದೆ. ಒಮ್ಮೆ ಉತ್ಪಾದನೆಯಾದ ನಂತರ, ಇದು ನಿರ್ದಿಷ್ಟ ಗ್ರಾಹಕಗಳೊಂದಿಗೆ ಸಂವಹನ ನಡೆಸುತ್ತದೆ. ವಿವಿಧ ಶಾರೀರಿಕ ಮತ್ತು ಮಾನಸಿಕ ಪ್ರಕ್ರಿಯೆಗಳಲ್ಲಿ ವಿಭಿನ್ನ ಪಾತ್ರಗಳನ್ನು ವಹಿಸುತ್ತದೆ. ವೈವಿಧ್ಯಮಯ ಕಾರ್ಯಗಳಿಗೆ ನೆರವಾಗುವುದರ ಜೊತೆಗೆ ವಿವಿಧ ನರಕೋಶಗಳ ನಡುವೆ ಸಂವಹನವನ್ನು ಸುಗಮಗೊಳಿಸುತ್ತದೆ, ಕೇಂದ್ರ ನರಮಂಡಲ ಮತ್ತು ಬಾಹ್ಯ ಅಂಗಗಳ ಮೇಲೆ ಪ್ರಭಾವ ಬೀರುತ್ತದೆ.

ಸಂತೋಷ, ಬಲವರ್ಧನೆ, ವಿವಿಧ ಅಂಗಗಳು ಚಟುವಟಿಕೆಗಳಲ್ಲಿ ತೊಡಗಿದಾಗ (ಉದಾ: ತಿನ್ನುವುದು, ಇತರರೊಡನೆ ಬೆರೆಯುವುದು ಅಥವಾ ಗುರಿಗಳನ್ನು ಸಾಧಿಸುವುದು), ಡೊಪಮೈನ್ ಮಟ್ಟವು ಹೆಚ್ಚಾಗುತ್ತದೆ. ಪರಿಣಾಮವಾಗಿ ಅದು ಸಂತೋಷದ ಭಾವನೆಗಳನ್ನು ಉಂಟುಮಾಡುತ್ತದೆ.

ಸಂವೇದನೆಯನ್ನು ಒಂದು ನರಕೋಶದಿಂದ ಇನ್ನೊಂದು ನರಕೋಶಕ್ಕೆ ಸಾಗಿಸುವುದಕ್ಕೆ ಡೊಪಮೈನ್ ಸಹಾಯ ಮಾಡುತ್ತದೆ. ತನ್ಮೂಲಕ ಅನೇಕ ಮಾನಸಿಕ ಕ್ರಿಯೆಗಳು ಸುಸೂತ್ರವಾಗಿ ಸಾಗುತ್ತವೆ. ಶರೀರವು ಯಾವುದೇ ಸಂವೇದನೆಯನ್ನು ಗ್ರಹಿಸುವಾಗ ಅದು ವಿದ್ಯುತ್‌ಪ್ರವಾಹದೋಪಾದಿಯಲ್ಲಿ ನರಕೋಶಗಳನ್ನು ಪ್ರವೇಶಿಸುತ್ತದೆ. ನರಕೋಶದಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ವಿದ್ಯುತ್ ಪ್ರವಾಹದೋಪಾದಿಯಲ್ಲಿಯೇ ಸಾಗುತ್ತದೆ, ಒಂದು ನರಕೋಶದಿಂದ ಇನ್ನೊಂದು ನರಕೋಶಕ್ಕೆ ಜೀವರಾಸಾಯನಿಕ ಕ್ರಿಯೆಯ ರೂಪದಲ್ಲಿ ವರ್ಗಾವಣೆಯಾಗುತ್ತದೆ. ಈ ರಾಸಾಯನಿಕ ಕ್ರಿಯೆಗಳು ಡೊಪಮೈನ್ ಅಥವಾ ಇತರ ನರಪ್ರೇಷಕಗಳ ಉಪಸ್ಥಿತಿಯಲ್ಲಿ ನಡೆಯುತ್ತವೆ. ಸಂವೇದನೆ ಅಂತಿಮವಾಗಿ ಮಿದುಳಿಗೆ ತಲುಪುತ್ತದೆ. ಮಿದುಳು ಸಂವೇದನೆಯನ್ನು ಪರಿಷ್ಕರಿಸಿ ನಿರ್ದಿಷ್ಟ ಅಂಗಕ್ಕೆ ಸೂಕ್ತವಾದ ಕ್ರಿಯೆಯನ್ನು ಮಾಡಲು ಆದೇಶ ನೀಡುತ್ತದೆ. ಉದಾಹರಣೆಗೆ, ಬಿಸಿಯಾದ ವಸ್ತುವೊಂದು ನಿಮ್ಮ ಬೆರಳಿಗೆ ತಗಲುತ್ತದೆ ಎಂದು ಭಾವಿಸಿ. ಬೆರಳಿನಲ್ಲಿರುವ ನರಕೋಶಗಳ ತುದಿಯು ಶಾಖವನ್ನು ಗ್ರಹಿಸಿ ಅದನ್ನು ವಿದ್ಯುತ್‌ಪ್ರವಾಹವಾಗಿ ಪರಿವರ್ತಿಸುತ್ತದೆ. ನರಕೋಶದ ಮುಖಾಂತರ ವಿದ್ಯುತ್‌ಪ್ರವಾಹದೋಪಾದಿಯಲ್ಲಿ ಸಂವೇದನೆ (ಬಿಸಿಯ ಅನುಭವ) ಮಿದುಳಿಗೆ ತಲುಪುತ್ತದೆ. ಈ ಸಂವೇದನೆ ಡೊಪಮೈನ್‌ನಂತಹ ನರಪ್ರೇಷಕಗಳಿಂದ ಒಂದು ನರಕೋಶದಿಂದ ಇನ್ನೊಂದು ನರಕೋಶಕ್ಕೆ ಸಾಗುತ್ತದೆ. ಮಿದುಳು ಶಾಖವನ್ನು ಗ್ರಹಿಸಿ ಕೈಬೆರಳುಗಳನ್ನು ಹಿಂದಕ್ಕೆ ಎಳೆದುಕೊಳ್ಳಲು ಆದೇಶ ನೀಡುತ್ತದೆ. ಈ ಆದೇಶವೂ ಸಂವೇದನೆಯ ರೂಪದಲ್ಲಿಯೇ ಬೆರಳಿಗೆ ರವಾನೆಯಾಗುತ್ತದೆ. ಈ ಎಲ್ಲ ಕ್ರಿಯೆಗಳು ಕ್ಷಣಮಾತ್ರದಲ್ಲಿ ಸಂಭವಿಸುತ್ತವೆ. ಅಂತಿಮವಾಗಿ ನೀವು 'ಆ' ಎನ್ನುತ್ತ ಕೈಯನ್ನು ಹಿಂದಕ್ಕೆ ಎಳೆದುಕೊಳ್ಳುತ್ತೀರಿ!

ಈ ಜೀವರಾಸಾಯನಿಕ ಪ್ರತಿಕ್ರಿಯೆಗಳು ನಮ್ಮ ನಡವಳಿಕೆಗಳನ್ನು ಬಲಪಡಿಸುತ್ತವೆ. ಅವುಗಳನ್ನು ಪುನರಾವರ್ತಿಸಲು ನಮ್ಮನ್ನು ಪ್ರೋತ್ಸಾಹಿಸುತ್ತವೆ. ಡೊಪಮೈನ್ ಇಲ್ಲವಾದರೆ ಈ ಪ್ರತಿಕ್ರಿಯೆಯ ಹಾದಿಯಲ್ಲಿ ಅಡಚಣೆಗಳು ಉಂಟಾಗಬಹುದು. ವ್ಯಸನದಂತಹ ಪರಿಸ್ಥಿತಿಗಳಿಗೆ ಕಾರಣವಾಗಬಹುದು.

ಪ್ರೇರಣೆ ಮತ್ತು ಕಲಿಕೆಗಳಿಗೆ ಕೂಡ ಡೊಪಮೈನ್ ಅತ್ಯಗತ್ಯ. ಇದು ಗಮನ, ಸ್ಮರಣೆ ಮತ್ತು ಸಮಸ್ಯಾ ಪರಿಹಾರದ ಕೌಶಲಗಳನ್ನು ಹೆಚ್ಚಿಸುವ ಮೂಲಕ ಅರಿವಿನ ಪ್ರಕ್ರಿಯೆಗಳನ್ನು ಸುಗಮಗೊಳಿಸುತ್ತದೆ. ಡೊಪಮೈನ್ ಮಟ್ಟ ಹೆಚ್ಚಿದರೆ ವ್ಯಕ್ತಿಗಳು ತಮ್ಮ ಆಕಾಂಕ್ಷೆಗಳನ್ನು ಸಾಧಿಸಲು ಹೆಚ್ಚು ಪ್ರಯತ್ನಿಸುತ್ತಾರೆ; ಹೆಚ್ಚು ಸಫಲರಾಗುತ್ತಾರೆ. ಇದಕ್ಕೆ ವ್ಯತಿರಿಕ್ತವಾಗಿ, ಕಡಿಮೆ ಡೊಪಮೈನ್ ಮಟ್ಟ ನಿರಾಸಕ್ತಿ ಮತ್ತು ಕಡಿಮೆ ಪ್ರೇರಣೆಗೆ ಕಾರಣವಾಗುತ್ತದೆ. ಇದು ಮಾನಸಿಕ ಆರೋಗ್ಯದ ಮೇಲೆ ಪ್ರಭಾವವನ್ನು ಉಂಟುಮಾಡಬಹುದು.

ಡೊಪಮೈನ್‌ನ ಪ್ರಭಾವವು ಕೇವಲ ಸಂತೋಷ ಮತ್ತು ಕ್ರಿಯಾಸಾಫಲ್ಯಗಳಿಗಷ್ಟೇ ಸೀಮಿತವಲ್ಲ. ಇದು ಹಲವಾರು ಮಾನಸಿಕ ಅಸ್ವಸ್ಥತೆಗಳೊಂದಿಗೆ ಸಂಕೀರ್ಣ ಸಂಬಂಧವನ್ನು ಹೊಂದಿದೆ. ಮಿದುಳೂ ಸೇರಿದಂತೆ ನರವ್ಯೂಹದಲ್ಲಿ ಡೊಪಮೈನ್ ಮಟ್ಟದ ಅಸಮತೋಲನವು ಖಿನ್ನತೆ ಮತ್ತು ಆತಂಕಗಳನ್ನು ಉಂಟುಮಾಡುತ್ತದೆ. ಡೊಪಮೈನ್‌ನ ನಿಯಂತ್ರಣವಿಲ್ಲದಿದ್ದರೆ ಸ್ಕಿಜೋಫ್ರೇನಿಯಾ ಅಥವಾ ಛಿದ್ರಮನಸ್ಕತೆ ಉಂಟಾಗುತ್ತದೆ. ಈ ರೋಗಪೀಡಿತರು ಯೋಚನಾಶಕ್ತಿ ಹಾಗೂ ಅನುಭವ ಮುಂತಾದವುಗಳ ಅರಿವನ್ನು ಕಳೆದುಕೊಂಡಿರುತ್ತಾರೆ. ಸ್ಕಿಜೋಫ್ರೇನಿಯಾಪೀಡಿತರ ಮಿದುಳಿನಲ್ಲಿ ಅತಿಯಾದ ಡೊಪಮೈನ್ ತಯಾರಾಗುತ್ತಿದ್ದು ಅಂಥ ವ್ಯಕ್ತಿಗಳು ಭ್ರಮೆಗೊಳಗಾಗುತ್ತಾರೆ; ಕೆಲವೊಮ್ಮೆ ಕಲ್ಪನಾ ಜಗತ್ತಿನಲ್ಲಿ ವಿಹರಿಸುತ್ತಾರೆ. ಅದರಿಂದ ಹಲವು ಬಗೆಯ ಅವಘಡಗಳು ಸಂಭವಿಸುವುದೂ ಉಂಟು. ಸ್ಕಿಜೋಫ್ರೇನಿಯಾಪೀಡಿತರಿಗೆ ಡೊಪಮೈನ್ ಮಟ್ಟವನ್ನು ಕಡಿಮೆ ಮಾಡುವುದಕ್ಕೆ ಕೆಲವು ಆ್ಯಂಟಿಸೈಕೊಟಿಕ್ ಔಷಧಗಳನ್ನು ನೀಡಲಾಗುತ್ತದೆ.

ಔಷಧಸೇವನೆ (ಡ್ರಗ್ ಅಡಿಕ್ಷನ್), ಕುಡಿತ ಮುಂತಾದ ವ್ಯಸನಗಳನ್ನು ಉಂಟುಮಾಡುವುದರಲ್ಲಿಯೂ ಡೊಪಮೈನ್‌ನ ಕೈವಾಡ ಇದೆ. ಡೊಪಮೈನ್ ಮಟ್ಟ ಹೆಚ್ಚಾದಾಗ ಅತಿಯಾದ ಉದ್ರೇಕ ಹಾಗೂ ಸಂತೋಷಗಳು ಉಂಟಾಗಿ, ವಾಸ್ತವತೆಯನ್ನು ಮರೆಸಿ ವ್ಯಕ್ತಿಯನ್ನು ಭ್ರಮಾಲೋಕಕ್ಕೆ ಕರೆದೊಯ್ಯುತ್ತದೆ. ಈ ಕಾರಣದಿಂದಲೇ ಅಂಥ ವ್ಯಕ್ತಿ ವ್ಯಸನಗಳ ದಾಸನಾಗುತ್ತಾನೆ. ಮಾನಸಿಕ ಆರೋಗ್ಯದ ಹೊರತಾಗಿ, ಡೊಪಮೈನ್ ದೈಹಿಕ ಯೋಗಕ್ಷೇಮದ ಮೇಲೂ ಗಮನಾರ್ಹವಾದ ಪರಿಣಾಮವನ್ನು ಬೀರುತ್ತದೆ. ಇದಕ್ಕೆ ಪಾರ್ಕಿನ್‌ಸನ್ ಕಾಯಿಲೆ ಉದಾಹರಣೆ.

ಡೊಪಮೈನ್ ಹೃದಯಬಡಿತ ಮತ್ತು ರಕ್ತದೊತ್ತಡವನ್ನು ನಿಯಂತ್ರಿಸುವಲ್ಲಿಯೂ ಮುಖ್ಯ ಪಾತ್ರವಹಿಸುತ್ತದೆ. ಡೊಪಮೈನ್‌ನ ಅಸಮತೋಲನವು ಹೃದಯರಕ್ತನಾಳದ ಸಮಸ್ಯೆಗಳನ್ನು ಉಂಟುಮಾಡಬಹುದು. ಉದಾಹರಣೆಗೆ, ಡೊಪಮೈನ್ ಮಟ್ಟ ಹೆಚ್ಚಾದಾಗ ಹೃದಯಬಡಿತದ ವೇಗ ಹೆಚ್ಚುತ್ತದೆ, ಕಡಿಮೆಯಾದಾಗ ರಕ್ತದ ಒತ್ತಡ ಕಡಿಮೆಯಾಗುತ್ತದೆ.

ಡೊಪಮೈನ್ ಆಹಾರಸೇವನೆ ಮತ್ತು ಹಸಿವಿನ ನಿಯಂತ್ರಣದ ಮೇಲೆ ಕೂಡ ಪರಿಣಾಮ ಬೀರುತ್ತದೆ. ಡೊಪಮೈನ್ ನಿಯಂತ್ರಣವಿಲ್ಲದ ವ್ಯಕ್ತಿಗಳು ಹಸಿವು ಮತ್ತು ಆಹಾರಸೇವನೆಯನ್ನು ನಿಯಂತ್ರಿಸಿಕೊಳ್ಳಲಾರರು. ಅಂಥ ವ್ಯಕ್ತಿಗಳಲ್ಲಿ ಸ್ಥೂಲಕಾಯತೆ ಉಂಟಾಗಬಹುದು.

ನಿಯಮಿತ ವ್ಯಾಯಾಮ, ನಿದ್ರೆಯಂತಹ ಜೀವನಶೈಲಿ ಅಂಶಗಳು ಡೊಪಮೈನ್ ಮಟ್ಟವನ್ನು ಗಮನಾರ್ಹವಾಗಿ ನಿಯಂತ್ರಣದಲ್ಲಿರಿಸುತ್ತವೆ. ನಿದ್ರಾಹೀನತೆ ಡೊಪಮೈನ್ ಗ್ರಾಹಕಗಳ ಸೂಕ್ಷ್ಮತೆಯನ್ನು ಕಡಿಮೆ ಮಾಡುತ್ತದೆ. ❖

ಕೀಲುರಿಯೂತದ ವಾತರಕ್ತ

ಡಾ. ಸತ್ಯನಾರಾಯಣ ಭಟ್ ಪಿ.

'ಖುಡವಾತ' (ಗೌಟಿ ಆರ್ಥ್ರೈಟಿಸ್) ಎಂಬ ಹೆಸರಿನಡಿ ಕಿರಿಗಂಟುಗಳ ಉರಿಯೂತದ ವ್ಯಾಧಿಯ ವಿವರಗಳು ಚರಕ ಮತ್ತು ಸುಶ್ರುತಸಂಹಿತೆಯಲ್ಲಿದೆ. 'ಖುಡ' ಎಂದರೆ ಚಿಕ್ಕದು. ಕಿರಿಯ ಸಂದುಗಳನ್ನಷ್ಟೆ ಬಹುತೇಕ ಪ್ರಸಂಗಗಳಲ್ಲಿ ಆವರಿಸುವ ತೊಂದರೆ ಇದು. ತಡೆಯಲು ಸಾಧ್ಯವೆನಿಸುವಷ್ಟು ವೇದನೆ. ಚೇಳು ಕಚ್ಚಿದರೆ ಉಂಟಾಗುವ ನೋವಿಗೆ ಹೋಲಿಕೆ. ಆಢ್ಯವಾತ ಅರ್ಥಾತ್, ವಾತಜನಿತ ಕಾಯಿಲೆ ಇದು.

ವಾತದೋಷವು ಹಲವು ಕಾರಣಗಳಿಂದ ಉಂಟಾಗುತ್ತದೆ. ಅದರ ಮಾರ್ಗ ತಡೆಯ ಕೆಲಸ ಪ್ರಕುಪಿತ ರಕ್ತದ್ದು. ಗಾಳಿ ತುಂಬಿದ ಬಲೂನಿಗೆ ದಾರ ಕಟ್ಟಿ ಒತ್ತಿದರೆ ಹೇಗಾದೀತು ಊಹಿಸಿರಿ. ಹೀಗೆ ದೇಹದ ಸಹಜ ಕೆಲಸಗಳಲ್ಲಿ ವ್ಯತ್ಯಯ. ಚುಚ್ಚುವಿಕೆ, ಭಾರ ಭಾರ, ಉರಿ, ಸಿಡಿತ, ನೀಲಿಗಟ್ಟುವಿಕೆ, ಸ್ಪರ್ಶ ಹಾನಿ, ಸೀಳುವಂತಹ ನೋವುಗಳು ಏಕಕಾಲದಲ್ಲಿ ಉಂಟಾಗುವುದು. ಕೈ ಮತ್ತು ಕಾಲು ಬೆರಳು, ಅಂಗೈ ಮತ್ತು ಅಂಗಾಲುಗಳಲ್ಲಿ ಇಂತಹ ಲಕ್ಷಣಗಳ ಸಮುಚ್ಚಯ ಪ್ರಕಟ. ಮೊದಲ ಕಾರಣ ಅತಿಯಾದ ಖಾರ, ಹುಳಿ ಹಾಗೂ ಉಪ್ಪಿನಂಶಗಳ ಸೇವನೆ. ಯೂರಿಕ್ ಅಮ್ಲದ ಹೆಚ್ಚಳವೇ ಮೊದಲ ಕಾರಣ ಎನ್ನುತ್ತದೆ ಆಧುನಿಕ ವೈದ್ಯ. ಟೊಮೆಟೊದ ಅತಿ ಬಳಕೆಯಿಂದ ಮೂತ್ರಕೋಶದ ಕಲ್ಲು ಮತ್ತು ಗೌಟ್ ಕಾಯಿಲೆ ಕಟ್ಟಿಟ್ಟ ಬುತ್ತಿ ಎಂಬುದು ನೆನಪಿಡಿ. ಹಗಲು ನಿದ್ದೆ, ಬೊಜ್ಜು ಮತ್ತು ದೇಹಕ್ಕೆ ಒಂದಿನಿತೂ ವ್ಯಾಯಾಮವೇ ಇಲ್ಲದ ಜೀವನ. ಬೆವರನ್ನೇ ಸುರಿಸದ ಸದಾ ಕಾಲ ಎ.ಸಿ., ಫ್ಯಾನ್ ಮಾತ್ರ ಬಯಸುವ ಹೊಸ ಪೀಳಿಗೆಯ ಕಾಯಿಲೆಗಳ ಪಟ್ಟಿಯಲ್ಲಿದೆ ಗೌಟ್, ಅರ್ಥಾತ್ ವಾತರಕ್ತದ ಸ್ಥಾನ.

ಕೇವಲ ತ್ವಚೆ ಮತ್ತು ಮಾಂಸಪೇಶೀ ಮಾತ್ರ ಆವರಿಸಿದ ಕಾಯಿಲೆಗೆ 'ಉತ್ತಾನ ವಾತರಕ್ತ' ಎಂಬರು. ರಸ ರಕ್ತಾದಿ ಏಳೂ ಧಾತು ಅವರಿಸಿದ ಆಳವಾಗಿ ಬೇರೂರಿದ ವಾತರಕ್ತವು ಗಂಭೀರ ಎನ್ನುತ್ತದೆ ಚರಕಸಂಹಿತೆ. ಸರಿಯಾದ ಚಿಕಿತ್ಸೆ ಮಾಡದ ಉತ್ತಾನವೇ ಗಂಭೀರ ಸ್ವರೂಪ ಪಡೆಯುತ್ತದೆ. ಕೈಕಾಲು ಸೊಟ್ಟಗಾಗುವ, ಮೂಳೆಗಳೇ ವಿರೂಪಗೊಳುವ ಸಂಭಾವ್ಯ ಅವಸ್ಥೆ ಇದು. ಹದ್ದು ಮೀರಿದ ಕಾಯಿಲೆಗೆ ಚಿಕಿತ್ಸೆ ಇಲ್ಲ. ಬಹಳವಾಗಿ ತೂಕ ಕಳೆದುಕೊಂಡ, ಬಲ ಮತ್ತು ಮನೋಬಲ ಕಳೆದುಹೋದ ರೋಗಿಗೆ ಚಿಕಿತ್ಸೆ ಇಲ್ಲ ಎನ್ನುತ್ತದೆ ಚರಕಸಂಹಿತೆ. ಜಿಗಣೆ ಕಚ್ಚಿಸುವ ವಿಧಾನದಿಂದ ದೇಹದ 'ದುಷ್ಟ' ರಕ್ತವನ್ನು ತೆಗೆಯುವ ಮೊದಲ ಕ್ರಮ ಗಮನಿಸಿ. ಪಂಚಕರ್ಮ ಪ್ರಕಾರದ ಒಂದು ವಿಧ ಜಿಗಣೆಯದು. ಇನ್ನೊಂದು ಪ್ರಕಾರ ಕ್ರಮವರಿತು ನಡೆಸಲಾದ ವಿರೇಚನ ವಿಧಿ. ಅಂದರೆ ಕೆಟ್ಟ ದೋಷ ಹೊರ ಹಾಕುವ ಭೇದಿ ಮಾಡಿಸುವ ವಿಧಾನ. 'ಉಪನಾಹ' ಎಂದರೆ ಬಿಸಿಪಟ್ಟು ಹಾಕುವ ಪೋಲ್ಟೀಸು. ಅಗಸೆಬೀಜ, ಗೋಧಿಹಿಟ್ಟನ್ನು ಕಲಸಿ ಬಿಸಿ ಮಾಡಿ, ನೋವಿನ ಜಾಗಕ್ಕೆ ಹಚ್ಚುವ ಕ್ರಮ ಶಮನಕಾರಿ.

ರೋಗಕಾರಣಗಳಿಂದ ದೂರವಿರಿ. ಅದುವೇ ಮೊದಲ ಅರ್ಧ ಭಾಗದ ಚಿಕಿತ್ಸೆ ಎನ್ನುತ್ತದೆ, ಆಯುರ್ವೇದ. ಹುಳಿ, ಖಾರ. ಮದ್ಯಪಾನ, ಹಗಲು ನಿದ್ದೆ. ಉಷ್ಣಕಾರಕ ಆಹಾರಗಳು ಸಹ ರಕ್ತವನ್ನು ಕೆಡಿಸಿ ಕಾಯಿಲೆಗೆ ಹಾದಿ ಮಾಡಿಕೊಡುತ್ತವೆ. ನಿರಂತರ ಸಂಚಾರವೂ ವಾತರಕ್ತದ ಮೂಲಕಾರಣವಾದೀತು. ಹರಳುಗಿಡದ ಬೇರಿನ ಕಷಾಯ ಪಾನ ಉತ್ತಮ ಪ್ರಥಮ ಚಿಕಿತ್ಸೆ. ಟೊಮೆಟೊ, ಬೇಳೆಗಳಿಂದ ದೂರವಿದ್ದರೆ ಕ್ಷೇಮ. ಹುರುಳಿಬೀಜದ ಸಾರನ್ನು ಬಳಸಿರಿ. ಬೋಧಿವೃಕ್ಷ(ಅರಳಿಮರ)ದ ಹೊರ ತೊಗಟೆಯ ಕಷಾಯದ ನಿತ್ಯಸೇವನೆಯಿಂದ ಹಿತವಿದೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ -ವಿಜ್ಞಾನ

ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣ

32) ಬಹು ಆಯ್ಕೆ ಪ್ರಶ್ನೆಗಳು

1) ನೀರಿನ ವಿದ್ಯುದ್ವಿಭಜನೆಯು ಕ್ರಿಯೆಯಲ್ಲಿ ಕ್ಯಾಥೋಡನಲ್ಲಿ ಬಿಡುಗಡೆಯಾಗುವ ಅನಿಲ.................... (ಏಪ್ರಿಲ್–2022)

ಎ) ಆಕ್ಸಿಜನ್ ಬಿ) ಹೈಡ್ರೋಜನ್

ಸಿ) ಕ್ಲೋರಿನ್ ಡಿ) ನೈಟ್ರೋಜನ್

ಉತ್ತರ:– (ಬಿ) ಹೈಡ್ರೋಜನ್

2) Si + C→ Sic ಈ ರಾಸಾಯನಿಕ ಸಮೀಕರಣವು ಇದಕ್ಕೆ ಉದಾಹಣೆ .... (ಏಪ್ರಿಲ್ –2016)

ಎ) ಬಹಿರುಷ್ಣಕ ಕ್ರಿಯೆ ಬಿ) ಅಂತರುಷ್ಣಕ ಕ್ರಿಯೆ

ಸಿ) ವಿಭಜನೆ ಕ್ರಿಯೆ ಡಿ) ಸ್ಥಾನಪಲ್ಲಟ್ಟ ಕ್ರಿಯೆ

ಉತ್ತರ:– (ಬಿ) ಅಂತರುಷ್ಣಕ ಕ್ರಿಯೆ

3) ಚಿಪ್ಸ್ ತಯಾರಕರು, ಚಿಪ್ಸ್ ಪೊಟ್ಟಣಗಳಲ್ಲಿ ನೈಟ್ರೋಜನ್‌ನಂತಹ ಅನಿಲವನ್ನು ಹಾಯಿಸಲು ಕಾರಣ ಚಿಪ್ಸ್.......................

ಎ) ಸಂಕ್ಷಾರಣಗೊಳ್ಳದಂತೆ ತಡೆಗಟ್ಟಲು (ಏಪ್ರಿಲ್ –2023)

ಬಿ) ಉತ್ಕರ್ಷಣೆಗೊಳ್ಳುವುದನ್ನು ತಡೆಗಟ್ಟಲು

ಸಿ) ಕಮಟುವಿಕೆ ಹೊಂದುವಂತೆ ಮಾಡಲು

ಡಿ) ಅಪಕರ್ಷಣೆಗೊಳ್ಳುವುದನ್ನು ತಡೆಗಟ್ಟಲು

ಉತ್ತರ:– (ಬಿ) ಉತ್ಕರ್ಷಣೆಗೊಳ್ಳುವುದನ್ನು ತಡೆಗಟ್ಟಲು

4) $Fe_2O_3 + 2Al\ Al_2O_3 + 2Fe$

ಮೇಲಿನ ರಾಸಾಯನಿಕ ಕ್ರಿಯೆಯ ವಿಧ

ಎ) ಸಂಯೋಗ ಕ್ರಿಯೆ ಬಿ) ದ್ವಿಸ್ಥಾನ ಪಲ್ಲಟ ಕ್ರಿಯೆ

ಸಿ) ವಿಭಜನ ಕ್ರಿಯೆ ಡಿ) ಸ್ಥಾನಪಲ್ಲಟ ಕ್ರಿಯೆ

ಉತ್ತರ:– (ಡಿ) ಸ್ಥಾನಪಲ್ಲಟ ಕ್ರಿಯೆ (ಜೂನ್ –2019)

5) ಈ ಕೆಳಗಿನವುಗಳಲ್ಲಿ ತಟಸ್ಥೀಕರಣ ಕ್ರಿಯೆಯನ್ನು ಪ್ರತಿನಿಧಿಸುವ ರಾಸಾಯನಿಕ ಸಮೀಕರಣ ಯಾವುದು? (April 2019)

(a) $BaCl_2 + H_2SO_4 \rightarrow BaSO_4 + 2HCl$

(b) $MnO, +4\ HCI \rightarrow MnCl_2 + 2H2O + Cl_2$

(c) $2NaOH + H_2SO_4 \rightarrow Na_2SO_4 + 2H_2O$

(d) $AgNO, + HCl \rightarrow AgCl + HNO,$

ಉತ್ತರ:– (c) $2NaOH + H_2SO_4 \rightarrow Na_2SO_4 + 2H_2O$

6) ಆಹಾರ ಪದಾರ್ಥಕಗಳು ವಾತಾವರ್ಣಕ್ಕೆ ತೆರೆದಿಟ್ಟಾಗ ಕಮಟುವಿಕೆಗೊಳಗುವುದಕ್ಕೆ ಕಾರಣವಾಗುವ ಕ್ರಿಯೆ (ಜುಲೈ– 2019)

ಎ) ಉತ್ಕರ್ಷಣೆ ಬಿ) ಅಪಕರ್ಷಣೆ

ಸಿ) ನಳಿಸುವಿಕೆ, ಡಿ) ಹೈಡ್ರೋಜನಿಕರಣ

ಉತ್ತರ:– (ಎ) ಉತ್ಕರ್ಷಣೆ

33. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಕ್ಯಾಲ್ಸಿಯಂ ಆಕ್ಸೈಡ್ ನೀರಿನೊಂದಿಗೆ ವರ್ತಿಸಿದಾಗ ಉತ್ಪತ್ತಿಯಾಗುವ ಉತ್ಪನ್ನವನ್ನು ಹೆಸರಿಸಿ (ಜೂನ್ 2023)

ಉತ್ತರ:– ಕ್ಯಾಸಿಯಂ ಹೈಡ್ರಾಕ್ಸೈಡ್ ಅಥವಾ ಅರಳಿದ ಸುಣ್ಣ

2) ZnO, + C → Zn + CO, ಈ ಕ್ರಿಯೆಯಲ್ಲಿ ಉತ್ಕರ್ಷಿಸಲ್ಪಟ್ಟ ಪ್ರತಿವರ್ತಕ ಮತ್ತು ಅಪಕರ್ಷಿಸಲ್ಪಟ್ಟ ಪ್ರತಿವರ್ತಕಗಳನ್ನು ಬರೆಯಿರಿ (ಏಪ್ರಿಲ್– 2022)

ಉತ್ತರ:– ಉತ್ಕರ್ಷಿಸಲ್ಪಟ್ಟ ಪ್ರತಿವರ್ತಕ – C

ಮತ್ತು ಅಪಕರ್ಷಿಸಲ್ಪಟ್ಟ ಪ್ರತಿವರ್ತಕ – ZnO

3) ಒಂದು ಕಬ್ಬಿಣದ ಉಂಗುರಕ್ಕೆ ತಾಮ್ರದ ಲೇಪನ ಮಾಡಬೇಕಾಗಿದೆ ವಿದ್ಯುತ್ ಶಕ್ತಿಯನ್ನು ಉಪಯೋಗಿಸದೆ ಇದನ್ನು ನಾವು ಹೇಗೆ ಮಾಡಬಹುದು? (ಮಾರ್ಚ್–2020)

ಉತ್ತರ:– ಕಬ್ಬಿಣದ ಉಂಗುರವನ್ನು ತಾಮ್ರದ ಸಲ್ಫೇಟ್ ದ್ರಾವಣದಲ್ಲಿ ಮುಳುಗಿಸಿಡಬೇಕು, ಕಬ್ಬಿಣವು ತಾಮ್ರದ ಸಲ್ಫೇಟ್ ದ್ರಾವಣದಿಂದ ತಾಮ್ರವನ್ನು ಸ್ಥಾನಪಲ್ಲಟಿಸುತ್ತದೆ ಮತ್ತು ತಾಮ್ರವು ಕಬ್ಬಿಣದ ಉಂಗುರುದ ಮೇಲೆ ಲೇಪನಗೊಳ್ಳುತ್ತದೆ.

5) ಸುಣ್ಣದ ಕಲ್ಲಿನಿಂದ ಸುಟ್ಟ ಸುಣ್ಣವನ್ನು ಪಡೆಯುವ ರಾಸಾಯನಿಕ ಕ್ರಿಯೆಯ ವಿಧ ಯಾವುದು? (ಜೂನ್ 2022)

ಉತ್ತರ:– ಉಷ್ಣ ವಿಭಾಜನಾ ಕ್ರಿಯೆ / ಅಂತರುಷ್ಣಕ ಕ್ರಿಯೆ

6) ಚಪಾತಿಯನ್ನು ನಿಧಾನವಾಗಿ ಜಿಗಿದು ತಿಂದಾಗ ಸಿಹಿಯಾಗಿ ರುಚಿಸುತ್ತದೆ ಏಕೆ? (ಸೆಪ್ಟೆಂಬರ್– 2020)

ಉತ್ತರ:– ಚಪಾತಿಯು ಪಿಷ್ಟವನ್ನು ಹೊಂದಿದೆ, ಚಪಾತಿ ಜಿಗಿದಾಗ ಲಾಲಾರಸವು ಸ್ರವಿಸಲ್ಪಡುತ್ತದೆ, ಲಾಲಾರಸದಲ್ಲಿರುವ ಅಮೈಲೈಸ್ ಪಿಷ್ಟವನ್ನು ವಿಭಜಿಸಿ ಸರಳ ಸಕ್ಕರೆಯನ್ನಾಗಿಸುತ್ತದೆ. ಚಪಾತಿಯನ್ನು ನಿಧಾನವಾಗಿ ಜಿಗಿದು ತಿಂದಾಗ ಸಿಹಿಯಾಗಿ ರುಚಿಸುತ್ತದೆ

7) ಒಂದು ಜಮೀನಿಗೆ ಕೃಷಿ ತಜ್ಞರು ನಿರ್ದಿಷ್ಟ ಪ್ರಮಾಣದ ಸುಣ್ಣವನ್ನು ಸೇರಿಸಲು ಸಲಹೆ ನೀಡಿದ್ದಾರೆ ಇದಕ್ಕೆ ಕಾರಣಗಳೇನಿರಬಹುದು?

ಉತ್ತರ:– ಮಣ್ಣು ಆಮ್ಲೀಯವಾಗಿದ್ದರೆ ಕೃಷಿ ಭೂಮಿಯನ್ನು ಸರಿಪಡಿಸಲು ಕೃಷಿ ತಜ್ಞರು ನಿರ್ದಿಷ್ಟ ಪ್ರಮಾಣದ ಸುಣ್ಣವನ್ನು ಸೇರಿಸಲು ಹೇಳುತ್ತಾರೆ. ಇದರಿಂದ ಮಣ್ಣಿನಲ್ಲಿರುವ ಆಮ್ಲೀಯತೆ ಕಡಿಮೆಯಾಗುತ್ತದೆ. (ಕಾರಣ ಸುಣ್ಣವು ಪ್ರತ್ಯಾಮ್ಲೀಯವಾಗಿದೆ,)

8) ಸೀಸದ ನೈಟ್ರೇಟ್ ಅನ್ನು ಕಾಯಿಸಿದಾಗ ಬಿಡುಗಡೆಯಾಗುವ ಕಂದು ಬಣ್ಣದ ಧೂಮವನ್ನು ಹೆಸರಿಸಿ ಈ ಕ್ರಿಯೆಗೆ ಸರಿದೂಗಿಸಿದ ರಾಸಾಯನಿಕ ಸಮೀಕರಣವನ್ನು ಬರೆಯಿರಿ (ಏಪ್ರಿಲ್ 2019)

ಉತ್ತರ:– ನೈಟ್ರೋಜನ್ ಡೈ ಆಕ್ಸೈಡ್

$$2Pb(NO_3)_2 \rightarrow 2PbO + 4NO_2 + O_2$$

9) ಪ್ರನಾಳ A ಮತ್ತು Bಗಳಲ್ಲಿ ಕ್ರಮವಾಗಿ ಸತುವಿನ ಸಲ್ಫೇಟ್ ಮತ್ತು ಸಿಲ್ವರ್ ನೈಟ್ರೇಟ್ ದ್ರಾವಣಗಳನ್ನು ತೆಗೆದುಕೊಳ್ಳಲಾಗಿದೆ, ತಾಮ್ರದ ಚೂರುಗಳನ್ನು ತೆಗೆದುಕೊಳ್ಳಲಾಗಿದೆ. ತಾಮ್ರದ ಚೂರುಗಳನ್ನು ಎರಡೂ ಪ್ರನಾಳಗಳಿಗೆ ಹಾಕಲಾಗಿದೆ. ಎರಡು ಪ್ರನಾಳಗಳ ಪೈಕಿ ಯಾವುದರಲ್ಲಿ ರಾಸಾಯನಿಕ ಕ್ರಿಯೆಯನ್ನು ಗಮನಿಸುವಿರಿ ನಿಮ್ಮ ಉತ್ತರವನ್ನು ವೈಜ್ಞಾನಿಕ ಕಾರಣಗಳೊಂದಿಗೆ ಸಮರ್ಥಿಸಿ (ಜೂನ್ 2018)

ಉತ್ತರ:– ಸಿಲ್ವರ್ ನೈಟ್ರೇಟ್ ದ್ರಾವಣ ಹೊಂದಿರುವ ಪ್ರನಾಳ Bಯಲ್ಲಿ ಏಕೆಂದರೆ ತಾಮ್ರವು ಬೆಳ್ಳಿಗಿಂತ ಹೆಚ್ಚು ಕ್ರಿಯಾಶೀಲ ಆದ್ದರಿಂದ ಸಿಲ್ವರ್ ನೈಟ್ರೇಟ್ ದ್ರಾವಣದಿಂದ ಬೆಳ್ಳಿಯನ್ನು ಸ್ಥಾನಪಲ್ಲಟಗೊಳಿಸುತ್ತದೆ

10) ಸತುವಿನ ಮೇಲೆ ಸಾರರಿಕ್ತ ಸಲ್ಫೋರಿಕ ಆಮ್ಲದ ವರ್ತನೆಯಿಂದ ಹೈಡ್ರೋಜನ ಅನಿಲ ಉಂಟಾಗುವಿಕೆಯ ಚಿತ್ರವನ್ನು ಬರೆದು ಭಾಗಗಳನ್ನು ಬರೆಯಿರಿ

ಉತ್ತರ:–



11) ರಾಸಾಯನಿಕ ಸಮೀಕರಣಗಳನ್ನು ಸರಿದೂಗಿಸುವಲ್ಲಿ ಗಮನದಲ್ಲಿಟ್ಟುಕೊಳ್ಳಬೇಕಾದ ನಿಯಮವನ್ನು ಹೆಸರಿಸಿ ಮತ್ತು ನಿರೂಪಿಸಿ

ಉತ್ತರ:– ರಾಶಿ ಸಂರಕ್ಷಣಾ ನಿಯಮ ರಾಸಾಯನಿಕ ಕ್ರಿಯೆಯಲ್ಲಿ ರಾಶಿಯನ್ನು ಸೃಷ್ಟಿಸುವುದಾಗಲೀ ನಾಶಮಾಡುವುದಾಗಲೀ ಸಾಧ್ಯವಿಲ್ಲ

(ಮುಂದುವರಿಯುವುದು.........)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾದರಿಯ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾಪಕಾಪತ್ರ ಪ್ರಧಾನ ಪರೀಕ್ಷಾ ತರಬೇತಿ, ಕೇಂದ್ರ

PUC: MATHS

Problems:- *(......Contd)*

11. Prove that $\begin{bmatrix} i & 0 & -i \\ 0 & -i & i \\ -i & i & 0 \end{bmatrix}\begin{bmatrix} -i & i \\ 0 & 0 \\ i & -i \end{bmatrix} = \begin{bmatrix} 2 & -2 \\ -1 & 1 \\ -1 & 1 \end{bmatrix}$

(here $i = \sqrt{-1}$**)**

Soln:– Consider L.H.S $\begin{bmatrix} i & 0 & -i \\ 0 & -i & i \\ -i & i & 0 \end{bmatrix}\begin{bmatrix} -i & i \\ 0 & 0 \\ i & -i \end{bmatrix}$

$$\Rightarrow \begin{bmatrix} -i^2+0-i^2 & i^2+0+i^2 \\ 0+0+i^2 & 0+0-i^2 \\ i^2+0+0 & -i^2+0+0 \end{bmatrix}$$

(as $i = \sqrt{-1}$; so $i^2 = -1$)

$$\Rightarrow \begin{bmatrix} 2 & -2 \\ -1 & 1 \\ -1 & 1 \end{bmatrix} = \text{R.H.S; Hence proved.}$$

12. If $A = \begin{bmatrix} 1 & -1 \\ 2 & -1 \end{bmatrix}$, $B = \begin{bmatrix} a & -1 \\ b & -1 \end{bmatrix}$ **and** $(A+B)^2 = A^2 + B^2$**, find a and b.**

Soln:– Given $(A+B)^2 = A^2 + B^2$

$$(A+B)(A+B) = A^2 + B^2$$
$$\Rightarrow A(A+B) + B(A+B) = A^2 + B^2$$
$$\Rightarrow AA + AB + BA + BB = A^2 + B^2$$
$$\Rightarrow A^2 + AB + BA + B^2 = A^2 + B^2$$
$$\Rightarrow AB + BA = 0$$
$$\Rightarrow \begin{bmatrix} 1 & -1 \\ 2 & -1 \end{bmatrix}\begin{bmatrix} a & -1 \\ b & -1 \end{bmatrix} + \begin{bmatrix} a & -1 \\ b & -1 \end{bmatrix}\begin{bmatrix} 1 & -1 \\ 2 & -1 \end{bmatrix} = 0$$
$$\Rightarrow \begin{bmatrix} a-b & -1+1 \\ 2a-b & -2+1 \end{bmatrix} + \begin{bmatrix} a-2 & -a+1 \\ b-2 & -b+1 \end{bmatrix} = \begin{bmatrix} 0 & 0 \\ 0 & 0 \end{bmatrix}$$
$$\Rightarrow \begin{bmatrix} a-b-a-2 & 0-a+1 \\ 2a-b+b-2 & -1-b+1 \end{bmatrix} = \begin{bmatrix} 0 & 0 \\ 0 & 0 \end{bmatrix}$$
$$\Rightarrow \begin{bmatrix} 2a-b-2 & -a+1 \\ 2a-2 & -b \end{bmatrix} = \begin{bmatrix} 0 & 0 \\ 0 & 0 \end{bmatrix}$$
$$\Rightarrow 2a-b-2 = 0$$
$$-a+1 = 0$$
$$2a-2 = 0$$
$$-b = 0$$

From (2) and (4), we get a =1, b = 0

Also these values of a and b satisfy the eqns (1) and (3).

Hence a = 1, b = 0 are the required values.

13. If $A = \begin{bmatrix} 4 & 3 \\ 2 & 5 \end{bmatrix}$**, find x and y such that** $A^2 - xA + yI = 0$

Soln:– $A^2 = \begin{bmatrix} 4 & 3 \\ 2 & 5 \end{bmatrix}\begin{bmatrix} 4 & 3 \\ 2 & 5 \end{bmatrix}$

$$= \begin{bmatrix} 16+6 & 12+15 \\ 8+10 & 6+25 \end{bmatrix} = \begin{bmatrix} 22 & 27 \\ 18 & 31 \end{bmatrix}$$

Consider $A^2 - xA + yI = 0$

$$\Rightarrow \begin{bmatrix} 22 & 27 \\ 18 & 31 \end{bmatrix} - x\begin{bmatrix} 4 & 3 \\ 2 & 5 \end{bmatrix} + y\begin{bmatrix} 1 & 0 \\ 0 & 1 \end{bmatrix} = 0$$
$$\Rightarrow \begin{bmatrix} 22-4x+y & 27-3x \\ 18-2x & 31-5x+y \end{bmatrix} = 0 = \begin{bmatrix} 0 & 0 \\ 0 & 0 \end{bmatrix}$$

$\therefore 22 - 4x + y = 0,$

$27 - 3x = 0$

$31 - 5x + y = 0$

$18 - 2x = 0$

$\Rightarrow x = 9$ and $31 - 45 + y = 0$

$\therefore y = 14$; Hence $x = 9$, $y = 14$

14. If $A = \begin{bmatrix} \alpha & 0 \\ 1 & 1 \end{bmatrix}$ **and** $B = \begin{bmatrix} 1 & 0 \\ 5 & 1 \end{bmatrix}$ **whenever** $A^2 = B$**, the value of** α **is**

a) 5 **b) –1**

c) 11 **d) no real value of** α

Soln:– $A^2 = \begin{bmatrix} \alpha & 0 \\ 1 & 1 \end{bmatrix}\begin{bmatrix} \alpha & 0 \\ 1 & 1 \end{bmatrix} = \begin{bmatrix} \alpha^2 & 0 \\ \alpha+1 & 1 \end{bmatrix}$

$B = \begin{bmatrix} 1 & 0 \\ 5 & 1 \end{bmatrix}$ (given)

$\Rightarrow \alpha^2 = 1$, $\alpha + 1 = 5$ i.e., $\alpha = 4$ not possible.

i.e., α has no real value.

15. Express $A = \begin{bmatrix} 6 & 7 \\ -2 & 1 \end{bmatrix}$ **as the sum of a symmetric and skew symmetric matrix.**

Soln:– Let $A = \begin{bmatrix} 6 & 7 \\ -2 & 1 \end{bmatrix}$ & $A' = \begin{bmatrix} 6 & -2 \\ 7 & 1 \end{bmatrix}$

$$A + A' = \begin{bmatrix} 6 & 7 \\ -2 & 1 \end{bmatrix} + \begin{bmatrix} 6 & -2 \\ 7 & 1 \end{bmatrix} = \begin{bmatrix} 12 & 5 \\ 5 & 2 \end{bmatrix}$$
$$\therefore \frac{A + A'}{2} = \begin{bmatrix} 6 & \frac{5}{2} \\ \frac{5}{2} & 1 \end{bmatrix}$$
$$A - A' = \begin{bmatrix} 6 & 7 \\ -2 & 1 \end{bmatrix} - \begin{bmatrix} 6 & -2 \\ 7 & 1 \end{bmatrix} = \begin{bmatrix} 0 & 9 \\ -9 & 0 \end{bmatrix}$$

DETERMINANTS

Notes:- i) Only square matrices have determinants.

ii) For a matrix A, $|A|$ is read as determinant of A and not, as modulus of A.

Determinant of a matrix of order one

Let A = [a] be the matrix of order 1, then determinant of A is defined to be equal to a.

Determinant of a matrix of order two

Let $A = [a_{ij}] = \begin{bmatrix} a & b \\ c & d \end{bmatrix}$ be a matrix of order 2.

Then the determinant of A is defined as

$$\textbf{det (A)} = |A| = \textbf{ad} - \textbf{bc}$$

1. **Show that if one row or column of a determinant is a multiple of another row or column, the value of the determinant will become zero.**

Soln:– To show that – If one row (or column) of a determinant is a multiple of another row (or column), then the determinant becomes zero.

Proof:– Let $\Delta = \begin{bmatrix} a & ka \\ b & kb \end{bmatrix}$

$\Rightarrow kab - kab = 0$ hence proved.

‘ಸಂಭಲ್: ಸಮೀಕ್ಷೆಗೆ ತಡೆ ಇಲ್ಲ’

ಪ್ರಯಾಗರಾಜ್ (ಪಿಟಿಐ): ಶಾಹಿ ಜಾಮಾ ಮಸೀದಿಯಲ್ಲಿ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ (ಎಎಸ್ಐ) ಸಮೀಕ್ಷೆ ನಡೆಸಲು ಅನುಮತಿ ನೀಡಿದ ಸಂಭಲ್ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಮಸೀದಿ ಸಮಿತಿ ಸಲ್ಲಿಸಿದ್ದ ಅರ್ಜಿಯನ್ನು ಅಲಹಾಬಾದ್ ಹೈಕೋರ್ಟ್ ಸೋಮವಾರ ವಜಾ ಮಾಡಿದೆ.

‘ಸಮೀಕ್ಷೆ ಮೇಲ್ವಿಚಾರಣೆಗಾಗಿ ಕೋರ್ಟ್ ಕಮಿಷನರ್ ನೇಮಿಸಿದ್ದು ಮತ್ತು ಸಮೀಕ್ಷೆ ನಡೆಸಲು ಅನುಮತಿ ನೀಡಿದ್ದು ಸರಿಯಾಗಿಯೇ ಇದೆ’ ಎಂದೂ ನ್ಯಾಯಾಲಯ ಹೇಳಿದೆ. ನ್ಯಾಯಮೂರ್ತಿ ರೋಹಿತ್ ರಂಜನ್ ಅಗರ್ವಾಲ್ ಅವರು ಈ ಅರ್ಜಿಯ ಕುರಿತ ತೀರ್ಪನ್ನು ಕಾಯ್ದಿರಿಸಿದ್ದರು.

ದೇವಸ್ಥಾನವನ್ನು ಕೆಡವಿ ಮಸೀದಿಯನ್ನು ಕಟ್ಟಲಾಗಿದೆ ಎಂದು ಆರೋಪಿಸಿ ಹರಿ ಶಂಕರ್ ಜೈನ್ ಸೇರಿ ಇತರ ಏಳು ಮಂದಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು. ಬಳಿಕ ಸಂಭಲ್‌ನಲ್ಲಿ ಕೋಮು ಸಂಘರ್ಷ ನಡೆದು ದೊಡ್ಡ ವಿವಾದ ಸೃಷ್ಟಿಯಾಗಿತ್ತು.

ವಕ್ಫ್ ಕಾಯ್ದೆ: ಇಂದು ‘ಸುಪ್ರೀಂ’ ವಿಚಾರಣೆ

ನವದೆಹಲಿ (ಪಿಟಿಐ): ವಕ್ಫ್ ತಿದ್ದುಪಡಿ ಕಾಯ್ದೆ–2025ರ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಮಂಗಳವಾರ ವಿಚಾರಣೆ ನಡೆಸಲಿದೆ.

ಪ್ರಕರಣ ಸಂಬಂಧ ನ್ಯಾಯಾಲಯವು ಮಧ್ಯಂತರ ಆದೇಶ ಹೊರಡಿಸುವ ಸಾಧ್ಯತೆ ಇದೆ.

ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಮತ್ತು ನ್ಯಾಯಮೂರ್ತಿಗಳಾದ ಆಗಸ್ಟೀನ್ ಜಾರ್ಜ್ ಮಸೀಹ್ ಅವರನ್ನು ಒಳಗೊಂಡ ನ್ಯಾಯಪೀಠವು ಮೇ 20ಕ್ಕೆ ವಿಚಾರಣೆ ನಡೆಸುವುದಾಗಿ ಮೇ 15ರಂದು ತಿಳಿಸಿತ್ತು. ಇದೇ ವೇಳೆ ಕೋರ್ಟ್‌ಗಳು ಘೋಷಿಸಿರುವ ವಕ್ಫ್ ಆಸ್ತಿ, ಬಳಕೆ ಕಾರಣದಿಂದ ವಕ್ಫ್ ಆಸ್ತಿ ಮತ್ತು ಕ್ರಯಪತ್ರದ ಮೂಲಕ ಘೋಷಿಸಲಾದ ವಕ್ಫ್ ಆಸ್ತಿಗಳನ್ನು ಡಿನೋಟಿಫೈ ಮಾಡುವ ಅಧಿಕಾರಕ್ಕೆ ಸಂಬಂಧಿಸಿದಂತೆ ಮಧ್ಯಂತರ ನಿರ್ದೇಶನ ನೀಡಲಾಗುವುದು ಎಂದು ತಿಳಿಸಿತ್ತು.

ನ್ಯಾ. ಯಶವಂತ ವಿರುದ್ಧ ಎಫ್ಐಆರ್: ಅರ್ಜಿ ವಿಚಾರಣೆಗೆ ಒಪ್ಪಿಗೆ

ಯಶವಂತ ವರ್ಮಾ

ನವದೆಹಲಿ: ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ ವರ್ಮಾ ಅವರ ಮನೆಯಲ್ಲಿ ನೋಟಿನ ಕಂತೆಗಳು ಪತ್ತೆಯಾದ ಪ್ರಕರಣ ಸಂಬಂಧ ಎಫ್ಐಆರ್ ದಾಖಲಿಸಲು ಅನುಮತಿ ಕೋರಿ ಸಲ್ಲಿಸಿದ್ದ ಅರ್ಜಿಯ ತುರ್ತು ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಸೋಮವಾರ ಒಪ್ಪಿಗೆ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಮತ್ತು ನ್ಯಾಯಮೂರ್ತಿ ಆಗಸ್ಟೀನ್ ಜಾರ್ಜ್ ಮಸೀಹ್ ಅವರನ್ನು ಒಳಗೊಂಡ ನ್ಯಾಯಪೀಠವು, ಅರ್ಜಿಯನ್ನು ಬುಧವಾರ ವಿಚಾರಣೆ ನಡೆಸುವುದಾಗಿ ತಿಳಿಸಿದೆ.

ಇದಕ್ಕೂ ಮುನ್ನ ನ್ಯಾಯಪೀಠವು, ‘ಅರ್ಜಿಯಲ್ಲಿನ ದೋಷಗಳನ್ನು ಸರಿಪಡಿಸಿದ್ದರೆ ಮಂಗಳವಾರ ವಿಚಾರಣೆ ನಡೆಸಬಹುದೇ’ ಎಂದು ವಕೀಲ ಮತ್ತು ಅರ್ಜಿದಾರ ಮ್ಯಾಥ್ಯೂ ನೆಡುಂಪಾರಾ ಅವರನ್ನು ಕೇಳಿತು.

ಮಂಗಳವಾರ ತಾವು ಲಭ್ಯವಿರದ ಕಾರಣ ಬುಧವಾರ ವಿಚಾರಣೆ ನಡೆಸುವಂತೆ ಅವರು ಕೇಳಿಕೊಂಡರು. ಬಳಿಕ ಕೋರ್ಟ್ ಬುಧವಾರ ವಿಚಾರಣೆಗೆ ಪಟ್ಟಿ ಮಾಡಿತು.

ಬೆಂಕಿ ದುರಂತ: ಒಂದೇ ಕುಟುಂಬದ 17 ಮಂದಿ ಮೃತಪಟ್ಟ ಘಟನೆ

ಹೊಸ ಮನೆಗೆ ಹೋಗಬೇಕಿತ್ತು ಕುಟುಂಬ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಇಲ್ಲಿನ ಹಳೆಯ ನಗರ ಗುಲ್ಜಾರ್ ಹೌಸ್ ಪ್ರದೇಶದಲ್ಲಿ ಭಾನುವಾರ ನಡೆದ ಬೆಂಕಿ ದುರಂತದಲ್ಲಿ 17 ಮಂದಿ ಬಲಿಯಾಗಿರುವ ಆಭರಣ ವ್ಯಾಪಾರಿ ಪ್ರಹ್ಲಾದ್ ಮೋದಿಯವರ ಕುಟುಂಬವು ಹೊಸ ಮನೆಗಳಿಗೆ ವಾಸ್ತವ್ಯ ಬದಲಿಸುವ ಯೋಜನೆಯಲ್ಲಿತ್ತು.

ಉಪನಗರ ಅಟ್ಟಾಪುರದ ಉಪ್ಪಾರಪಲ್ಲಿಯಲ್ಲಿ ಹೊಸದಾಗಿ ನಿರ್ಮಿಸಿರುವ ಎರಡು ಮನೆಗಳ ಗೃಹಪ್ರವೇಶ ಸಮಾರಂಭವನ್ನು ಆರು ತಿಂಗಳ ಹಿಂದಷ್ಟೇ ಈ ಕುಟುಂಬ ಏರ್ಪಡಿಸಿತ್ತು. ಹೊಸ ಮನೆಗಳ ಒಳಾಂಗಣ ವಿನ್ಯಾಸದ ಕೆಲಸ ಇನ್ನೂ ನಡೆಯುತ್ತಿದ್ದು, ಎರಡು ತಿಂಗಳಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ ಇತ್ತು. ಪ್ರಹ್ಲಾದ್ ಮೋದಿಯವರ ನಾಲ್ವರು ಮಕ್ಕಳ ಪೈಕಿ ಅವರ ಹಿರಿಯ ಮಗ ಈಗಾಗಲೇ ಅಟ್ಟಾಪುರದ ಹೊಸ ಮನೆಗೆ ಸ್ಥಳಾಂತರಗೊಂಡಿದ್ದರೆ, ಇಡೀ ಕುಟುಂಬ ಸದ್ಯದಲ್ಲೇ ಸ್ಥಳಾಂತರವಾಗುವ ತಯಾರಿಯಲ್ಲಿತ್ತು ಎಂದು ಪ್ರಹ್ಲಾದ್ ಅವರ ನೆರೆಹೊರೆಯವರು ನೆನಪಿಸಿಕೊಂಡರು.

ಪ್ರಹ್ಲಾದ್ ಅವರ ಇಬ್ಬರು ವಿವಾಹಿತ ಪುತ್ರಿಯರು ರಾಜೀವ್ ನಗರ ಮತ್ತು ಸನತ್ನಗರದಲ್ಲಿ ವಾಸಿಸುತ್ತಿದ್ದರು. ಪ್ರಹ್ಲಾದ್ ಅವರ ಕಿರಿಯ ಮಗ ಪಂಕಜ್ ಮೋದಿ ಅವರು ತಮ್ಮ ಪತ್ನಿ ಮತ್ತು ಮೂವರು ಮಕ್ಕಳೊಂದಿಗೆ ತಂದೆಯೊಂದಿಗೆ ನೆಲಸಿದ್ದರು. ಪ್ರಹ್ಲಾದ್ ಅವರು ಅಟ್ಟಾಪುರದ ಸಂಬಂಧಿಕರರೊಬ್ಬರ ಮನೆಯಲ್ಲಿನ ಸಂಭ್ರಮಾಚರಣೆಗೆ ತಮ್ಮ ಪುತ್ರಿಯರು ಮತ್ತು ಮೊಮ್ಮಕ್ಕಳನ್ನು ಆಹ್ವಾನಿಸಿದ್ದರು. ಬೇಸಿಗೆ ರಜೆ ಇರುವುದರಿಂದ ಅವರ ಇಬ್ಬರು ಪುತ್ರಿಯರು ತಮ್ಮ ಮಕ್ಕಳೊಂದಿಗೆ ಗುಲ್ಜಾರ್ ಹೌಸ್ ಪ್ರದೇಶದ ನಿವಾಸಕ್ಕೆ ಬಂದಿದ್ದರು.

ಈ ಕುಟುಂಬವು ಸಮಾರಂಭದಲ್ಲಿ ಭಾಗವಹಿಸಿ ಶನಿವಾರ ರಾತ್ರಿ ಅಟ್ಟಾಪುರದಿಂದ ಮನೆಗೆ ವಾಪಸಾಗಿತ್ತು. ಭಾನುವಾರ ಸಂಭವಿಸಿದ ಈ ದುರಂತದಲ್ಲಿ ಪ್ರಹ್ಲಾದ್ ಮೋದಿ ಮತ್ತು ಅವರ ಪತ್ನಿ, ಅವರ ಮಗ, ಇಬ್ಬರು ಪುತ್ರಿಯರು ಮತ್ತು ಮೊಮ್ಮಕ್ಕಳು ಮೃತಪಟ್ಟಿದ್ದಾರೆ.

ಜನ ಸುರಾಜ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿ ಉದಯ್ ಸಿಂಗ್ ಆಯ್ಕೆ

ಉದಯ್ ಸಿಂಗ್

ಪಟ್ನಾ (ಪಿಟಿಐ): ಬಿಜೆಪಿಯ ಮಾಜಿ ಸಂಸದ ಉದಯ್ ಸಿಂಗ್ ಅವರನ್ನು ಜನ ಸುರಾಜ್ ಪಕ್ಷದ ಮೊದಲ ರಾಷ್ಟ್ರೀಯ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಸೋಮವಾರ ಆಯ್ಕೆ ಮಾಡಲಾಗಿದೆ.

ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಪಕ್ಷದ ಸಂಸ್ಥಾಪಕ ಪ್ರಶಾಂತ್ ಕಿಶೋರ್, ‘ಉದಯ್ ಸಿಂಗ್ ಹಾಗೂ ಆರ್‌ಸಿಪಿ ಸಿಂಗ್ ಅವರು ಭಾನುವಾರ ಪಕ್ಷಕ್ಕೆ ಸೇರ್ಪಡೆಯಾಗಿದ್ದು, ಅವರಿಗೆ ಜವಾಬ್ದಾರಿ ವಹಿಸಲಾಗಿದೆ. ಮುಂದಿನ ದಿನಗಳಲ್ಲಿ ಅವರು ಪಕ್ಷ ಸಂಘಟನೆಗೆ ಆದ್ಯತೆ ನೀಡಲಿದ್ದು, ಮಂಗಳವಾರದಿಂದ ನಾನು ಪಾದಯಾತ್ರೆ ಮುಂದುವರಿಸಲಿದ್ದೇನೆ’ ಎಂದು ತಿಳಿಸಿದರು.

ಕಳೆದ ವರ್ಷ ಅಕ್ಟೋಬರ್ 2ರಂದು ಜನ ಸುರಾಜ್ ಪಕ್ಷವು ಆರಂಭಗೊಂಡಿತ್ತು. ಆಗ ಮಾಜಿ ಐಪಿಎಸ್ ಅಧಿಕಾರಿ ಮನೋಜ್ ಭಾರ್ತಿ ಅವರನ್ನು ಪಕ್ಷದ ಕಾರ್ಯಾಧ್ಯಕ್ಷರನ್ನಾಗಿ ನೇಮಿಸಲಾಗಿತ್ತು. ಇದುವರೆಗೂ ಪೂರ್ಣಪ್ರಮಾಣದ ಅಧ್ಯಕ್ಷರಿಲ್ಲದೇ, ಕಾರ್ಯನಿರ್ವಹಿಸುತ್ತಿತ್ತು. ಪಕ್ಷದಲ್ಲಿ ತಾವು ಯಾವುದೇ ಹುದ್ದೆ ವಹಿಸಿಕೊಳ್ಳುವುದಿಲ್ಲ ಎಂದು ಪ್ರಶಾಂತ್ ಕಿಶೋರ್ ಈ ಹಿಂದೆಯೇ ಸ್ಪಷ್ಟಪಡಿಸಿದ್ದರು.

ಕರ್ನಾಟಕ ಸರ್ಕಾರ

ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ

ಕಾಳಿದಾಸ ಮಾರ್ಗ, ಗಾಂಧಿನಗರ, ಬೆಂಗಳೂರು – 560 009.

ಸಂಖ್ಯೆ: ಕಪಂರಾಆ/ಅಭಿವೃದ್ಧಿ/348/2024, ದಿನಾಂಕ: 19.05.2025
E-Comp No.1388156

ನೇಮಕಾತಿ ಪ್ರಕಟಣೆ

ಸಾಮಾಜಿಕ ಕಳಕಳಿಯುಳ್ಳ ಸ್ಥಳೀಯ ಆಡಳಿತಕ್ಕಾಗಿ ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದಲ್ಲಿ ಸ್ಥಾಪಿಸಲಾದ "ಸಾಮಾಜಿಕವಾಗಿ ಸ್ಪಂದಿಸುವ ಸ್ಥಳೀಯ ಆಡಳಿತ (Socially Responsive Local Governanace-SRLG) ಕೋಶ" ದಲ್ಲಿ ಕಾರ್ಯನಿರ್ವಹಿಸಲು ರಾಜ್ಯ ಮಟ್ಟದಲ್ಲಿ ಅರ್ಹ ಮತ್ತು ಅನುಭವಿ ವಿಷಯ ಪರಿಣಿತರು ಮತ್ತು ಯುವ ವೃತ್ತಿಪರರಿಂದ ಈ ಕೆಳಕಂಡ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1. ವಿಷಯ ಪರಿಣಿತರು (1 ಹುದ್ದೆ)
2. ಯುವ ವೃತ್ತಿಪರರು (Young Professionals) (2 ಹುದ್ದೆಗಳು)

ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದಲ್ಲಿ "ಸಾಮಾಜಿಕವಾಗಿ ಸ್ಪಂದಿಸುವ ಸ್ಥಳೀಯ ಆಡಳಿತ ಕೋಶ"ವನ್ನು ಸ್ಥಾಪಿಸಲಾಗಿದೆ. ಈ ಹುದ್ದೆಗಳಿಗೆ ಕನ್ನಡ ಜ್ಞಾನವನ್ನು ಕಡ್ಡಾಯವಾಗಿ ಹೊಂದಿರಬೇಕು ಮತ್ತು ವಿವಿಧ ತಾಲ್ಲೂಕುಗಳು ಮತ್ತು ಗ್ರಾಮ ಪಂಚಾಯತ್‌ಗಳಿಗೆ ವ್ಯಾಪಕವಾಗಿ ಪ್ರವಾಸ ಮಾಡುವುದು ಅಗತ್ಯವಿರುತ್ತದೆ. ಆಸಕ್ತ ಅಭ್ಯರ್ಥಿಗಳು https://prcrdpr.karnataka.gov.in ಲಿಂಕ್ ನಲ್ಲಿ ಒದಗಿಸಲಾದ ಹುದ್ದೆಗಳ ವಿವರಣೆಯನ್ನು (Job Description) ಗಮನಿಸುವುದು. 29ನೇ ಮೇ 2025 ರಂದು ಸಂಜೆ 5.30 ರೊಳಗಾಗಿ ಅರ್ಜಿಗಳನ್ನು ಎಲ್ಲಾ ಲಗತ್ತುಗಳೊಂದಿಗೆ ಇ–ಮೇಲ್ ವಿಳಾಸ prc.recruitment@ka.gov.in ಕ್ಕೆ ಸಲ್ಲಿಸುವುದು.

ಸಹಿ/–
ಆಯುಕ್ತರು
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ವಾ.ಸಾ.ಸಂ.ಇ/ವಾಪ್ರ/743/ಆಕಾರ್/2025-26

Government of India

MINISTRY OF FINANCE, DEPARTMENT OF REVENUE
OFFICE OF THE COMMISSIONER OF CENTRAL TAX

5th Floor, C.R. Building Annexe,
Bengaluru South Commissionerate
PO 5400, C.R. Building (Annexe), 5th Floor, Bengaluru-560001.
Ph: 080-22869007, Email: Legalblr.south@gov.in

PROCLAMATION u/s 84 of BNSS, REQUIRING THE APPEARANCE OF PERSON BEFORE THE HON'BLE SPECIAL COURT FOR ECONOMICS OFFENCES, BANGALORE

In the case C.C. NO 32/2019 - The Assistant Commissioner of Central Excise (Legal) v/s Sri. H.G. Ramakrishna, the Hon'ble Special Court For Economic Offences, Bangalore has issued Proclamation u/s 82 of Criminal Procedure Code to the following accused.

i. A-3, Sri. H.G.Ramakrishna, Propreitor of M/s Filtraonics Electronics, No.156, Kempanna Building, Hulimavu, Bannerghatta Road, Bengalore-560076.

The above-mentioned person is directed to appear before the Hon'ble Special Court For Economic Offences, Bangalore on or before **21.05.2025.**

Sd/- Commissioner of Central Tax
Bangalore South Commissionerate

ಚಿಕ್ಕಮಗಳೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ.
ರತ್ನಗಿರಿ ರಸ್ತೆ, ಚಿಕ್ಕಮಗಳೂರು– 577 101

ಕ್ರಮ ಸಂಖ್ಯೆ: ಡಿಸಿಸಿಬಿ/ಮುಕಾನಿ/ನೇಮಕಾತಿ/505/2025–26 ದಿನಾಂಕ:19–05–2025

ಪ್ರಕಟಣೆ

ಚಿಕ್ಕಮಗಳೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಚಿಕ್ಕಮಗಳೂರು ಇದರಲ್ಲಿ ಖಾಲಿ ಇರುವ ವಿವಿಧ 85 ಹುದ್ದೆಗಳ ನೇರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಈಗಾಗಲೇ ಆನ್–ಲೈನ್ (ON-LINE) ಮುಖಾಂತರ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:27–11–2024 ಆಗಿರುತ್ತದೆ. ಅರ್ಹ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಯನ್ನು ದಿನಾಂಕ: 24–05–2025 ಮತ್ತು 25–05–2025 ರಂದು ನಡೆಸಲಿದ್ದು, ಬ್ಯಾಂಕಿನ ಅಧಿಕೃತ ವೆಬ್ ಸೈಟ್ www.chikkamagalurudccbank.com ನಲ್ಲಿ ಪ್ರವೇಶ ಪತ್ರದ (Hall Ticket) ಲಿಂಕ್‌ನ್ನು ಪ್ರಕಟಿಸಲಾಗಿರುತ್ತದೆ. ಅಭ್ಯರ್ಥಿಗಳು https://virtualofficeerp.com/chikdccb2024/hallticket login ಈ ಲಿಂಕ್ ಮೂಲಕ ಪ್ರವೇಶ ಪತ್ರ (Hall Ticket) ನ್ನು ಪಡೆಯಬಹುದಾಗಿರುತ್ತದೆ.

ಸಹಿ/–
ಸದಸ್ಯ ಕಾರ್ಯದರ್ಶಿ
ನೇಮಕಾತಿ ಸಮಿತಿ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಚಿಕ್ಕಮಗಳೂರು ಡಿ.ಸಿ.ಸಿ ಬ್ಯಾಂಕ್ ನಿ., ಚಿಕ್ಕಮಗಳೂರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಆಯುಕ್ತರ ಕಛೇರಿ, ನಂ. 16–ಡಿ, 3ನೇ ಮಹಡಿ, ಡಿ. ದೇವರಾಜ ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 052.
ಇ–ಮೇಲ್: bcwd.hostels@karnataka.gov.in

ಸಂಖ್ಯೆ: BCWD-12023/1/2025-BCWD_HOSTEL-BCWD ದಿನಾಂಕ:19.05.2025

ಪ್ರಕಟಣೆ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ (ಪಿ.ಯು.ಸಿ, ಐ.ಟಿ.ಐ ಮತ್ತು ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಮಾತ್ರ) ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಪಿ.ಯು.ಸಿ, ಐ.ಟಿ.ಐ ಮತ್ತು ಡಿಪ್ಲೋಮಾ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ 2025–26ನೇ ಸಾಲಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ಮಿತಿ

ಪ್ರವರ್ಗ–1, ಎಸ್.ಸಿ & ಎಸ್.ಟಿ	ರೂ.2.50 ಲಕ್ಷ
ಪ್ರವರ್ಗ–2ಎ, 2ಬಿ, 3ಎ, 3ಬಿ	ರೂ.1.00 ಲಕ್ಷ

- ವಿದ್ಯಾರ್ಥಿಗಳು https://shp.karnataka.gov.in/bcwd ಅನ್ನು ಸಂಪರ್ಕಿಸಿ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಬೇಕು.
- ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 20.06.2025.
- ತಾಲ್ಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್‌ಸೈಟ್ https://bcwd.karnataka.gov.in ನ್ನು ನೋಡಬಹುದು.
- ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwdhelpline@gmail.com ಇ–ಮೇಲ್ ಮುಖಾಂತರ ಅಥವಾ ಜಿಲ್ಲಾ / ತಾಲ್ಲೂಕು ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರನ್ನು ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸುವುದು.

ಸಂಪರ್ಕಿಸಬಹುದಾದ ಸಹಾಯವಾಣಿ ಸಂಖ್ಯೆಗಳು:
8050770004 ಮತ್ತು 8050770005

ಸಹಿ/– ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು

ವಾಸಾಸಂಇ/ವಾಪ್ರ/ಜಿಎ/744/2025–26

TUNGABHADRA BOARD : TB DAM

e-Procurement Short Term & Long Term Tender Notice
IFB No.01/2025-26 Dt.17.04.2025 (2nd Call)
& 31/2025-26 Dt.19.05.2025

Tender for 02 Nos. of works under Works and PPP Model are invited in respect of HW & HLC Division, TB Dam through `e-Procurement'.

Bid Document downloading Start Date & Time:	20.05.2025 at 11:00 AM
Bid Document downloading End Date & Time : (01/2025-26 Dt.17.04.2025 (2nd Call))	28.05.2025 at 3:00 PM
Bid Submission End Date & Time : (01/2025-26 Dt.17.04.2025 (2nd Call))	28.05.2025 at 5:30 PM
Date of opening of PQ Stage: (01/2025-26 Dt.17.04.2025 (2nd Call))	28.05.2025 at 6:00 PM
Date of opening of Commercial Stage : (01/2025-26 Dt.17.04.2025 (2nd Call))	02.06.2025 at 11:00 AM
Date of Preliminary Meeting : (31/2025-26 Dt.19.05.2025)	28.05.2025 at 11:00 AM
Date of Pre Bid Meeting : (31/2025-26 Dt.19.05.2025)	05.06.2025 at 11:00 AM
Bid Document downloading End Date & Time : (31/2025-26 Dt.19.05.2025)	12.06.2025 at 3:00 PM
Bid Submission End Date & Time : (31/2025-26 Dt.19.05.2025)	12.06.2025 at 5:30 PM
Date of opening of PQ Stage: (31/2025-26 Dt.19.05.2025)	12.06.2025 at 6:00 PM
Date of opening of Commercial Stage : (31/2025-26 Dt.19.05.2025)	17.06.2025 at 11:00 AM

Further details can be seen @ https://tender.apeprocurement.gov.in
Ph: 08394 - 259114
Fax: 08394 - 259167

Sd/- Superintending Engineer
I.B, TB Board, TB Dam

ಪೊಲೀಸ್ ಇಲಾಖೆ,
ಪೊಲೀಸ್ ಆಯುಕ್ತರವರ ಕಛೇರಿ, ಬೆಂಗಳೂರು ನಗರ

ಸಂಖ್ಯೆ: COPBCP/EST/EST3(MISC)/34/2023 ದಿನಾಂಕ:15.05.2025

ಪೊಲೀಸ್ ಇಲಾಖೆಯ ತಾಂತ್ರಿಕ ಹುದ್ದೆಗಳ ನೇಮಕಾತಿ ಪ್ರಕಟಣೆ

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಬೆಂಗಳೂರು ನಗರ ಪೊಲೀಸ್ ಆಯುಕ್ತರ ಘಟಕದಲ್ಲಿನ 16 ತಾಂತ್ರಿಕ ಹುದ್ದೆಗಳನ್ನು ಒಪ್ಪಂದದ ಆಧಾರದ (Contract Basis) ಮೇಲೆ ಭರ್ತಿ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

ಹುದ್ದೆ	ಹುದ್ದೆಗಳ ಸಂಖ್ಯೆ
ಸೈಬರ್ ಸೆಕ್ಯೂರಿಟಿ ಅನಾಲಿಸ್ಟ್	8
ಡಿಜಿಟಲ್ ಫಾರೆನ್ಸಿಕ್ ಅನಾಲಿಸ್ಟ್	8

ಅರ್ಜಿ ಸಲ್ಲಿಸಲು ಪ್ರಾರಂಭ **ದಿನಾಂಕ: 20.05.2025 ಬೆಳಿಗ್ಗೆ 10.00 ಗಂಟೆಯಿಂದ.** ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 31.05.2025 ಸಂಜೆ 6.00 ಗಂಟೆಯವರೆಗೆ.** ಮೇಲ್ಕಂಡ ಹುದ್ದೆಗಳ ನೇಮಕಾತಿ ಅಧಿಸೂಚನೆಯನ್ನು ಪೊಲೀಸ್ ಇಲಾಖೆಯ ಅಂತರ್ಜಾಲ: https://ksp.karnataka.gov.in ರಲ್ಲಿ ಮತ್ತು ಪೊಲೀಸ್ ಆಯುಕ್ತರ ಅಂತರ್ಜಾಲ www.bcp.gov.in ರಲ್ಲಿ ಪ್ರಕಟಿಸಲಾಗಿರುತ್ತದೆ. ಸದರಿ ವೆಬ್‌ಸೈಟ್‌ಗಳ ಮುಖಾಂತರ ವಿವರಗಳನ್ನು ಪಡೆದು ಅರ್ಜಿಗಳನ್ನು ಈ ಕಛೇರಿಯ ವಿಳಾಸ: ನಂ. 01, ಇನ್‌ಫೆಂಟ್ರಿ ರಸ್ತೆ, ಪೊಲೀಸ್ ಆಯುಕ್ತರ ಕಛೇರಿ, ಬೆಂಗಳೂರು–560001 ಕ್ಕೆ ಅಥವಾ ಇಲಾಖೆಯ ಇ–ಮೇಲ್ dcpadminbcp@ksp.gov.inಗೆ ಸಲ್ಲಿಸುವುದು.

ಸಹಿ/– ಅಧ್ಯಕ್ಷರು, ನೇಮಕಾತಿ ಸಮಿತಿ ಮತ್ತು
ಅಪರ ಪೊಲೀಸ್ ಆಯುಕ್ತರು, (ಅಪರಾಧಗಳು), ಬೆಂಗಳೂರು ನಗರ.

ವಾಸಾಸಂಇ/ಉನಿ-ಸಿ.ಪಿ/718/ಕೆಎಸ್ಎಂಸಿಎ/2025-26

ಕರ್ನಾಟಕ ಸರ್ಕಾರ

ರಾಷ್ಟ್ರೀಯ ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮ
ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿಗಳ ಕಛೇರಿ,
ಜಿಲ್ಲಾ ಆಸ್ಪತ್ರೆ, ಆವರಣ, ಚಿತ್ರದುರ್ಗ–577501

ದೂರವಾಣಿ: 08194-235412, Email : dtokacdg@rntcp.org

ಸಂಖ್ಯೆ: ಡಿಟಿಸಿ/ಚಿತ್ರ/16/2025–26 ದಿನಾಂಕ: 19.05.2025

ನೇಮಕಾತಿ ಪ್ರಕಟಣೆ

ರಾಷ್ಟ್ರೀಯ ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮದಡಿಯಲ್ಲಿ ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಅಹ್ವಾನಿಸಲಾಗಿದೆ.
ಹುದ್ದೆ:– Medical officer (Post-01) ಮೀಸಲಾತಿ:– General
ವಿದ್ಯಾರ್ಹತೆ:– 1) MBBS or equivalent degree from Institution recognized by Medical council of India; Must have completed compulsory rotator internship. 2) One year compulsory rural service
ಆದ್ಯತಾ ವಿದ್ಯಾರ್ಹತೆ:– 1) Diploma / MD Public Health /Tuberculosis & Chest diseases 2) One year experience in NTEP 3) Basic knowledge of computers
ವಯೋಮಿತಿ: ಮೇಲಿನ ಹುದ್ದೆಗೆ ಅರ್ಜಿ ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು 1) ಕನಿಷ್ಠ 23 ವರ್ಷ ವಯಸ್ಸನ್ನು ಪೂರೈಸಿರಬೇಕು 2) ಗರಿಷ್ಠ ವಯೋಮಿತಿ ಸಾಮಾನ್ಯವರ್ಗ–35 ವರ್ಷ, ಇತರೆ ಹಿಂದುಳಿದವರ್ಗ–38ವರ್ಷ, ಪರಿಶಿಷ್ಟಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ–1 –40 ವರ್ಷ 3) ವೈದ್ಯಾಧಿಕಾರಿಗಳ ಹುದ್ದೆಗೆ 45 ವರ್ಷ ವಯಸ್ಸಿನೊಳಗಿನ ಅಭ್ಯಥಿಗಳಿಗೆ ಆದ್ಯತೆ ನೀಡಲಾಗುವುದು (ಗರಿಷ್ಠ ವಯೋಮಿತಿ 70 ವರ್ಷ)
ಆಯ್ಕೆ ವಿಧಾನ: ಮೇಲ್ಕಂಡ ಹುದ್ದೆಗೆ ವಿದ್ಯಾರ್ಹತೆ (ಶೇಕಡಾವಾರು ಅಂಕಗಳು) ಹಾಗೂ ಆದ್ಯತೆಯ ವಿಷಯವನ್ನು ಪರಿಗಣಿಸಿ ಆಯ್ಕೆ ಮಾಡಲಾಗುವುದು. ಆಯ್ಕೆಯಾದ ಅಭ್ಯರ್ಥಿಗಳು ಕಾಲಕಾಲಕ್ಕೆ ಬದಲಾಗುವ ಕಾರ್ಯಕ್ರಮದ ಮಾರ್ಗಸೂಚಿ ಹಾಗೂ ಜಿಲ್ಲಾ ಆರೋಗ್ಯ & ಕು ಕ ಸಂಘ ತೆಗೆದುಕೊಳ್ಳುವ ತೀರ್ಮಾನಗಳಿಗೆ ಬದ್ಧರಾಗಿರಬೇಕು. ಅಭ್ಯರ್ಥಿಗಳು ಸಂಪೂರ್ಣ ಮಾಹಿತಿಗಳನ್ನೊಳಗೊಂಡ ಅರ್ಜಿಯನ್ನು ಇತ್ತೀಚಿನ ಭಾವಚಿತ್ರದೊಂದಿಗೆ ವಿದ್ಯಾರ್ಹತೆ, ತರಬೇತಿ, ಅನುಭವ ಪ್ರಮಾಣಪತ್ರ ಹಾಗು ಸಕ್ಷಮ ಪ್ರಾಧಿಕಾರದಿಂದ ಇತ್ತೀಚೆಗೆ ಪಡೆದ ಜಾತಿ/ಆದಾಯ ಪ್ರಮಾಣ ಪತ್ರಗಳ ಸ್ವಯಂ ದೃಢೀಕೃತ ಜೆರಾಕ್ಸ್ ಪ್ರತಿಯೊಂದಿಗೆ ದಿನಾಂಕ: 31–05–2025 ಸಂಜೆ 4–30 ಗಂಟೆಯೊಳಗೆ ಜಿಲ್ಲಾ ಕ್ಷಯರೋಗ ನಿಯಂತ್ರಣ ಕೇಂದ್ರ, ಜಿಲ್ಲಾ ಆಸ್ಪತ್ರೆ ಆವರಣ, ಚಿತ್ರದುರ್ಗ ಇವರಿಗೆ ಸಲ್ಲಿಸುವುದು. ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

DIPR/CTA/KSMCA/89/2025-26

ಸಹಿ/–ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿಗಳು,
ಚಿತ್ರದುರ್ಗ.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ ಘಟಕಾನಿ ವಿಭಾಗ ನಂ.5 ಕೌಜಲಗಿ

ಕ್ರ.ಸಂ:ಕನೀನಿನಿ/ಘಟಕಾನಿ/ವಿ–5/ಡಿಬಿ/ದರ ವಿಚಾರಣೆ/2025–26/193 ದಿನಾಂಕ:16/05/2024

: ದರ ವಿಚಾರಣೆ ಅಧಿಸೂಚನೆ :
(ಅಂದಾಜು ಪತ್ರಿಕೆ ತಯಾರಿಸಲು)

ಕೆಳಗೆ ಸಹಿ ಮಾಡಿದ ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಕನೀನಿನಿ, ಘಟಕಾನಿ ವಿಭಾಗ ನಂ.5,ಕೌಜಲಗಿ–591227 ಇವರು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಾಲ್ಕನೇ ಮಹಡಿ, ಕಾಫೀ ಬೋರ್ಡ ಕಟ್ಟಡ, ಡಾ.ಬಿ.ಆರ್. ಅಂಬೇಡ್ಕರ ವೀಧಿ ಬೆಂಗಳೂರು–560001, ಇವರ ಪರವಾಗಿ ಈ ಕೆಳಗೆ ನಮೂದಿಸಿರುವ ಕಾಮಗಾರಿಗಳ ಅಂದಾಜು ಪತ್ರಿಕೆಯನ್ನು ತಯಾರಿಸುವ ಸಲುವಾಗಿ ಈ ಕೆಳಕಂಡ ವಿವರಗಳಂತೆ ಎಲ್ಲಾ ತೆರಿಗೆಗಳು ಹೊರತು ಪಡಿಸಿ (Excluding all taxes & GST) ದರಗಳನ್ನು ನಮೂದಿಸಿದ ಮೊಹರಬಂದ ಮಾಡಿದ ಲಕೋಟೆಯಲ್ಲಿ ಸ್ಪರ್ಧಾತ್ಮಕ ದರಗಳನ್ನು ಆಹ್ವಾನಿಸಿ ಈ ಕೆಳಗಿನ Test Item ಗಳಿಗೆ ದರ ವಿಚಾರಣೆ ಅಧಿಸೂಚನೆಯನ್ನು ಹೊರಡಿಸಲಾಗಿದೆ.

NAME OF WORK: “Conducting 3rd Party inspection and Quality Monitoring services for Sattigeri LIS.”

SL No	Description	Unit	Rates in Rs
1	2	3	4
I	**Raising main**		
1	Physical inspection including Diameter, Thickness,Ovality & Fabrication.	No	
2	DYE Penetration test	No	
3	Hydro Pressure test (water and required equipment such as pressure gauge, generator, and water filling motor to be provided with water filling conducted by the concerned construction agency).	No	
4	Radiography Test	No	
5	Tests for internal Epoxy coating	No	
6	Tests on outer surface Wrapping material	No	
a	Full off addition test	No	
b	Gauge test	No	
c	Water Absorption test	No	
d	Cold Flexibility test	No	
II	**Civil Structures**		
1	Non destructive test for strength determination.	No	
2	Cover meter test	No	
3	Slump test	Per sample	
III	**Steel Structures**		
1	Physical inspection including Diameter, Thickness & Fabrication.	No	
2	Radiography Test	No	

ಆಸಕ್ತಿಯುಳ್ಳ ಮತ್ತು ಅರ್ಹತೆ ಹೊಂದಿದ ನೊಂದಾಯಿತ ಏಜೆನ್ಸಿ/ಅನುಭವವುಳ್ಳ ಗುತ್ತಿಗೆದಾರರು, ಪ್ರತ್ಯೇಕವಾಗಿ ಕಾಮಗಾರಿವಾರು ಎಲ್ಲಾ ತೆರಿಗೆಗಳು ಹೊರತುಪಡಿಸಿ (Excluding all taxes & GST) ದರಗಳನ್ನು ನಮೂದಿಸಿದ ಮೊಹರಬಂದ ಮಾಡಿದ ಲಕೋಟೆಯನ್ನು ದಿನಾಂಕ:26–05–2025ರ ಸಂಜೆ4.00 ಗಂಟೆಯೊಳಗಾಗಿ ಅಂಚೆ ಮೂಲಕವಾಗಲಿ ಅಥವಾ ಖುದ್ದಾಗಿಯಾಗಲಿ ನಿಗದಿತ ದಿನಾಂಕ ಮತ್ತು ಸಮಯದೊಳಗೆ ಈ ಕಛೇರಿಗೆ ತಲುಪುವಂತೆ ಕಳುಹಿಸಿಕೊಡಲು ಈ ಮೂಲಕ ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕೆಳಗೆ ಸಹಿ ಮಾಡಿದವರನ್ನು/ತಾಂತ್ರಿಕ ಸಹಾಯಕರನ್ನು ಕಛೇರಿ ವೇಳೆಯಲ್ಲಿ ಖುದ್ದಾಗಿಯಾಗಲಿ ಅಥವಾ ದೂರವಾಣಿ ಸಂ.08334–273211 ಮುಖಾಂತರವಾಗಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು
ಕನೀನಿನಿ ಘಟಕಾನಿ ವಿಭಾಗ ನಂ.5 ಕೌಜಲಗಿ.

DIPR/BGM/RO-NO-268/KSMCA/2025-26

ಭಾರತ್ ಎಲೆಕ್ಟ್ರಾನಿಕ್ಸ್
भारत इलेक्ट्रॉनिक्स
BHARAT ELECTRONICS

QUALITY, TECHNOLOGY, INNOVATION

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್
(ರಕ್ಷಣಾ ಸಚಿವಾಲಯದಡಿಯ ಭಾರತ ಸರ್ಕಾರದ ಒಂದು ಉದ್ಯಮ)
CIN: L32309KA1954GOI000787

ನೋಂದಾಯಿತ ಮತ್ತು ಪ್ರಧಾನ ಕಛೇರಿ: ಹೊರವರ್ತುಲ ರಸ್ತೆ, ನಾಗವಾರ, ಬೆಂಗಳೂರು – 560 045.
ಇ-ಮೇಲ್: secretary@bel.co.in ವೆಬ್‌ಸೈಟ್: www.bel-india.in ಫೋನ್: 080-25039300. ಫ್ಯಾಕ್ಸ್: 080-25039266.

31ನೇ ಮಾರ್ಚ್ 2025ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಹಾಗೂ ವರ್ಷಾಂತ್ಯಕ್ಕೆ ಸ್ಟ್ಯಾಂಡ್‌ಅಲೋನ್ ಹಾಗೂ ಕ್ರೋಢೀಕರಿಸಿದ ಲೆಕ್ಕ ಪರಿಶೋಧಿತ ಹಣಕಾಸು ಫಲಿತಾಂಶಗಳ ಸಾರಾಂಶ

(₹ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ವಿವರಗಳು	ಸ್ಟ್ಯಾಂಡ್‌ಅಲೋನ್					ಕ್ರೋಢೀಕೃತ				
		ತ್ರೈಮಾಸಿಕ ಅಂತ್ಯಗೊಂಡ			ವರ್ಷಾಂತ್ಯಕ್ಕೆ		ತ್ರೈಮಾಸಿಕ ಅಂತ್ಯಗೊಂಡ			ವರ್ಷಾಂತ್ಯಕ್ಕೆ	
		31.03.2025 (ಲೆಕ್ಕ ಪರಿಶೋಧಿತ)	31.12.2024 (ಲೆಕ್ಕ ಪರಿಶೋಧಿತ ವಲ್ಲದ)	31.03.2024 (ಲೆಕ್ಕ ಪರಿಶೋಧಿತ)	31.03.2025 (ಲೆಕ್ಕ ಪರಿಶೋಧಿತ)	31.03.2024	31.03.2025 (ಲೆಕ್ಕ ಪರಿಶೋಧಿತ)	31.12.2024 (ಲೆಕ್ಕ ಪರಿಶೋಧಿತ ವಲ್ಲದ)	31.03.2024 (ಲೆಕ್ಕ ಪರಿಶೋಧಿತ)	31.03.2025 (ಲೆಕ್ಕ ಪರಿಶೋಧಿತ)	31.03.2024
1.	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	9,11,971	5,75,612	8,52,854	23,65,801	20,16,939	9,14,959	5,77,069	8,56,408	23,76,875	20,26,824
2.	ತೆರಿಗೆ ಮತ್ತು ಅಸಾಧಾರಣ ವಸ್ತುಗಳ ಮುಂಚಿನ ಅವಧಿಯ ನಿವ್ವಳ ಲಾಭ	2,84,762	1,75,415	2,38,561	7,08,999	5,33,456	2,86,726	1,74,362	2,39,007	7,09,900	5,26,621
3.	ತೆರಿಗೆ ಮುಂಚಿನ ಮತ್ತು ಅಸಾಧಾರಣ ವಸ್ತುಗಳ ನಂತರದ ಅವಧಿಯ ನಿವ್ವಳ ಲಾಭ	2,84,762	1,75,415	2,38,561	7,08,999	5,33,456	2,86,726	1,74,362	2,39,007	7,09,900	5,26,621
4.	ತೆರಿಗೆ ಮತ್ತು ಅಸಾಧಾರಣ ವಸ್ತುಗಳ ನಂತರದ ಅವಧಿಯ ನಿವ್ವಳ ಲಾಭ	2,10,478	1,31,606	1,78,352	5,28,825	4,02,000	2,12,702	1,31,160	1,79,667	5,32,268	3,98,524
5.	ಒಟ್ಟು ಸಮಗ್ರ ಅವಧಿಯ ಆದಾಯ [ಅವಧಿಯ ಲಾಭ ಸಹಿತ (ತೆರಿಗೆ ನಂತರ) ಮತ್ತು ಇತರ ಸಮಗ್ರ ಆದಾಯ (ತೆರಿಗೆ ನಂತರ)]	2,03,226	1,36,166	1,69,698	5,29,653	3,96,236	2,05,349	1,35,714	1,71,005	5,32,990	3,92,752
6.	ಪಾವತಿಸಿದ ಇಕ್ವಿಟಿ ಷೇರು ಬಂಡವಾಳ	73,098	73,098	73,098	73,098	73,098	73,098	73,098	73,098	73,098	73,098
7.	ಪ್ರತಿ ಷೇರಿನ ಗಳಿಕೆ (₹1/- ರಂತೆ ವಾರ್ಷಿಕರಣಗೊಳ್ಳದ್ದು) (ಮುಂದುವರಿಸಿದ ಮತ್ತು ಸ್ಥಗಿತ ಕಾರ್ಯಾಚರಣೆಗಳಿಗೆ) ಮೂಲ ಮತ್ತು ಪರಿವರ್ತಿತ(₹ನಲ್ಲಿ)	2.87	1.81	2.44	7.23	5.50	2.91	1.79	2.46	7.28	5.45

ಟಿಪ್ಪಣಿಗಳು:
1. ಈ ಮೇಲಿನವುಗಳು ಸೆಬಿಯ ನಿಯಂತ್ರಣ ನಿಬಂಧನೆ 33 (ಬಾಧ್ಯತೆಗಳ ಪಟ್ಟಿ ಮಾಡುವಿಕೆ ಮತ್ತು ಅಗತ್ಯತೆಗಳ ಪ್ರಕಟಗೊಳಿಸುವಿಕೆ), 2015 ರ ಅಡಿಯಲ್ಲಿ, ತಿದ್ದುಪಡಿಯಾದಂತೆ, ಷೇರು ವಿನಿಮಯ ಕೇಂದ್ರದಲ್ಲಿ ಸಲ್ಲಿಸಲ್ಪಟ್ಟ ತ್ರೈಮಾಸಿಕ / ವಾರ್ಷಿಕ ಹಣಕಾಸಿನ ವಿಸ್ತೃತ ರೂಪವಾಗಿದೆ. ತ್ರೈಮಾಸಿಕ / ವಾರ್ಷಿಕ ಹಣಕಾಸು ಫಲಿತಾಂಶಗಳ ಪೂರ್ಣ ರೂಪವು ಷೇರು ವಿನಿಮಯ ಕೇಂದ್ರದ ವೆಬ್‌ಸೈಟ್‌ನಲ್ಲಿ ಲಭ್ಯವಿದೆ (www.bseindia.com ಮತ್ತು www.nseindia.com) ಮತ್ತು ಕಂಪೆನಿಯ ವೆಬ್‌ಸೈಟ್ (www.bel-india.in) ನಲ್ಲಿಯೂ ಲಭ್ಯವಿದೆ.
2. ಹಣಕಾಸು ಫಲಿತಾಂಶಗಳ ಈ ಮೇಲಿನ ವಿವರಣೆಯನ್ನು ಲೆಕ್ಕ ಪರಿಶೋಧನಾ ಸಮಿತಿಯು ಪರಿಶೀಲಿಸಿದೆ ಮತ್ತು ದಿನಾಂಕ 19 ಮೇ, 2025 ರಂದು ನಡೆದ ಸಭೆಯಲ್ಲಿ ನಿರ್ದೇಶಕರ ಮಂಡಳಿಯಿಂದ ಅನುಮೋದಿಸಲಾಗಿದೆ.

ಸ್ಥಳ: ಬೆಂಗಳೂರು
ದಿನಾಂಕ: 19 ಮೇ, 2025

ನಿರ್ದೇಶಕರ ಮಂಡಳಿಯ ಪರವಾಗಿ
ಸಹಿ/–
ಮನೋಜ್ ಜೈನ್
ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು

ಸೊಸೈಟಿ ಮೂಲಕ ಏತ ನೀರಾವರಿ • ಆರು ತಿಂಗಳಲ್ಲಿ ಮಾರ್ಗಸೂಚಿ ರೂಪಿಸಲು ರಾಜ್ಯ ಸರ್ಕಾರಕ್ಕೆ ಸೂಚನೆ

ರೈತರ ವಿದ್ಯುತ್ ಸಬ್ಸಿಡಿ: ಹೈಕೋರ್ಟ್ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸೊಸೈಟಿಗಳನ್ನು ರೂಪಿಸಿಕೊಂಡು ಏತ ನೀರಾವರಿ ವ್ಯವಸ್ಥೆಯ ಮೂಲಕ ಕೃಷಿ ಚಟುವಟಿಕೆ ನಡೆಸುತ್ತಿರುವ ರೈತರಿಗೂ ಸಬ್ಸಿಡಿ ವಿಸ್ತರಿಸುವ ಸಂಬಂಧ ಚಾಲ್ತಿಯಲ್ಲಿರುವ ಕಾನೂನು ಚೌಕಟ್ಟಿನಲ್ಲಿ ತಿದ್ದುಪಡಿ ಮಾಡಿ, ಆರು ತಿಂಗಳಲ್ಲಿ ಮಾರ್ಗಸೂಚಿ ರೂಪಿಸಬೇಕು' ಎಂದು ಹೈಕೋರ್ಟ್ ಆದೇಶಿಸಿದೆ.

'ಸೊಸೈಟಿಗಳ ಆಧಾರದಲ್ಲಿ ಒಟ್ಟಿಗೇ ಕೂಡಿಕೊಂಡು ರೈತರು ಬಳಕೆ ಮಾಡುವ ವಿದ್ಯುತ್, ನಿಗದಿತ ವಿದ್ಯುಚ್ಛಕ್ತಿ ಬಳಕೆಯ ಪ್ರಮಾಣವನ್ನು ಮೀರುತ್ತದೆ ಎಂಬ ಕಾರಣಕ್ಕಾಗಿ ಸಬ್ಸಿಡಿ ನಿರಾಕರಿಸಿ 2008ರ ಸೆಪ್ಟೆಂಬರ್ 4ರಂದು ಹೊರಡಿಸಿರುವ ರಾಜ್ಯ ಸರ್ಕಾರದ ಆದೇಶವನ್ನು ರದ್ದುಪಡಿಸಬೇಕು' ಎಂದು ಕೋರಲಾಗಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ (ಧಾರವಾಡ ಪೀಠ) ಅರ್ಜಿದಾರರ ಮನವಿಯನ್ನು ಭಾಗಶಃ ಪುರಸ್ಕರಿಸಿದ್ದಾರೆ.

'ರೈತ ಸಂಘಗಳಿಗೆ ಸಬ್ಸಿಡಿಗಳನ್ನು ನಿರಾಕರಿಸುವುದು ಸಾಮೂಹಿಕವಾಗಿ ಸಂಘಟಿತರಾಗಿ ಕೃಷಿ ಚಟುವಟಿಕೆ ನಡೆಸುವ ರೈತರಿಗೆ ಶಿಕ್ಷೆ ವಿಧಿಸಿದಂತೆ ಮತ್ತು ಇದು ಸಹಕಾರಿ ಕೃಷಿ ಪದ್ಧತಿಯನ್ನು ನಿರುತ್ಸಾಹಗೊಳಿಸುತ್ತದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ಮೀಟರ್ ಇಲ್ಲದ ಅಳವಡಿಕೆಗಳಿಗೆ ಸಬ್ಸಿಡಿಗಳನ್ನು ಅನುಮತಿಸುವ ಮತ್ತು ರೈತ ಸಂಘಗಳಿಗೆ ಸಬ್ಸಿಡಿ ನಿರಾಕರಿಸುವ ಪ್ರಸ್ತುತ ಪದ್ಧತಿಯು ಶಾಸನಬದ್ಧ ಮತ್ತು ಸಾಂವಿಧಾನಿಕ ಆದೇಶಗಳ ಸ್ಪಷ್ಟ ಉಲ್ಲಂಘನೆಯಾಗಿದೆ' ಎಂದು ಉಲ್ಲೇಖಿಸಿರುವ ನ್ಯಾಯಪೀಠ, 'ಪರಿಷ್ಕೃತ ಚೌಕಟ್ಟಿನ ಬಳಿಕ ವಿದ್ಯುತ್ ಸಬ್ಸಿಡಿ ನೀಡುವುದಕ್ಕೆ ಸಂಬಂಧಿಸಿದಂತೆ ಅರ್ಜಿದಾರರು ಸಕ್ಷಮ ಪ್ರಾಧಿಕಾರಕ್ಕೆ ಹೊಸ ಮನವಿ ಸಲ್ಲಿಸಬಹುದು' ಎಂದು ನಿರ್ದೇಶಿಸಿದೆ.

ಅಂತೆಯೇ, 'ಕೋವಿಡ್ ಮತ್ತಿತರ ಕಾರಣಗಳಿಂದಾಗಿ ಬಾಕಿ ಇರುವ ವಿದ್ಯುತ್ ಬಿಲ್ ಪಾವತಿಗೆ ಸಂಬಂಧಿಸಿದಂತೆ ಹೊರಡಿಸಿರುವ ಡಿಮ್ಯಾಂಡ್ ನೋಟಿಸ್ ವಜಾಗೊಳಿಸಬೇಕು' ಎಂಬ ಅರ್ಜಿದಾರರ ಕೋರಿಕೆಯನ್ನು ಮನ್ನಿಸಲು ನಿರಾಕರಿಸಿದ್ದು, 'ರೈತ ತಲಾ ಬಳಕೆ, ಭೂ ಹಿಡುವಳಿ ಅಥವಾ ಸಂಘದ ಪ್ರತಿ ಸದಸ್ಯರಿಗೆ ಒಟ್ಟು ವಿದ್ಯುತ್ ಬಳಕೆಯ ಆಧಾರದ ಮೇಲೆ ಷರತ್ತುಗಳನ್ನು ವಿಧಿಸುವ ಮೂಲಕ ಸಂಘಗಳಿಗೆ ಸಬ್ಸಿಡಿ ವಿಸ್ತರಿಸಬಹುದು' ಎಂದು ಸಲಹೆ ನೀಡಿದೆ.

ಅರ್ಜಿದಾರರ ಪರ ಹೈಕೋರ್ಟ್ ವಕೀಲರಾದ ಶ್ರೀಧರ ಪ್ರಭು, ರಾಜ್ಯ ಸರ್ಕಾರದ ಪರ ಅಶೋಕ ಟಿ.ಕಟ್ಟಿಮನಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರ ಬಿ.ಎಸ್.ಕಾಮ್ಟೆ ಮತ್ತು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಹೆಸ್ಕಾಂ) ಪರ ಶಿವರಾಜ ಪಿ.ಮುಧೋಳ ವಾದ ಮಂಡಿಸಿದ್ದರು.

'ಸಬ್ಸಿಡಿ ಕೋರಿಕೆ ಮತ್ತು ವಿದ್ಯುತ್ ಬಾಕಿ ಪಾವತಿಗೆ ಸಂಬಂಧಿಸಿದಂತೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ ಹೊರಡಿಸಿರುವ ಡಿಮ್ಯಾಂಡ್ ನೋಟಿಸ್ ವಜಾಗೊಳಿಸಬೇಕು' ಎಂದು ಕೋರಿ ಅಥಣಿ ತಾಲ್ಲೂಕಿನ ಪಾರ್ಥನವಾಡಿಯ 'ಶ್ರೀಮಂತ (ತಾತ್ಯ) ಪಾಟೀಲ ನೀರು ಬಳಕೆದಾರರ ಸಂಘ'ದ ಕಾರ್ಯದರ್ಶಿ ಶ್ರೀಶೈಲ ಈರಪ್ಪ ಕೆಂಪವಾಡ ಮತ್ತು ಮದಭಾವಿಯ ರಾವಳನಾಥ ಏತ ನೀರು ಬಳಕೆದಾರರ ಸಂಘದ ಕಾರ್ಯದರ್ಶಿ ತಮ್ಮಣ್ಣ ಅಣ್ಣಪ್ಪ ಪೂಜಾರಿ ಈ ರಿಟ್ ಅರ್ಜಿ ಸಲ್ಲಿಸಿದ್ದರು.

'ಅಂಗವಿಕಲತೆ: ಮಾನದಂಡ ಸಡಿಲಿಸಿ'

ಬೆಂಗಳೂರು: 'ಅಂಗವಿಕಲರ ಕೋಟಾದಡಿ ನೇಮಕ ಮಾಡುವುದಕ್ಕೆ ಪರ್ಯಾಯ ಅಭ್ಯರ್ಥಿಗಳು ಇಲ್ಲದೇ ಇದ್ದ ಸಂದರ್ಭದಲ್ಲಿ ಮಾನದಂಡಗಳನ್ನು ಸಡಿಲಿಸಿ, ಅರ್ಜಿ ಸಲ್ಲಿಸಿರುವವರಲ್ಲೇ ಆಯ್ಕೆ ಪ್ರಕ್ರಿಯೆ ನಡೆಸಬಹುದು ಎಂಬ ಸುಪ್ರೀಂ ಕೋರ್ಟ್ ನಿರ್ದೇಶನವನ್ನು ಅನುಸರಿಸಬೇಕು' ಎಂದು ಹೈಕೋರ್ಟ್ ಪುನರುಚ್ಚರಿಸಿದೆ.

ಈ ಸಂಬಂಧ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ (ಬೆಸ್ಕಾಂ) ಜೆ.ಪಿ.ನಗರ ಉಪ ವಿಭಾಗದಲ್ಲಿ ಸಹಾಯಕ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಸ್.ಬಿ.ಅನಿಲ್ ಕುಮಾರ್ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಏಕಸದಸ್ಯ ನ್ಯಾಯಪೀಠದ ಆದೇಶವನ್ನು ವಜಾಗೊಳಿಸಿರುವ ನ್ಯಾಯಪೀಠ, 'ಎಸ್.ಬಿ.ಅನಿಲ್ ಕುಮಾರ್ ಶೇ 75ರಷ್ಟು ಅಂಗವಿಕಲತೆ ಹೊಂದಿದ್ದು, ಅವರಿಗೆ ಸಹಾಯಕ ಲೆಕ್ಕಾಧಿಕಾರಿ ಹುದ್ದೆ ನೀಡಿ' ಎಂದು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ (ಕೆಪಿಟಿಸಿಎಲ್) ನ್ಯಾಯಪೀಠ ನಿರ್ದೇಶನ ನೀಡಿದೆ.

'ಅನಿಲ್ ಕುಮಾರ್ ಸದ್ಯ ಕೆಪಿಟಿಸಿಎಲ್‌ನಲ್ಲಿ ಸಹಾಯಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸಹಾಯಕ ಮತ್ತು ಸಹಾಯಕ ಲೆಕ್ಕಾಧಿಕಾರಿ ಹುದ್ದೆಯ ಕಾರ್ಯಗಳು ಬಹುತೇಕ ಒಂದೇ ಸ್ವರೂಪ ಹೊಂದಿರುತ್ತವೆ. ಹೀಗಾಗಿ, ಅನಿಲ್ ಕುಮಾರ್ ಸಹಾಯಕ ಲೆಕ್ಕಾಧಿಕಾರಿ ಹುದ್ದೆಗೆ ಬಡ್ತಿ ಪಡೆಯಲು ಸಂಪೂರ್ಣ ಅರ್ಹರಾಗಿದ್ದಾರೆ' ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣವೇನು?: ಕೆಪಿಟಿಸಿಎಲ್ 2016ರ ಸೆಪ್ಟೆಂಬರ್ 8ರಂದು ಸಹಾಯಕ ಲೆಕ್ಕಾಧಿಕಾರಿ ಹುದ್ದೆ ಸೇರಿದಂತೆ ವಿವಿಧ ಹುದ್ದೆಗಳ ನೇಮಕಕ್ಕೆ ಅರ್ಜಿಗಳನ್ನು ಆಹ್ವಾನಿಸಿತ್ತು. ಅನಿಲ್ ಕುಮಾರ್ ಕೂಡಾ ಸಹಾಯಕ ಲೆಕ್ಕಾಧಿಕಾರಿ ಹುದ್ದೆಗೆ ಅಂಗವಿಕಲರ ಕೋಟಾದಡಿ ಅರ್ಜಿ ಸಲ್ಲಿಸಿದ್ದರು. ಆದರೆ, ಕೆಪಿಟಿಸಿಎಲ್ 'ಅಂಗವಿಕಲರ ವರ್ಗದಲ್ಲಿ ಅರ್ಹ ಅಭ್ಯರ್ಥಿಗಳು ಲಭ್ಯವಾಗಿಲ್ಲ' ಎಂಬ ಕಾರಣ ನೀಡಿ ಇವರ ಅರ್ಜಿಯನ್ನು ತಿರಸ್ಕರಿಸಿತ್ತು.

ಇದನ್ನು ಪ್ರಶ್ನಿಸಿ ಅನಿಲ್ ಕುಮಾರ್ ಹೈಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಅರ್ಜಿದಾರರು ಹುದ್ದೆಗೆ ಅರ್ಹರಲ್ಲ' ಎಂದು ತಿಳಿಸಿ ಅರ್ಜಿಯನ್ನು ವಜಾಗೊಳಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಅನಿಲ್ ಕುಮಾರ್ ಮೇಲ್ಮನವಿ ಸಲ್ಲಿಸಿದ್ದರು.

'ಯಾರೇ ಅಡ್ಡಿಪಡಿಸಿದರೂ 'ಕಾವೇರಿ ಆರತಿ' ನಿಲ್ಲುವುದಿಲ್ಲ'

ಪ್ರಜಾವಾಣಿ ವಾರ್ತೆ

ಮಂಡ್ಯ: 'ಜಿಲ್ಲೆಯಲ್ಲಿ ಯಾವುದೇ ಅಭಿವೃದ್ಧಿ ಕೆಲಸ ಮಾಡಲು ಹೋದರೂ ಹೀಗೆ ತಡೀತಾರೆ. ಹೀಗಾಗಿ ಮಂಡ್ಯ ನಗರ ಇನ್ನೂ ಹಳ್ಳಿಯಂತೆಯೇ ಇದೆ. 'ಕಾವೇರಿ ಆರತಿ' ಹಿಂದೂಗಳ ಭಾವನಾತ್ಮಕ ಧಾರ್ಮಿಕ ಕಾರ್ಯಕ್ರಮ. ಅದರಿಂದ ರೈತ ಸಂಘಕ್ಕೆ ತೊಂದರೆ ಏನು? ವಿರೋಧಿಸುತ್ತೇವೆಂದು ಎಲ್ಲವನ್ನೂ ವಿರೋಧಿಸುವುದಲ್ಲ' ಎಂದು ಶಾಸಕ ಪಿ.ರವಿಕುಮಾರ್ ಗಣಿಗ ಅಸಮಾಧಾನ ವ್ಯಕ್ತಪಡಿಸಿದರು.

ಸೋಮವಾರ ಮಾಧ್ಯಮದವರೊಂದಿಗೆ ಮಾತನಾಡಿ, 'ಶಾಸಕ ದರ್ಶನ್ ಪುಟ್ಟಣ್ಣಯ್ಯ ಕೂಡ ಅರ್ಥ ಮಾಡಿಕೊಳ್ಳಬೇಕು. ಯಾರೇ ವಿರೋಧಿಸಿದರೂ ಕಾವೇರಿ ಆರತಿ ಮಾಡೇ ಮಾಡ್ತೀವಿ. ಯಾರಿಂದಲೂ ಅದನ್ನು ತಡೆಯಲು ಸಾಧ್ಯವಿಲ್ಲ. ಪುಣ್ಯಾತ್ಮ ಡಿ.ಕೆ.ಶಿವಕುಮಾರ್ ಮಂಡ್ಯ ಅಭಿವೃದ್ಧಿ ಮಾಡ್ತೀನಿ ಅಂತ ಬಂದಿದ್ದಾರೆ. ಮುಂಬರುವ ದಸರಾ ವೇಳೆಗೆ ಕಾವೇರಿ

ಆರತಿ ಮಾಡ್ತೀವಿ' ಎಂದು ಹೇಳಿದರು.

ಕೆಆರ್‌ಎಸ್ ಡ್ಯಾಂ ಬಳಿ ಅಮ್ಯೂಸ್‌ಮೆಂಟ್ ಪಾರ್ಕ್‌ಗೆ ರವಿಕುಮಾರ್ ರೈತರ ವಿರೋಧಕ್ಕೆ ಪ್ರತಿಕ್ರಿಯಿಸಿ, 'ರೈತರಿಂದ ಉಚಿತವಾಗಿ ನಾವು ಜಮೀನು ಸ್ವಾಧೀನ ಮಾಡುವುದಿಲ್ಲ. ಅದಕ್ಕೆ ಸಮರ್ಪಕ ಪರಿಹಾರ ನೀಡುತ್ತೇವೆ' ಎಂದರು.

ಬೆಂಗಳೂರಿನಲ್ಲಿ ಮಳೆಯಿಂದಾದ ಅವ್ಯವಸ್ಥೆ ಕುರಿತು ಪ್ರತಿಕ್ರಿಯಿಸಿ, 'ಒಂದೇ ದಿನದಲ್ಲಿ ಬ್ರ್ಯಾಂಡ್ ಬೆಂಗಳೂರು ಮಾಡೋಕೆ ಸಾಧ್ಯವಿಲ್ಲ. ₹20 ಸಾವಿರ ಕೋಟಿಯಲ್ಲಿ ಟನಲ್ ಮಾಡ್ತಿದ್ದೀವಿ. ರಾಜ್ಯದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸವಾಗುತ್ತಿದೆ. ಜನತಾದಳ ಮತ್ತು ಬಿಜೆಪಿ ಇದ್ದಾಗ ಏಕೆ ಕೆಲಸ ಮಾಡಿಲ್ಲ. ಕಾಮಗಾರಿ ಪೂರ್ಣಗೊಂಡ ನಂತರ ಬ್ರ್ಯಾಂಡ್ ಬೆಂಗಳೂರು ಏನು ಅನ್ನೋದು ಕಾಣಿಸುತ್ತದೆ' ಎಂದರು.

ಆಕಾಂಕ್ಷಳದು ಆತ್ಮಹತ್ಯೆ: ಪೊಲೀಸರ ಮಾಹಿತಿ

ಪ್ರಜಾವಾಣಿ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): ಧರ್ಮಸ್ಥಳ ಗ್ರಾಮದ ಬೊಳಿಯಾರು ನಿವಾಸಿಯಾಗಿದ್ದ ಆಕಾಂಕ್ಷ ಎಸ್. ನಾಯರ್ (22) ಅವರು ಪ್ರೇಮ ವೈಫಲ್ಯದಿಂದ ನೊಂದು ಮೇ 17ರಂದು ಪಂಜಾಬ್‌ನ ಯುನಿವರ್ಸಿಟಿ ಕಾಲೇಜು ಕಟ್ಟಡದ ಮೂರನೇ ಮಹಡಿಯಿಂದ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

ಆಕಾಂಕ್ಷ ತಂದೆ, ತಾಯಿ ಮತ್ತು ಸಹೋದರ ಪಂಜಾಬ್‌ಗೆ ತೆರಳಿದ್ದು, ಪೊಲೀಸರಿಂದ ಮಾಹಿತಿ ಪಡೆದುಕೊಂಡಿದ್ದಾರೆ.

ಎಲ್‌.ಪಿ. ಯುನಿವರ್ಸಿಟಿಯ ಪ್ರಾಧ್ಯಾಪಕ ಬಿಜಿಲ್ ಮ್ಯಾಥ್ಯೂ ಅವರನ್ನು ಆಕಾಂಕ್ಷ ಪ್ರೀತಿಸುತ್ತಿದ್ದರು. ಆತ್ಮಹತ್ಯೆಗೆ ಮೊದಲು ಪ್ರಾಧ್ಯಾಪಕರ ಮನೆಗೆ ತೆರಳಿ ಜಗಳವಾಡಿದ್ದರು. ಕಾಲೇಜಿನಲ್ಲೂ ಅವರೊಂದಿಗೆ ಜಗಳವಾಡಿ, ಹೊರಗೆ ಬಂದು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ತಿಳಿದು ಬಂದಿದೆ.

ಕಾಲೇಜಿನ ಸಿಸಿಟಿವಿ ಕ್ಯಾಮೆರಾದ ದಾಖಲೆಗಳನ್ನು ಪೊಲೀಸರು ಪರಿಶೀಲಿಸಿ ವಶಪಡಿಸಿಕೊಂಡಿದ್ದಾರೆ. ಆತ್ಮಹತ್ಯೆಗೆ ಪ್ರೇರಣೆ ನೀಡಿದ ಆರೋಪದಲ್ಲಿ ಪ್ರೊ.ಬಿಜಿಲ್ ಮ್ಯಾಥ್ಯೂ ವಿರುದ್ಧ ಜಲಂಧರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬಿಜಿಲ್ ಮ್ಯಾಥ್ಯೂ ಮೂಲತಃ ಕೇರಳದ ಕೊಟ್ಟಾಯಂ ನಿವಾಸಿಯಾಗಿದ್ದು, ಅವರಿಗೆ ಮದುವೆಯಾಗಿ ಇಬ್ಬರು ಮಕ್ಕಳಿದ್ದಾರೆ ಎಂದು ಗೊತ್ತಾಗಿದೆ.

ಆಕಾಂಕ್ಷ ಎಸ್. ನಾಯರ್

ಮರಣೋತ್ತರ ಪರೀಕ್ಷೆ ಬಳಿಕ ಮೃತದೇಹದ ಹಸ್ತಾಂತರ ನಡೆಯಲಿದೆ. ಬಳಿಕ ಧರ್ಮಸ್ಥಳದಲ್ಲಿ ಅಂತ್ಯಸಂಸ್ಕಾರ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪೊಲೀಸರಿಂದ ವಂಚನೆ ಆರೋಪ: ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರು ಮನೆಯವರನ್ನು ವಂಚಿಸಲು ಪ್ರಯತ್ನ ಮಾಡುತ್ತಿದ್ದಾರೆ ಎಂದು ಆಕಾಂಕ್ಷ ತಂದೆ ಸುರೇಂದ್ರನ್ ಆರೋಪಿಸಿದ್ದಾರೆ.

ಸಿಸಿಟಿವಿ ಕ್ಯಾಮೆರಾದ ದಾಖಲೆ ತೋರಿಸಲು ನಿರಾಕರಿಸಿದ್ದಾರೆ. ಪಂಜಾಬಿ ಭಾಷೆಯಲ್ಲಿದ್ದ ಎಫ್‌ಐಆರ್ ಪ್ರತಿ ನೀಡಿದ್ದು, ಅದರಲ್ಲಿ ಆಕೆ ಮಾನಸಿಕ ಖಿನ್ನತೆಯಿಂದ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ದಾಖಲಿಸಲಾಗಿದೆ ಎಂದು ದೂರಿದ್ದಾರೆ.

'ದೂರು ನೀಡಿದ ರೀತಿಯಲ್ಲೇ ಪ್ರಕರಣ ದಾಖಲಿಸಬೇಕು' ಎಂದು ಪೊಲೀಸ್ ಅಧಿಕಾರಿಗಳಿಗೆ ಪೋಷಕರು ತಿಳಿಸಿದ್ದಾರೆ. ಇದರಿಂದ ಮರಣೋತ್ತರ ಪರೀಕ್ಷೆ ತಡವಾಗುವ ಸಾಧ್ಯತೆ ಇದೆ.

ಸೂಕ್ತ ತನಿಖೆಗೆ ಸಚಿವ ದಿನೇಶ್ ಆಗ್ರಹ

ಬೆಂಗಳೂರು: ಪಂಜಾಬ್‌ನಲ್ಲಿ ಮೃತಪಟ್ಟ ಧರ್ಮಸ್ಥಳದ ವಿದ್ಯಾರ್ಥಿನಿ ಆಕಾಂಕ್ಷ ಸಾವಿನ ಕುರಿತು ಸೂಕ್ತ ತನಿಖೆ ನಡೆಸುವಂತೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಪಂಜಾಬ್ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಆಕಾಂಕ್ಷ ಸಾವು ಅತ್ಯಂತ ನೋವಿನ ಸಂಗತಿ. ಇದೊಂದು ಅಸಹಜ ಸಾವು ಎಂಬುದು ಮೇಲ್ನೋಟಕ್ಕೆ ಕಾಣುತ್ತದೆ. ಉಪನ್ಯಾಸಕ ಮ್ಯಾಥ್ಯೂ ಅವರ ಕಿರುಕುಳದಿಂದ ಸಾವಿಗೀಡಾಗಿದ್ದಾರೆ ಎಂದು ಅವರ ಕುಟುಂಬ ಆರೋಪಿಸಿದೆ. ಪ್ರಕರಣ ಕುರಿತು ಪಂಜಾಬ್‌ನ ಮುಖ್ಯಕಾರ್ಯದರ್ಶಿ ಜತೆ ಚರ್ಚೆ ನಡೆಸಿದ್ದು, ಅಲ್ಲಿನ ಸರ್ಕಾರದ ಜತೆ ನಿರಂತರ ಸಂಪರ್ಕದಲ್ಲಿದ್ದೇನೆ ಎಂದಿದ್ದಾರೆ.

ಆಕಾಂಕ್ಷಾ ಮೃತದೇಹವನ್ನು ಕುಟುಂಬ ವರ್ಗದವರಿಗೆ ಹಸ್ತಾಂತರಿಸಲು ಕ್ರಮ ಕೈಗೊಳ್ಳಲಾಗಿದೆ. ಜಲಂಧರ್ ಪೊಲೀಸ್ ಠಾಣೆಯಲ್ಲಿ ದಾಖಲಾದ ಸಾವಿನ ಪ್ರಕರಣ ಕುರಿತು ಸೂಕ್ತ ತನಿಖೆ ನಡೆಸುವಂತೆ ಪಂಜಾಬ್ ಸರ್ಕಾರದ ಮುಖ್ಯ-ಕಾರ್ಯದರ್ಶಿ ಜತೆ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಮಾತುಕತೆ ನಡೆಸುತ್ತಿದ್ದಾರೆ ಎಂದು ದಿನೇಶ್ ಅವರು ಮಾಹಿತಿ ನೀಡಿದ್ದಾರೆ.

ಸುದ್ದಿ 2 ನಿಮಿಷ

'ಹೋಬಳಿಗೊಂದು 100 ಹಾಸಿಗೆ ಆಸ್ಪತ್ರೆ'

ಆನೇಕಲ್: ಜನಸಂಖ್ಯೆ ಹೆಚ್ಚಿರುವ ಪ್ರದೇಶಗಳಲ್ಲಿ ಹೋಬಳಿಗೊಂದು 100 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ನಿರ್ಮಿಸಲು ಕ್ರಿಯಾ ಯೋಜನೆ ರೂಪಿಸಲಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ತಾಲ್ಲೂಕಿನ ದೊಮ್ಮಸಂದ್ರದಲ್ಲಿ ತಾಲ್ಲೂಕು 100 ಹಾಸಿಗೆ ಆಸ್ಪತ್ರೆ ನಿರ್ಮಾಣಕ್ಕೆ ಸೋಮವಾರ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಎರಡು ಲಕ್ಷ ಜನಸಂಖ್ಯೆಗೆ 100 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ಅವಶ್ಯ ಎಂದರು.

ಬೆಂಗಳೂರು ಹೊರ ವಲಯದಲ್ಲಿ ಸುಧಾರಿತ ಆರೋಗ್ಯ ಸೇವೆ ನೀಡಲು ಯೋಜನೆ ರೂಪಿಸಲಾಗಿದ್ದು, ಜೂನ್ ತಿಂಗಳಲ್ಲಿ ಹೊಸಕೋಟೆಯಲ್ಲಿ 100 ಹಾಸಿಗೆ ಸರ್ಕಾರಿ ಆಸ್ಪತ್ರೆ ಭೂಮಿ ಪೂಜೆ ನೆರವೇರಿಸಲಾಗುವುದು. ಹಾಗೇ ನೆಲಮಂಗಲ, ಹೊಸಕೋಟೆ, ಆನೇಕಲ್, ಬೆಂಗಳೂರು ಉತ್ತರ ತಾಲ್ಲೂಕುಗಳಲ್ಲಿ ಸುಸಜ್ಜಿತ ಆಸ್ಪತ್ರೆ ನಿರ್ಮಾಣಕ್ಕೆ ಕ್ರಿಯಾ ಯೋಜನೆ ರೂಪಿಸಿದ್ದೇವೆ ಎಂದು ತಿಳಿಸಿದರು.

ಮೇಲ್ದರ್ಜೆಗೇರಿದ ರೈಲು ನಿಲ್ದಾಣಗಳ ಉದ್ಘಾಟನೆ 22ಕ್ಕೆ

ಗದಗ: ಅಮೃತ ಭಾರತ ಸ್ಟೇಷನ್ ಯೋಜನೆಯಡಿ (ಎಬಿಎಸ್‌ಎಸ್) ಪುನಾರಾಭಿವೃದ್ಧಿಗೊಂಡಿರುವ ನೈರುತ್ಯ ರೈಲ್ವೆ ವಿಭಾಗದ ಧಾರವಾಡ, ಗದಗ, ಬಾಗಲಕೋಟೆ, ಗೋಕಾಕ ಮತ್ತು ಮುನಿರಾಬಾದ್ ಸೇರಿ ದೇಶದ ವಿವಿಧೆಡೆ ಒಟ್ಟು 103 ರೈಲು ನಿಲ್ದಾಣಗಳನ್ನು ಪ್ರಧಾನಿ ನರೇಂದ್ರ ಮೋದಿ ವಿಡಿಯೊ ಕಾನ್ಫರೆನ್ಸ್ ಮೂಲಕ ಮೇ 22ರಂದು ಉದ್ಘಾಟಿಸುವರು.

ಎಬಿಎಸ್‌ಎಸ್ ಅಡಿ ರೈಲು ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸುವ ಕಾಮಗಾರಿಗೆ ಪ್ರಧಾನಿ ನರೇಂದ್ರ ಮೋದಿ 2023ರ ಆಗಸ್ಟ್ 6ರಂದು ವರ್ಚುವಲ್ ವೇದಿಕೆ ಮೂಲಕ ಶಂಕುಸ್ಥಾಪನೆ ನೆರವೇರಿಸಿದ್ದರು.

ಗದಗ ರೈಲ್ವೆ ನಿಲ್ದಾಣ ₹23.24 ಕೋಟಿ, ಧಾರವಾಡ ರೈಲು ನಿಲ್ದಾಣ ₹17.01 ಕೋಟಿ, ಮುನಿರಾಬಾದ್ ₹18.40 ಕೋಟಿ, ಗೋಕಾಕ್ ₹16.98 ಕೋಟಿ, ಬಾಗಲಕೋಟೆ ರೈಲು ನಿಲ್ದಾಣ ₹16.06 ಕೋಟಿ ವೆಚ್ಚದಲ್ಲಿ ಮೇಲ್ದರ್ಜೆಗೇರಿವೆ.

ನವೀಕರಿಸಿದ ಗದಗ ರೈಲ್ವೆ ನಿಲ್ದಾಣವು ಆಧುನಿಕ ಸೌಲಭ್ಯಗಳೊಂದಿಗೆ ಜಿ ಪ್ಲಸ್ 1 ಅಂತಸ್ತಿನ ಕಟ್ಟಡ ಹೊಂದಿದೆ. ಪ್ರವೇಶ ದ್ವಾರ ಸಂಪೂರ್ಣ ಬದಲಾಗಿದೆ. ಜನದಟ್ಟಣೆ ನಿಯಂತ್ರಿಸಲು ಪ್ರತ್ಯೇಕ ಪ್ರವೇಶ ಮತ್ತು ನಿರ್ಗಮನ ದ್ವಾರ, ಎರಡು ಎಸ್ಕಲೇಟರ್‌ಗಳು, ಲಿಫ್ಟ್ ಸೌಲಭ್ಯ, ಪಾರ್ಕಿಂಗ್ ಸೌಲಭ್ಯ, 12 ಮೀಟರ್‌ನ ಪಾದಚಾರಿ ಮೇಲ್ಸೇತುವೆ, ಕಾರು, ಬೈಕ್‌ಗಳಿಗೆ ಪ್ರತ್ಯೇಕ ಪಾರ್ಕಿಂಗ್ ಸೌಲಭ್ಯ, ಅತ್ಯಾಧುನಿಕ ಶೌಚಾಲಯಗಳು, ಹವಾನಿಯಂತ್ರಿತ ವೇಯ್ಟಿಂಗ್ ರೂಂಗಳು, ಡಿಜಿಟಲ್ ಡಿಸ್‌ಪ್ಲೇ ಬೋರ್ಡ್‌ಗಳ ಜತೆಗೆ ಇನ್ನೂ ಹತ್ತು ಹಲವು ಸೌಲಭ್ಯಗಳನ್ನು ಹೊಂದಿದೆ ಎಂದು ಎಂದು ಹುಬ್ಬಳ್ಳಿ ನೈರುತ್ಯ ರೈಲ್ವೆ ವಿಭಾಗದ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಡಾ. ಮಂಜುನಾಥ್ ಕನಮಡಿ ತಿಳಿಸಿದ್ದಾರೆ.

'ಯಾವ ಪುರುಷಾರ್ಥಕ್ಕೆ ಸಾಧನಾ ಸಮಾವೇಶ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಾವ ಪುರುಷಾರ್ಥಕ್ಕೆ ನೀವು ಸಾಧನಾ ಸಮಾವೇಶ ಮಾಡುತ್ತಿದ್ದೀರಿ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದ್ದಾರೆ.

ಬಿ.ವೈ ವಿಜಯೇಂದ್ರ

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಬೆಲೆ ಏರಿಕೆ, ಭ್ರಷ್ಟಾಚಾರ, ದುರಾಡಳಿತ ತಾಂಡವವಾಡುತ್ತಿದ್ದು, ಹಿಂದೂ ಕಾರ್ಯಕರ್ತರ ಹತ್ಯೆಗಳು ನಡೆಯುತ್ತಿದ್ದು, ಕಾನೂನು ಸುವ್ಯವಸ್ಥೆ ಹದಗೆಟ್ಟು ಹೋಗಿದೆ. ಇದು ನಿಮ್ಮ ಸಾಧನೆಯೇ' ಎಂದು ಪ್ರಶ್ನಿಸಿದರು.

ಕರ್ನಾಟಕದ ಇತಿಹಾಸದಲ್ಲಿ ಕಳೆದ ಎರಡೂವರೆ ವರ್ಷ ಆರ್ಥಿಕವಾಗಿ ಕರಾಳ ದಿನಗಳು. ₹2.5 ಲಕ್ಷ ಕೋಟಿ ಸಾಲ ಪಡೆದಿರುವುದೇ ರಾಜ್ಯ ಸರ್ಕಾರದ ಸಾಧನೆ
ಬಸವರಾಜ ಬೊಮ್ಮಾಯಿ, ಬಿಜೆಪಿ ಸಂಸದ

ಕಾಂಗ್ರೆಸ್ ಸರ್ಕಾರ ಹೊಸಪೇಟೆಯಲ್ಲಿ ಮಾಡಲು ಹೊರಟಿರುವುದು ಸಾಧನಾ ಸಮಾವೇಶವಲ್ಲ; ವೇದನೆಯ ಸಮಾವೇಶ
ಛಲವಾದಿ ನಾರಾಯಣಸ್ವಾಮಿ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ

ವೈಫಲ್ಯ ಹಾಗೂ ಭ್ರಷ್ಟಾಚಾರದ ಆರೋಪ ಮುಚ್ಚಿ ಹಾಕಲು ರಾಜ್ಯ ಸರ್ಕಾರವು ಜನರ ದುಡ್ಡಿನಲ್ಲಿ ಸಾಧನಾ ಸಮಾವೇಶ ಮಾಡುತ್ತಿದೆ
ಎಚ್.ವಿಶ್ವನಾಥ್
ವಿಧಾನಪರಿಷತ್ ಸದಸ್ಯ

'ರೈತರಿಗಾಗಿ ಯಾವುದೇ ಹೊಸ ಯೋಜನೆಯನ್ನು ನೀಡಲು ಸಾಧ್ಯವಾಗಿಲ್ಲ. ಮಹಿಳೆಯರು ಮತ್ತು ಯುವಕರಿಗೆ ಸ್ವಾಭಿಮಾನದ ಬದುಕು ನೀಡುವ ಉದ್ದೇಶದ ಯಾವುದೇ ಹೊಸ ಕಾರ್ಯಕ್ರಮವನ್ನೂ ಜಾರಿ ಮಾಡಲಿಲ್ಲ' ಎಂದು ಆಕ್ಷೇಪ ವ್ಯಕ್ತಪಡಿಸಿದರು.

'ಸಿದ್ದರಾಮಯ್ಯ ಅಧಿಕಾರ ವಹಿಸಿಕೊಂಡ ಬಳಿಕ ಅಭಿವೃದ್ಧಿ ಕೆಲಸಗಳು ಸಂಪೂರ್ಣವಾಗಿ ನಿಂತು ಹೋಗಿವೆ. ಆಡಳಿತ ಪಕ್ಷದ ಶಾಸಕರೂ ಅಭಿವೃದ್ಧಿಗೆ ಹಣ ಸಿಗುತ್ತಿಲ್ಲ ಎಂದು ಬಹಿರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ಮೊದಲ ಬಾರಿ ಗೆದ್ದುಬಂದ ಶಾಸಕರಿಗೆ ತಮ್ಮ ಕ್ಷೇತ್ರಗಳಲ್ಲಿ ಶಾಲಾ ಕೊಠಡಿ ರಿಪೇರಿ ಮಾಡಿಸಲು ಹಣ ಸಿಗುತ್ತಿಲ್ಲ' ಎಂದು ದೂರಿದರು.

'ತಮ್ಮ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ರಂಗು- ರಂಗಿನ ಜಾಹೀರಾತು ನೀಡುತ್ತಿದ್ದಾರೆ. ಇದು ಜಾಹೀರಾತಿನ ಸರ್ಕಾರವೇ ಹೊರತು, ಜನರ ಸಂಕಷ್ಟಗಳಿಗೆ ಸ್ಪಂದಿಸುವ ಸರ್ಕಾರವಲ್ಲ. ರಾಜ್ಯದ ಜನರು ಸರ್ಕಾರದ ಬಗ್ಗೆ ಬೇಸತ್ತು ಹೋಗಿದ್ದಾರೆ. ಜನರ ಅಸಮಾಧಾನದ ಮಧ್ಯೆಯೇ ಶೂನ್ಯ ಸಾಧನೆಯ ಸಮಾವೇಶ ಮಾಡಲು ಮುಂದಾಗಿದ್ದಾರೆ' ಎಂದು ವಿಜಯೇಂದ್ರ ಹೇಳಿದರು.

'ಕರ್ನಾಟಕ ಲೂಟಿ-ಕಾಂಗ್ರೆಸ್ ಡ್ಯೂಟಿ' ಭಿತ್ತಿಚಿಪತ್ರ ಬಿಡುಗಡೆ

ರಾಜ್ಯ ಸರ್ಕಾರ ಮಂಗಳವಾರ ಹಮ್ಮಿಕೊಂಡಿರುವ ಸಾಧನಾ ಸಮಾವೇಶಕ್ಕೆ ವಿರುದ್ಧವಾಗಿ 'ಕರ್ನಾಟಕ ಲೂಟಿ-ಕಾಂಗ್ರೆಸ್ ಡ್ಯೂಟಿ' ಭಿತ್ತಿಪತ್ರವನ್ನು ಬಿಜೆಪಿ ಬಿಡುಗಡೆ ಮಾಡಿತು.

ಭಿತ್ತಿಪತ್ರ ಬಿಡುಗಡೆ ಮಾಡಿದ ಮುಖ್ಯ ವಕ್ತಾರ ಅಶ್ವತ್ಥನಾರಾಯಣ ಅವರು, ಬೆಂಗಳೂರು ಮಹಾನಗರದಲ್ಲಿ ಸುರಿದ ಮಳೆಗೆ ಆಗಿರುವ ಅನಾಹುತವೇ ಕಾಂಗ್ರೆಸ್ ಸರ್ಕಾರದ ಸಾಧನೆಯ ಚಿತ್ರದ ಟ್ರೇಲರ್ ಬಿಡುಗಡೆಯಾಗಿದ್ದು, ಕಾಂಗ್ರೆಸ್ ಸರ್ಕಾರದ ಸಾಧನೆ ಚಿತ್ರ ಬಾಕಿ ಇದೆ ಎಂದರು.

ಬಂದವು ಪುಸ್ತಕಗಳು...
2025–26ನೇ ಸಾಲಿನ ಶೈಕ್ಷಣಿಕ ವರ್ಷದ ಪಠ್ಯಪುಸ್ತಕಗಳು ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಶೀಘ್ರ ಲಭ್ಯವಾಗಲಿದ್ದು, ಹುಬ್ಬಳ್ಳಿಯಲ್ಲಿ ಸರ್ಕಾರಿ ಪುಸ್ತಕ ಗೋದಾಮಿನಲ್ಲಿ ಅವುಗಳನ್ನು ಸಿಬ್ಬಂದಿ ಜೋಡಿಸಿಟ್ಟರು ಚಿತ್ರ/ ಗೋವಿಂದರಾಜ ಜವಳಿ

ಸಾಧನಾ ಸಮಾವೇಶ ಇಂದು.....

ಒಂದನೇ ಪುಟದಿಂದ...

ಕಂದಾಯ ಗ್ರಾಮಗಳಲ್ಲಿನ 1,11,111 ಲಕ್ಷ ರೈತರಿಗೆ ಇದೇ ಸಮಾರಂಭದಲ್ಲಿ ಹಕ್ಕುಪತ್ರ ವಿತರಿಸುವ ಮಹತ್ವದ ಯೋಜನೆಗೆ ಈ ವೇದಿಕೆಯಲ್ಲಿಯೇ ಚಾಲನೆ ನೀಡಲಾಗುತ್ತದೆ. ಬೆಳಿಗ್ಗೆ 11 ಗಂಟೆಗೆ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರು, ಸಂಸದರು, ಶಾಸಕರು ಪಾಲ್ಗೊಳ್ಳಲಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಬಿ.ಝೆಡ್. ಜಮೀರ್ ಅಹಮದ್ ಖಾನ್, ಕಂದಾಯ ಸಚಿವ ಕೃಷ್ಣ ಬೈರೇಗೌಡ ಸ್ಥಳದಲ್ಲೇ ಮೊಕ್ಕಾಂ ಹೂಡಿ, ಕಾರ್ಯಕ್ರಮದ ತಯಾರಿ ನಡೆಸಿದ್ದಾರೆ. ಭಾನುವಾರವೇ ಇಲ್ಲಿಗೆ ಬಂದಿದ್ದ ಡಿ.ಕೆ. ಶಿವಕುಮಾರ್ ಅವರು, ಸಚಿವರು, ಶಾಸಕರು, ಕಾರ್ಯಕರ್ತರ ಜತೆಗೂಡಿ ಸೋಮವಾರ ಬೈಕ್ ರ‍್ಯಾಲಿ ನಡೆಸಿದರು.

ಸಮಾವೇಶ ಸ್ಥಳದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಡಿ.ಕೆ.ಶಿವಕುಮಾರ್ ಅವರು, 'ಬಡವರಿಗೆ ನೆರವಾದ ಸಂತೃಪ್ತ ಭಾವ ಮತ್ತು ನುಡಿದಂತೆ ನಡೆದಿದ್ದೇವೆ ಎಂಬ ತೃಪ್ತಿಯೊಂದಿಗೆ ಇಲ್ಲಿ ಸೇರುತ್ತಿದ್ದೇವೆ. ನಾವಿಲ್ಲಿ ಸಂಭ್ರಮ ಆಚರಿಸುತ್ತಿಲ್ಲ, ಸಮಾಜಕ್ಕೆ ಋಣ ತೀರಿಸಿದ ಖುಷಿಯಲ್ಲಿದ್ದೇವೆ' ಎಂದರು.

'ಬಿಜೆಪಿಯವರು ₹20 ಕೋಟಿ ಖರ್ಚು ಮಾಡಿ, ಪ್ರಧಾನಿ ಕರೆಸಿ ಹಕ್ಕುಪತ್ರ ನೀಡುವ ಘೋಷಣೆ ಮಾಡಿದರೇ ಹೊರತು ಅವರಿಗೆ ಅದನ್ನು ಅನುಷ್ಠಾನಕ್ಕೆ ತರಲು ಆಗಲಿಲ್ಲ. ಆದರೆ, ಕಂದಾಯ ಸಚಿವ ಕೃಷ್ಣ ಬೈರೇಗೌಡರ ಪ್ರಯತ್ನದಿಂದ ಲಕ್ಷಾಂತರ ಕುಟುಂಬಗಳಿಗೆ ಹಕ್ಕುಪತ್ರದ ಜತೆಗೆ ಸರ್ಕಾರದ ಎಲ್ಲಾ ಸೌಲಭ್ಯಗಳೂ ಸಿಗುವಂತಾಗಿದೆ. ಕಂದಾಯ ಗ್ರಾಮಗಳನ್ನು ರೂಪಿಸಿದೆ. ಸಮಾವೇಶದಲ್ಲಿ ಇದೆಲ್ಲವನ್ನೂ ರಾಜ್ಯದ ಜನರಿಗೆ ತಿಳಿಸಲಾಗುವುದು' ಎಂದರು.

'ಪೂರ್ಣಾವಧಿ ಸಿ. ಎಂ ಘೋಷಿಸಲಿ'

'ಇದು ಸಿದ್ದರಾಮಯ್ಯ ಅವರ ಕೊನೆಯ ದೊಡ್ಡ ಸಮಾವೇಶ ಇದ್ದಂತಿದೆ. ನವೆಂಬರ್‌ನಲ್ಲಿ ಅವರ ಅವಧಿ ಮುಗಿಯಲಿದೆ. ಈ ನಿಟ್ಟಿನಲ್ಲಿ ಸಾಧ್ಯವಾದ ಕಡೆಯಲ್ಲೆಲ್ಲ ಡಿ.ಕೆ.ಶಿವಕುಮಾರ್ ಖೆಡ್ಡಾ ತೋಡುತ್ತಿದ್ದಾರೆ. ಸಿದ್ದರಾಮಯ್ಯ ಅವರೇ ಮುಂದಿನ ಮೂರು ವರ್ಷವೂ ಮುಖ್ಯಮಂತ್ರಿ ಆಗಿಯೇ ಇರುತ್ತಾರೆ ಎಂಬುದನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಘೋಷಿಸಬೇಕು' ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಸವಾಲು ಹಾಕಿದರು.

'ಮುಡಾ, ವಾಲ್ಮೀಕಿ ನಿಗಮ ಹಗರಣದಂತಹ ಕಳಂಕ ಹೊತ್ತುಕೊಂಡವರು ಇಲ್ಲಿ ಸಮಾವೇಶ ನಡೆಸುವುದರಲ್ಲಿ ಅರ್ಥವಿಲ್ಲ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ನಮ್ಮ ರಾಜ್ಯ ಬಿಟ್ಟು ದೇಶದಲ್ಲಿ ಎಲ್ಲಿಯೂ ಗ್ಯಾರಂಟಿ ಯೋಜನೆಗಳು ಜಾರಿ ಆಗಿಲ್ಲ. ಹಾಡಿ, ತಾಂಡಾಗಳಲ್ಲಿ ವಾಸವಿದ್ದ ಜನರನ್ನು ಹುಡುಕಿ, ಹಕ್ಕುಪತ್ರ ನೀಡುವ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ
ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಸಮರ್ಪಣಾ ಸಾಧನಾ ಸಮಾವೇಶದ ಕುರಿತು ಅರಿವು ಮೂಡಿಸಲು ಹೊಸಪೇಟೆಯಲ್ಲಿ ಸೋಮವಾರ ನಡೆದ ಬೈಕ್ ರ‍್ಯಾಲಿಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ವಸತಿ ಸಚಿವ ಜಮೀರ್ ಅಹಮದ್ ಖಾನ್ ಸ್ವತಃ ದ್ವಿಚಕ್ರ ವಾಹನ ಚಾಲನೆ ಮಾಡಿದರು –ಪ್ರಜಾವಾಣಿ ಚಿತ್ರ

'ಬಂಜಾರ ಸಮಾಜಕ್ಕೆ ಸಚಿವ ಸ್ಥಾನ ಬೇಕು'

ಪ್ರಜಾವಾಣಿ ವಾರ್ತೆ

ಹಾವೇರಿ: 'ನಮ್ಮ ಬಂಜಾರ (ಲಂಬಾಣಿ) ಸಮಾಜದ ಯಾರೊಬ್ಬರೂ ಸಚಿವರಾಗಿಲ್ಲ. ಸಮಾಜದವರಿಗೆ ಸಚಿವ ಸ್ಥಾನ ನೀಡಲು ಕೋರಿದ್ದೇನೆ. ಅಂತಿಮ ನಿರ್ಣಯ ಪಕ್ಷದ ಹೈಕಮಾಂಡ್‌ಗೆ ಬಿಟ್ಟಿರುವೆ' ಎಂದು ಶಾಸಕ ರುದ್ರಪ್ಪ ಲಮಾಣಿ ಹೇಳಿದರು.

'ಕಾಂಗ್ರೆಸ್ ಸರ್ಕಾರವು ಅಧಿಕಾರಕ್ಕೆ ಬಂದಾಗಲೂ ನಾನು ಇದೇ ಬೇಡಿಕೆ ಇರಿಸಿದ್ದೆ. ಸುರ್ಜೇವಾಲಾ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರು ಮನವೊಲಿಸಿ, ವಿಧಾನಸಭೆಯ ಉಪಸಭಾಪತಿ ಸ್ಥಾನ ನೀಡಿದರು' ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು

ರುದ್ರಪ್ಪ ಲಮಾಣಿ

'ಕೇಂದ್ರ ಕೊಟ್ಟ ₹5,000 ಕೋಟಿ ಬಳಸದ ರಾಜ್ಯ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕೇಂದ್ರದಿಂದ ರಾಜ್ಯಕ್ಕೆ ₹4,195 ಕೋಟಿ ಅನುದಾನ ಬಾಕಿಯಿದೆ ಎಂದು ಹೇಳುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಬೂಟಾಟಿಕೆ ಪ್ರದರ್ಶಿಸುತ್ತಿದ್ದಾರೆ' ಎಂದು ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ವಾಗ್ದಾಳಿ ನಡೆಸಿದರು.

ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಸಿದ್ದರಾಮಯ್ಯ ಅವರು ತಮ್ಮ ಸರ್ಕಾರದ ಆರ್ಥಿಕ ದುರುಪಯೋಗ, ಆಡಳಿತ ವೈಫಲ್ಯ, ಅಸಮರ್ಥತೆ ಒಪ್ಪಿಕೊಳ್ಳುವುದನ್ನು ಬಿಟ್ಟು ಕೇಂದ್ರದ ಮೇಲೆ ವೃಥಾ ಆರೋಪ ಹೊರಿಸುತ್ತಿದ್ದಾರೆ. ಜನರಿಗೆ ನೀಡಿದ ಭರವಸೆ ಈಡೇರಿಸುವಲ್ಲಿ ವಿಫಲರಾಗಿದ್ದಾರೆ' ಎಂದು ಟೀಕಿಸಿದರು.

ಪ್ರಲ್ಹಾದ ಜೋಶಿ

'ಪಿಎಂಎವೈ (ಗ್ರಾಮೀಣ), ಸ್ವಚ್ಛ ಭಾರತ ಮಿಷನ್ (ನಗರ), ಅಮೃತ್, ಪೋಷಣ್, ಸಮಗ್ರ ಶಿಕ್ಷಣ ಮುಂತಾದ ಅನೇಕ ಪ್ರಮುಖ ಯೋಜನೆಗಳು ಸೇರಿದಂತೆ ವಿವಿಧ ಕೇಂದ್ರ ಪ್ರಾಯೋಜಿತ ಯೋಜನೆಗಳ ಅಡಿಯಲ್ಲಿ ಮಂಜೂರಾಗಿರುವ ₹5,000 ಕೋಟಿಗೂ ಹೆಚ್ಚು ಅನುದಾನವನ್ನು ರಾಜ್ಯ ಬಳಸಿಲ್ಲ. ಮೊದಲು ಅದನ್ನು ಬಳಸಲಿ' ಎಂದರು.

ಕೆಎಸ್‌ಆರ್‌ಟಿಸಿಯಲ್ಲಿ ಯುಪಿಐ ಆಧಾರಿತ ಟಿಕೆಟ್ ವ್ಯವಸ್ಥೆಗೆ ತಾಂತ್ರಿಕ ತೊಡಕು

ಸ್ಮಾರ್ಟ್ ಇಟಿಎಂಗೆ ನೆಟ್‌ವರ್ಕ್ ಕಿರಿಕಿರಿ

• ಜಿ.ಬಿ.ನಾಗರಾಜ್

ಮುಖ್ಯಾಂಶಗಳು
- ನೆಟ್‌ವರ್ಕ್, ಸರ್ವರ್, ಟೈಮ್ ಔಟ್ ಸಮಸ್ಯೆ
- ಬ್ಯಾಂಕ್ ಖಾತೆಗೆ ಹಣ ಮರಳಲು ಬೇಕು ವಾರ
- ನೆಟ್‌ವರ್ಕ್ ಖಚಿತಪಡಿಸಿಕೊಂಡು ಟಿಕೆಟ್ ವಿತರಣೆಗೆ ಸೂಚನೆ

ದಾವಣಗೆರೆ: ಕ್ಯೂಆರ್ ಕೋಡ್ ಬಳಸಿ ಡಿಜಿಟಲ್ ರೂಪದಲ್ಲಿ ಟಿಕೆಟ್ ದರ ಪಾವತಿಸುವ ಸೌಲಭ್ಯ ಕಲ್ಪಿಸಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ (ಕೆಎಸ್‌ಆರ್‌ಟಿಸಿ) ಸ್ಮಾರ್ಟ್ ಎಲೆಕ್ಟ್ರಿಕ್ ಟಿಕೆಟ್ ಮಷಿನ್‌ಗಳಿಗೆ (ಇಟಿಎಂ) ನೆಟ್‌ವರ್ಕ್ ಸಮಸ್ಯೆ ಕಾಡುತ್ತಿದೆ.

ಯುಪಿಐ ಮೂಲಕ ಟಿಕೆಟ್ ದರ ಪಾವತಿಸುವ ಪ್ರಯಾಣಿಕರ ಬ್ಯಾಂಕ್ ಖಾತೆಯಿಂದ ಹಣ ಕಡಿತವಾದರೂ ಒಮ್ಮೊಮ್ಮೆ ಟಿಕೆಟ್ ಮುದ್ರಿತವಾಗುತ್ತಿಲ್ಲ. ಪಾವತಿ ವ್ಯವಸ್ಥೆಯಲ್ಲಿ ಕಾಣಿಸಿಕೊಳ್ಳುವ ತಾಂತ್ರಿಕ ದೋಷವು ಪ್ರಯಾಣಿಕರು ಹಾಗೂ ನಿರ್ವಾಹಕರ ನಡುವಿನ ವಾಗ್ವಾದಕ್ಕೆ ಕಾರಣವಾಗುತ್ತಿದೆ. ಇದರಿಂದ ಅರಣ್ಯ, ಗುಡ್ಡಗಾಡು, ಗ್ರಾಮೀಣ ಪ್ರದೇಶದಲ್ಲಿ ಯುಪಿಐ ಮೂಲಕ ಟಿಕೆಟ್ ವಿತರಣೆಗೆ ನಿರ್ವಾಹಕರು ಹಿಂದೇಟು ಹಾಕುತ್ತಿದ್ದಾರೆ.

ಯುಪಿಐ ಆಧಾರಿತ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಟಿಕೆಟ್ ದರ ಪಾವತಿಸುವ ವ್ಯವಸ್ಥೆಯನ್ನು ಸಾರಿಗೆ ಇಲಾಖೆ ಅನುಷ್ಠಾನಗೊಳಿಸಿದೆ. ಕೆಎಸ್‌ಆರ್‌ಟಿಸಿಯು ಡೈನಾಮಿಕ್ ಕ್ಯೂಆರ್ ಕೋಡ್ ಆಧಾರಿತ ಯುಪಿಐ ವ್ಯವಸ್ಥೆಯನ್ನು ಅಳವಡಿಸಿಕೊಂಡಿದೆ. ಯುಪಿಐ ವ್ಯವಸ್ಥೆ ಪೂರ್ಣಗೊಂಡ ಬಳಿಕ ಟಿಕೆಟ್ ಮುದ್ರಣವಾಗುತ್ತದೆ. ನೆಟ್‌ವರ್ಕ್, ಸರ್ವರ್ ಸಮಸ್ಯೆ ಹಾಗೂ ಪ್ರಕ್ರಿಯೆ ಪೂರ್ಣಗೊಳ್ಳುವುದಕ್ಕೂ ಮುನ್ನ ನಿಗದಿತ ಸಮಯ ಮುಗಿದ (ಟೈಮ್ ಔಟ್) ಕಾರಣಕ್ಕೆ ಟಿಕೆಟ್ ಲಭ್ಯವಾಗದು. ಇದು ಪ್ರಯಾಣಿಕರು ಮತ್ತು ನಿರ್ವಾಹಕರಿಗೆ ತಲೆನೋವಾಗಿ ಪರಿಣಮಿಸಿದೆ.

ಚಲಿಸುವ ಬಸ್‌ನಲ್ಲಿ ಯುಪಿಐ ಪಾವತಿಗೆ ತಾಂತ್ರಿಕ ದೋಷಗಳು ಎದುರಾಗುತ್ತಿವೆ. ನೆಟ್‌ವರ್ಕ್ ತೊಂದರೆ ಇರುವ ಪ್ರದೇಶದಲ್ಲಿ ಹಣ ಪಾವತಿ ವ್ಯವಸ್ಥೆ ವಿಫಲಗೊಳ್ಳುತ್ತಿದೆ. ನೆಟ್‌ವರ್ಕ್ ಖಚಿತಪಡಿಸಿಕೊಂಡು ಯುಪಿಐ ಟಿಕೆಟ್ ವಿತರಣೆ ಮಾಡುವಂತೆ ಕೆಎಸ್‌ಆರ್‌ಟಿಸಿಯು ನಿರ್ವಾಹಕರಿಗೆ ಸೂಚನೆ ನೀಡಿದೆ. ನೆಟ್‌ವರ್ಕ್ ಸರಿಯಾಗಿ ಇಲ್ಲದ ಪ್ರದೇಶದಲ್ಲಿ ಯುಪಿಐ ಆಧಾರಿತ ಟಿಕೆಟ್ ವಿತರಣೆಗೆ ನಿರ್ವಾಹಕರು ಆಸಕ್ತಿ ತೋರುತ್ತಿಲ್ಲ.

'ಯುಪಿಐ ಪಾವತಿಯಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡರೆ ಹಣ ಪಾವತಿ ವ್ಯವಸ್ಥೆ ಸ್ಥಗಿತಗೊಳ್ಳುತ್ತದೆ. ಪ್ರಯಾಣಿಕರ ಖಾತೆಯಿಂದ ಕಡಿತಗೊಂಡ ಹಣ ನಿಗಮದ ಖಾತೆಗೆ ಜಮಾ ಆಗುವುದಿಲ್ಲ. ಇದು ಪ್ರಯಾಣಿಕರಿಗೆ ಮರಳಲು ಸರಾಸರಿ ಮೂರು ದಿನ ತೆಗೆದುಕೊಳ್ಳುತ್ತದೆ. ಇದನ್ನು ಒಪ್ಪದ ಅನೇಕರು ವಾಗ್ವಾದಕ್ಕೆ ಇಳಿಯುತ್ತಿದ್ದಾರೆ. ಆಗ ಅನಿವಾರ್ಯವಾಗಿ ನಿರ್ವಾಹಕರು ಪ್ರಯಾಣಿಕರ ದರ ತೆರಬೇಕು. ಇಂತಹ ಹಲವು ಪ್ರಕರಣಗಳಲ್ಲಿ ಹಣ ಕಳೆದುಕೊಂಡಿದ್ದೇನೆ' ಎಂದು ದಾವಣಗೆರೆ ವಿಭಾಗದ ನಿರ್ವಾಹಕರೊಬ್ಬರು ಅಳಲು ತೋಡಿಕೊಂಡರು.

ಯುಪಿಐ ಪಾವತಿ ವ್ಯವಸ್ಥೆ ವಿಫಲಗೊಂಡು ಖಾತೆಯಿಂದ ಕಡಿತವಾದ ಹಣ ವಾರದೊಳಗೆ ಮರಳಿ ಜಮಾ ಆಗುತ್ತದೆ. ಪ್ರಯಾಣಿಕರಿಗೆ ಈ ಮಾಹಿತಿ ನೀಡಿ ಮನವೊಲಿಸಿದ್ದೇವೆ
ಕಿರಣ್‌ಕುಮಾರ್ ಬಸಾಪುರ,
ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ, ದಾವಣಗೆರೆ

ಕೆಎಸ್‌ಆರ್‌ಟಿಸಿಯ ಸ್ಮಾರ್ಟ್ ಇಟಿಎಂ

ಯುಪಿಐ ವ್ಯವಸ್ಥೆ ವಿಫಲಗೊಂಡರೆ ಪ್ರಯಾಣಿಕರು ನಗದು ನೀಡಿ ಟಿಕೆಟ್ ಪಡೆಯಬೇಕು. 'ಬ್ಯಾಂಕ್ ಖಾತೆಯಿಂದ ಹಣ ಕಡಿತಗೊಂಡರೂ ಟಿಕೆಟ್‌ಗೆ ಮತ್ತೇಕೆ ಹಣ ನೀಡಬೇಕು' ಎಂಬುದು ಪ್ರಯಾಣಿಕರ ಪ್ರಶ್ನೆ. 'ವಿಫಲಗೊಂಡ ಪಾವತಿ ವ್ಯವಸ್ಥೆಯಲ್ಲಿ ಪ್ರಯಾಣಿಕರ ಬ್ಯಾಂಕ್ ಖಾತೆಗೆ ಹಣ ಸ್ವಯಂಚಾಲಿತವಾಗಿ ಜಮಾ ಆಗುತ್ತದೆ' ಎಂಬ ನಿರ್ವಾಹಕರ ಭರವಸೆಯನ್ನು ಯಾರೊಬ್ಬರೂ ಒಪ್ಪುತ್ತಿಲ್ಲ.

ನಗರ ಪ್ರದೇಶ ಹಾಗೂ ನೆಟ್‌ವರ್ಕ್ ಪೂರ್ಣವಾಗಿ ಲಭ್ಯವಿರುವ ಸ್ಥಳದಲ್ಲಿ ಮಾತ್ರ ಯುಪಿಐ ಆಧಾರಿತ ಟಿಕೆಟ್ ವಿತರಿಸಲಾಗುತ್ತಿದೆ. ತಾಂತ್ರಿಕ ಸಮಸ್ಯೆ ಕಾಣಿಸಿಕೊಳ್ಳುವ ಸಂದರ್ಭದಲ್ಲಿ ನಗದು ನೀಡುವಂತೆ ನಿರ್ವಾಹಕರು ಕೇಳಿಕೊಳ್ಳುತ್ತಿದ್ದಾರೆ. ಇದಕ್ಕೂ ಕೆಲ ಪ್ರಯಾಣಿಕರು ಆಕ್ಷೇಪ ವ್ಯಕ್ತಪಡಿಸುತ್ತಾರೆ.

'ಜೇಬಿನಲ್ಲಿ ಹಣ ಇಲ್ಲದಿದ್ದರೂ ಫೋನ್ ಕೈಯಲ್ಲಿ ಹಿಡಿದು ಬಸ್ ಏರಿದ್ದೇನೆ. ಯುಪಿಐ ಪಾವತಿ ವಿಫಲಗೊಂಡ ನೆಪವೊಡ್ಡಿ ನಿರ್ವಾಹಕರು ಮತ್ತೆ ಟಿಕೆಟ್ ದರ ಕೇಳುತ್ತಿದ್ದಾರೆ. ಬ್ಯಾಂಕ್ ಖಾತೆಯಿಂದ ಕಡಿತಗೊಂಡ ಹಣ ಯಾವಾಗ ಮರಳಲಿದೆ ಎಂಬ ಖಚಿತತೆ ಇಲ್ಲ. ಟಿಕೆಟ್ ದರ ನೀಡಲು ಜೇಬಿನಲ್ಲಿ ಹಣವಿಲ್ಲ. ಯುಪಿಐ ಸೇವೆ ಇಲ್ಲ ಎಂಬ ಸಂದೇಶವನ್ನಾದರೂ ಬಸ್‌ನಲ್ಲಿ ಪ್ರದರ್ಶಿಸಿ' ಎಂದು ಚನ್ನಗಿರಿಗೆ ಪ್ರಯಾಣ ಮಾಡುತ್ತಿದ್ದ ದಾವಣಗೆರೆಯ ನಿಟುವಳ್ಳಿಯ ಮಧು ಅಸಮಾಧಾನ ಹೊರಹಾಕಿದರು.

ಗಿಗ್ ಕಾರ್ಮಿಕರ ವಿಮಾ ಯೋಜನೆ: 10,205 ಮಂದಿ ನೋಂದಣಿ

ಬೆಂಗಳೂರು ಮುಂದೆ, ಜಿಲ್ಲೆಗಳು ಹಿಂದೆ

• ಎಂ. ಮಹೇಶ್

ಮೈಸೂರು: 'ಅಸಂಘಟಿತ' ಕಾರ್ಮಿಕರಿಗೆ ಸಹಾಯಹಸ್ತ ಚಾಚಲು ದೇಶದಲ್ಲಿಯೇ ಮೊದಲ ಬಾರಿಗೆ ರಾಜ್ಯದಲ್ಲಿ ಜಾರಿಗೊಳಿಸಲಾಗಿರುವ 'ಗಿಗ್ ಕಾರ್ಮಿಕರ ವಿಮಾ ಯೋಜನೆ'ಯಡಿ ಮೇ ಮೊದಲ ವಾರದವರೆಗೆ 10,205 ಮಂದಿ ನೋಂದಾಯಿಸಿದ್ದಾರೆ. 5 ಸಾವಿರ ಮೀರಿದ ನೋಂದಣಿಯಿಂದ ಬೆಂಗಳೂರು ನಗರ ಜಿಲ್ಲೆ ಮೊದಲ ಸ್ಥಾನದಲ್ಲಿದೆ.

ಕಾರ್ಮಿಕ ಇಲಾಖೆಯು ಅನುಷ್ಠಾನಗೊಳಿಸಿರುವ ಈ ಯೋಜನೆಯಡಿ ಬಾಗಲಕೋಟೆ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಹಾವೇರಿ, ಮಂಡ್ಯ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಎರಡಂಕಿಯ ನೋಂದಣಿಯಷ್ಟೇ ಆಗಿದೆ. ಉಳಿದ ಜಿಲ್ಲೆಗಳಲ್ಲಿ ಮೂರಂಕಿ ತಲುಪಿದೆ.

'ಸೇವಾ ಸಿಂಧು' ಪೋರ್ಟಲ್ ಮೂಲಕ ನೋಂದಣಿಗೆ ಅವಕಾಶವಿದ್ದು, 9,379 ಅರ್ಜಿಗಳನ್ನು ಅನುಮೋದಿಸಲಾಗಿದೆ. 756 ಅರ್ಜಿಗಳು ಪರಿಶೀಲನೆ ಹಂತದಲ್ಲಿವೆ. 31 ತಿರಸ್ಕೃತಗೊಂಡಿವೆ.

ಈ ವಿಮಾ ಯೋಜನೆಯು ಅತ್ಯಂತ ಮಹತ್ವದ್ದಾಗಿದ್ದು ಗಿಗ್ ಕಾರ್ಮಿಕರು ಆನ್‌ಲೈನ್‌ನಲ್ಲಿ ನೋಂದಾಯಿಸಿಕೊಂಡು ಸದ್ಬಳಕೆ ಮಾಡಿಕೊಳ್ಳಬೇಕು

ಎಚ್.ಎನ್. ಗೋಪಾಲಕೃಷ್ಣ, ಆಯುಕ್ತ, ಕಾರ್ಮಿಕ ಇಲಾಖೆ

ಕರ್ತವ್ಯದಲ್ಲಿ ಇಲ್ಲದಿರುವಾಗಲೂ: ರಾಜ್ಯದಲ್ಲಿ 'ಗಿಗ್' ಕ್ಷೇತ್ರದ ಕಾರ್ಮಿಕರು (ವಸ್ತುಗಳು, ಆಹಾರ ಪದಾರ್ಥ ಮೊದಲಾದವುಗಳನ್ನು ತಲುಪಿಸುವ ಸ್ವತಂತ್ರ ಕಾರ್ಮಿಕರು) 2.39 ಲಕ್ಷ ಇರಬಹುದೆಂದು ಅಂದಾಜಿಸಲಾಗಿದೆ.

ಅವರಿಗಾಗಿ ತಂದಿರುವ ಯೋಜನೆಯ ಸೌಲಭ್ಯವು ಕರ್ತವ್ಯದಲ್ಲಿರುವಾಗ ಅಥವಾ ಇಲ್ಲದಿರುವಾಗ ಸಂಭವಿಸುವ ಅಪಘಾತಗಳಿಗೂ ಅನ್ವಯ ಆಗುತ್ತದೆ. ಪ್ರೀಮಿಯಂ ಪಾವತಿಸದೆ ಉಚಿತವಾಗಿ ನೋಂದಾಯಿಸಬಹುದು.

ಸ್ವಿಗ್ಗಿ, ಜೊಮ್ಯಾಟೊಗಳಂತಹ ಸಂಸ್ಥೆಗಳಲ್ಲಿ ಫುಡ್ ಡೆಲಿವರಿ ಮಾಡುವ ಹಾಗೂ ಇ-ಕಾಮರ್ಸ್ ಸಂಸ್ಥೆಗಳಾದ ಅಮೆಜಾನ್, ಫ್ಲಿಫ್‌ಕಾರ್ಟ್, ಬಿಗ್‌ಬಾಸ್ಕೆಟ್, ಪೋರ್ಟರ್, ಫಾರ್ಮಸಿ, ಬ್ಲಿಂಕ್‌ಇಟ್, ಜೆಪ್ಟೋ, ಬಿಗ್ ಬಾಸ್ಕೆಟ್, ಡಾಮಿನೋಜ್ ಮೊದಲಾದ ಕಂಪನಿಗಳಲ್ಲಿ ಡೆಲಿವರಿ ವೃತ್ತಿಯಲ್ಲಿ ತೊಡಗಿರುವವರನ್ನು 'ಗಿಗ್' ಕಾರ್ಮಿಕರೆಂದು ಪರಿಗಣಿಸಲಾಗಿದೆ. ಅವರು ಹಾಗೂ ಕುಟುಂಬದವರಿಗೆ ಸಾಮಾಜಿಕ ಭದ್ರತೆ ಒದಗಿಸುವುದೇ ಯೋಜನೆಯ ಉದ್ದೇಶ.

ಕಂಪನಿಗಳಿಗೆ ಮನವಿ: 'ಯೋಜನೆಗೆ ಉತ್ತಮ ಪ್ರತಿಕ್ರಿಯೆ ದೊರೆಯುತ್ತಿದ್ದು, ಜಾಗೃತಿ ಮೂಡಿಸಲಾಗುತ್ತಿದೆ. ನೋಂದಣಿ ಮಾಡಿಸಲೆಂದು ಶಿಬಿರಗಳನ್ನೂ ಆಯೋಜಿಸುತ್ತಿದ್ದೇವೆ. ತಮ್ಮ ಬಳಿ ಕೆಲಸ ಮಾಡುತ್ತಿರುವ ಕಾರ್ಮಿಕರ ನೋಂದಣಿಗೆ ಕ್ರಮ ಕೈಗೊಳ್ಳುವಂತೆ ಆಯಾ ಕಂಪನಿಯವರಿಗೇ (ಅಗ್ರಿಗೇಟರ್ಸ್) ಕೋರುತ್ತಿದ್ದೇವೆ' ಎಂದು ಇಲಾಖೆಯ ಆಯುಕ್ತ ಎಚ್.ಎನ್. ಗೋಪಾಲಕೃಷ್ಣ 'ಪ್ರಜಾವಾಣಿ'ಗೆ ತಿಳಿಸಿದರು.

'ನೋಂದಾಯಿಸಿದ ಗಿಗ್ ಕಾರ್ಮಿಕ ಅಪಘಾತದಿಂದ ಮೃತಪಟ್ಟರೆ ವಿಮಾ ಪರಿಹಾರವಾಗಿ ₹2 ಲಕ್ಷ ಹಾಗೂ ಜೀವ ವಿಮೆಯ ಮೊತ್ತ ₹2 ಲಕ್ಷ ಸೇರಿ ಒಟ್ಟು ₹4 ಲಕ್ಷ ಕುಟುಂಬದವರಿಗೆ ದೊರೆಯಲಿದೆ. ಶಾಶ್ವತ ಅಂಗವಿಕಲತೆ ಹೊಂದಿದಲ್ಲಿ ₹2 ಲಕ್ಷ, ಆಸ್ಪತ್ರೆ ವೆಚ್ಚವಾಗಿ ₹1 ಲಕ್ಷದವರೆಗೆ ಹಾಗೂ ಜೀವ ವಿಮೆಯಾಗಿ ₹2 ಲಕ್ಷ ಸಿಗುತ್ತದೆ. ಈ ಕಾರ್ಮಿಕರು ಸೌಲಭ್ಯ ಪಡೆದುಕೊಳ್ಳಲು ಮುಂದೆ ಬರಬೇಕು. ಅವರಿಗೆ ಮತ್ತಷ್ಟು ಸಾಮಾಜಿಕ ಭದ್ರತೆ ಕಲ್ಪಿಸುವ ಆಶಯದೊಂದಿಗೆ, ಅವರಿಗಾಗಿಯೇ ಪ್ರತ್ಯೇಕ ಮಂಡಳಿ ರಚನೆಗೂ ಸರ್ಕಾರ ಕ್ರಮ ವಹಿಸಿದೆ' ಎಂದು ತಿಳಿಸಿದರು.

ನೋಂದಣಿಯಲ್ಲಿ ಟಾಪ್ 10 ಜಿಲ್ಲೆಗಳು

ಬೆಂಗಳೂರು	5,349
ಧಾರವಾಡ	512
ದಕ್ಷಿಣ ಕನ್ನಡ	398
ಬೆಳಗಾವಿ	371
ಉತ್ತರಕನ್ನಡ	336
ಮೈಸೂರು	285
ದಾವಣಗೆರೆ	208
ವಿಜಯಪುರ	176
ತುಮಕೂರು	167
ಶಿವಮೊಗ್ಗ	162

(ಮಾಹಿತಿ: ಕಾರ್ಮಿಕ ಇಲಾಖೆ)

'ಸೆಸ್' ಸಂಗ್ರಹಿಸುವ ಉದ್ದೇಶ

'ಗಿಗ್ ಕಾರ್ಮಿಕರನ್ನು ಬಳಸಿಕೊಳ್ಳುವ ಸಂಬಂಧಿತ ಸಂಸ್ಥೆಗಳಿಂದ (ಅಗ್ರಿಗೇಟರ್ಸ್) ಶೇ 5ರಷ್ಟು 'ಸೆಸ್' ಸಂಗ್ರಹಿಸಿ ಉಳಿದ ಹಣವನ್ನು ಭರಿಸಿ ಗಿಗ್ ಕಾರ್ಮಿಕರ ಕಲ್ಯಾಣಕ್ಕೆ ಯೋಜನೆಗಳನ್ನು ರೂಪಿಸಲು ಸರ್ಕಾರ ನಿರ್ಧರಿಸಿದೆ. ಅವರಿಗೆ ಭವಿಷ್ಯ ನಿಧಿ, ವಸತಿ, ಮಕ್ಕಳಿಗೆ ಶೈಕ್ಷಣಿಕ ಸೌಲಭ್ಯ, ಕಾರ್ಮಿಕ ಕೌಶಲಾಭಿವೃದ್ಧಿ ಕಾರ್ಯಕ್ರಮ, ಅಂತ್ಯಸಂಸ್ಕಾರ ಧನ ಸಹಾಯ ಕಲ್ಪಿಸುವುದಕ್ಕೂ ಯೋಜಿಸಲಾಗಿದೆ. ಇದಕ್ಕಾಗಿ ಪ್ರತಿ ವಹಿವಾಟಿನ ಮೇಲೆ ಶೇ 1ರಿಂದ ಶೇ 2 ಮೀರದಂತೆ ಕ್ಷೇಮಾಭಿವೃದ್ಧಿ ಶುಲ್ಕ ಸಂಗ್ರಹಿಸಲು ನಿರ್ಧರಿಸಲಾಗಿದೆ' ಎನ್ನುತ್ತಾರೆ ಅಧಿಕಾರಿಗಳು.

ಜನೌಷಧ ಕೇಂದ್ರ ಸ್ಥಗಿತ: ಆದೇಶ ಹಿಂಪಡೆಯಲು ಆಗ್ರಹ

ಶಿರಸಿ: 'ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿನ ಪ್ರಧಾನಮಂತ್ರಿ ಜನೌಷಧ ಕೇಂದ್ರಗಳನ್ನು ಮುಚ್ಚುವುದು ಸರಿಯಲ್ಲ. ರಾಜ್ಯ ಸರ್ಕಾರ ಕೂಡಲೇ ಈ ಆದೇಶವನ್ನು ಹಿಂಪಡೆಯಬೇಕು' ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಆಗ್ರಹಿಸಿದ್ದಾರೆ.

'ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿ ಜನೌಷಧ ಕೇಂದ್ರಗಳು ಇರುವುದರಿಂದ ಬಡ ರೋಗಿಗಳಿಗೆ ಅನುಕೂಲಕರವಾಗಿದೆ. ಅಸಂಖ್ಯಾತ ಜನರಿಗೆ ತುಂಬಾ ಪ್ರಯೋಜನವಾಗಿದೆ. ಆದರೆ, ರಾಜ್ಯದ ಕಾಂಗ್ರೆಸ್ ಸರ್ಕಾರವು ಸೂಕ್ತ ಕಾರಣ ನೀಡದೆ, ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿರುವ ಈ ಜನೌಷಧ ಕೇಂದ್ರಗಳನ್ನು ಮುಚ್ಚುವಂತೆ ಆದೇಶ ಹೊರಡಿಸಿರುವುದು ದುರದೃಷ್ಟಕರ ಮತ್ತು ಬಡವರ ವಿರೋಧಿ ನಡೆಯಾಗಿದೆ' ಎಂದು ಅವರು ತಿಳಿಸಿದ್ದಾರೆ.

ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತ

ನೋಂ. ಕಚೇರಿ, 30/1, 1ನೇ ಮತ್ತು 2ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಮಿಲ್ಲರ್ಸ್ ಟ್ಯಾಂಕ್ ಬಂಡ್ ಏರಿಯಾ, ವಸಂತನಗರ, ಬೆಂಗಳೂರು–560051

ಸಂಖ್ಯೆ: ಉಪ್ರವ್ಯ–3/ಬೆಂಘತ್ಯಾನಿನಿ/ಟೆಂಡರ್/03/2025–26 ದಿನಾಂಕ: 19.05.2025

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ಸಿಪಿಡಬ್ಲ್ಯೂಡಿ/ಕೆಪಿಡಬ್ಲ್ಯೂಡಿ/ರೈಲ್ವೇಸ್/ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿಸಿಕೊಂಡಿರುವ ಗುತ್ತಿಗೆದಾರರಿಂದ ಪಟ್ಟಿಯಲ್ಲಿರುವ ಕಾಮಗಾರಿಗಳಿಗೆ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕಾಮಗಾರಿಗಳ ಹೆಸರು	ಕಾಮಗಾ–ರಿಯ ಮೊತ್ತ	ಇಎಂಡಿ	ಪೂರ್ಣಗೊ–ಳಿಸಲು ನಿಗದಿತ ಅವಧಿ	ಗುತ್ತಿಗೆದಾರರ ಅರ್ಹತೆ
ಒಣ ತ್ಯಾಜ್ಯ ಸಂಗ್ರಹಣ ಕೇಂದ್ರಗಳಿಂದ ಮತ್ತು ಸಂಸ್ಕರಣಾ ಘಟಕಗಳಿಂದ ರೆಫ್ಯೂಸ್ಡ್ ಡೆರೈವ್ಡ್ ಫ್ಯೂಲ್ (ಆರ್‌ಡಿಎಫ್) ಅನ್ನು ಬಿಡದಿಯ ತ್ಯಾಜ್ಯದಿಂದ ಇಂಧನ ಉತ್ಪಾದಿಸುವ ಸ್ಥಾವರಕ್ಕೆ ಸಾಗಿಸುವ ಹಾಗೂ ಸ್ಥಾವರದಲ್ಲಿ ಉತ್ಪತಿಯಾದ ಬೂದಿಯನ್ನು ಭೂಭರ್ತಿ ಸ್ಥಳಕ್ಕೆ ಸಾಗಿಸಲು ಟೆಂಡರ್. (2ನೇ ಹಂತ)	980.00 ಲಕ್ಷಗಳು	ರೂ. 1,00,000/– ಗಳನ್ನು ಆನ್‌ಲೈನ್ /ಎನ್‌ಇಎಫ್‌ಟಿ/ಒಟಿಸಿಯ ಮೂಲಕ ಇ–ಪಾವತಿ ಮತ್ತು ಉಳಿಕೆ ರೂ. 13,70,000 ಗಳನ್ನು ರಾಷ್ಟ್ರೀಕೃತ/ ಅನುಸೂಚಿತ ಬ್ಯಾಂಕುಗಳು ವಿತರಿಸುವ ಬ್ಯಾಂಕ್ ಗ್ಯಾರಂಟಿ/ಎಫ್‌ಡಿಆರ್ ಮೂಲಕ.	220 ದಿನಗಳು	ಸಾಮಾನ್ಯರಿಗೆ

ಟೆಂಡರ್ ವೇಳಾಪಟ್ಟಿ: 1) ಬಿಡ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ: **21.05.2025**ರಿಂದ ಅಪ್‌ಲೋಡ್ ಮಾಡಬಹುದು. 2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ: **26.05.2025**ರ ಮಧ್ಯಾಹ್ನ **3:00** ಗಂಟೆಗೆ ಮುಖ್ಯ ಅಭಿಯಂತರರ ಕಚೇರಿ & ಮುಖ್ಯ ಪ್ರಧಾನ ನಿರ್ದೇಶಕರು (ತಾಂತ್ರಿಕ), ಬೆಂಘತ್ಯಾನಿನಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು–560052 ಇಲ್ಲಿ ನಡೆಸಲಾಗುವುದು. 3) ಬಿಡ್‌ಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ **05.06.2025**ರ ಸಂಜೆ **4:00** ಗಂಟೆಯೊಳಗೆ ಸಲ್ಲಿಸುವುದು. 4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ: **06.06.2025**ರ ಸಂಜೆ **4:30** ಗಂಟೆಯ ನಂತರ ತೆರೆಯಲಾಗುವುದು.

ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು–3, ಬೆಂ.ಘ.ತ್ಯಾ.ನಿ.ನಿ, ಬೆಂಗಳೂರು

ಡಿಐಪಿಆರ್/ಸಿಪಿ755/ಸಿಸಿಎಲ್/2025–26

ಶಾಲಾ ಪ್ರವೇಶಕ್ಕೆ ಲಂಚ: ಮುಖ್ಯ ಶಿಕ್ಷಕ ಬಂಧನ

ಪ್ರಜಾವಾಣಿ ವಾರ್ತೆ

ಹಾವೇರಿ: 'ಜಿಲ್ಲೆಯ ಸವಣೂರಿನ ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿ ವಿದ್ಯಾರ್ಥಿಯೊಬ್ಬರಿಗೆ ಪ್ರವೇಶ ನೀಡಲು ₹10 ಸಾವಿರ ಲಂಚ ಪಡೆದ ಆರೋಪದ ಮೇಲೆ ಮಂಜುನಾಥ ಕಲ್ಲಪ್ಪ ಕಾಟೇನಹಳ್ಳಿ ಎಂಬ ಮುಖ್ಯ ಶಿಕ್ಷಕನನ್ನು ಆತನ ಮನೆಯಲ್ಲೇ ಬಂಧಿಸಲಾಗಿದೆ' ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಮಂಜುನಾಥ

'ಪುತ್ರನ ಶಾಲಾ ಪ್ರವೇಶಕ್ಕೆ ₹50 ಸಾವಿರ ಲಂಚ ನೀಡುವಂತೆ ಸವಣೂರಿನ ಖಾದರಭಾಗ ಓಣಿಯ ನಿವಾಸಿ ಅಕ್ಬರ್ ಅವರಿಗೆ ಆರೋಪಿ ಮಂಜುನಾಥ ಬೇಡಿಕೆ ಇಟ್ಟಿದ್ದ. ಹಣ ಇಲ್ಲವೆಂದಾಗ, ₹10 ಸಾವಿರ ಕೊಡುವಂತೆ ಒತ್ತಾಯಿಸಿದ್ದ. ಮನೆಗೆ ಕರೆಸಿಕೊಂಡು ₹5 ಸಾವಿರ ಮುಂಗಡವಾಗಿ ಪಡೆದಿದ್ದ' ಎಂದು ಅವರು ತಿಳಿಸಿದ್ದಾರೆ.

ಲಂಚದ ಕುರಿತು ಅಕ್ಬರ್ ಅವರು ದೂರು ನೀಡಿದ ಹಿನ್ನೆಲೆಯಲ್ಲಿ ಮೇ 17ರಂದು ಸವಣೂರಿನ ಹಾವಣಗಿ ಪ್ಲಾಟ್‌ನಲ್ಲಿರುವ ಮಂಜುನಾಥ ಮನೆಗೆ ತೆರಳಿ, ಲೋಕಾಯುಕ್ತ ಪೊಲೀಸರು ಕಾರ್ಯಾಚರಣೆ ನಡೆಸಿದರು. ಆತ ₹5 ಸಾವಿರ ಪಡೆಯುತ್ತಿದ್ದ ವೇಳೆ, ಬಂಧಿಸಿದರು.

ಮೂವರು ಯುವತಿಯರು ನೀರುಪಾಲು

ಮಾಗಡಿ: ಹಬ್ಬಕ್ಕೆ ಬಂದವರು ವೈ.ಜಿ. ಗುಡ್ಡ ಜಲಾಶಯದಲ್ಲಿ ಮುಳುಗಿ ಸಾವು

ಪ್ರಜಾವಾಣಿ ವಾರ್ತೆ

ರಮ್ಯ

ರಾಘವಿ

ಮಧು

ಮಾಗಡಿ (ರಾಮನಗರ): ಊರಹಬ್ಬಕ್ಕಾಗಿ ಬೆಂಗಳೂರಿನಿಂದ ತಾಲ್ಲೂಕಿನ ವೈ.ಜಿ. ಗುಡ್ಡ ಕಾಲೊನಿಯ ಸಂಬಂಧಿ ಮನೆಗೆ ಬಂದಿದ್ದ ಮೂವರು ಯುವತಿಯರು ಸೋಮವಾರ ಜಲಾಶಯದ ಹಿನ್ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯ ಗಾರ್ವೆಬಾವಿಪಲ್ಲಿ ನಿವಾಸಿಗಳಾದ ಮಧು (25), ರಾಘವಿ(22) ಹಾಗೂ ರಮ್ಯ(20) ಹಿನ್ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಇವರೆಲ್ಲರೂ ಒಂದೇ ಕುಟುಂಬಕ್ಕೆ ಸೇರಿದ್ದಾರೆ.

ನೀರಿನಲ್ಲಿ ಮುಳುಗುತ್ತಿದ್ದ ದಿವ್ಯ, ರೀನಾ, ಸ್ಟೆಲ್ಲಾ, ಚಂದ್ರಿಕಾ ನಿರ್ಮಲಾ ಎಂಬುವರನ್ನು ರಕ್ಷಿಸಲಾಗಿದೆ. ಅಪಾಯದಿಂದ ಪಾರಾದ ದಿವ್ಯ ಹಾಗೂ ಮೃತಪಟ್ಟ ರಮ್ಯ ಅಕ್ಕ, ತಂಗಿ. ಉಳಿದವರು ಹತ್ತಿರದ ಸಂಬಂಧಿಕರು.

ವೈ.ಜಿ. ಗುಡ್ಡ ಕಾಲೊನಿಯಲ್ಲಿ ಊರಹಬ್ಬವಿತ್ತು. ಅದಕ್ಕಾಗಿ ಬೆಂಗಳೂರಿನಿಂದ ರಮ್ಯ ಸೇರಿ ಏಳು ಸಂಬಂಧಿಕರು ಭಾನುವಾರ ದಿವ್ಯ ಅವರ ಮನೆಗೆ ಬಂದಿದ್ದರು. ಸೋಮವಾರ ಬೆಳಗ್ಗೆ 11.30ರ ಸುಮಾರಿಗೆ ಊರಿನ ಬಳಿ ಇರುವ ಜಲಾಶಯದ ಹಿನ್ನೀರು ನೋಡಲು ದಿವ್ಯ ಅವರ ಪತಿ ಸೋಮಶೇಖರ್ ಜೊತೆಯಲ್ಲಿ ಏಳು ಮಹಿಳೆಯರು ಹೋಗಿದ್ದರು.

ಏಳು ಮಹಿಳೆಯರು ಕೈ ಹಿಡಿದುಕೊಂಡು ನೀರಿನಲ್ಲಿ ಆಟವಾಡುತ್ತಾ ಸ್ವಲ್ಪ ಮುಂದಕ್ಕೆ ಹೋಗಿದ್ದಾರೆ. ಆಗ, ಆಳವಾದ ಜಾಗದಲ್ಲಿ ಮಧು ಅವರ ಕಾಲು ಕೆಸರಿನಲ್ಲಿ ಸಿಲುಕಿ ಅವರು ಮುಳುಗಲಾರಂಭಿಸಿದ್ದಾರೆ. ಮಧು ನೆರವಿಗೆ ಮುಂದಾದ ಉಳಿದವರು ಸಹ ನೀರಿನಲ್ಲಿ ಮುಳುಗಿದ್ದಾರೆ.

ದಡದಲ್ಲಿದ್ದ ಸೋಮಶೇಖರ್ ಕೂಡಲೇ ನೀರಿಗೆ ಜಿಗಿದು ನಾಲ್ವರನ್ನು ರಕ್ಷಿಸಿದ್ದಾರೆ. ಅಷ್ಟು ಹೊತ್ತಿಗಾಗಲೇ ನೀರೊಳಗೆ ಮುಳುಗಿದ್ದ ಉಳಿದ ಮೂವರನ್ನು ಸಹ ಮೇಲಕ್ಕೆತ್ತಿ ದಡಕ್ಕೆ ಸಾಗಿಸಿದ್ದಾರೆ. ಆದರೆ, ನೀರು ಕುಡಿದು ಉಸಿರುಗಟ್ಟಿದ್ದ ಮಧು, ರಾಘವಿ ಹಾಗೂ ರಮ್ಯ ಕೊನೆಯುಸಿರೆಳೆದಿದ್ದರು.

ಮೃತರ ಪೈಕಿ ಮಧು ಮತ್ತು ರಾಘವಿ ಬೆಂಗಳೂರಿನಲ್ಲಿ ಪದವಿ ಓದುತ್ತಿದ್ದರು ಎಂದು ಮಾಗಡಿ ಠಾಣೆ ಪೊಲೀಸರು ತಿಳಿಸಿದರು. ಸ್ಥಳಕ್ಕೆ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಚಂದ್ರಶೇಖರಯ್ಯ ಭೇಟಿ ನೀಡಿದ್ದರು. ಮಾಗಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕರ್ನಾಟಕ ಸರ್ಕಾರ

ಚಿಕ್ಕಮಗಳೂರು ಜಿಲ್ಲಾ ಪಂಚಾಯತ್

ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ,

ಜಿಲ್ಲಾ ಪಂಚಾಯತ್, 2ನೇ ಮಹಡಿ, ಕೆ.ಎಂ. ರಸ್ತೆ, ಚಿಕ್ಕಮಗಳೂರು ಜಿಲ್ಲೆ

E-mail: dswo.ckm@gmail.com ದೂರವಾಣಿ ಸಂಖ್ಯೆ: 08262 – 295128

ಸಂ.ಉನಿಕ/ಸಕಇ/ಚಿಮ/ಸಿಬ್ಬಂದಿ/ಹೊ.ಗು.ಟೆಂಡರ್/ಸಿಆರ್–01/2025–26 ದಿನಾಂಕ: 16–05–2025

ಟೆಂಡರ್ ಪ್ರಕಟಣೆ

2025–26ನೇ ಸಾಲಿನಲ್ಲಿ ಚಿಕ್ಕಮಗಳೂರು ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ / ಮೆಟ್ರಿಕ್ ನಂತರ ವಿದ್ಯಾರ್ಥಿ ನಿಲಯ/ ವಸತಿ ಶಾಲೆಗಳಲ್ಲಿ ಖಾಲಿ ಇರುವ ಭೋದಕ/ಭೋದಕೇತರ ಹುದ್ದೆಗಳಿಗೆ ಸಿಬ್ಬಂದಿಗಳನ್ನು ಹೊರ ಸಂಪನ್ಮೂಲ ಏಜೆನ್ಸಿ ಮುಖಾಂತರ ಪಡೆಯುವ ಬಗ್ಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಇ-Procurement ನಲ್ಲಿ ವಿವಿಧ ಹಂತದ ಘಟನಾವಳಿಗಳನ್ನು ಜರುಗಿಸಲು ಅಂದಾಜು ವೇಳಾಪಟ್ಟಿ

1	ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ	:	ಸಂ:ಉನಿ/ಸಕಇ/ಲೆವ/ಚಿಕ್ಕಮಗಳೂರು/ಹೊರಸಂಪನ್ಮೂಲ/ ಸಿಆರ್01/2025–26, ದಿನಾಂಕ: 16–05–2025
2	ಟೆಂಡರ್ ಬಿಡ್ ಮೊತ್ತ	:	ರೂ. 497.98 ಲಕ್ಷ (ರೂ. ನಾಲ್ಕು ಕೋಟಿ ತೊಂಭತ್ತೇಳು ಲಕ್ಷದ ತೊಂಭತ್ತೆಂಟು ಸಾವಿರ ರೂ.ಗಳು)
3	e-poral ಟೆಂಡರ್ ದಸ್ತಾವೇಜುಗಳನ್ನು ಪರಿಶೀಲಿಸಬಹುದಾದ ದಿನಾಂಕ	:	ದಿನಾಂಕ: 16–05–2025 ರಿಂದ 13–06–2025
4	Pre-Bid ಸಮಿತಿ ಸಭೆ ದಿನಾಂಕ ಮತ್ತು ಸಮಯ	:	ದಿನಾಂಕ: 30–05–2025ರಂದು ಬೆಳಿಗ್ಗೆ 11.00 ಗಂಟೆ (ಅವಶ್ಯವಿದ್ದಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ ಮತ್ತು ಮುಂಚಿತವಾಗಿ ತಿಳಿಸಲಾಗುವುದು)
5	e-poral ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಅಂತಿಮ ದಿನಾಂಕ ಮತ್ತು ಸಮಯ	:	ದಿನಾಂಕ: 13–06–2025ರಂದು ಸಂಜೆ 5.30 ಗಂಟೆಯವರೆಗೆ
6	e-poral ಟೆಂಡರ್ ತಾಂತ್ರಿಕ ಲಕೋಟೆಗಳನ್ನು ಪರಿಶೀಲಿಸುವ ದಿನಾಂಕ ಮತ್ತು ವೇಳೆ	:	ದಿನಾಂಕ: 18–06–2025ರಂದು ಬೆಳಿಗ್ಗೆ 11.00 ಗಂಟೆಗೆ (ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ) (ಬದಲಾವಣೆಗೆ ಒಳಪಟ್ಟಿರುತ್ತದೆ)
7	ಇ.ಎಂ.ಡಿ. ಮೊತ್ತ	:	ರೂ. 7.46 ಲಕ್ಷ (ರೂ. ಏಳು ಲಕ್ಷದ ನಲವತ್ತಾರು ಸಾವಿರ ರೂ.ಗಳು ಮಾತ್ರ)
8	e-poral ಟೆಂಡರ್ ಆರ್ಥಿಕ ಲಕೋಟೆಗಳನ್ನು ಪರಿಶೀಲಿಸುವ ದಿನಾಂಕ ಮತ್ತು ವೇಳೆ	:	ದಿನಾಂಕ: 21–06–2025ರಂದು ಬೆಳಿಗ್ಗೆ 11.00 ಗಂಟೆಗೆ (ಅವಶ್ಯವಿದ್ದಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ)
9	ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ	:	**Website: https://kppp.karnataka.gov.in/** ಉಪ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಜಿಲ್ಲಾ ಪಂಚಾಯತ್ 2ನೇ ಮಹಡಿ, ಚಿಕ್ಕಮಗಳೂರು ಜಿಲ್ಲೆ, ದೂರವಾಣಿ ಸಂಖ್ಯೆ : 08262 – 295128, Email: dswo.ckm@gmail.com

ಸಹಿ/– ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಚಿಕ್ಕಮಗಳೂರು

ರುದ್ರಪಟ್ಟಣ ಸಂಗೀತೋತ್ಸವ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಕೊಣನೂರು (ಹಾಸನ ಜಿಲ್ಲೆ): ಸಂಗೀತ ಗ್ರಾಮವೆಂದೇ ಪ್ರಸಿದ್ಧಿ ಪಡೆದಿರುವ, ಸಮೀಪದ ರುದ್ರಪಟ್ಟಣದ ರಾಮಮಂದಿರದಲ್ಲಿ 'ರುದ್ರಪಟ್ಟಣ ಸಂಗೀತೋತ್ಸವ ಸಮಿತಿ ಟ್ರಸ್ಟ್'ನ 22 ನೇ ವಾರ್ಷಿಕ ಸಂಗೀತೋತ್ಸವವು ಮೇ 21 ರಿಂದ 25 ರವರೆಗೆ 5 ದಿನಗಳ ಕಾಲ ಜರುಗಲಿದ್ದು, ಸಂಗೀತ ಪ್ರಿಯರಿಗೆ ರಸದೌತಣ ನೀಡಲಿದೆ.

ದೇಶ-ವಿದೇಶಗಳಲ್ಲಿ ತಮ್ಮ 'ವಾಗ್ಗೇಯಕಾರ' ಪ್ರತಿಭೆಯ ಮೂಲಕ ಪ್ರಖ್ಯಾತರಾಗಿರುವ ಡಾ.ಆರ್.ಕೆ. ಪದ್ಮನಾಭ ಅವರು ನೇತೃತ್ವ ವಹಿಸಲಿದ್ದು, ಕರ್ನಾಟಕ ಶಾಸ್ತ್ರೀಯ ಮತ್ತು ಹಿಂದೂಸ್ಥಾನಿ ಸಂಗೀತದ ಹತ್ತಾರು ಪ್ರತಿಭೆಗಳ ಹಾಡುಗಾರಿಕೆ ಹಾಗೂ ರಾಷ್ಟ್ರೀಯ, ಅಂತರ ರಾಷ್ಟ್ರೀಯ ಖ್ಯಾತಿಯ ಪಕ್ಕವಾದ್ಯ ಕಲಾವಿದರ ಮೇಳ ಮೆರುಗು ನೀಡಲಿದೆ. ಕರ್ನಾಟಕವಷ್ಟೇ ಅಲ್ಲದೇ ವಿವಿಧ ರಾಜ್ಯಗಳ ನೂರಾರು ಶ್ರೋತೃಗಳು ವಾಸ್ತವ್ಯ ಹೂಡಲಿದ್ದಾರೆ.

ಕರ್ನಾಟಕ ಸಂಗೀತ ದೇವತೆಗಳೆನಿಸಿರುವ ಕನಕ ದಾಸರು, ವಾದಿರಾಜರು, ಪುರಂದರದಾಸರು, ದೇವಿ ಸರಸ್ವತಿ, ತ್ಯಾಗರಾಜರು, ಮುತ್ತುಸ್ವಾಮಿ ದೀಕ್ಷಿತರು, ಶಾಮಶಾಸ್ತ್ರೀಯವರ ಮೂರ್ತಿಗಳಿಗೆ ರುದ್ರಪಟ್ಟಣದಲ್ಲಿ ನಿತ್ಯ ಪೂಜೆ ನೆರವೇರಿಸಲಾಗುತ್ತಿದೆ.

ವಿಶ್ವದ ಏಕೈಕ ತಂಬೂರಿಯಾಕಾರದ ಸಪ್ತಸ್ವರ ದೇವತಾ ಧ್ಯಾನ ಮಂದಿರ ಮತ್ತು ದ್ವಾದಶ ಸ್ವರ ಸ್ತಂಭ ಮಂಟಪಗಳು ವಿದ್ಯುದ್ದೀಪಗಳಿಂದ ಕಂಗೊಳಿಸುತ್ತಿವೆ.

'ಅನುಭವಿ, ಪ್ರಸಿದ್ಧಿ ಪಡೆದ ಸಂಗೀತಗಾರರಿಗಷ್ಟೇ ಮೀಸಲಿದ್ದ ಉತ್ಸವದಲ್ಲಿ ಈಗ ಯುವ ಕಲಾವಿದರಿಗೂ ಅವಕಾಶ ಕಲ್ಪಿಸಲಾಗುತ್ತಿದೆ. ಮೇ 24ರಂದು ಮಧ್ಯಾಹ್ನ 3.30ಕ್ಕೆ ರುದ್ರಪಟ್ಟಣದ ಪರಂಪರೆಯ ಹಿರಿಯ ವಿದ್ವಾಂಸರು, ವರ್ಧಿಷ್ಣು ಕಲಾವಿದರಿಗೆ ಬಿರುದು ಪ್ರದಾನ ಹಾಗೂ ಗೌರವ ಸಮರ್ಪಣೆ ನಡೆಯಲಿದೆ. ಸಂಜೆ 7.30ಕ್ಕೆ ನಟ, ಸಾಹಿತಿ ಶ್ರೀನಿವಾಸ ಪ್ರಭು ಅವರಿಗೆ 'ನಾಚಾರಮ್ಮ' ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಆರ್.ಕೆ. ಪದ್ಮನಾಭ್ ತಿಳಿಸಿದ್ದಾರೆ.

ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರನ್ನು ಅಶ್ಲೀಲ ಪದಬಳಸಿ ನಿಂದಿಸಿದ ಆರೋಪ

ರವಿ ಪ್ರಕರಣ: ವಿಚಾರಣೆಗೆ 'ಸುಪ್ರೀಂ' ತಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಬೆಳಗಾವಿಯ ವಿಧಾನಮಂಡಲ ಅಧಿವೇಶನದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರನ್ನು ಅಶ್ಲೀಲ ಪದಬಳಕೆ ಮೂಲಕ ನಿಂದಿಸಲಾಗಿದೆ' ಎನ್ನಲಾದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ವಿಧಾನ ಪರಿಷತ್ ಬಿಜೆಪಿ ಸದಸ್ಯ ಸಿ.ಟಿ.ರವಿ ಅವರ ವಿರುದ್ಧದ ವಿಚಾರಣೆಗೆ ಸುಪ್ರೀಂ ಕೋರ್ಟ್ ಸೋಮವಾರ ತಡೆಯಾಜ್ಞೆ ನೀಡಿದೆ.

ಸಿ.ಟಿ.ರವಿ

ಕ್ರಿಮಿನಲ್ ಪ್ರಕರಣ ರದ್ದುಗೊಳಿಸಲು ನಿರಾಕರಿಸಿದ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ರವಿ ಸಲ್ಲಿಸಿದ ವಿಶೇಷ ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್ ಮತ್ತು ರಾಜೇಶ್ ಬಿಂದಾಲ್ ಅವರ ಪೀಠವು ಕರ್ನಾಟಕ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದೆ.

ಲಕ್ಷ್ಮೀ ಹೆಬ್ಬಾಳಕರ

ರವಿ ಅರ್ಜಿ ವಜಾಗೊಳಿಸಿ ಮೇ 2ರಂದು ತೀರ್ಪು ನೀಡಿದ್ದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ, 'ಸದನದಲ್ಲಿ ಬಳಕೆ ಮಾಡಿದ್ದಾರೆ ಎಂಬ ಆರೋಪಿತ ಪದಗಳ ಬಗ್ಗೆ ಅಪರಾಧಿಕ ಪ್ರಾಸಿಕ್ಯೂಷನ್ ಮುಖಾಂತರ; ಶಾಸಕರಿಗೆ ಇರುವ ವಿನಾಯಿತಿಯ ಅಡಿಯಲ್ಲಿ ರಕ್ಷಣೆ ನೀಡಲು ಆಗುವುದಿಲ್ಲ. ಆರೋಪಿತ ಪದವನ್ನು ಬಳಕೆ ಮಾಡಿದ್ದರೆ ಅಥವಾ ಅಂತಹ ನಡತೆ ಪ್ರದರ್ಶಿಸಿದ್ದರೆ ಅದು ಮಹಿಳೆಯ ಘನತೆಗೆ ಹಾನಿ ಉಂಟು ಮಾಡುವಂತಹುದು' ಎಂದು ಅಭಿಪ್ರಾಯಪಟ್ಟಿದ್ದರು.

ಪ್ರಕರಣವೇನು?: 'ನನ್ನ ವಿರುದ್ಧ ಅಶ್ಲೀಲ ಪದಬಳಕೆ ಮಾಡಿದ್ದಾರೆ' ಎಂದು ಆರೋಪಿಸಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ನೀಡಿದ್ದ ದೂರಿನ ಹಿನ್ನೆಲೆಯಲ್ಲಿ ಬಾಗೇವಾಡಿ ಪೊಲೀಸರು 2024ರ ಡಿಸೆಂಬರ್ 19ರಂದು ಸಿ.ಟಿ.ರವಿ ವಿರುದ್ಧ ಭಾರತೀಯ ನ್ಯಾಯಸಂಹಿತೆ-2023ರ ಕಲಂ 75 (ಲೈಂಗಿಕ ಕಿರುಕುಳ) ಮತ್ತು 79ರ (ಮಹಿಳೆಯ ಘನತೆಗೆ ಹಾನಿ) ಅಡಿಯಲ್ಲಿ ಬಾಗೇವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ಈ ಸಂಬಂಧದ ನ್ಯಾಯಿಕ ಪ್ರಕ್ರಿಯೆ, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇದೆ.

'2024ರ ಡಿಸೆಂಬರ್ 19ರಂದು ವಿಧಾನ ಪರಿಷತ್‌ನ ಕಲಾಪದ ಸಂದರ್ಭದಲ್ಲಿ ನಾನು ಹೇಳಿಕೆ ನೀಡಿದ್ದೆ. ಕ್ರಿಮಿನಲ್ ತನಿಖೆ ಪ್ರಾರಂಭಿಸುವುದು ಮತ್ತು ಮುಂದುವರಿಸುವುದು 194(2) ನೇ ವಿಧಿಯ ಅಡಿಯಲ್ಲಿ ನೀಡಲಾದ ಸಾಂವಿಧಾನಿಕ ರಕ್ಷಣೆಯನ್ನು ಸ್ಪಷ್ಟವಾಗಿ ಉಲ್ಲಂಘಿಸುತ್ತದೆ' ಎಂದು ರವಿ ಅವರು ಅರ್ಜಿಯಲ್ಲಿ ತಿಳಿಸಿದ್ದಾರೆ.

'ಸೆಕ್ಷನ್ 135ಎ ಪ್ರಕಾರ, ಅಧಿವೇಶನಗಳ ಸಮಯದಲ್ಲಿ ಮತ್ತು ಅಧಿವೇಶನಗಳ ನಂತರವೂ 40 ದಿನಗಳವರೆಗೆ ಸದಸ್ಯರನ್ನು ಬಂಧಿಸುವಂತಿಲ್ಲ' ಎಂದು ಅವರು ಹೇಳಿದ್ದಾರೆ.

'ಮೇರಿ ಸಹೇಲಿ' ತಂಡದಿಂದ ಕಾರ್ಯಾಚರಣೆ

2.8 ಲಕ್ಷ ಮಹಿಳಾ ಪ್ರಯಾಣಿಕರಿಗೆ ಭದ್ರತೆ

• ನಾಗರಾಜ್ ಬಿ.ಎನ್.

ಹುಬ್ಬಳ್ಳಿ: ರೈಲಿನಲ್ಲಿ ಪ್ರಯಾಣಿಸುವ ಒಂಟಿ ಮಹಿಳೆಯರ ಸುರಕ್ಷತೆ, ಭದ್ರತೆಗಾಗಿ ರೈಲ್ವೆ ರಕ್ಷಣಾ ಪಡೆ (ಆರ್‌ಪಿಎಫ್) 2020ರಲ್ಲಿ ಆರಂಭಿಸಿದ 'ಮೇರಿ ಸಹೇಲಿ' (ನನ್ನ ಗೆಳತಿ) ಯೋಜನೆ ಫಲಪ್ರದವಾಗಿದೆ. ಇದರಿಂದ ನೈರುತ್ಯ ರೈಲ್ವೆ ವಲಯ ವ್ಯಾಪ್ತಿಯಲ್ಲಿ 2024–25ರ ಅವಧಿಯಲ್ಲಿ 2.84 ಲಕ್ಷ ಒಂಟಿ ಮಹಿಳಾ ಪ್ರಯಾಣಿಕರಿಗೆ ಪ್ರಯೋಜನವಾಗಿದೆ.

ಬೆಂಗಳೂರು, ಮೈಸೂರು ಮತ್ತು ಹುಬ್ಬಳ್ಳಿ ರೈಲ್ವೆ ವಿಭಾಗದ ವ್ಯಾಪ್ತಿಯಲ್ಲಿ ಆರ್‌ಪಿಎಫ್ 72 ಮಹಿಳಾ ಸಿಬ್ಬಂದಿ 10 ತಂಡಗಳಲ್ಲಿ ಕಾರ್ಯಾಚರಣೆ ನಡೆಸಿದ್ದಾರೆ. ಒಂಟಿ ಮಹಿಳೆಯರ ಪ್ರಯಾಣದ ವಿವರ ಪಡೆದು, ಅವರು ರೈಲನ್ನೇರಿ ಇಳಿಯುವವರೆಗೆ ಪ್ರಯಾಣದ ಸಂಪೂರ್ಣ ಜವಾಬ್ದಾರಿ ವಹಿಸಿಕೊಳ್ಳುತ್ತಾರೆ. ಹೀಗೆ ಒಂದು ವರ್ಷದಲ್ಲಿ 2075 ರೈಲುಗಳಲ್ಲಿ ತಂಡ ಸಂಚರಿಸಿ, ಸಮಸ್ಯೆಗೆ ಒಳಗಾದ ಐದು ಸಾವಿರಕ್ಕೂ ಹೆಚ್ಚು ಮಹಿಳೆಯರಿಗೆ ನೆರವು ನೀಡಿದೆ.

'2020ರಲ್ಲಿ ರಾಣಿ ಚನ್ನಮ್ಮ ಎಕ್ಸ್‌ಪ್ರೆಸ್ ರೈಲಿನಲ್ಲಿ 'ಮೇರಿ ಸಹೇಲಿ' ಯೋಜನೆ ಆರಂಭಗೊಂಡು, ನಂತರ ಉದ್ಯಾನ ಎಕ್ಸ್‌ಪ್ರೆಸ್ ಮತ್ತು ಸಂಗಮಿತ್ರ ಎಕ್ಸ್‌ಪ್ರೆಸ್ ರೈಲಿಗೆ ವಿಸ್ತರಣೆಗೊಂಡಿತು. ಹಬ್ಬಗಳ ಸಂದರ್ಭದಲ್ಲಿ ಪ್ರಯಾಣಿಕರ ದಟ್ಟಣೆ ಹೆಚ್ಚಿರುತ್ತದೆ. ಒಂಟಿ ಮಹಿಳಾ ಪ್ರಯಾಣಿಕರು ಹೆಚ್ಚಿರುತ್ತಾರೆ. ಅವರಿಗೆ ಆರ್‌ಪಿಎಫ್ ಸಿಬ್ಬಂದಿ ಆರಂಭಿಕ ಸ್ಥಳದಿಂದ, ಅಂತ್ಯದವರೆಗೆ ಸೂಕ್ತ ಭದ್ರತೆ ನೀಡುತ್ತಾರೆ' ಎಂದು ನೈರುತ್ಯ ರೈಲ್ವೆ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಮಂಜುನಾಥ ಕಲಮಡಿ 'ಪ್ರಜಾವಾಣಿ'ಗೆ ತಿಳಿಸಿದರು.

'ರೈಲು ಪ್ರಯಾಣಕ್ಕೂ ಮುನ್ನ ಮಹಿಳಾ ಪ್ರಯಾಣಿಕರು ನಿಲ್ದಾಣದಲ್ಲಿರುವ ಆರ್‌ಪಿಎಫ್ ಸಿಬ್ಬಂದಿಗೆ ಪ್ರಯಾಣದ ವಿವರ ನೀಡಿ, ಅವರು ನೀಡುವ ಸಲಹೆ-ಸೂಚನೆಗಳನ್ನು ಪಾಲಿಸಬೇಕು. ಪ್ರಯಾಣದಲ್ಲಿ ಎದುರಾಗುವ ನಿಲ್ದಾಣಗಳಲ್ಲಿನ ಆರ್‌ಪಿಎಫ್ ಸಿಬ್ಬಂದಿಯೂ, ಸಂಬಂಧ ಪಟ್ಟ ಬೋಗಿಗಳ ಮೇಲೆ ನಿಗಾ ಇಡುತ್ತಾರೆ. ಸಮಸ್ಯೆಗಳಿದ್ದರೆ, ಮಹಿಳೆಯರನ್ನು ಪ್ರಶ್ನಿಸುತ್ತಾರೆ. ಕೆಲ ರೈಲು ನಿಲ್ದಾಣಗಳಲ್ಲಿ ವಾಹನಗಳ ವ್ಯವಸ್ಥೆ ಮಾಡಿಕೊಡುವುದರ ಜೊತೆಗೆ ಸರಕುಗಳನ್ನು ಸಾಗಿಸಲು ಸಹ ನೆರವಾಗುತ್ತಾರೆ' ಎಂದರು.

ಯೋಜನೆಯ ಲಾಭ

- ಮಾನವ ಕಳ್ಳ ಸಾಗಾಟ ತಡೆಯಲು ಅನುಕೂಲ
- ಮಹಿಳಾ ಪ್ರಯಾಣಿಕರಲ್ಲಿ ಸುರಕ್ಷಾ ಭಾವ, ಆತ್ಮವಿಶ್ವಾಸ
- ದುಷ್ಕೃತ್ಯ, ದೂರುಗಳಿಗೆ ತ್ವರಿತ ಪರಿಹಾರ

ಮಹಿಳಾ ಪ್ರಯಾಣಿಕರ ಆಸನದ ಸಂಖ್ಯೆ, ಮೊಬೈಲ್ ನಂಬರ್ ಪಡೆದು, ಪ್ರಯಾಣದ ಉದ್ದಕ್ಕೂ ಅವರೊಂದಿಗೆ ಮೇರಿ ಸಹೇಲಿ ತಂಡ ಸಂಪರ್ಕದಲ್ಲಿದ್ದು ಭದ್ರತೆ ಒದಗಿಸುತ್ತಾರೆ

ಮಂಜುನಾಥ ಕಲಮಡಿ, ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ, ನೈರುತ್ಯ ರೈಲ್ವೆ

'32 ರೈಲಿನಲ್ಲಿ ಸಮಸ್ಯೆ'

'ದೆಹಲಿ, ಮುಂಬೈ, ಹೈದರಾಬಾದ್, ತಿರುವನಂತಪುರ, ಚೆನ್ನೈಗೆ ಚಲಿಸುವ ಕೆಲ ಎಕ್ಸ್‌ಪ್ರೆಸ್ ರೈಲು ಮತ್ತು ಕೆಲ ಪ್ಯಾಸೆಂಜರ್ ರೈಲುಗಳಲ್ಲಿ ಮಹಿಳೆಯರಿಗೆ ಸಮಸ್ಯೆ ಆಗುತ್ತಿರುವುದು ಗಮನಕ್ಕೆ ಬಂದಿದೆ. ಸಾಮಾನ್ಯ ಬೋಗಿಗಳಲ್ಲಿ ಪ್ರಯಾಣಿಕರ ದಟ್ಟಣೆ ಹೆಚ್ಚಿರುತ್ತದೆ. ಮಹಿಳಾ ಪ್ರಯಾಣಿಕರು ದೌರ್ಜನಕ್ಕೆ ಒಳಗಾಗುವುದರ ಜೊತೆಗೆ ಚಿನ್ನಾಭರಣ ಕಳೆದುಕೊಳ್ಳುತ್ತಾರೆ. ಇಂಥ 32 ರೈಲುಗಳಲ್ಲಿ ಹೆಚ್ಚಿನ ಭದ್ರತಾ ಕ್ರಮ ಕೈಗೊಳ್ಳಲು ಯೋಜಿಸಲಾಗಿದೆ' ಎಂದು ರೈಲ್ವೆ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

ಕಂದಾಯ ಇಲಾಖೆ

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ

(ಐ.ಎಂ.ಎ ಹಾಗೂ ಇತರೆ ವಂಚನೆ ಪ್ರಕರಣಗಳು)

3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು – 560001

ದೂರವಾಣಿ ಸಂಖ್ಯೆ: 080–29565353, 29566556, 29604556 ಇ–ಮೇಲ್: splocaima21@gmail.com

ಸ್ಥಿರಾಸ್ತಿಯ ಇ–ಹರಾಜಿಗಾಗಿ ಆಹ್ವಾನ / ಸೂಚನೆ

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಕಾಯ್ದೆ, 2004 ರ ಅಡಿಯಲ್ಲಿ ಸರ್ಕಾರವು ಸ್ಥಿರಾಸ್ತಿ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದು, ಮಾನ್ಯ ವಿಶೇಷ ನ್ಯಾಯಾಲಯವು ಕೆಪಿಐಡಿಎಫ್‌ಇ ಕಾಯ್ದೆ ಅಡಿಯಲ್ಲಿ ಸ್ಥಿರೀಕರಿಸಿದ ಆದೇಶದ ಅನುಸಾರವಾಗಿ, ವಿಶೇಷ ಅಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರದ ವತಿಯಿಂದ ಸ್ಥಿರಾಸ್ತಿ ಸ್ವತ್ತುಗಳನ್ನು ಇ–ಹರಾಜಿನ ಮೂಲಕ ವಿಲೇವಾರಿ ಮಾಡಲು ಪ್ರಕಟಣೆಯನ್ನು ಹೊರಡಿಸಲಾಗಿದೆ. (ಎಲ್ಲಿದೇಯೋ, ಹೇಗಿದೇಯೋ, ಯಾವ ಸ್ಥಿತಿಯಲ್ಲಿದೇಯೋ ಅದೇ ಆಧಾರದ ಮೇಲೆ) **(as is where is and whatever there is basis)**.

ಆಸಕ್ತ ಬಿಡ್‌ದಾರರು ಅರ್ನೆಸ್ಟ್ ಮನಿ ಡೆಪಾಸಿಟ್ (EMD) ಅನ್ನು ಒದಗಿಸಬೇಕಾಗುತ್ತದೆ (ಸೇವಾ ಪೂರೈಕೆದಾರರು / ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಒದಗಿಸಿದ ಇ–ಪೋರ್ಟಲ್‌ನಲ್ಲಿ ಮಾತ್ರ)

SHORT DESCRIPTION OF THE IMMOVABLE PROPERTY (SPLOCA/AUC(2)/CR/19/2025-26)

Properties are free of all encumbrances and are in the name of Competent Authority appointed by Government and confirmed by the Special Court under KPIDFE Act, 2004. (Khata stands in the name of Competent Authority and Auctioning Authority)

Sl. No.	DETAILS OF THE SCHEDULE PROPERTY (Clear Title by Court in Order No. MISC No. 711/2019)	Minimum Bid Price (Rs.)	EMD (Rs.)	Bid Increase Value (Rs.)
1	Vacant Site bearing No. 403, Old Khata No. 503/165C Ward No. 33, New Khata No. 33-03-13-363B at Hassan City, Tannerhalla Circle, Tannerhalla Main Road, Hassan, Total Agr. 928.6070 sq.mt (9996 sq.ft) bounded on **East by :** Village Road, **West by :** M.K. Swamy & Puttaswamy's Property, **North by :** Vacant Site, **South by :** Remaining portion of the same Property. Vacant Site bearing No. 404, Old Khata No. 503/165B Ward No. 33, New Khata No. 33-03-13-363A at Hassan City, Tannerhalla Circle, Tannerhalla Main Road, Hassan, Total Agr. 654.04 sq.mt. bounded on **East by :** Cross Road, **West by :** Remaining portion of the same Property, **North by :** B.M. Road, **South by :** Remaining portion of the same Property. Vacant Site bearing No. 405, Old Khata No. 503/165D Ward No. 33, New Khata No. 33-03-13-365A at Hassan City, Tannerhalla Circle, Tannerhalla Main Road, Hassan, Total Agr. 290.6018 sq.mt. (3128 sq.ft) bounded on **East by :** Village Road, **West by :** Vacant site of children of Siddaiha, **North by :** Remaining portion of the same Property, **South by:** Residential building of Murali Banu Prakash Subramanya.	20,15,61,000/-	2,01,57,000/-	20,16,000/-

Google Map link: https://maps.app.goo.gl/9uioKWQ221xttdco9
Latitude and Longitude : 12°59'44.0"N 76°04'54.0"E

ಬಿಡ್ ಪೂರ್ವಭಾವಿ ಸಭೆ ದಿನಾಂಕ ಮತ್ತು ಸಮಯ ಹಾಗೂ ಸ್ಥಳ	ಸ್ಥಳ ಪರಿಶೀಲನೆಯ ದಿನಾಂಕ ಮತ್ತು ಸಮಯ	ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಇ.ಎಂ.ಡಿ ಸಲ್ಲಿಸುವಿಕೆ	ಇ–ಹರಾಜಿನ ದಿನಾಂಕ ಮತ್ತು ಸಮಯ
15ನೇ ಜುಲೈ 2025, ಮಧ್ಯಾಹ್ನ 3.00 ರಿಂದ 4.00 ಗಂಟೆವರೆಗೆ ಸ್ಥಳ: ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಯವರ ಕಛೇರಿ, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು – 560001	16ನೇ ಜುಲೈ 2025 ರ ಬೆಳಿಗ್ಗೆ 11.00 ರಿಂದ ಸಂಜೆ 5.00 ಗಂಟೆವರೆಗೆ	18ನೇ ಜುಲೈ 2025 ರ ಸಂಜೆ 5.00 ಗಂಟೆಯೊಳಗೆ	19ನೇ ಜುಲೈ 2025 ರ ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 1.00 ಗಂಟೆವರೆಗೆ

ಆಸಕ್ತ ಬಿಡ್‌ದಾರರು ನೋಂದಣಿ ಮತ್ತು ಆನ್‌ಲೈನ್ ಹರಾಜಿಗಾಗಿ ವೆಬ್‌ಸೈಟ್: **https://kppp.karnataka.gov.in** ಇಲ್ಲಿಗೆ ಲಾಗಿನ್ ಮಾಡಬಹುದು **(ಸಹಾಯವಾಣಿ ಸಂಖ್ಯೆ: 080 – 46010000, 080 – 68948777)** ಮತ್ತು ಇ–ಹರಾಜಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯ ಬಗ್ಗೆ **ಸಹಾಯಕ ಆಯುಕ್ತರು, ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಗಳ ಕಛೇರಿ, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು – 560001** ಇವರನ್ನು ಸಂಪರ್ಕಿಸಬಹುದು. ಇ–ಮೇಲ್ ಐಡಿ: **splocaeauction@gmail.com** ಅಥವಾ ಮೊಬೈಲ್ ಸಂಖ್ಯೆ: **6364403715** ಅನ್ನು ಸಂಪರ್ಕಿಸಬಹುದು.

ಸ್ಥಳ: ಬೆಂಗಳೂರು
ದಿನಾಂಕ: 16–05–2025 ವಾಸಾಸಂಇ/ವಾ.ಪ್ರ/736/2025–26

ಸಹಿ/– ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿ (ಐ.ಎಂ.ಎ ಹಾಗೂ ಇತರೆ ವಂಚನೆ ಪ್ರಕರಣಗಳು), ಬೆಂಗಳೂರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ದೊಡ್ಡದಾಗಿ ಹೊತ್ತಿ ಉರಿಯುವ ದೀಪ ಬಹಳ ಹೊತ್ತು ಬೆಳಗುವುದಿಲ್ಲ. ನಂದಾದೀಪದ ಹಾಗೆ ಸಣ್ಣಗೆ, ಮಿನುಗುತ್ತಾ, ಬೆಳಕು ನೀಡುತ್ತಾ ಇರಬೇಕು.

–ತ.ರಾ.ಸು

ಮಳೆಗೆ ಸಜ್ಜಾಗದ ಗ್ರೇಟರ್ ಬೆಂಗಳೂರು ಕಾಡುವ ಪ್ರವಾಹ, ಮೈಮರೆತ ಆಡಳಿತ

ಹೆಸರಿನಲ್ಲಿ 'ಗ್ರೇಟರ್' ಎಂದು ಸೇರಿಕೊಂಡ ಮಾತ್ರಕ್ಕೆ ಬೆಂಗಳೂರು ನಗರವೇನೂ ಸಮಸ್ಯೆಗಳಿಂದ ಮುಕ್ತವಾಗಲು ಸಾಧ್ಯವಿಲ್ಲ ಎಂಬುದನ್ನು ಮುಂಗಾರುಪೂರ್ವದ ಮಳೆಯು ಆಡಳಿತದ ಹೊಣೆ ಹೊತ್ತವರಿಗೆ ಕಣ್ಣಿಗೆ ರಾಚುವಂತೆ ಎತ್ತಿ ತೋರಿಸಿದೆ. ಬೆಂಗಳೂರಿನಲ್ಲಿ ಮಳೆ ಸುರಿದರೆ ಮುಗಿಯಿತು, ರಸ್ತೆಗಳು ನದಿಗಳಾಗುತ್ತವೆ, ತಗ್ಗು ಪ್ರದೇಶಗಳು ಕೆರೆಗಳ ಸ್ವರೂಪ ತಾಳುತ್ತವೆ, ರಸ್ತೆ ಪಕ್ಕದ ಮರಗಳು ಉರುಳಿ ಬೀಳುತ್ತವೆ. ನಗರದ ಪೂರ್ವಭಾಗದ ಜಲಾವೃತ ಪ್ರದೇಶಗಳಲ್ಲಿ ಸಿಲುಕಿಕೊಂಡವರನ್ನು ರಕ್ಷಿಸಲು ಬೋಟುಗಳು ರಸ್ತೆಗೆ ಇಳಿಯಬೇಕಾಗುತ್ತದೆ. ಆದ್ದರಿಂದಲೇ, 'ಹೇಳಿದ್ದು ಗ್ರೇಟರ್ ಬೆಂಗಳೂರು, ಮಾಡಿದ್ದು ವಾಟರ್ ಬೆಂಗಳೂರು' ಎಂಬಂತಹ ಕುಹಕದ ನುಡಿಗಳ ಮಹಾಪೂರವೇ ಸಾಮಾಜಿಕ ಜಾಲತಾಣಗಳಲ್ಲಿ ಈಗ ಹರಿದಾಡುತ್ತಿದೆ. ಪ್ರತಿಸಲ ಮಳೆ ಬಂದಾಗಲೂ ರಾಜಧಾನಿಯದ್ದು ಇದೇ ಕಥೆ. ಸಾಲದು ಎನ್ನುವಂತೆ ನಗರದ ಹಲವು ರಸ್ತೆಗಳನ್ನು ವೈಟ್ ಟಾಪಿಂಗ್ ಇಲ್ಲವೆ ಉನ್ನತೀಕರಿಸುವ ಯೋಜನೆಯ ನೆಪದಲ್ಲಿ ಸಂಪೂರ್ಣವಾಗಿ ಅಗೆದುಹಾಕಲಾಗಿದ್ದು, ಕೆಸರುಗದ್ದೆಯಂತಾದ ರಸ್ತೆಗಳಿಂದ ಪರಿಸ್ಥಿತಿ ಇನ್ನಷ್ಟು ಅಸಹನೀಯವಾಗಿದೆ. ಮಳೆಯಿಂದಾಗಿ ಗೋಡೆ ಕುಸಿದಿದ್ದರಿಂದ ಮಹಿಳೆಯೊಬ್ಬರು ಮೃತಪಟ್ಟಿರುವುದಾಗಿ ವರದಿಯಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬಿಬಿಎಂಪಿಯ 'ವಾರ್ ರೂಮ್'ನಲ್ಲಿ ಕುಳಿತು ಪರಿಸ್ಥಿತಿ ಅವಲೋಕಿಸಿದ್ದಾರೆ. ಜಲಾವೃತ ಪ್ರದೇಶಗಳು, ಉರುಳಿಬಿದ್ದ ಮರಗಳು, ಮಳೆನೀರು ತುಂಬಿದ ಕೆಲ ಸರ್ಕಾರಿ ಕಚೇರಿಗಳು ಅವರಿಗೆ 'ನಗರ ಮಹಾಪೂರ'ದ ಆಳ- ಅಗಲದ ದರ್ಶನ ಮಾಡಿಸಿವೆ. ಮಳೆ ಶುರುವಾಗುವುದಕ್ಕಿಂತ ಕೆಲವು ದಿನಗಳಿಗೆ ಮುಂಚೆ ಬೆಂಗಳೂರಿನ ಜನ ವಿಪರೀತ ತಾಪಮಾನದಿಂದ ಬಳಲಿದ್ದರು. ಈ ಮಳೆ ಅವರಿಗೆ ಆಹ್ಲಾದವನ್ನು ಉಂಟುಮಾಡಿರಲಿಕ್ಕೆ ಸಾಕು. ಆದರೆ, ಮುಂಗಾರುಪೂರ್ವದ ಮಳೆಯೇ ನಗರದಲ್ಲಿ ಈ ಪ್ರಮಾಣದ ಪ್ರವಾಹದ ಸನ್ನಿವೇಶವನ್ನು ಸೃಷ್ಟಿಸಿರುವುದು ಜನರಲ್ಲಿ ಕಳವಳ ಮೂಡಿಸಿದೆ.

ನಿದ್ರೆಯಲ್ಲಿ ಮೈಮರೆತಿರುವ ಬಿಬಿಎಂಪಿಗೆ ನಗರದ ಪರಿಸ್ಥಿತಿಯ ಕಡೆಗೆ ಗಮನವಿಲ್ಲ. ಅಧಿಕಾರಿಗಳನ್ನು ಎಬ್ಬಿಸಲು ಚುನಾಯಿತ ಕೌನ್ಸಿಲ್ ಅಸ್ತಿತ್ವದಲ್ಲಿಲ್ಲ

'ನಗರ ಮಹಾಪೂರ'ಕ್ಕೆ ಅಭಿವೃದ್ಧಿಯ ಹೆಸರಿನಲ್ಲಿ ನಡೆದ ಅಕ್ರಮಗಳೇ ಕಾರಣವಾಗಿದ್ದು, ರಾಜಧಾನಿಯ ಇಂದಿನ ಸ್ಥಿತಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು (ಬಿಬಿಎಂಪಿ) ದೂರದೇ ಬೇರೆ ಮಾರ್ಗವಿಲ್ಲ. ಮಳೆನೀರಿನ ಬಹುಪಾಲು ಒತ್ತಡವನ್ನು ಹಗುರ ಮಾಡುತ್ತಿದ್ದ ಬಹುತೇಕ ರಾಜಕಾಲುವೆಗಳು ಒತ್ತುವರಿಯಾಗಿರುವುದು, ನೀರು ಇಂಗಲು ಅಂಗುಲದಷ್ಟೂ ಜಾಗ ಇಲ್ಲದಂತೆ ಎಲ್ಲೆಡೆಯೂ ಟಾರು, ಕಾಂಕ್ರೀಟ್‌ನಿಂದ ಆವೃತವಾಗಿರುವುದು, ಕೆರೆಗಳು ಕಣ್ಮರೆ ಆಗಿರುವುದು – ಹೀಗೆ ನಗರದ ಇಂದಿನ ಸ್ಥಿತಿಗೆ ಕಾರಣಗಳನ್ನು ಪಟ್ಟಿ ಮಾಡುತ್ತಾ ಹೋಗಬಹುದು. ವಾಸ್ತವವಾಗಿ ಮಳೆಗಾಲದ ಸನ್ನಿವೇಶ ಎದುರಿಸಲು ಬೇಸಿಗೆ ಕಾಲದಲ್ಲೇ ತಯಾರಿ ಮಾಡಿಕೊಳ್ಳಬೇಕು. ಚರಂಡಿಗಳ ಹೂಳು ಎತ್ತುವ, ಅವುಗಳ ಗೋಡೆ ಸರಿಪಡಿಸುವ ಹಾಗೂ ಮೋರಿಗಳನ್ನು ದುರಸ್ತಿಗೊಳಿಸುವ ಕೆಲಸಗಳು ಮಳೆಗಾಲ ಶುರುವಾಗುವ ಮುನ್ನವೇ ಮುಗಿಯಬೇಕು. ಆದರೆ, ನಿದ್ರೆಯಲ್ಲಿ ಮೈಮರೆತಿರುವ ಬಿಬಿಎಂಪಿಗೆ ನಗರದ ಪರಿಸ್ಥಿತಿಯ ಕಡೆಗೆ ಗಮನವಿಲ್ಲ. ಸಮಸ್ಯೆ ಬಗೆಹರಿಸಬೇಕೆಂಬ ಇಚ್ಛಾಶಕ್ತಿಯೂ ಇಲ್ಲ. ಅಧಿಕಾರಿಗಳನ್ನು ಚಿವುಟಿ ಎಬ್ಬಿಸಲು ಚುನಾಯಿತ ಕೌನ್ಸಿಲ್ ಕೂಡ ಅಸ್ತಿತ್ವದಲ್ಲಿಲ್ಲ.

ರಾಜಧಾನಿಯಲ್ಲಿ ಮಳೆ ಅನಾಹುತಗಳು, ನಗರ ಮಹಾಪೂರಗಳು ಇತ್ತೀಚಿನ ವರ್ಷಗಳಲ್ಲಿ ತೀವ್ರಗತಿಯಲ್ಲಿ ಹೆಚ್ಚುತ್ತಿದ್ದರೂ ಸಮಸ್ಯೆ ಬಗೆಹರಿಸಲು ಇದುವರೆಗೆ ರಾಜ್ಯ ಸರ್ಕಾರದ ಚುಕ್ಕಾಣಿ ಹಿಡಿದವರ್‍ಯಾರೂ ಸಮರ್ಪಕ ಕಾರ್ಯಯೋಜನೆಯನ್ನು ಹಾಕಿಕೊಳ್ಳದಿರುವುದು ಆಶ್ಚರ್ಯ. ಕೆಲವು ವರ್ಷಗಳ ಹಿಂದೆ ಪ್ರವಾಹ ಪರಿಸ್ಥಿತಿ ಉಲ್ಬಣಿಸಿದಾಗ ಎಲ್ಲ ಒತ್ತುವರಿಗಳನ್ನು ತೆರವುಗೊಳಿಸಲಾಗುವುದು ಎಂದು ಅಬ್ಬರಿಸಿ, ಕಾರ್ಯಾಚರಣೆಯನ್ನೂ ಆರಂಭಿಸಲಾಯಿತು. ಬೆಂಗಳೂರಿನ ಪೂರ್ವಭಾಗದಲ್ಲಿ ಜೆಸಿಬಿ ಯಂತ್ರಗಳ ಸದ್ದು ಜೋರಾಗಿ ಮೊಳಗಿತು. ದಿನಗಳು ಕಳೆದಂತೆ, ಬಿಬಿಎಂಪಿಗೆ ಭೂಮಾಪಕರ 'ಕೊರತೆ' ಎದುರಾಯಿತು. ಕಾರ್ಯಾಚರಣೆ ತಣ್ಣಗಾಯಿತು. ಒತ್ತುವರಿ ತೆರವು ಕೆಲಸವನ್ನು ಆಗ ಪ್ರಭಾವಿಗಳ ಒತ್ತಡದಿಂದಾಗಿ ಮೊಟಕುಗೊಳಿಸದೇ ಇದ್ದಿದ್ದರೆ ಇಂದಿನ ಬಹುಪಾಲು ಸಮಸ್ಯೆ ನೀಗಿರುತ್ತಿತ್ತು. ಮಳೆ ಬಂದಾಗ ಒಂದಿಷ್ಟು ಕಾಮಗಾರಿ ನಡೆಸುವುದು, ಮತ್ತೆ ಹೊದ್ದು ಮಲಗುವುದು ಬಿಬಿಎಂಪಿಯ ಹಳೆಯ ಚಾಳಿ. ಇದರಿಂದ ಬೆಂಗಳೂರಿನ 'ಬ್ರ್ಯಾಂಡ್' ಮುಕ್ಕಾಗುವುದೇ ವಿನಾ ಹೊಳೆಯುವುದಿಲ್ಲ ಎಂಬುದನ್ನು ಬೆಂಗಳೂರು ಅಭಿವೃದ್ಧಿ ಖಾತೆಯನ್ನೂ ಹೊಂದಿರುವ ಉಪಮುಖ್ಯಮಂತ್ರಿ ಶಿವಕುಮಾರ್ ಅವರು ಗಮನಕ್ಕೆ ತಂದುಕೊಳ್ಳಬೇಕು. ಮಳೆಗಾಲದ ನಿರ್ವಹಣೆಯಲ್ಲಿ ಯಾವುದೇ ಲೋಪ ಆಗದಂತೆ ನೋಡಿಕೊಳ್ಳುವಂತೆ ಬಿಬಿಎಂಪಿ ಅಧಿಕಾರಿಗಳನ್ನು ಎಚ್ಚರಗೊಳಿಸಬೇಕು. ಬೆಂಗಳೂರನ್ನು 'ಗ್ರೇಟರ್' ಮಾಡುವಂತಹ ದೊಡ್ಡ ಉಪಕ್ರಮವು ಮೋರಿ ಸ್ವಚ್ಛಗೊಳಿಸಿ, ನೀರು ಸರಾಗವಾಗಿ ಹರಿದು ಹೋಗುವಂತೆ ನೋಡಿಕೊಳ್ಳುವ ಪುಟ್ಟ ಹೆಜ್ಜೆಯಿಂದಲೇ ಆರಂಭವಾಗಬೇಕು.

ಬಲಶಾಲಿಯಾಗಿರುವ ಕೃತಕ ಬುದ್ಧಿಮತ್ತೆಯ ನಿಯಂತ್ರಣಕ್ಕೆ ದಾರಿ ಹುಡುಕಬೇಕಿದೆ

ಬೆಕ್ಕಿಗೆ ಗಂಟೆ ಕಟ್ಟುವವರು ಯಾರು?

ವಿಶ್ಲೇಷಣೆ

ವಸಂತ ಶೆಟ್ಟಿ

ಸೌದಿ ಅರೇಬಿಯಾದ ಅಲ್-ಅಹ್ಸಾ ಪ್ರಾಂತ್ಯದಲ್ಲಿ ಚೀನಾದ ಕಂಪನಿಯೊಂದು ಜಗತ್ತಿನ ಮೊದಲ ಎ.ಐ. (ಕೃತಕ ಬುದ್ಧಿಮತ್ತೆ) ಡಾಕ್ಟರ್ ಕ್ಲಿನಿಕ್ ಒಂದನ್ನು ಪ್ರಾಯೋಗಿಕವಾಗಿ ಶುರು ಮಾಡಿದೆ. ಇಲ್ಲಿಗೆ ಬರುವ ರೋಗಿಗಳ ಮೊದಲ ಹಂತದ ತಪಾಸಣೆಯನ್ನು ಪೂರ್ತಿಯಾಗಿ ಒಬ್ಬ ಎ.ಐ. ವೈದ್ಯ ನಿಭಾಯಿಸಿ, ರೋಗಿಗೆ ನೀಡಬೇಕಾದ ಚಿಕಿತ್ಸೆಯ ಯೋಜನೆಯನ್ನು ಸಿದ್ಧಪಡಿಸುತ್ತದೆ. ಅದನ್ನು ಮನುಷ್ಯ ವೈದ್ಯರೊಬ್ಬರು ಪರಿಶೀಲಿಸಿ ರೋಗಿಗೆ ನೀಡುತ್ತಾರೆ. ಸದ್ಯಕ್ಕೆ ಉಸಿರಾಟಕ್ಕೆ ಸಂಬಂಧಿಸಿದ ಮೂವತ್ತು ಕಾಯಿಲೆಗಳಿಗೆ ಈ ಎ.ಐ. ವೈದ್ಯನ ಸೇವೆ ಸೀಮಿತವಾಗಿದೆ. ಈ ಪ್ರಯೋಗದ ದತ್ತಾಂಶವನ್ನು ಸೌದಿ ಸರ್ಕಾರಕ್ಕೆ ನೀಡಿ ಮುಂದಿನ ಹದಿನೆಂಟು ತಿಂಗಳಲ್ಲಿ ಇದಕ್ಕೆ ಪೂರ್ಣಪ್ರಮಾಣದ ಅನುಮತಿ ಪಡೆಯುವ ಉದ್ದೇಶ ಈ ಸಂಸ್ಥೆಯದ್ದಾಗಿದೆ. ಸೌದಿ ಪ್ರಾಂತ್ಯದ ಭಾಷೆ, ಸಾಂಸ್ಕೃತಿಕ ಒಲವು, ಸ್ಥಳೀಯರ ಆರೋಗ್ಯಕ್ಕೆ ಸಂಬಂಧಿಸಿದ ಮಾಹಿತಿಯ ಕೋಶವನ್ನು ಇದರ ತರಬೇತಿಗೆ ಬಳಸಿರುವುದರಿಂದ ಇದು ಅಲ್ಲಿನ ಒಬ್ಬ ಸ್ಥಳೀಯ ವೈದ್ಯನಂತೆಯೇ ಕೆಲಸ ನಿರ್ವಹಿಸಲಿದೆ ಎನ್ನಲಾಗಿದೆ.

ಕಳೆದ ಅಕ್ಟೋಬರ್ ತಿಂಗಳಿನಲ್ಲಿ ಅಮೆರಿಕದ ಫ್ಲಾರಿಡಾದಲ್ಲಿ 14ರ ಹರೆಯದ ಹುಡುಗನೊಬ್ಬ ಆತ್ಮಹತ್ಯೆ ಮಾಡಿಕೊಂಡದ್ದು ದೊಡ್ಡ ಸುದ್ದಿಯಾಯಿತು. ಕ್ಯಾರೆಕ್ಟರ್. ಎಐ ಅನ್ನುವ ಸಂಸ್ಥೆ ಹೊರತಂದಿದ್ದ ಎ.ಐ. ಚಾಟ್ ಬಾಟ್ (ಬಗೆ ಬಗೆಯ ಮನುಷ್ಯ ಪಾತ್ರಗಳ ರೂಪದಲ್ಲಿ ಹರಟೆ ಹೊಡೆಯುವ ಎ.ಐ) ಒಂದರ ಜೊತೆಗೆ ಅತೀ ಹೆಚ್ಚು ಕಾಲ ಕಳೆಯುತ್ತಿದ್ದ ಈ ಹುಡುಗ, ಕ್ರಮೇಣ ಕುಟುಂಬ ಮತ್ತು ಗೆಳೆಯರೊಡಗಿನ ಒಡನಾಟವನ್ನೇ ಕಡಿಮೆ ಮಾಡಿಕೊಂಡು ಈ ಚಾಟ್ ಬಾಟಿನ ಪ್ರೇರಣೆಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಆತನ ತಾಯಿ ಈ ಸಂಸ್ಥೆಯ ವಿರುದ್ಧ ಕಾನೂನು ಹೋರಾಟಕ್ಕಿಳಿದ ಪ್ರಕರಣ ಇದಾಗಿತ್ತು.

ಜಗದ ಎರಡು ಮೂಲೆಯಲ್ಲಿನ ಈ ಪ್ರಕರಣಗಳು ಎರಡು ವಿರುದ್ಧ ನೆಲೆಯ ಪ್ರಕರಣಗಳಲ್ಲ. ಅವೆರಡೂ ಒಂದೇ ವಾಸ್ತವದ ಎರಡು ಮುಖಗಳು ಮತ್ತು ಎ.ಐ. ಅನ್ನುವ ಶಕ್ತಿಶಾಲಿ ಮಾಯಾವಿಯ ದುರ್ಬಳಕೆಗೆ ಅಂಕೆ ಹಾಕದೇ ಹೋದರೆ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ತೊಂದರೆಗಳನ್ನು ಇಡೀ ಮನುಕುಲವೇ ಎದುರಿಸಬೇಕಾಗಬಹುದು ಅನ್ನುವ ಎಚ್ಚರಿಕೆಯ ಗಂಟೆಯೂ ಹೌದು. ಈ ಬೆಳವಣಿಗೆಗೆ ಜಗತ್ತು ಮೂಕವಾಗಿ ಇರಲು ಸಾಧ್ಯವಿಲ್ಲ. ದಿನಗಳೆದಂತೆ ದೈತ್ಯ ಸ್ವರೂಪದ ಶಕ್ತಿಯನ್ನು ಪಡೆಯುತ್ತಿರುವ ಈ ತಂತ್ರಜ್ಞಾನವನ್ನು ಮನುಕುಲದ ಒಳಿತಿನ ಸಾಧನವಾಗಿಸುವ ಕೆಲಸ ತಾನೇ ತಾನಾಗಿಯೋ ಇಲ್ಲವೇ ಲಾಭಕ್ಕಾಗಿ ನಡೆಯುವ ಕೆಲವೇ ದೈತ್ಯ ಕಂಪನಿಗಳಿಂದಲೊ ಆಗುತ್ತದೆ ಎಂದು ಎದುರು ನೋಡಲಾಗುವುದಿಲ್ಲ. ಈ ತಂತ್ರಜ್ಞಾನದ ಸಾಧ್ಯತೆಗಳನ್ನು ಕುಗ್ಗಿಸದೆ, ಇದರ ಅತಿರೇಕಗಳನ್ನು ನಿಯಂತ್ರಿಸುವ ಹೆಜ್ಜೆಗಳನ್ನು ಸರ್ಕಾರಗಳು ಕೈಗೊಳ್ಳುವುದು ಈ ಹೊತ್ತಿನ ತುರ್ತು. ಅತ್ಯಂತ ವಿಕೇಂದ್ರೀಕೃತವಾದ ರೂಪದಲ್ಲಿ ವಿಕಾಸವಾಗುತ್ತಿರುವ ಈ ತಂತ್ರಜ್ಞಾನದ ನಿಯಂತ್ರಣ ಯಾವುದೇ ಒಂದು ದೇಶದ ಕೈಯಲ್ಲಿ ಆಗುವಂಥದ್ದಲ್ಲ. ಹೀಗಾಗಿ ಒಂದು ಜಾಗತಿಕ ಸಹಕಾರವನ್ನು ಈ ದಿಸೆಯಲ್ಲಿ ರೂಪಿಸುವ ಸವಾಲೂ ಇಲ್ಲಿದೆ.

ಎ.ಐ. ತಂತ್ರಜ್ಞಾನದ ಜಗತ್ತಿನಲ್ಲಿ ಆರು ತಿಂಗಳು ನೂರು ವರ್ಷಕ್ಕೆ ಸಮ ಅನ್ನುವ ವೇಗದಲ್ಲಿ ತಂತ್ರಜ್ಞಾನದ ಅಭಿವೃದ್ಧಿಯಾಗುತ್ತಿದೆ. ತಂತ್ರಜ್ಞಾನ ಕ್ಷೇತ್ರದ ದೈತ್ಯರಾದ ಗೂಗಲ್, ಮೈಕ್ರೊಸಾಫ್ಟ್‌ನಂತಹ ಕಂಪನಿಗಳು ಈ ಅಲೆಯಲ್ಲಿ ಈಜಿ ದಾಟಲು ಒದ್ದಾಡುತ್ತಿವೆ. ಸಾವಿರಾರು ಸ್ಟಾರ್ಟ್ ಅಪ್‌ಗಳು ಈ ತಂತ್ರಜ್ಞಾನದ ಮೇಲೆ ಹೊಸ ಬಗೆಯ ವ್ಯಾಪಾರ ಕಟ್ಟುತ್ತಿವೆ ಎಂದು ಕಂಡರೂ ಒಟ್ಟಂದದಲ್ಲಿ ನೋಡಿದರೆ ಕೆಲವೇ ದೇಶಗಳ, ಕೆಲವು ಸಂಸ್ಥೆಗಳು ಮಾತ್ರ ಈ ತಂತ್ರಜ್ಞಾನದ ಮೇಲೆ ಹಂತ ಹಂತವಾಗಿ ಬಿಗಿ ಹಿಡಿತ ಸಾಧಿಸುತ್ತಿವೆ ಎಂಬುದನ್ನು ಗಮನಿಸಬಹುದು. ಲಾಭವನ್ನೇ ಗುರಿಯಾಗಿಸಿಕೊಂಡ ಇಂತಹ ಸಂಸ್ಥೆಗಳು ಈ ತಂತ್ರಜ್ಞಾನದ ಮೇಲೆ ಹೆಚ್ಚಿನ ನಿಯಂತ್ರಣ ಹೊಂದುವಂತೆ ಆದಾಗ ಸಹಜವಾಗಿಯೇ ಎ.ಐ. ಅನ್ನು ಲೋಕಕಲ್ಯಾಣಕ್ಕೆ ಬಳಸುವಂತಾಗಬೇಕು ಅನ್ನುವ ಆಶಯಗಳಿಗೆ ಹಿನ್ನಡೆಯಾಗುತ್ತದೆ. ಅಷ್ಟೇ ಅಲ್ಲದೆ, ಮೂರನೆಯ ಜಗತ್ತಿನ ದೇಶಗಳು ಈ ತಂತ್ರಜ್ಞಾನದ ಮೇಲೆ ಯಾವುದೇ ಹಿಡಿತ ಹೊಂದಲಾಗದೆ, ಏನಿದ್ದರೂ ಬರೀ ಮಾರುಕಟ್ಟೆಯಾಗಿ ಉಳಿಯುವ ಅಪಾಯವೂ ಇದೆ.

ಇಂದು ಮನುಕುಲ ಎದುರಿಸುತ್ತಿರುವ ಅತೀ ದೊಡ್ಡ ಸಮಸ್ಯೆಗಳಾದ ಎಲ್ಲರಿಗೂ ಗುಣಮಟ್ಟದ ಶಿಕ್ಷಣ, ಆರೋಗ್ಯ ಸೇವೆ ಸಿಗದ ಸ್ಥಿತಿಯನ್ನು ದೊಡ್ಡ ಮಟ್ಟದಲ್ಲಿ ಸುಧಾರಿಸುವ ಸಾಮರ್ಥ್ಯ ಈ ತಂತ್ರಜ್ಞಾನಕ್ಕಿದೆ. ಆದರೆ ಅದೇ ಸಮಯಕ್ಕೆ ಒಂದಿಡೀ ತಲೆಮಾರಿನ ಮಕ್ಕಳನ್ನು ಗ್ಯಾಜೆಟ್‌ಗಳ ದಾಸರಾಗಿಸಿ ಲಾಭ ಮಾಡಿಕೊಂಡ ಸಿಲಿಕಾನ್ ವ್ಯಾಲಿಯ ದಿಗ್ಗಜರು ಈ ಹೊಸ ತಂತ್ರಜ್ಞಾನವನ್ನೂ ತಮ್ಮ ತಂತ್ರಜ್ಞಾನ ಶಾಹಿ ಸಾಮ್ರಾಜ್ಯದ ವಿಸ್ತರಣೆಗೆ ಬಳಸಿಕೊಳ್ಳುವುದಿಲ್ಲ ಎಂದು ನಂಬಲು ಯಾವ ಕಾರಣಗಳೂ ಇಲ್ಲ. ಹೀಗಾಗಿ ಎ.ಐ. ತಂತ್ರಜ್ಞಾನವನ್ನು ನಿಯಂತ್ರಿಸುವ ಮಾರ್ಗಗಳೇನು ಅನ್ನುವ ಕುರಿತು ಚಿಂತಕರ ಚಾವಡಿಯಲ್ಲಿ ಹೆಚ್ಚಿನ ಚರ್ಚೆಗಳು ಈಗ ನಡೆಯುತ್ತಿವೆ. ವಿಶ್ವಸಂಸ್ಥೆಯ ನಾಯಕತ್ವದಲ್ಲಿ 'ಅಂತರರಾಷ್ಟ್ರೀಯ ಮಾಹಿತಿ ಆಧಾರಿತ ವ್ಯವಸ್ಥೆ' (ಐ.ಡಿ.ಎ) ಅನ್ನುವ ಸಮಿತಿಯನ್ನು ರಚಿಸಿ ಅದರಡಿ ಎ.ಐ. ತಂತ್ರಜ್ಞಾನದ ಬೆಳವಣಿಗೆ ಸುರಕ್ಷಿತವಾಗಿ, ಸುಭದ್ರವಾಗಿ, ಶಾಂತಿಯುತವಾಗಿ ಮತ್ತು ಸುಸ್ಥಿರವಾಗಿಯೂ ಇರುವಂತೆ ನೋಡಿಕೊಳ್ಳಬೇಕು ಮತ್ತು ಮಾನವಹಕ್ಕುಗಳನ್ನು ಎತ್ತಿ ಹಿಡಿಯುವಂತಿರಬೇಕು ಎಂಬುದು ಸ್ವಿಟ್ಜರ್ಲೆಂಡ್‌ನ ಅಧ್ಯಾಪಕ ಪೀಟರ್ ಕರ್ಶ್ಲೇಗರ್ ಅವರ ವಾದ.



ಎ.ಐ. ಮೇಲೆ ಯಾವುದೇ ನಿಯಂತ್ರಣದ ಆಲೋಚನೆ ಆವಿಷ್ಕಾರ ವಿರೋಧಿಯಾಗಿರುತ್ತದೆ ಅನ್ನುವ ವಾದವನ್ನು ಅವರು ತಳ್ಳಿಹಾಕುತ್ತಾರೆ. ವಿಮಾನಯಾನ ಶುರುವಾದ ಹೊಸತಿನಲ್ಲಿ ಅದರಲ್ಲಿ ಪಯಣಿಸಲು ಜನರು ಹೆದರುತ್ತಿದ್ದರು, ಆದರೆ ಸೂಕ್ತವಾದ, ಜಾಗತಿಕ ಸಹಕಾರದ ನೆಲೆಯಲ್ಲಿ ರೂಪಿಸಲಾದ ಕಟ್ಟುನಿಟ್ಟಿನ ನೀತಿಗಳಿಂದ ಇಂದು ಎಲ್ಲರೂ ಚಿಂತೆಯಿಲ್ಲದ ವಿಮಾನ ಪ್ರಯಾಣ ಮಾಡುತ್ತಾರೆ. ಈ ಕುರಿತ ಬಿಗಿಯಾದ ನೀತಿ– ನಿಯಮಗಳು ಈ ಕ್ಷೇತ್ರದಲ್ಲಿ ಆವಿಷ್ಕಾರಕ್ಕೆ ಯಾವ ತಡೆಯನ್ನೂ ಒಡ್ಡಿಲ್ಲ ಎಂದು ಅವರು ವಾದಿಸುತ್ತಾರೆ. ಅಣ್ವಸ್ತ್ರ ಪ್ರಸರಣದ ತಡೆಗೆ ಎರಡನೆಯ ಮಹಾಯುದ್ಧದ ನಂತರ ವಿಶ್ವಸಂಸ್ಥೆಯಡಿ ಅಸ್ತಿತ್ವಕ್ಕೆ ಬಂದ ಅಂತರರಾಷ್ಟ್ರೀಯ ಅಣು ಶಕ್ತಿ ಸಮಿತಿ ಮತ್ತೊಂದು ಅಣುಸಮರ ನಡೆಯದಂತೆ ನೋಡಿಕೊಂಡಿರುವಂತೆ ಎ.ಐ. ಕುರಿತ ಸಮಿತಿಯೂ ಈ ತಂತ್ರಜ್ಞಾನವನ್ನು ಮನುಕುಲದ ಒಳಿತಿಗೆ ಬಳಸುವಂತೆ ನಿರ್ದೇಶಿಸಬಲ್ಲದು ಅನ್ನುವುದು ಅವರ ವಾದ.

ಯಾವ ತಂತ್ರಜ್ಞಾನವೇ ಇರಲಿ, ಅದಕ್ಕೊಂದು ಉತ್ತರದಾಯಿತ್ವದ ಬುನಾದಿಯಿಲ್ಲದಿದ್ದರೆ ಅಂತಹ ತಂತ್ರಜ್ಞಾನ ಅದೆಷ್ಟೇ ಶಕ್ತಿಯುತವಾಗಿದ್ದರೂ ಮನುಕುಲದ ಎಂತಹ ದೊಡ್ಡ ಸಮಸ್ಯೆ ಬಗೆಹರಿಸುವ ಶಕ್ತಿ ಹೊಂದಿದ್ದರೂ ಅದನ್ನು ಕುರುಡಾಗಿ ನಂಬುವುದು ದಡ್ಡತನವಾದೀತು. ಇಂದು ಜಾಗತೀಕರಣದ ರೂಪ ಬದಲಾಗುತ್ತಿದೆ. ಮೂರು ದಶಕಗಳ ಕಾಲ ಮುಕ್ತವಾಗಿ ಬಂಡವಾಳ ಮತ್ತು ಕಾರ್ಮಿಕರ ಚಲನೆಯನ್ನು ಜಾಗತೀಕರಣ ಸಾಧ್ಯವಾಗಿಸಿತ್ತು. ಕೋವಿಡ್ ನಂತರದ ದಿನಗಳಲ್ಲಿ ಇದಕ್ಕೆ ವಿರುದ್ಧವಾದ ಚಲನೆ ಶುರುವಾಗಿತ್ತು. ಈಗ ಅದಕ್ಕೆ ಇನ್ನಷ್ಟು ವೇಗ ಬಂದಿದೆ. ಜಾಗತೀಕರಣದ ಅತ್ಯಂತ ದೊಡ್ಡ ಲಾಭದಾರನಾಗಿದ್ದ ಅಮೆರಿಕವೇ ಇಂದು ಒಳಮುಖಿಯಾಗಿ ಜಾಗತೀಕರಣದ ಸ್ವರೂಪ ಬದಲಿಸಲು ಹೊರಟಿದೆ. ಇತ್ತೀಚೆಗಿನ ಸುಂಕ ಸಮರ, ಭಾರತ-ಪಾಕಿಸ್ತಾನದ ಬಿಕ್ಕಟ್ಟಿನಲ್ಲಿ ದಿನಕ್ಕೊಂದು ಮಾತನಾಡುತ್ತ ಅಮೆರಿಕ ನಡೆದುಕೊಂಡ ರೀತಿ, ಜಾಗತಿಕ ಸಹಕಾರದ ಸಂಸ್ಥೆಗಳೆಲ್ಲವೂ ಬಲಹೀನಗೊಳ್ಳುತ್ತಿರುವ ರೀತಿಯನ್ನು ಗಮನಿಸಿದರೆ ಎ.ಐ. ಅಷ್ಟೇ ಅಲ್ಲ, ಯಾವುದೇ ವಿಷಯದಲ್ಲಿ ಜಾಗತಿಕ ಸಹಕಾರವನ್ನು ಸಾಧ್ಯವಾಗಿಸುವುದು ಈಗ ಹೆಚ್ಚಿನ ಸವಾಲಿನ ವಿಷಯ.

ಹಿಂದೆ ಶೀತಲ ಸಮರದ ಸಮಯದಲ್ಲಿ ಇಡೀ ಜಗತ್ತು ಅಮೆರಿಕ ಮತ್ತು ಸೋವಿಯತ್ ರಷ್ಯಾದ ನಡುವೆ ಹಂಚಿಹೋಗುವಂತಿದ್ದ ಕಾಲದಲ್ಲಿ ಅಲಿಪ್ತ ನೀತಿಯ ಮೂಲಕ ಮೂರನೆಯ ದಾರಿಯೊಂದನ್ನು ತೋರಿಸಿದ್ದ ಭಾರತ ಈಗ ಅಮೆರಿಕ-ಚೀನಾದ ನಡುವಿನ ಕಾಲ್ಚೆಂಡಿನಾಟದಂತಿರುವ ಈ ವಿಷಯದಲ್ಲಿ ಮುಂದಾಳತ್ವ ವಹಿಸುವುದು ಸೂಕ್ತವೆನಿಸುತ್ತದೆ.

ಎ.ಐ. ತಂತ್ರಜ್ಞಾನದ ಪ್ರಗತಿಯಲ್ಲಿ ಭಾರತೀಯರ ಕೊಡುಗೆ ದೊಡ್ಡ ಮಟ್ಟದಲ್ಲಿರುವುದರಿಂದ ಇದಕ್ಕೆ ಬೇಕಾದ ತಿಳಿವಿನ ಬುನಾದಿಯೂ ಭಾರತಕ್ಕಿದೆ. ಇದನ್ನು ಸಾಧ್ಯವಾಗಿಸಿದ್ದೇ ಆದರೆ ಭಾರತ ನಿಜಕ್ಕೂ ಈ ವಿಷಯದಲ್ಲಿ ವಿಶ್ವಗುರು ಅನ್ನಿಸಿಕೊಳ್ಳಬಹುದು.

ಚುರುಮುರಿ

ಸುಸೈಡ್ ರಾಕೆಟ್

• ಡಿ.ಎಸ್. ಲಿಂಗರಾಜು

'ಪಾಕಿಸ್ತಾನ ಬುಟ್ಟ ಡ್ರೋನು, ರಾಕೆಟ್ ಅರ್ಧ ದಾರೀಲೇ ವಯಕ್ ಅಂತ ಬಿದ್ದೋತಿದ್ವಲ್ಲ ಯಾಕೆ ಸಾ?' ಅಂತ ತುರೇಮಣೆಗೆ ಕೇಳಿದೆ.

'ಇದಕ್ಕೆ ಎರಡು ಕಾರಣ ಅವೆ ಕಲಾ. ಒಂದು ನಮ್ಮ ಸೇನೆಯ ಪರಾಕ್ರಮ ನೋಡಿ ಹೆದರಿ ತಲೆ ತಿರುಗಿ ಬಿದ್ದೋತಿದ್ದೊ. ಇನ್ನೊಂದು ಈ ಡ್ರೋನು, ರಾಕೆಟ್ಟುಗಳ ತಯಾರಿಸಿದೋರು ಯಾರೇಳು?' ತುರೇಮಣೆ ಪ್ರಶ್ನೆ ಕೇಳಿದರು.

'ಇದೇನ್ಸಾ ಅರೀದೋರಂಗೆ ಕೇಳ್ತಿರಾ. ಚೀನದೋರಲ್ವಾ ಅವುನ್ನೆಲ್ಲಾ ತಯಾರು ಮಾಡಿದ್ದು' ಅಂತಂದೆ.

'ಚೀನದೋರು ಅವರು ತಯಾರು ಮಾಡಿದ ಹಾಫ್‌ರೇಟ್-ಚೀಪ್ರೇಟ್ ಡ್ರೋನಿಗೆ ಸ್ಯಾನ್ ಬಿಯಾಂಶಿ ಕ್ಸಿಂಗಲಿ ಅಂತ ಹೆಸರಿಟ್ಟು ನಮ್ಮ ಐನಾತಿ ಮಾಲು ಭಾರತದ ಮ್ಯಾಲೆ ಹಾರಿಕ್ಯಂದೋಗಿ ಪೋಟ ತೆಗುದು ಇನ್‌ಸ್ಟಾಗ್ರಾಮಿಗೆ ಹಾಕ್ತದೆ ಅಂತ ಪಾಕಿಗೆ ಅಡ್ಡಗ್ಯಾನ ಮಾಡಿ ಮಾರಿದ್ರು' ಅಂತಂದು ವಡಪು ಹಾಕಿದರು.

'ಸ್ಯಾನ್ ಬಿಯಾಂಶಿ ಕ್ಸಿಂಗಲಿ ಅಂದ್ರೆ ಏನು ಸಾ?'

'ಹಂಗಂದ್ರೆ ಚೀನೀ ಭಾಷೇಲಿ ಮೂರುಕಾಸಿನ ಸಾಮಾನು ಅಂತ ಅರ್ಥ ಕಲಾ. ಅದಕ್ಕೇ ಅವು ಗುರಿ ಮುಟ್ಟದೇ ಸುಸೈಡ್ ಮಾಡಿಕ್ಯಂದು ಬಿದ್ದೋಗ್ಯವೆ' ಅಂತಂದ್ರು.

'ಕಾಸಿಗೆ ತಕ್ಕ ಕಜ್ಜಾಯ ಕಾ ಬುಡಿ. ಅರುಣಾಚಲ ನಮ್ಮದು ಅಂತಾವ್ರೆ ಚೀನದೋರು. ನಾವೇನು ಅವರಿಗೆ ಅಕ್ಕಿ, ಬೆಲ್ಲ, ಕಾಯಿ ಜೊತೆ ಅರುಣಾಚಲ ಕೊಟ್ಟು ಆಶೀರ್ವಾದ ಮಾಡಿ ಮಡಿಲುದುಂಬಿ ಕಳಿಸಿದ್ವಾ?' ಅಂತಂದೆ.

'ಇದು ನನ್ನೂರು, ನನ್ ಏರಿಯಾ. ಇಲ್ಲಿಗೆ ಬಂದು ನನಗೇ ಅಪು ಇಡ್ತೀಯಾ? ನಮ್ಮ ಸೈನ್ಯ ಒಂದುಕಡೆ ಗುಡುಗಿದ್ರೆ ಎಷ್ಟೋ ದೇಶಗಳು ನಡುಗೋಯ್ತವೆ. ಇನ್ಮುಂದೆ ನಮ್ ಸೈನ್ಯ ನಿನಗೆ ಕಣ್ಣಿಗೆ ಕೈಯ್ಯಿಟ್ಟು ಚುಚ್ಚುತಾನೆ ಇರತದೆ. ಯಾಕಪ್ಪಾ ಇಲ್ಲಿಗೆ ಬಂದೆ. ಯಾಕಪ್ಪಾ ಭಾರತಾನ ಎದುರಾಕ್ಕೊಂಡೆ ಅಂತ ನಿದ್ದೆ ಇಲ್ದೆ ನರಳ್ತೀಯ. ಯಾಕೆ ಶಾಕ್ ಆಯ್ತಾ? ಆಗಲೇಬೇಕು. ಇದು ಅರುಣಾಚಲಪ್ರದೇಶದ ಇಚಾರ ಕನೋ' ತುರೇಮಣೆ ಬುಟ್ಟ ಡೈಲಾಗ್ ಕೇಳಿ ನಗದೇ ಇರಲಾಗಲಿಲ್ಲ.

ದಿನದ ಟ್ವೀಟ್

ಹಿತಾಸಕ್ತಿ ಮುಖ್ಯ

ವಿದೇಶಗಳಿಗೆ ವಿಷಯ ಮನದಟ್ಟು ಮಾಡಲು ನಿಯೋಗ ಕಳುಹಿಸುವುದರ ಪ್ರಸ್ತುತತೆ ಕಡಿಮೆ. ಜಗತ್ತಿನ ಅಭಿಪ್ರಾಯವು ಏನೆಂಬುದು ಭಾರತದ ಭದ್ರತೆಯ ವಿಚಾರದಲ್ಲಿ ಹೆಚ್ಚು ಪ್ರಸ್ತುತ ಆಗುವುದಿಲ್ಲ. ದೇಶಗಳು ಬಲ ಮತ್ತು ಹಿತಾಸಕ್ತಿಯ ಆಧಾರದಲ್ಲಿ ತೀರ್ಮಾನ ತೆಗೆದುಕೊಳ್ಳುತ್ತವೆ; ನ್ಯಾಯ ಏನಿದೆ ಎಂಬುದರ ಆಧಾರದಲ್ಲಿ ಅಲ್ಲ. ಇನ್ನುಳಿದ ಎಲ್ಲವೂ ನಾಟಕ.

ನಿತಿನ್ ಪೈ, ತಕ್ಷಶಿಲಾ ಇನ್‌ಸ್ಟಿಟ್ಯೂಷನ್‌ನ ನಿರ್ದೇಶಕ

ಕಿಡಿನುಡಿ

ಸಮಾಜದ ಪ್ರತಿ ವರ್ಗಕ್ಕೂ ರಾಜಕೀಯ ನಾಯಕತ್ವ ಎದ್ದು ಕಾಣುವಂತೆ ಸಿಕ್ಕಿದೆ, ಇದು ಒಪ್ಪುವಂಥದ್ದೇ. ಆದರೆ ಮುಸ್ಲಿಮರಿಗೆ ರಾಜಕೀಯ ದನಿ, ನಾಯಕತ್ವ ಎದ್ದುಕಾಣುವಂತೆ ಸಿಗುವುದನ್ನು ಯಾರೂ ಒಪ್ಪುವುದಿಲ್ಲ... ಬಿಎಸ್‌ಪಿ, ಎಸ್‌ಪಿ, ಕಾಂಗ್ರೆಸ್, ಬಿಜೆಪಿ ಸೇರಿ ಎಲ್ಲ ಪಕ್ಷಗಳಿಗೂ ಈ ಮಾತು ಅನ್ವಯ.

ಅಸದುದ್ದೀನ್ ಓವೈಸಿ, ಎಐಎಂಐಎಂ ನಾಯಕ

25 ವರ್ಷಗಳ ಹಿಂದೆ

ಶನಿವಾರ, 20-5-2000

• **ಸ್ವಯಂ ಘೋಷಿತ ಆಸ್ತಿ ತೆರಿಗೆ: ತಡೆಯಾಜ್ಞೆ ತೆರವು**

ಬೆಂಗಳೂರು: ಬೆಂಗಳೂರು ಮಹಾನಗರ ಪಾಲಿಕೆ ಜಾರಿಗೆ ತಂದಿರುವ ಆಸ್ತಿ ತೆರಿಗೆಯ ಸ್ವಯಂ ಘೋಷಣೆ ಪದ್ಧತಿಗೆ ಗುರುವಾರ ನೀಡಿದ್ದ ತಡೆ ಆಜ್ಞೆಯನ್ನು ಹೈಕೋರ್ಟಿನ ರಜಾಕಾಲದ ವಿಭಾಗೀಯ ನ್ಯಾಯಪೀಠ ಇಂದು ತೆರವು ಮಾಡಿತು.

ತಡೆ ಆಜ್ಞೆಯನ್ನು ತೆರವು ಮಾಡುವಂತೆ ಕೋರಿ ಮಹಾನಗರ ಪಾಲಿಕೆ ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನು ಪರಿಶೀಲಿಸಿದ ನ್ಯಾಯಮೂರ್ತಿ ಕೆ.ಎಚ್.ಎನ್. ಕುರಂಗ ಮತ್ತು ನ್ಯಾಯಮೂರ್ತಿ ಕೆ. ಶ್ರೀಧರ ರಾವ್ ಅವರಿದ್ದ ರಜಾ ಕಾಲದ ವಿಭಾಗೀಯ ಪೀಠ ತಡೆ ಆಜ್ಞೆ ತೆರವು ಮಾಡಿತು.

• **'ಬರದಿಂದ ಹೊರಬಂದ ಗುಜರಾತ್'**

ಗಾಂಧಿನಗರ (ಪಿಟಿಐ): 'ಗುಜರಾತ್ ರಾಜ್ಯವು ಬರಗಾಲ ಪರಿಸ್ಥಿತಿಯಿಂದ ಹೊರ ಬಂದಿದೆ' ಎಂದು ಮುಖ್ಯಮಂತ್ರಿ ಕೇಶುಭಾಯಿ ಪಟೇಲ್ ಅವರು ಇಂದು ಇಲ್ಲಿ ಪ್ರಕಟಿಸಿದರು.

'ಕಳೆದ ವರ್ಷ ಸಾಕಷ್ಟು ಮಳೆಯಾಗದೇ ಉದ್ಭವಿಸಿದ ಬರ ಪರಿಸ್ಥಿತಿಯನ್ನು ಯಶಸ್ವಿಯಾಗಿ ನಿಭಾಯಿಸಲಾಗಿದೆ' ಎಂದು ಅವರು ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

50 ವರ್ಷಗಳ ಹಿಂದೆ

ಮಂಗಳವಾರ, 20-5-1975

• **ಸರ್ಕಾರ ಕೆಟ್ಟಿದೆ ಎನ್ನುವ ಟೀಕೆ ಹಳಬರ ಗೊಣಗು**

ಬೆಂಗಳೂರು: ತಮ್ಮ ಸರ್ಕಾರ ಕೆಟ್ಟಿದೆ ಎಂದು ದೂರುವವರನ್ನು ಮುಖ್ಯಮಂತ್ರಿ ದೇವರಾಜ ಅರಸು ಅವರು ಇಂದು ಇಲ್ಲಿ 'ಕಾಲ ಎಷ್ಟು ಕೆಟ್ಟುಹೋಗಿದೆ' ಎಂದು ಗೊಣಗುಟ್ಟುವ ಹಳಬರಿಗೆ ಹೋಲಿಸಿದರು.

'1972ರಿಂದ ಈಚೆಗೆ ದೇವರಾಜ ಅರಸು ನೇತೃತ್ವದ ಕರ್ನಾಟಕ ಸರ್ಕಾರ ಬರಬರುತ್ತಾ ಕೆಟ್ಟುಹೋಗಿದೆ. ದಕ್ಷತೆಯೇ ಇಲ್ಲ. ಎಲ್ಲೆಲ್ಲೂ ಲಂಚಮಯ. ನನ್ನ ಸರ್ಕಾರ ಕೆಟ್ಟಿರುವಷ್ಟು ಹಿಂದೆ ಇದ್ದ ಯಾವ ಸರ್ಕಾರವೂ ಕೆಟ್ಟಿಲ್ಲ ಎಂದೆಲ್ಲ ಹೇಳುವವರಿದ್ದಾರೆ. ನಮ್ಮ ಕಾಲ ಎಷ್ಟು ಚೆನ್ನಾಗಿತ್ತು, ಈಗ ಕಾಲ ಕೆಟ್ಟುಹೋಗಿದೆ ಎಂದು ಗೊಣಗುವ ವೃದ್ಧರಿಗೂ ಇವರಿಗೂ ವ್ಯತ್ಯಾಸ ಇಲ್ಲ' ಎಂದರು.

• **ಆಪಾದನೆ ಇದ್ದರೆ ತಾವು ವಿಚಾರಣೆಗೆ ಸಿದ್ಧ: ಕೆ.ಎಚ್. ಪಾಟೀಲ್**

ಬೆಂಗಳೂರು: ತಮ್ಮ ಬಗ್ಗೆ ಆಪಾದನೆಗಳೇನಾದರೂ ಇದ್ದರೆ ವಿಚಾರಣೆ ನಡೆಸುವಂತೆ ಕೆಪಿಸಿಸಿ ಅಧ್ಯಕ್ಷ ಕೆ.ಎಚ್. ಪಾಟೀಲ್ ಅವರು ಮುಖ್ಯಮಂತ್ರಿ ದೇವರಾಜ ಅರಸು ಅವರನ್ನು ಒತ್ತಾಯಪಡಿಸಿದ್ದಾರೆ.

• **ಟೆಲಿವಿಷನ್‌ನಲ್ಲಿ ಶಿಕ್ಷಣ**

ನವದೆಹಲಿ: ಅಮೆರಿಕದ ಸಂಪರ್ಕ ಉಪಗ್ರಹ ಬಳಸಿ ಭಾರತದ ಆರು ರಾಜ್ಯಗಳಲ್ಲಿ ಏರ್ಪಡಿಸುವ ಟೆಲಿವಿಷನ್ ಪ್ರಸಾರ ಈ ಆಗಸ್ಟ್ 6ರಂದು ಆರಂಭವಾಗುತ್ತದೆ. ಆದರೆ ಅದು 76ರ ಜುಲೈಗೆ ಅಂತ್ಯಗೊಳ್ಳಲಿದೆ.

ಸಂಗತ

ಸಂಚಾರ ನಿಯಮ: ಅಸಡ್ಡೆ ಬೇಡವೇ ಬೇಡ

ದುಶ್ಚಟಗಳಿಗೆ ದಾಸರಾಗಿರುವ ಕೆಲವು ಯುವಕರು ಬದುಕು ಕಟ್ಟಿಕೊಳ್ಳಲಾಗದೆ ಕುಟುಂಬಕ್ಕೆ ಹಾಗೂ ಸಮಾಜಕ್ಕೆ ಹೊರೆಯಾಗುತ್ತಿದ್ದಾರೇನೋ...

• ಎಂ.ಜೆ. ಅಲ್ಫೋನ್ಸ್ ಪಿಂಟೋ

ಏಪ್ರಿಲ್ 30ರ ರಾತ್ರಿ 9.50ರ ಸುಮಾರಿಗೆ ತೀರ್ಥಹಳ್ಳಿಯ ರಸ್ತೆಯ ಬದಿಯಲ್ಲಿ, ಮನೆಯ ಮುಂದೆ ನಡೆದು ಹೋಗುತ್ತಾ ಇದ್ದೆ. ಹಿಂಬದಿಯಿಂದ ಯುವಕನೊಬ್ಬ ದ್ವಿಚಕ್ರ ವಾಹನವನ್ನು ನಿಯಮಬಾಹಿರವಾಗಿ ಚಾಲನೆ ಮಾಡುತ್ತ ಬಂದ. ಹಿಂಬದಿಯಿಂದ ಬಂದು ನನ್ನ ಕಾಲಿಗೆ ಆತ ಗುದ್ದಿದ ರಭಸಕ್ಕೆ ನನ್ನ ಕಾಲಿನ ಮೂಳೆ ಮುರಿದಿತ್ತು. ತಕ್ಷಣವೇ ಬಂದ ಆಂಬುಲೆನ್ಸ್ ನನ್ನನ್ನು ಸರ್ಕಾರಿ ಆಸ್ಪತ್ರೆಗೆ ಸಾಗಿಸಿತು. ಪೋಲಿಸರು ನನ್ನಿಂದ ಅಗತ್ಯ ಮಾಹಿತಿಯನ್ನು ಸಂಗ್ರಹಿಸಿದರು.

ನಂತರ ತುರ್ತು ಚಿಕಿತ್ಸೆಯ ಅಗತ್ಯ ಇದ್ದುದರಿಂದ ಸರ್ಕಾರಿ ಆಸ್ಪತ್ರೆಯಿಂದ ಮಣಿಪಾಲದ ಕೆಎಂಸಿ ಆಸ್ಪತ್ರೆಗೆ ನನ್ನನ್ನು ಸಾಗಿಸಲಾಯಿತು. ತಕ್ಷಣವೇ ಚಿಕಿತ್ಸೆ ನೀಡಿದ ವೈದ್ಯರು ಹಾಗೂ ಇಡೀ ವೈದ್ಯಕೀಯ ವ್ಯವಸ್ಥೆಗೆ ಒಂದು ಧನ್ಯವಾದ. ಎರಡೇ ದಿನಗಳಲ್ಲಿ ಆಸ್ಪತ್ರೆಯಿಂದ ಬಿಡುಗಡೆ ಆಗಿ ಮನೆಗೆ ಬಂದೆ. ಅಪಘಾತ ಮಾಡಿದ್ದ ಯುವಕ ಹಾಗೂ ಅವನ ತಾಯಿ ನಾನು ಮನೆಗೆ ಮರಳಿದ ಕೆಲವೇ ಗಂಟೆಗಳಲ್ಲಿ ಭೇಟಿ ನೀಡಿದರು. ತಪ್ಪಿಗೆ ಕ್ಷಮೆ ಯಾಚಿಸಿ ಕಾಲಿಗೆ ಬೀಳಲು ಮುಂದಾದರು. ತಕ್ಷಣವೇ ಕಾಲನ್ನು ಸರಿಸಿದ ನಾನು, ನನ್ನ ಕಾಲು ಮುರಿದ ನೀನು ಕಾಲಿಗೆ ಬೀಳುವುದರಲ್ಲಿ ಯಾವ ಪುರುಷಾರ್ಥವಿದೆ ಎಂದು ಕಾಲು ನೀಡಲು ನಿರಾಕರಿಸಿದೆ.

ಆದರೂ ಬಿಡದೆ ಆ ಯುವಕ ಕಾಲಿಗೆ ಬಿದ್ದು ಹೋದ. ಆದರೆ ನನಗೆ ಅದಾಗಲೇ ಪರಿಚಿತರಾಗಿದ್ದ ತಾಯಿ ಮಾತ್ರ ತಮ್ಮ ಅಂತರಂಗದ ಅಳಲನ್ನು ತೋಡಿಕೊಂಡು 'ನೀವಾದರೂ ಬುದ್ಧಿ ಹೇಳಿ ಸಾರ್, ನಮ್ಮ ಮಾತೇ ಕೇಳುವುದಿಲ್ಲ. ಆ ದಿನ ರಾತ್ರಿ 9.15ಕ್ಕೆ ಪುನಃ ಪೇಟೆಗೆ ಹೋಗುವುದು ಬೇಡ ಎಂದರೂ ಕೇಳಲಿಲ್ಲ' ಎಂದರು. ಆ ಯುವಕ ತಾಯಿ-ತಂದೆಯ ಮಾತನ್ನು ಕಡೆಗಣಿಸಿ ಪಟ್ಟಣದ ಬಾರೊಂದರಲ್ಲಿ ಮತ್ತಷ್ಟು ಕುಡಿದು ಗಲಾಟೆ ಮಾಡಿದಾಗ, ಅಲ್ಲಿದ್ದ ಕೆಲವು ಹಿರಿಯರು ಈತನ ಬೈಕಿನ ಕೀ ಕಸಿದು ಈ ಸ್ಥಿತಿಯಲ್ಲಿ ಬೈಕ್ ಚಾಲನೆ ಮಾಡುವುದು ಬೇಡ, ಆಟೊದಲ್ಲಿ ಹೋಗುವಂತೆ ಪರಿಪರಿಯಾಗಿ ಹೇಳಿದರೂ ಅವರ ಮಾತನ್ನು ಉಲ್ಲಂಘಿಸಿ ಬೈಕ್ ಚಾಲನೆ ಮಾಡಿಕೊಂಡು ಬಂದಿದ್ದು ನನ್ನ ದುರದೃಷ್ಟವೇ ಸರಿ ಎನಿಸಿತು.

ನನಗೆ ಇಷ್ಟು ಪೆಟ್ಟಾದರೂ ಆತನಿಗೆ ಏನೂ ಪೆಟ್ಟಾಗದೇ ಇದ್ದುದನ್ನು ಕಂಡ ಕೆಲವರು 'ಅವನ ಹೊಟ್ಟೆಯಲ್ಲಿದ್ದ ಪರಮಾತ್ಮ ಅವನನ್ನು ಕಾಪಾಡಿದ' ಎಂದು ತಮಾಷೆ ಮಾಡಿದರು. ನಾನು ಪ್ರಾಥಮಿಕ ಶಾಲೆಯಲ್ಲಿ ಇದ್ದಾಗ ಗಿಳಿಪಾಠದಂತೆ ಕುಡಿತದ ದುಷ್ಪರಿಣಾಮಗಳ ಬಗ್ಗೆ ಭಾಷಣ ಮಾಡುತ್ತಿದ್ದುದು ನೆನಪಿಗೆ ಬಂದಿತು. ಅಂದು ಕುಡಿತದ ದುಷ್ಪರಿಣಾಮದ ಸಾಕ್ಷಾತ್ ದರ್ಶನವಾಗಿತ್ತು. ನಾನೇನೋ ನಿವೃತ್ತ ನೌಕರ. ಆದರೆ, ಕೂಲಿ ಮಾಡಿ ಬದುಕುವವರಿಗೆ ಹೀಗಾದರೆ ಅವರ ಪರಿಸ್ಥಿತಿ ಏನಾಗಬಹುದು ಎಂದು ಚಿಂತಿಸಿ ಅತೀವ ವೇದನೆಯಾಯಿತು.

ಜೀವಕ್ಕೆ ಏನೂ ಅಪಾಯ ಆಗಲಿಲ್ಲವಲ್ಲಾ ಎಂದು ಚಿಂತಿಸಿ ಭಗವಂತನಿಗೆ ಮನದಲ್ಲೇ ನಮಸ್ಕರಿಸಿದೆ. ಬಹುಶಃ ಅಂದು ಆ ಯುವಕ ತಂದೆ-ತಾಯಿಯ ಮಾತನ್ನು ಪಾಲಿಸಿದ್ದರೆ, ಹಿರಿಯರ ಮಾತನ್ನು ಕೇಳಿದ್ದರೆ ಇಂದು ಈ ಪರಿಸ್ಥಿತಿ ಬರುತ್ತಿರಲಿಲ್ಲ. ವಾಹನ ಚಾಲನೆಯ ನಿಯಮಗಳನ್ನೇನೋ ಸರ್ಕಾರ ರಚಿಸಿದೆ. ಆದರೆ ಅವುಗಳನ್ನು ಪಾಲಿಸದೇ ಇದ್ದರೆ ಯಾರು ಹೊಣೆ? ಪೊಲೀಸ್ ಇಲಾಖೆ ಹತ್ತು ಹಲವು ವಿಧಗಳಲ್ಲಿ ದಂಡ ವಸೂಲಿ ಮಾಡುತ್ತಿದೆ. ಸಂಸ್ಕಾರದ ಕೊರತೆ ಇರುವ ನಮ್ಮ ಕೆಲವು ಯುವಕರಿಗೆ ಇದು ಅರ್ಥವಾಗುವುದಾದರೂ ಹೇಗೆ?

ಇದು ಒಂದು ಕುಟುಂಬದ ಸಮಸ್ಯೆಯಲ್ಲ. ಇಂದು ಹಲವು ಕುಟುಂಬಗಳು ಯುವಜನರ ದುಶ್ಚಟದಿಂದಾಗಿ ಕಣ್ಣೀರಿನಲ್ಲಿ ಕೈತೊಳೆಯುತ್ತಿವೆ. ಸಮಾಜ ಹಾಗೂ ಸರ್ಕಾರಕ್ಕೆ ನುಂಗಲಾರದ ತುತ್ತಾಗುತ್ತಿದ್ದಾರೆ ಇಂತಹ ಯುವಕರು. ಮಾದಕ ವಸ್ತುಗಳಿಗೆ ಬಲಿಯಾಗಿ ಯುವ ಜನಾಂಗ ತನ್ನ ಯೌವನದ ಬಹುಪಾಲನ್ನು ಕಳೆದುಕೊಂಡು, ಬದುಕನ್ನು ಕಟ್ಟಿಕೊಳ್ಳಲಾಗದೆ ಕುಟುಂಬಕ್ಕೆ ಹಾಗೂ ಸಮಾಜಕ್ಕೆ ಹೊರೆಯಾಗುತ್ತಿದೆಯೇನೋ ಅನಿಸುತ್ತದೆ. ದೇಶದ ಕಾನೂನನ್ನು ನಮ್ಮ ಯುವಕರು ಪಾಲಿಸದೇ ಇದ್ದರೆ ಇನ್ನು ಯಾರು ಅದನ್ನು ಪಾಲಿಸುವವರು?

ಇಂದಿನ ವ್ಯವಸ್ಥೆಯಲ್ಲಿ ನೈತಿಕ ಶಿಕ್ಷಣದ ಕೊರತೆ ಇರುವುದರಿಂದಲೋ ಏನೋ ಯುವಕರಲ್ಲಿ ಹಲವರು ಹಾದಿ ತಪ್ಪುತ್ತಿದ್ದಾರೆ. ವಿದೇಶಿ ಸಂಸ್ಕೃತಿಯ ಭರಾಟೆಯಲ್ಲಿ ದೇಶದ ಸಂಸ್ಕೃತಿಯನ್ನು ಕಡೆಗಣಿಸುತ್ತಿರುವುದು ಇದಕ್ಕೆ ಪ್ರಮುಖ ಕಾರಣ ಎಂದರೆ ತಪ್ಪಾಗಲಾರದೇನೋ? ಅದೇನೇ ಇರಲಿ, ಇಂತಹ ದಾರಿತಪ್ಪಿದ ಯುವ ಸಮೂಹದಿಂದ ಮುಂದೆ ಅದೆಂತಹ ಸಮಾಜ ನಿರ್ಮಾಣವಾಗಬಹುದು? ಈ ಬಗ್ಗೆ ಚಿಂತಿಸಿದರೆ ಭಯವಾಗುತ್ತದೆ. ಪ್ರೌಢಶಾಲೆಯೊಂದರಲ್ಲಿ ಶಾಲೆಯ ಶಿಸ್ತಿಗೆ ಅನುಗುಣವಾಗಿ ಕೆಲವರ ತಲೆಗೂದಲಿನ ವಿನ್ಯಾಸ ಬದಲಾಯಿಸಲು ಶಿಕ್ಷಕರು ಮೂರು ವರ್ಷ ಪ್ರಯತ್ನಪಟ್ಟರು. ಮುಖ್ಯ ಶಿಕ್ಷಕರು, ಸಿಬ್ಬಂದಿ, ಎಸ್‌ಡಿಎಂಸಿ ಹಾಗೂ ಬಿಇಒ ಪ್ರಯತ್ನಪಟ್ಟರೂ ಕೇಶವಿನ್ಯಾಸ ಬದಲು ಮಾಡಲು ಆಗಲಿಲ್ಲ. ಇದನ್ನು ಕಂಡಾಗ ಇಂದಿನ ಯುವಕರು ಗುರು ಹಿರಿಯರಿಗೆ, ಪೋಷಕರಿಗೆ ಯಾವ ರೀತಿಯ ಗೌರವ ಕೊಡುತ್ತಾರೆ ಎಂಬ ಒಂದಿಷ್ಟು ಅರಿವಾಗುತ್ತದೆ.

ಮುಂದಿನ ಪೀಳಿಗೆಯ ಹಿತವನ್ನು ಕಾಯುವ ದೃಷ್ಟಿಯಿಂದ ಚಿಂತಕರು, ಸಮಾಜ, ಸರ್ಕಾರ, ಧಾರ್ಮಿಕ ಮುಖಂಡರು ಒಂದಿಷ್ಟು ಚಿಂತನ-ಮಥನ ನಡೆಸಿ, ದುಶ್ಚಟಗಳಿಗೆ ಬಲಿಯಾಗಿರುವ ಯುವಕರನ್ನು ಸರಿದಾರಿಗೆ ತರಲು ಪ್ರಯತ್ನ ನಡೆಸಬೇಕಾಗಿದೆ.

ಲೇಖಕ: ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ನಿವೃತ್ತ ನೌಕರ

ವಾಚಕರ ವಾಣಿ

ಅನುವಾದದ ಅಪಸವ್ಯ ತಪ್ಪಿಸಿ

ಸರ್ಕಾರಿ ವಲಯದ ಹಲವು ಸಂಸ್ಥೆಗಳು ಇಂಗ್ಲಿಷ್ ಪಠ್ಯಗಳನ್ನು ಜಾಹೀರಾತುಗಳಲ್ಲಿ, ಕಚೇರಿಗಳಲ್ಲಿ, ಹೊರಾಂಗಣಗಳಲ್ಲಿ ಪ್ರದರ್ಶಿಸುವಾಗ ಆ ಪಠ್ಯಗಳನ್ನು ಕನ್ನಡಕ್ಕೆ ಅನುವಾದಿಸಲು ಅನುವಾದ ಸಾಫ್ಟ್‌ವೇರ್‌ಗಳನ್ನು ಬಳಸಿ ಅಪಸವ್ಯಗಳನ್ನು ಸೃಷ್ಟಿಸುತ್ತಿವೆ. ಸರಳವಾದ ಕನ್ನಡ ಪದಗಳನ್ನು ಬಳಸಿ ಅನುವಾದ ಮಾಡುವ ಮಂದಿ ಈ ಸಂಸ್ಥೆಗಳಲ್ಲಿ ಇಲ್ಲವೇ?

ಅನುವಾದ ಕೆಲಸವನ್ನು ಸಾಫ್ಟ್‌ವೇರ್ ಆಧಾರಿತ ಸೌಲಭ್ಯಗಳ ಮೂಲಕ ಮಾಡುವಲ್ಲಿ ಜಾಹೀರಾತು ಸಿದ್ಧಪಡಿಸುವ ಕೆಲಸವನ್ನು ಗುತ್ತಿಗೆ ಆಧಾರದಲ್ಲಿ ಪಡೆಯುವ ಕಂಪನಿಗಳ ಪಾತ್ರ ಹೆಚ್ಚಾಗಿ ಕಂಡುಬರುತ್ತಿದೆ. 'ಮೂತ್ರ ತೇರ್ಗಡೆ' (ಪಾಸಿಂಗ್ ಯೂರಿನ್), ಬ್ಯಾಂಕ್ ಬಡ್ಡಿಗೆ 'ಆಸಕ್ತಿ' (ಇಂಟರೆಸ್ಟ್), 'ದಲ್ಲಾಳಿ ಹಾಗೂ ಮಧ್ಯವರ್ತಿಗಳನ್ನು ಮನರಂಜಿಸಲಾಗದು' (ವಿಲ್ ನಾಟ್ ಎಂಟರ್‌ಟೇನ್ ಬ್ರೋಕರ್ಸ್, ಮಿಡಲ್‌ಮೆನ್) ಇವು ಇತ್ತೀಚೆಗೆ ನಾನು ಕಂಡ ಇಂತಹ ಅನುವಾದ ತುಣುಕುಗಳು.

ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಸಾಹಿತ್ಯ ಪರಿಷತ್ತು ಈ ಬಗ್ಗೆ ಒಂದು ಜಾಲತಾಣ ಸೃಷ್ಟಿಸಬೇಕು. ಇಂತಹ ಅಪಸವ್ಯಗಳನ್ನು ಕಂಡ ಸಾರ್ವಜನಿಕರು ಅವುಗಳನ್ನು ಸಂಬಂಧಪಟ್ಟ ಸಂಸ್ಥೆಯ ವಿವರಗಳೊಂದಿಗೆ ಈ ಜಾಲತಾಣದಲ್ಲಿ ಹಂಚಿಕೊಳ್ಳುವ ಅವಕಾಶ ಮಾಡಿಕೊಡಬೇಕು. ಪ್ರಾಧಿಕಾರ ಅಥವಾ ಪರಿಷತ್ತು ಇಂತಹ ಅಪಸವ್ಯ ಎಸಗುವ ಸಂಸ್ಥೆಗಳ ವಿರುದ್ಧ, ಅದರಲ್ಲೂ ಮುಖ್ಯವಾಗಿ ಸರ್ಕಾರಿ ವಲಯದ ಸಂಸ್ಥೆಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವ ವ್ಯವಸ್ಥೆ ರೂಪುಗೊಳ್ಳಬೇಕು.

ಶ್ರೀಧರ ಬಾಣಾವರ, ಬೆಂಗಳೂರು

ಕದನ ವಿರಾಮದ ನಂತರ ಮಾತಿನ ಕದನ

ಭಾರತ ಮತ್ತು ಪಾಕಿಸ್ತಾನ ನಡುವಣ ಸಂಘರ್ಷಕ್ಕೆ ಈಗ ವಿರಾಮ ಸಿಕ್ಕಿದೆ. ಆದರೆ ನಮ್ಮ ರಾಜಕೀಯ ಪಕ್ಷಗಳು ಈ ಕುರಿತಾಗಿ ಮಾತಿನ ಕದನ ಆರಂಭಿಸಿವೆ. ಕರ್ನಾಟಕದಲ್ಲಿ ಆಡಳಿತದಲ್ಲಿರುವ ಪಕ್ಷದ ಕೆಲವು ಮಂತ್ರಿಗಳು ಮತ್ತು ಶಾಸಕರು ಆಡಿರುವ ಮಾತುಗಳನ್ನು ಗಮನಿಸಿದಾಗ ಜುಗುಪ್ಸೆ ಉಂಟಾಗುತ್ತದೆ. ಹೊಣೆಗಾರಿಕೆಯ ಸ್ಥಾನದಲ್ಲಿರುವ ಹಾಗೂ ಪಕ್ಷ ನಿಷ್ಠೆಗಿಂತ ದೇಶ ದೊಡ್ಡದು ಎಂಬ ಅರಿವಿರುವ ಯಾವ ರಾಜಕಾರಣಿಯೂ ಹೀಗೆ ಹಗುರವಾಗಿ, ಅರ್ಥಹೀನವಾಗಿ ಮಾತನಾಡುವುದಿಲ್ಲ.

ಹೀಗೆ ಮಾತನಾಡಿದವರ ನಿಷ್ಠೆಯ ಬಗ್ಗೆ ಹಾಗೂ ಅವರು ಹೊಂದಿರುವ ಹುದ್ದೆಗೆ ಅವರು ಎಷ್ಟು ಅರ್ಹರು ಎಂಬ ಪ್ರಶ್ನೆ ಮೂಡುತ್ತದೆ. ಇಂಥವರ ಬಗ್ಗೆ ಪಕ್ಷದ ವರಿಷ್ಠರು ತಾಳಿರುವ ಮೌನ ಅರ್ಥ ಆಗುವುದಿಲ್ಲ. ಬಿಜೆಪಿಯು ಆಡಳಿತದ ಚುಕ್ಕಾಣಿ ಹಿಡಿದಿರುವ ರಾಜ್ಯದಲ್ಲಿನ ಇಬ್ಬರು ಮಂತ್ರಿಗಳು ಆಡಿರುವ ಮಾತುಗಳು ಅವರ ಅರ್ಹತೆಯನ್ನೇ ಪ್ರಶ್ನಿಸುವಂತೆ ಮಾಡಿವೆ. ಬಿಜೆಪಿಯ ವರಿಷ್ಠರೂ ಹಾಗೂ ಆ ರಾಜ್ಯದ ಮುಖ್ಯಮಂತ್ರಿಯೂ ಈ ಮಂತ್ರಿಗಳ ಮೂರ್ಖ ಮಾತುಗಳನ್ನು ಕೇಳಿಕೊಂಡು ಮೌನವಾಗಿದ್ದಾರೆ. ಇಂಥ ಹೊಲಸು ಬಾಯಿಯವರನ್ನು ಪದಚ್ಯುತಗೊಳಿಸಿ, ಅವರನ್ನು ಪಕ್ಷದಿಂದ ಹೊರಹಾಕಬೇಕಿತ್ತು. 'ಇಂಡಿಯಾ' ಮೈತ್ರಿಕೂಟದ ಪಕ್ಷಗಳ ಕೆಲವು ನಾಯಕರ ಹೇಳಿಕೆಗಳನ್ನು ಆಲಿಸಿದಾಗ, ಅವರು ಜನರನ್ನು ಪ್ರತಿನಿಧಿಸುವ ಯೋಗ್ಯತೆ ಉಳಿಸಿಕೊಂಡಿಲ್ಲ ಎಂಬ ಭಾವ ಮೂಡುತ್ತದೆ. ಬೇರೆ ರಾಷ್ಟ್ರದೊಡನೆ ಸಂಘರ್ಷ ಉಂಟಾದಾಗ ಕೇಂದ್ರದಲ್ಲಿ ಆಡಳಿತದ ನೇತೃತ್ವ ವಹಿಸಿರುವ ಪಕ್ಷವನ್ನು ಬೆಂಬಲಿಸಬೇಕೆ ವಿನಾ ಅಂಥ ಸಂದರ್ಭವನ್ನು ರಾಜಕೀಯ ವೈಮನಸ್ಯಕ್ಕೆ ಬಳಸುವುದು ತಪ್ಪು.

ಸಾಮಗ ದತ್ತಾತ್ರಿ, ಬೆಂಗಳೂರು

ಪದವಿ ಕೋರ್ಸ್ ಕಲಿಯಲು ಪ್ರೇರಣೆ

'ಅಜೀಂ ಪ್ರೇಮ್‌ಜಿ ಫೌಂಡೇಷನ್: 2.5 ಲಕ್ಷ ಹೆಣ್ಣು ಮಕ್ಕಳಿಗೆ ವಿದ್ಯಾರ್ಥಿ ವೇತನ' ಸುದ್ದಿ (ಪ್ರ.ವಾ., ಮೇ 15) ಓದಿ ತುಂಬಾ ಸಂತೋಷವಾಯಿತು. ಅಜೀಂ ಪ್ರೇಮ್‌ಜಿ ಫೌಂಡೇಷನ್ನಿನವರು ಪಿಯುಸಿ ನಂತರ ಪದವಿ ಕೋರ್ಸ್ ಸೇರುವ ಹೆಣ್ಣುಮಕ್ಕಳಿಗೆ ನೀಡುವ ವಿದ್ಯಾರ್ಥಿ ವೇತನವನ್ನು ಈ ವರ್ಷದಿಂದ ಕರ್ನಾಟಕದ ಹೆಣ್ಣುಮಕ್ಕಳಿಗೂ ನೀಡಲು ತೀರ್ಮಾನಿಸಿದ್ದಾರೆ. ಇಂದು ನಮ್ಮ ರಾಜ್ಯದಲ್ಲಿ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಪಿಯುಸಿ ನಂತರ ಪದವಿ ಕೋರ್ಸ್ ಸೇರಲು ಹೆಣ್ಣುಮಕ್ಕಳು ಹಿಂದೇಟು ಹಾಕುತ್ತಿರುವುದಕ್ಕೆ ಆರ್ಥಿಕ ಸಂಕಷ್ಟವೂ ಒಂದು ಕಾರಣ. ಈಗ ಅಜೀಂ ಪ್ರೇಮ್‌ಜಿ ಫೌಂಡೇಷನ್ ವತಿಯಿಂದ ಸಿಗಲಿರುವ ವಿದ್ಯಾರ್ಥಿ ವೇತನವು ಹೆಣ್ಣು ಮಕ್ಕಳಿಗೆ ಪದವಿ ಕೋರ್ಸ್ ಸೇರಲು ಪ್ರೇರಣೆ ನೀಡುವಂತಿದೆ.

ಮಲ್ಲನಗೌಡ ಪಾಟೀಲ, ರಾಮದುರ್ಗ

ಅಮೆರಿಕದ ಟ್ರಂಪಾಯಣ

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಟ್ರಂಪೆಟ್ (ತುತ್ತೂರಿ) ವಿಶ್ವದಾದ್ಯಂತ ಸದ್ದು ಮಾಡುತ್ತಿದೆ. ವೈರಿಗಳನ್ನು ಸ್ನೇಹಿತರನ್ನಾಗಿ, ಸ್ನೇಹಿತರನ್ನು ವೈರಿಗಳನ್ನಾಗಿ ಬಿಂಬಿಸುವುದು ಟ್ರಂಪ್ ಅವರಿಗೆ ನೀರು ಕುಡಿದಷ್ಟು ಸರಳ. ಅಮೆರಿಕದ ಪರಂಪರಾಗತ ಎದುರಾಳಿ ರಷ್ಯಾದೊಂದಿಗೆ ಅವರಿಗೆ ದೋಸ್ತಿಯ ಮಾತನಾಡಲು ಬಹಳ ಹೊತ್ತು ಬೇಕಾಗಿಲ್ಲ. ಅವಹೇಳನ ಮಾಡಲು ಕೂಡ!

ನಮ್ಮ ಪ್ರಧಾನಿ ನರೇಂದ್ರ ಮೋದಿಯವರು ಅಮೆರಿಕದೊಂದಿಗೆ ಅತ್ಯುತ್ತಮ ಸಂಬಂಧ ಹೊಂದಿದ್ದಾರೆ. ಟ್ರಂಪ್ ಅವರು ಎರಡನೆಯ ಬಾರಿಗೆ ಅಧ್ಯಕ್ಷರಾಗಿ ಆಯ್ಕೆಯಾಗಿ ಬಂದ ಮೇಲೂ ಮೋದಿಯವರು ಅವರನ್ನು ಭೇಟಿ ಮಾಡಿ ಭಾರತ– ಅಮೆರಿಕ ಸ್ನೇಹವನ್ನು ಬಲಪಡಿಸಲೆತ್ನಿಸಿದ್ದಾರೆ. ಆದರೂ ಟ್ರಂಪ್ ಅವರ ಕಣ್ಣು ಭಾರತದಲ್ಲಿ ಐಫೋನ್ ತಯಾರಿಸುವವರ ಮೇಲೆ ಬಿದ್ದಿದೆ. ಭಾರತ ಮತ್ತು ಚೀನಾಕ್ಕಿಂತ ಹೆಚ್ಚಿನ ಔದ್ಯಮಿಕ ಸಹಕಾರ ನೀಡುವುದಾಗಿ ಆಮಿಷ ಒಡ್ಡುವುದಷ್ಟೇ ಅಲ್ಲದೆ ಭಾರತದ ಸರಕುಗಳ ಬಗ್ಗೆ ತಾತ್ಸಾರದ ಮಾತನಾಡುತ್ತಿದ್ದಾರೆ! ಇದು ಸ್ನೇಹಿತ ರಾಷ್ಟ್ರಕ್ಕೆ ಗೌರವ ಕೊಡುವ ಕೆಲಸವೇ?

ಟ್ರಂಪ್ ಅವರು ಅನಗತ್ಯವಾಗಿ ಭಾರತದ ಆಂತರಿಕ ವಿಚಾರಗಳಲ್ಲಿ ಮೂಗು ತೂರಿಸುವ ಸಾಹಸ ಮಾಡುತ್ತಿದ್ದಾರೆ. ಭಾರತ ಮತ್ತು ಪಾಕಿಸ್ತಾನ ತಮ್ಮ ಆಣತಿಯಂತೆ ನಡೆಯುತ್ತವೆ ಎಂಬಂತೆ ಹೋದಲ್ಲಿ ಬಂದಲ್ಲಿ ಮಾತನಾಡುತ್ತಿದ್ದಾರೆ. ಟ್ರಂಪ್ ಅವರನ್ನು ಗಂಭೀರವಾಗಿ ಪರಿಗಣಿಸಬೇಕಾದ ಅಗತ್ಯ ನಮಗೆ ಇಲ್ಲ ಎಂಬ ಸಂದೇಶವನ್ನು ನಮ್ಮ ಆಡಳಿತದ ಚುಕ್ಕಾಣಿ ಹಿಡಿದಿರುವವರು ರವಾನಿಸಬೇಕಾದ ಅಗತ್ಯ ಇದೆ.

ತಿರುಪತಿ ನಾಯಕ್, ಕಲಬುರಗಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅಲ್ಪಾವಧಿ ಸಿಜೆಐ

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ಅವರ ನಿವೃತ್ತಿ ನಂತರ ನ್ಯಾ. ಬಿ.ಆರ್.ಗವಾಯಿ ಅವರು ಸಿಜೆಐ ಆಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಸಂಜೀವ್ ಖನ್ನಾ ಅವರು ಆರು ತಿಂಗಳು ಎರಡು ದಿನಗಳಿಗೆ ದೇಶದ ಮುಖ್ಯ ನ್ಯಾಯಮೂರ್ತಿಯಾಗಿದ್ದರು. ಹಾಲಿ ಸಿಜೆಐ ಗವಾಯಿ ಅವರ ಅಧಿಕಾರಾವಧಿಯೂ ಆರು ತಿಂಗಳು ಒಂಬತ್ತು ದಿನಗಳಿಗೆ ಮುಗಿಯುತ್ತದೆ. ಮುಂದಿನ ಆರು ವರ್ಷಗಳಲ್ಲಿ ದೇಶವು ಏಳು ಸಿಜೆಐಗಳನ್ನು ಕಾಣಲಿದೆ. ಎಲ್ಲರ ಅಧಿಕಾರ ಅವಧಿ ಕಡಿಮೆ ಇರುವುದು ಇದಕ್ಕೆ ಕಾರಣ. ಅಲ್ಪಾವಧಿಗೆ ಸಿಜೆಐ ಹುದ್ದೆಯಲ್ಲಿರುವುದರಿಂದ ಸಾಂವಿಧಾನಿಕವಾಗಿ ಮಹತ್ವವಿರುವ ಪ್ರಕರಣಗಳನ್ನು ಇತ್ಯರ್ಥಪಡಿಸುವುದು ವಿಳಂಬವಾಗುತ್ತದೆ. ಹಾಗಾಗಿ, ಬೇರೆ ಸಾಂವಿಧಾನಿಕ ಹುದ್ದೆಗಳಿಗೆ ಇರುವ ರೀತಿಯಲ್ಲಿ ಸಿಜೆಐ ಹುದ್ದೆಗಳ ಸೇವಾವಧಿಯನ್ನೂ ನಿರ್ದಿಷ್ಟ ಅವಧಿಗೆ ನಿಗದಿಪಡಿಸಬೇಕು ಎಂಬ ಒತ್ತಾಯ ಕೇಳಿಬಂದಿದೆ

ಸಾಂವಿಧಾನಿಕ ತೀರ್ಮಾನಕ್ಕೆ ಅಡ್ಡಿ?

• ಮಂಜುನಾಥ ಹೆಬ್ಬಾರ್

ಪ್ರಕರಣ 1: ವಕ್ಫ್ ತಿದ್ದುಪಡಿ ಕಾಯ್ದೆ–2025ರ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿರುವ 72 ಅರ್ಜಿಗಳ ವಿಚಾರಣೆಯನ್ನು ಹಿಂದಿನ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ನೇತೃತ್ವದ ಪೀಠವು ಏಪ್ರಿಲ್ 16ರಂದು ಕೈಗೆತ್ತಿಕೊಂಡಿತು. ಕಾಯ್ದೆಯ ಕೆಲವೊಂದು ನಿಯಮಗಳಿಗೆ ಮಧ್ಯಂತರ ತಡೆಯಾಜ್ಞೆ ನೀಡುವ ಇಂಗಿತ ವ್ಯಕ್ತಪಡಿಸಿತು. ಕೋರ್ಟ್ ತೀರ್ಪಿನಿಂದ ಮುಜುಗರ ಆಗುವುದನ್ನು ತಪ್ಪಿಸಲು ಕೇಂದ್ರವು ಏ. 17ರ ವಿಚಾರಣೆಯ ಸಂದರ್ಭದಲ್ಲಿ, 'ನ್ಯಾಯಾಲಯಗಳು ವಕ್ಫ್ ಎಂದು ಘೋಷಿಸಿರುವ ಆಸ್ತಿಗಳನ್ನು ಡಿ–ನೋಟಿಫೈ ಮಾಡುವುದಿಲ್ಲ' ಎಂದು ಹೇಳಿತು. ಕೆಲವೊಂದು ನಿಯಮಗಳಿಗೆ ಮಧ್ಯಂತರ ತಡೆಯಾಜ್ಞೆ ನೀಡಬೇಕೇ ಬೇಡವೇ ಎಂಬ ಬಗ್ಗೆ ಮೇ 5ರಂದು ತೀರ್ಮಾನ ಕೈಗೊಳ್ಳುವುದಾಗಿ ಸಿಜೆಐ ಪೀಠ ತಿಳಿಸಿತು. ಮೇ 5ರಂದು ವಿಚಾರಣೆ ಆರಂಭವಾಗುತ್ತಿದ್ದಂತೆ ಸಿಜೆಐ ಖನ್ನಾ ಅವರು ವಿಚಾರಣೆಯಿಂದ ಹಿಂದಕ್ಕೆ ಸರಿಯುವುದಾಗಿ ತಿಳಿಸಿದರು. ನಿವೃತ್ತಿಗೆ ಒಂದು ವಾರ ಇರುವುದರಿಂದ ಈ ತೀರ್ಮಾನಕ್ಕೆ ಬಂದಿರುವುದಾಗಿ ಪ್ರಕಟಿಸಿದರು. ಇದೀಗ, ಸಿಜೆಐ ಬಿ.ಆರ್.ಗವಾಯಿ ನೇತೃತ್ವದ ಪೀಠ ಪ್ರಕರಣದ ವಿಚಾರಣೆ ಆರಂಭಿಸಿದೆ. ಗವಾಯಿ ಅವರ ಅವಧಿ ಆರು ತಿಂಗಳುಗಳಷ್ಟೇ.

ಪ್ರಕರಣ 2: ಎರಡು ವರ್ಷ ಸಿಜೆಐ ಆಗಿದ್ದ ಡಿ.ವೈ.ಚಂದ್ರಚೂಡ್ ಅವರು 23 ಸಾಂವಿಧಾನಿಕ ಪೀಠಗಳ ನೇತೃತ್ವ ವಹಿಸಿದ್ದರು. 612 ತೀರ್ಪುಗಳನ್ನು ನೀಡಿದ್ದರು. ಹೈಬ್ರಿಡ್ ವಿಚಾರಣೆ ಸೇರಿದಂತೆ ಅನೇಕ ಸುಧಾರಣೆಗಳನ್ನು ತಂದಿದ್ದರು. ವೈವಾಹಿಕ ಅತ್ಯಾಚಾರ ಸಂಬಂಧ ಪತಿಗೆ ನೀಡಲಾಗಿರುವ ಕಾನೂನು ರಕ್ಷಣೆ ಪ್ರಶ್ನಿಸಲಾಗಿರುವ ಅರ್ಜಿಗಳ ವಿಚಾರಣೆಯನ್ನು ಅವರ ನೇತೃತ್ವದ ಪೀಠವು 2024ರ ಅಕ್ಟೋಬರ್‌ನಲ್ಲಿ ನಡೆಸಬೇಕಿತ್ತು. ನಿವೃತ್ತಿಯ ಸನಿಹದಲ್ಲಿದ್ದ ಕಾರಣ ಪ್ರಕರಣದ ವಿಚಾರಣೆಯನ್ನು ಮುಂದೂಡಿದ್ದರು. ಮುಂದಿನ ಸಿಜೆಐ ಈ ಬಗ್ಗೆ ತೀರ್ಮಾನ ಕೈಗೊಳ್ಳಲಿದ್ದಾರೆ ಎಂದು ಹೇಳಿದ್ದರು. ಆದರೆ, ನಂತರದ ಸಿಜೆಐ ಅವರು ಪೀಠ ರಚನೆ ಮಾಡಲೇ ಇಲ್ಲ.

ಪ್ರಕರಣ 3: ಅಬಕಾರಿ ನೀತಿ ಹಗರಣದಲ್ಲಿ ದೆಹಲಿಯ ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ನ್ಯಾ. ಸಂಜೀವ್ ಖನ್ನಾ ನೇತೃತ್ವದ ಪೀಠವು 2024ರ ನವೆಂಬರ್‌ನಲ್ಲಿ ಜಾಮೀನು ನೀಡಿತ್ತು. ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದ ಅಧಿಕಾರದ ಬಗ್ಗೆ ವಿಸ್ತೃತ ಪೀಠದಿಂದ ವಿಚಾರಣೆ ನಡೆಯಬೇಕು ಎಂದು ಈ ಪೀಠವು ಅಭಿಪ್ರಾಯಪಟ್ಟಿತ್ತು. ಆದರೆ, ಈವರೆಗೆ ವಿಸ್ತೃತ ಪೀಠ ರಚನೆಯಾಗಿಲ್ಲ.

– ಸುಪ್ರೀಂ ಕೋರ್ಟ್‌ನಲ್ಲಿ ಕಳೆದ ಏಳು ತಿಂಗಳಲ್ಲಿ ಮೂರು ಮಹತ್ವದ ಪ್ರಕರಣಗಳ ವಿಚಾರಣೆಯ ಸಂದರ್ಭದಲ್ಲಿ ಆಗಿರುವ ಬೆಳವಣಿಗೆ ಇದು. ಈ ಮೂರೂ ಪ್ರಕರಣಗಳು ಸಾಂವಿಧಾನಿಕ ಮಹತ್ವದ್ದು. ನಿವೃತ್ತಿಯ ಕಾರಣ ಮುಂದಿಟ್ಟು ಮುಖ್ಯ ನ್ಯಾಯಮೂರ್ತಿಗಳು ವಿಚಾರಣೆಯಿಂದ ಹಿಂದಕ್ಕೆ ಸರಿದರು.

ಸುಪ್ರೀಂ ಕೋರ್ಟ್ ಈ ವರ್ಷವೇ ಮೂವರು ಮುಖ್ಯ ನ್ಯಾಯಮೂರ್ತಿಗಳನ್ನು ಕಾಣುತ್ತಿದೆ. 2031ರವರೆಗೆ ಅಂದರೆ, ಆರು ವರ್ಷಗಳಲ್ಲಿ ಎಂಟು ಮಂದಿ ಮುಖ್ಯ ನ್ಯಾಯಮೂರ್ತಿಗಳಾಗಿ ಕಾರ್ಯನಿರ್ವಹಿಸಲಿದ್ದಾರೆ (ಈಗಿನ ಸಿಜೆಐ ಸೇರಿದಂತೆ). 'ಸಿಜೆಐಗಳು ಅಲ್ಪಾವಧಿಗೆ ಇದ್ದರೆ ನ್ಯಾಯಾಂಗ ಕ್ಷೇತ್ರದಲ್ಲಿ ಆಡಳಿತಾತ್ಮಕ ಸುಧಾರಣೆ ಆಗುವುದಿಲ್ಲ. ಸಾಂವಿಧಾನಿಕ ಪ್ರಕರಣಗಳ ವಿಚಾರಣೆ ಮೇಲೂ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಹೀಗಾಗಿ, ಬೇರೆ ಸಾಂವಿಧಾನಿಕ ಹುದ್ದೆಗಳ ರೀತಿಯಲ್ಲಿ ನಿರ್ದಿಷ್ಟ ಸೇವಾವಧಿ ನಿಗದಿಪಡಿಸಬೇಕು' ಎಂಬ ಚರ್ಚೆ ಆರಂಭವಾಗಿದೆ.

'ಸಿಜೆಐ ಆಗಿ ನ್ಯಾಯಾಂಗದಲ್ಲಿ ಹಲವು ಸುಧಾರಣೆಗಳನ್ನು ತರುವ ಕನಸಿತ್ತು. ಅಲ್ಪಾವಧಿಯಿಂದ ಸಾಧ್ಯವಾಗಿಲ್ಲ. ಕೇಂದ್ರ ಗೃಹ ಕಾರ್ಯದರ್ಶಿಯ ಮಾದರಿಯಲ್ಲೇ ಮುಖ್ಯ ನ್ಯಾಯಮೂರ್ತಿ ಅವರಿಗೂ ನಿರ್ದಿಷ್ಟ ಸೇವಾವಧಿ ನಿಗದಿಪಡಿಸಬೇಕು' ಎಂದು ಮುಖ್ಯ ನ್ಯಾಯಮೂರ್ತಿಯಾಗಿದ್ದ ಪಿ.ಸದಾಶಿವಂ ಅವರು ತಮ್ಮ ಬೀಳ್ಕೊಡುಗೆ ಸಮಾರಂಭದಲ್ಲಿ ಅಭಿಪ್ರಾಯಪಟ್ಟಿದ್ದರು. ಅವರು ಒಂಬತ್ತು ತಿಂಗಳು (2013–2014) ಸಿಜೆಐ ಆಗಿದ್ದರು. ಅವರ ಈ ಮಾತು ಈಗ ಮಹತ್ವ ಪಡೆದುಕೊಂಡಿದೆ.

ಸಾಮಾನ್ಯವಾಗಿ, ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ನೇಮಕಗೊಳ್ಳುವಾಗ 55ರಿಂದ 60 ವರ್ಷಗಳು ಆಗಿರುತ್ತದೆ. ಇದು ಸಹ ಸಿಜೆಐಗಳು ಅಲ್ಪಾವಧಿಗೆ ಇರಲು ಕಾರಣ ಎನ್ನುತ್ತಾರೆ ಕಾನೂನು ತಜ್ಞರು.

ಬೇರೆ ಸಾಂವಿಧಾನಿಕ ಹುದ್ದೆಗಳ ರೀತಿಯಲ್ಲೇ ಸಿಜೆಐ ಅವರಿಗೂ ಕನಿಷ್ಠ ಎರಡು ವರ್ಷಗಳ ಸೇವಾವಧಿ ನಿಗದಿಪಡಿಸಬೇಕು ಎಂದು ಕಾನೂನು ಆಯೋಗ ಶಿಫಾರಸು ಮಾಡಿತ್ತು. ನ್ಯಾಯಾಂಗ ಆಡಳಿತದಲ್ಲಿ ಗುಣಮಟ್ಟ ಕಾಪಾಡಲು ಮುಖ್ಯ ನ್ಯಾಯಮೂರ್ತಿಗೆ ನಿರ್ದಿಷ್ಟ ಸೇವಾವಧಿ ಅಗತ್ಯ. ಅವರು ದೇಶದಾದ್ಯಂತ ಪ್ರವಾಸ ಮಾಡಿ ಕಾನೂನು ತಜ್ಞರನ್ನು, ವೃತ್ತಿಪರರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಬೇಕು. ಈ ಮೂಲಕ, ತಳ ಹಂತದ ವಿಷಯಗಳನ್ನು ಅರಿತುಕೊಳ್ಳಬಹುದು' ಎಂದು ಆಯೋಗವು ತನ್ನ 14ನೇ ವರದಿಯಲ್ಲಿ ತಿಳಿಸಿತ್ತು.

2025ರಿಂದ 2031ರವರೆಗಿನ ಸಿಜೆಐಗಳು ಮತ್ತು ಅಧಿಕಾರಾವಧಿ

ನ್ಯಾ. ಬಿ.ಆರ್.ಗವಾಯಿ
2025ರ ಮೇ 14ರಿಂದ ನ. 23
6 ತಿಂಗಳು 9 ದಿನಗಳು

ನ್ಯಾ. ಸೂರ್ಯಕಾಂತ್
2025ರ ನ. 24ರಿಂದ 2027ರ ಫೆ. 9
14 ತಿಂಗಳು 14 ದಿನಗಳು

ನ್ಯಾ. ವಿಕ್ರಮನಾಥ್
2027ರ ಫೆ. 10ರಿಂದ ಸೆ. 23
7 ತಿಂಗಳು 13 ದಿನಗಳು

ನ್ಯಾ. ಬಿ.ವಿ.ನಾಗರತ್ನ
2027ರ ಸೆ. 24ರಿಂದ ಅ. 29
36 ದಿನಗಳು

ನ್ಯಾ. ಪಿ.ಎಸ್.ನರಸಿಂಹ
2027ರ ಅ. 30ರಿಂದ 2028ರ ಮೇ 2
6 ತಿಂಗಳು 2 ದಿನಗಳು

ನ್ಯಾ. ಜೆ.ಬಿ.ಪಾರ್ದೀವಾಲಾ
2028ರ ಮೇ 3ರಿಂದ 2030ರ ಆ. 11
27 ತಿಂಗಳು 8 ದಿನಗಳು

ನ್ಯಾ. ಕೆ.ವಿ.ವಿಶ್ವನಾಥನ್
2030ರ ಆ. 12ರಿಂದ 2031ರ ಮೇ 25
9 ತಿಂಗಳು 13 ದಿನಗಳು

ನ್ಯಾ. ಜೊಯ್‌ಮಲ್ಯ ಬಾಗ್ಚಿ
2031ರ ಮೇ 26ರಿಂದ ಅ. 2
4 ತಿಂಗಳು 6 ದಿನಗಳು

ಸದ್ಯದಲ್ಲಿ ನಿವೃತ್ತಿ: ನ್ಯಾಯಮೂರ್ತಿ ಅಭಯ್ ಎಸ್.ಓಕಾ (ಮೇ 24), ಬೇಲಾ ಎಂ. ತ್ರಿವೇದಿ (ಜೂನ್ 9. ಆದರೆ, ಸುಪ್ರೀಂ ಕೋರ್ಟ್‌ನಲ್ಲಿ ಕಳೆದ ಶುಕ್ರವಾರವೇ ಅವರ ಕಾರ್ಯನಿರ್ವಹಣೆಯ ಕೊನೆಯ ದಿನವಾಗಿತ್ತು)

ಅತ್ಯಧಿಕ ಅವಧಿ: ನ್ಯಾಯಮೂರ್ತಿ ವೈ.ವಿ.ಚಂದ್ರಚೂಡ್ (1978ರಿಂದ 1985ರವರೆಗೆ, 7 ವರ್ಷ 4 ತಿಂಗಳು)

ಕನಿಷ್ಠ ಅವಧಿ: ನ್ಯಾಯಮೂರ್ತಿ ಕೆ.ಎನ್. ಸಿಂಗ್ (1991ರ ನವೆಂಬರ್ 25ರಿಂದ ಡಿಸೆಂಬರ್ 12ರ ವರೆಗೆ, 17 ದಿನಗಳು). ಆ ಬಳಿಕ ನ್ಯಾಯಮೂರ್ತಿ ಎಸ್. ರಾಜೇಂದ್ರಬಾಬು (2004ರ ಮೇ 2ರಿಂದ 31ರವರೆಗೆ, 29 ದಿನಗಳು). ಕರ್ನಾಟಕದವರೇ ಆದ ನ್ಯಾಯಮೂರ್ತಿ ಬಿ.ವಿ.ನಾಗರತ್ನ ಅವರು 2027ರಲ್ಲಿ ಮುಖ್ಯ ನ್ಯಾಯಮೂರ್ತಿ ಆಗಲಿದ್ದಾರೆ. ದೇಶದ ಮೊದಲ ಮಹಿಳಾ ಮುಖ್ಯ ನ್ಯಾಯಮೂರ್ತಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿರುವ ಅವರು 36 ದಿನಗಳ ಕಾಲ ಆ ಹುದ್ದೆಯಲ್ಲಿ ಇರುವವರು

ನಿವೃತ್ತಿ ವಯಸ್ಸು 65 ವರ್ಷ

ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳ ನಿವೃತ್ತಿ ವಯಸ್ಸು 65 ವರ್ಷ. ನ್ಯಾಯಮೂರ್ತಿಗಳ ವಯಸ್ಸು ಹಾಗೂ ಸುಪ್ರೀಂ ಕೋರ್ಟ್‌ಗೆ ನೇಮಕಗೊಂಡ ದಿನದ ಆಧಾರದಲ್ಲಿ ಮುಖ್ಯ ನ್ಯಾಯಮೂರ್ತಿಯ ಅವಧಿ ನಿರ್ಣಯವಾಗುತ್ತದೆ. ಆದರೆ, ಇಲ್ಲಿ ವಯಸ್ಸಿಗಿಂತ ಸುಪ್ರೀಂ ಕೋರ್ಟ್‌ಗೆ ನೇಮಕಗೊಂಡ ದಿನ ಪ್ರಮುಖ ಪಾತ್ರ ವಹಿಸುತ್ತದೆ. ಸಾಮಾನ್ಯವಾಗಿ, ಹಿರಿಯ ನ್ಯಾಯಮೂರ್ತಿ ಸಿಜೆಐ ಆಗಿ ನೇಮಕಗೊಳ್ಳುತ್ತಾರೆ. 2031ರವರೆಗಿನ ಮುಖ್ಯ ನ್ಯಾಯಮೂರ್ತಿಗಳ ಹೆಸರು ಬಹುತೇಕ ಅಂತಿಮಗೊಂಡಿದೆ. ಒಂದು ವೇಳೆ, ನಿಧನ, ಸ್ವಯಂ ನಿವೃತ್ತಿ, ದೋಷಾರೋಪಣೆಯಂತಹ ಅನಿರೀಕ್ಷಿತ ಸಂಗತಿಗಳು ಘಟಿಸಿದಲ್ಲಿ ಈ ಪಟ್ಟಿ ಬದಲಾಗಬಹುದು.

34 ಸುಪ್ರೀಂ ಕೋರ್ಟ್‌ನ ಒಟ್ಟು ನ್ಯಾಯಮೂರ್ತಿಗಳು

32 ಈಗಿರುವ ನ್ಯಾಯಮೂರ್ತಿಗಳು

ಪ್ರಸ್ತುತ ಸಾಂವಿಧಾನಿಕ ಚೌಕಟ್ಟಿನಲ್ಲಿ ಸಿಜೆಐ ಅವರ ನಿರ್ದಿಷ್ಟ ಸೇವಾವಧಿ ವ್ಯವಸ್ಥೆಗೆ ಅನುಮತಿ ಇಲ್ಲ. ನ್ಯಾಯಮೂರ್ತಿಗಳನ್ನು ಹೇಗೆ ನೇಮಕಾತಿ ಮಾಡಬೇಕು ಎಂದರೆ ಅವರು ಕನಿಷ್ಠ 18 ತಿಂಗಳ ಅವಧಿಗೆ ಸಿಜೆಐ ಆಗಿ ಕೆಲಸ ನಿರ್ವಹಿಸುವಂತಿರಬೇಕು. ನೇಮಕಾತಿ ಸಂದರ್ಭದಲ್ಲಿ ಕೊಲಿಜಿಯಂ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು

ಮೋಹನ್ ಕಾತರಕಿ, ಸುಪ್ರೀಂ ಕೋರ್ಟ್ ಹಿರಿಯ ವಕೀಲ

ಹಿರಿತನದ ಆಧಾರದಲ್ಲಿ ಸಿಜೆಐ ನೇಮಕ ಆಗುತ್ತದೆ. ಅವರು 65 ವರ್ಷಕ್ಕೆ ನಿವೃತ್ತರಾಗಲೇಬೇಕು. ಈ ವ್ಯವಸ್ಥೆ ಬದಲಾಗಬೇಕಾದರೆ ಸಂವಿಧಾನಕ್ಕೆ ತಿದ್ದುಪಡಿ ತರಬೇಕು. ಅಲ್ಪಾವಧಿಯ ಸಿಜೆಐಗಳೂ ಉತ್ತಮ ಕೆಲಸ ಮಾಡಿದ್ದಾರೆ. ಅದ್ಭುತ ತೀರ್ಪು ನೀಡಿದವರ ಪಟ್ಟಿಯೇ ಇದೆ. ದೀರ್ಘಾವಧಿ ಸಿಜೆಐಗಳ ಬಗ್ಗೆ ಟೀಕೆಗಳೂ ಇವೆ. ಇಚ್ಛಾಶಕ್ತಿ ಇದ್ದರೆ ಸೇವಾವಧಿ ಮುಖ್ಯ ಅಲ್ಲ

ಸಂಜಯ್ ಹೆಗ್ಡೆ, ಸುಪ್ರೀಂ ಕೋರ್ಟ್ ಹಿರಿಯ ವಕೀಲ

'ಸುಪ್ರೀಂ' ಹಾಗೂ ಹೈಕೋರ್ಟ್‌ಗಳ ನ್ಯಾಯಮೂರ್ತಿಗಳ ನೇಮಕಕ್ಕೆ ಸಿಜೆಐ ನೇತೃತ್ವದ ಕೊಲಿಜಿಯಂ ತೀರ್ಮಾನ ತೆಗೆದುಕೊಳ್ಳುತ್ತದೆ. ಅಲ್ಪಾವಧಿಯ ಸಿಜೆಐಗಳು ತರಾತುರಿಯಲ್ಲಿ ತೀರ್ಮಾನ ತೆಗೆದುಕೊಂಡರೆ ಆ ನೇಮಕಾತಿ ವಿವಾದಕ್ಕೆ ಒಳಗಾಗಬಹುದು. ಜತೆಗೆ, ಅಲ್ಪಾವಧಿ ಸಿಜೆಐಗಳಿಗೆ ಸಾಂವಿಧಾನಿಕ ಪ್ರಕರಣಗಳ ವಿಚಾರಣೆಗೆ ಸಮಯ ಇರುವುದಿಲ್ಲ. ಸಿಜೆಐಗಳಿಗೆ ಕನಿಷ್ಠ ಸೇವಾವಧಿ ನಿಗದಿಪಡಿಸುವ ಬಗ್ಗೆ ವಿಸ್ತೃತ ಚರ್ಚೆ ನಡೆಯಬೇಕಿದೆ

ಪಿ.ಪುನೀತ್, ಜೆಎನ್‌ಯು ಪ್ರಾಧ್ಯಾಪಕ

ಸಿಜೆಐ ಅವರು ಸುಪ್ರೀಂ ಕೋರ್ಟ್‌ನ ಕಾರ್ಯಾಚರಣೆಗಳ ಮೇಲ್ವಿಚಾರಣೆಯಂತಹ ಮಹತ್ವದ ಜವಾಬ್ದಾರಿ ಹೊಂದಿದ್ದಾರೆ. ನ್ಯಾಯಾಂಗ ವ್ಯವಸ್ಥೆಯಲ್ಲಿ ಅನೇಕ ಸುಧಾರಣೆಗಳು ಅಗತ್ಯವಿದೆ. ಒಬ್ಬ ಸಿಜೆಐ ಕೆಲಸ ಪ್ರಾರಂಭಿಸುವ ಹೊತ್ತಿಗೆ, ನಿವೃತ್ತಿ ಹತ್ತಿರವಾಗಿರುತ್ತದೆ. ನೀತಿ ಅನುಷ್ಠಾನಕ್ಕೆ ಯೋಜನೆ, ಕಾರ್ಯಗತಗೊಳಿಸುವಿಕೆ ಮತ್ತು ನಂತರದ ಮೌಲ್ಯಮಾಪನಕ್ಕೆ ಸಮಯ ಬೇಕಾಗುತ್ತದೆ. ಹೀಗಾಗಿ, ಕನಿಷ್ಠ ಎರಡು ವರ್ಷವಾದರೂ ಅವರ ಅಧಿಕಾರದ ಅವಧಿ ಇರಬೇಕು

ಚಂದ್ರಶೇಖರ್, ಸುಪ್ರೀಂ ಕೋರ್ಟ್ ವಕೀಲ

ರಾಷ್ಟ್ರೀಯ

ವಿವಿಧೆಡೆ ಬಾಂಬ್ ದಾಳಿಗೆ ಸಂಚು: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಹೈದರಾಬಾದ್ ಮತ್ತು ದೇಶದ ಇತರ ಭಾಗಗಳಲ್ಲಿ ಬಾಂಬ್ ದಾಳಿಗೆ ಸಂಚು ರೂಪಿಸಿದ್ದ ಶಂಕೆಯ ಮೇಲೆ ಇಬ್ಬರನ್ನು ಬಂಧಿಸಲಾಗಿದೆ.

ಆಂಧ್ರಪ್ರದೇಶ ಮತ್ತು ತೆಲಂಗಾಣ ಪೊಲೀಸರು ಶನಿವಾರ ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಇವರನ್ನು ಬಂಧಿಸಲಾಗಿದೆ.

ಬಂಧಿತರನ್ನು ಹೈದರಾಬಾದ್‌ನ ವಾರಸಿಗುಡದ ಸೈಯದ್ ಸಮೀರ್ ಮತ್ತು ವಿಜಯನಗರದ ಸಿರಾಜ್–ಉರ್–ರೆಹಮಾನ್ ಎಂದು ಗುರುತಿಸಲಾಗಿದೆ.

ಈ ಇಬ್ಬರು ಸೌದಿ ಅರೇಬಿಯಾ ಮೂಲದ ಇಸ್ಲಾಮಿಕ್ ಸ್ಟೇಟ್ ನಿರ್ವಾಹಕರಿಂದ ನಿರ್ದೇಶನಗಳನ್ನು ಪಡೆಯುತ್ತಿದ್ದರು ಎಂದು ಗುಪ್ತಚರ ಸಂಸ್ಥೆಗಳು ತಿಳಿಸಿವೆ.

ಹೈದರಾಬಾದ್‌ಲ್ಲಿ ಸ್ಫೋಟಕವನ್ನು ಇಡುವ ಯೋಜನೆ ಹೊಂದಿದ್ದ ಶಂಕಿತರು, ಅಮೋನಿಯಂ ಸಲ್ಫೇಟ್ ಮತ್ತು ಅಲ್ಯೂಮಿನಿಯಂ ಪೌಡರ್ ಸೇರಿದಂತೆ ಬಾಂಬ್ ತಯಾರಿಕೆಗೆ ಅಗತ್ಯವಿರುವ ವಸ್ತುಗಳನ್ನು ಖರೀದಿ ಮಾಡಿದ್ದರು. ಕಚ್ಚಾ ಬಾಂಬ್ ಪರೀಕ್ಷೆಗಾಗಿ ಸ್ಥಳವನ್ನೂ ಆಯ್ಕೆ ಮಾಡಿಕೊಂಡಿದ್ದರು ಎಂಬುದಾಗಿ ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಿರಾಜ್‌ನ ತಂದೆ ಮತ್ತು ಸಹೋದರ ಪೊಲೀಸ್ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಬಿ.ಟೆಕ್ ಪೂರ್ಣಗೊಳಿಸಿರುವ ಸಿರಾಜ್ ಹೈದರಾಬಾದ್‌ನ ಹಲವೆಡೆ ಕೆಲಸ ಮಾಡುತ್ತಿದ್ದ. ಬಾಂಬ್ ತಯಾರಿಕೆಗೆ ಅಗತ್ಯವಿರುವ ವಸ್ತುಗಳನ್ನು ಆನ್‌ಲೈನ್ ಮೂಲಕ ತರಿಸಿಕೊಳ್ಳುತ್ತಿದ್ದ ಎಂಬುದನ್ನು ಸಾಕ್ಷ್ಯಗಳು ದೃಢಪಡಿಸಿವೆ ಎಂದು ಹೇಳಿದ್ದಾರೆ.

ಸಿರಾಜ್ ಮೇಲೆ ನಿಗಾ: ಗುಪ್ತಚರ ಅಧಿಕಾರಿಗಳು ಆರು ತಿಂಗಳುಗಳಿಂದ ಸಿರಾಜ್ ಚಲನವಲನಗಳ ಮೇಲೆ ನಿಗಾ ಇಟ್ಟಿದ್ದರು. ಸಾಮಾಜಿಕ ಮಾಧ್ಯಮಗಳಲ್ಲಿ ಪಾಕಿಸ್ತಾನ ಪರ ಪೋಸ್ಟ್ ಹಂಚಿಕೊಳ್ಳುವುದನ್ನು ಗಮನಿಸಿದ್ದರು. ಆತನ ವಿಚಾರಣೆ ನಡೆಸಿದ ಬಳಿಕ ಕೃತ್ಯದಲ್ಲಿ ಸೈಯದ್ ಭಾಗಿಯಾಗಿರುವುದು ಗೊತ್ತಾಗಿದೆ. ಬಂಧಿತರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದ್ದು, ಕೋರ್ಟ್ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಉಳಿದ ನಾಲ್ವರಿಗಾಗಿ ಶೋಧ

ಬಂಧಿತರು ಆರು ಮಂದಿಯ ಗುಂಪಿನ ಭಾಗವಾಗಿದ್ದು, ಇವರೆಲ್ಲ ಸಾಮಾಜಿಕ ಮಾಧ್ಯಮದಲ್ಲಿ ಗುಂಪು ರಚಿಸಿಕೊಂಡಿದ್ದರು. ಈ ಮೂಲಕ ಸೌದಿ ಅರೇಬಿಯಾದ ನಿರ್ವಾಹಕರಿಂದ ಕೃತ್ಯಕ್ಕೆ ಸಲಹೆ ಪಡೆಯುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಆರು ಮಂದಿಯ ಪೈಕಿ ಬಂಧಿತರಿಬ್ಬರು ಬಾಂಬ್ ತಯಾರಿಕೆಯಲ್ಲಿ ನಿರತರಾಗಿದ್ದರು. ಇತರ ನಾಲ್ವರಿಗೆ ವಿವಿಧ ಕಡೆಗಳಲ್ಲಿ ಸ್ಫೋಟಕಗಳನ್ನು ಇಡುವ ಕೆಲಸವನ್ನು ಹಂಚಿಕೆ ಮಾಡಲಾಗಿತ್ತು ಎಂದು ತನಿಖೆ ವೇಳೆ ಗೊತ್ತಾಗಿದೆ. ಇವರ ಬಂಧನಕ್ಕಾಗಿ ತನಿಖೆಯನ್ನು ಚುರುಕುಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

ನ್ಯಾಯಮೂರ್ತಿಗಳು ಪೂರ್ಣ ಪಿಂಚಣಿಗೆ ಅರ್ಹರು: 'ಸುಪ್ರೀಂ'

ನವದೆಹಲಿ(ಪಿಟಿಐ): ಹೆಚ್ಚುವರಿ ನ್ಯಾಯಮೂರ್ತಿಗಳು ಸೇರಿದಂತೆ ಹೈಕೋರ್ಟ್‌ನ ಎಲ್ಲಾ ನ್ಯಾಯಮೂರ್ತಿಗಳು ಪೂರ್ಣ ಪಿಂಚಣಿ ಮತ್ತು ನಿವೃತ್ತಿ ಸೌಲಭ್ಯಗಳನ್ನು ಪಡೆಯಲು ಅರ್ಹರು ಎಂದು ಸುಪ್ರೀಂ ಕೋರ್ಟ್ ಸೋಮವಾರ ಮಹತ್ವದ ತೀರ್ಪು ನೀಡಿದೆ.

ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳು ವಾರ್ಷಿಕ ₹15 ಲಕ್ಷ ಪಿಂಚಣಿ ಪಡೆಯಲಿದ್ದಾರೆ ಎಂದು ನ್ಯಾಯಾಲಯ ತಿಳಿಸಿದೆ.

ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಮತ್ತು ನ್ಯಾಯಮೂರ್ತಿ ಆಗಸ್ಟೀನ್ ಜಾರ್ಜ್ ಮಸೀಹ್ ಅವರನ್ನು ಒಳಗೊಂಡ ನ್ಯಾಯಪೀಠವು, 'ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿ ಯಾವಾಗ ನೇಮಕವಾದರು, ಹೆಚ್ಚುವರಿ ನ್ಯಾಯಮೂರ್ತಿ ಆಗಿದ್ದಾಗಲೇ ನಿವೃತ್ತಿ ಹೊಂದಿದರೇ ಅಥವಾ ಅವರನ್ನು ಕಾಯಂಗೊಳಿಸಲಾಗಿತ್ತೇ ಎಂಬ ಅಂಶಗಳನ್ನು ಪರಿಗಣಿಸದೆ ಪೂರ್ಣ ಪಿಂಚಣಿ ನೀಡಬೇಕು' ಎಂದು ತಿಳಿಸಿತು.

ನ್ಯಾಯಮೂರ್ತಿಗಳ ನೇಮಕಾತಿ ಅವಧಿ ಮತ್ತು ಅವರ ಹುದ್ದೆ ಆಧಾರದಲ್ಲಿ ತಾರತಮ್ಯ ಮಾಡುವುದು ಮೂಲಭೂತ ಹಕ್ಕನ್ನು ಉಲ್ಲಂಘಿಸಿದಂತೆ ಎಂದು ಪ್ರತಿಪಾದಿಸಿತು.

ಸಿಜೆಐ ಗವಾಯಿ ಅವರು, 'ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿ ಮೃತಪಟ್ಟರೆ ಅವರ ಕುಟುಂಬಸ್ಥರು, ಕಾಯಂ ನ್ಯಾಯಮೂರ್ತಿಗಳು ಪಡೆಯುವಷ್ಟೇ ಪಿಂಚಣಿ ಮತ್ತು ನಿವೃತ್ತಿ ಪ್ರಯೋಜನಗಳನ್ನು ಪಡೆಯಲು ಅರ್ಹರಾಗಿರುತ್ತಾರೆ' ಎಂದು ತಿಳಿಸಿದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಸೇನಾ ಸಂಘರ್ಷದ ಸಮಯದಲ್ಲಿ ಪಾಕಿಸ್ತಾನಕ್ಕೆ ಬೆಂಬಲ ನೀಡಿರುವ ಟರ್ಕಿ ವಿರುದ್ಧ ಭಾರತೀಯರಲ್ಲಿ ಅಸಮಾಧಾನ ಮೂಡಿರುವಂತೆಯೇ ಟರ್ಕಿಗೆ ಸಂಬಂಧಿಸಿದ ವಸ್ತುಗಳು, ಅಲ್ಲಿಗೆ ಪ್ರವಾಸ ಹೋಗುವುದಕ್ಕೆ ಬಹಿಷ್ಕಾರ ಹಾಕುವ ಬಗ್ಗೆ ಚರ್ಚೆಯಾಗುತ್ತಿದೆ. ಇದೇ ಹೊತ್ತಿನಲ್ಲಿ ಟರ್ಕಿಯ ಪ್ರವಾಸೋದ್ಯಮ ಇಲಾಖೆ, ತಮ್ಮ ಪ್ರವಾಸವನ್ನು ರದ್ದು ಮಾಡಬೇಡಿ ಎಂದು ಭಾರತೀಯ ಪ್ರವಾಸಿಗರಲ್ಲಿ ಮನವಿ ಮಾಡುತ್ತಿದೆ ಎಂದು ಪ್ರತಿಪಾದಿಸುತ್ತಾ ಸಾಮಾಜಿಕ ಜಾಲತಾಣಗಳಲ್ಲಿ ನೋಟಿಸ್ ರೂಪದ ಫೋಟೊವೊಂದನ್ನು ಹಂಚಿಕೊಳ್ಳಲಾಗುತ್ತಿದೆ. ಈ ಪೋಸ್ಟ್ ಆಧಾರದಲ್ಲಿ ಹಲವು ಮಾಧ್ಯಮಗಳೂ ಈ ಬಗ್ಗೆ ವರದಿ ಮಾಡಿವೆ. ರಾಜಕಾರಣಿಗಳು ಕೂಡ ಈ ಪೋಸ್ಟ್ ಹಂಚಿಕೊಂಡಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ಟರ್ಕಿಯ ಪ್ರವಾಸೋದ್ಯಮ ಇಲಾಖೆಯ ಅಧಿಕೃತ ವೆಬ್‌ಸೈಟ್ ಮತ್ತು ಸಾಮಾಜಿಕ ಜಾಲತಾಣಗಳಲ್ಲಿನ ಖಾತೆಗಳನ್ನು ಪರಿಶೀಲಿಸಿದಾಗ ಇಂತಹ ಪ್ರಕಟಣೆ ಎಲ್ಲೂ ಕಂಡು ಬರಲಿಲ್ಲ. ಟರ್ಕಿಯ ವಿವಿಧ ಇಲಾಖೆಗಳು ಈ ಹಿಂದೆ ಪ್ರಕಟಿಸಿರುವ ಅಧಿಕೃತ ನೋಟಿಸ್‌ಗಳನ್ನು ನೋಡಿದಾಗ, ಈಗ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿರುವ ನೋಟಿಸ್‌ನ ವಿನ್ಯಾಸ ಮತ್ತು ಅದರಲ್ಲಿ ಬಳಸಿರುವ ಭಾಷೆಯಲ್ಲಿ ವ್ಯತ್ಯಾಸವಿದೆ. ಭಾರತದ ಪ್ರವಾಸಿಗರಲ್ಲಿ ಮನವಿ ಮಾಡಿರುವ ಬಗ್ಗೆ ಟರ್ಕಿ ಮಾಧ್ಯಮಗಳಲ್ಲಿ ವರದಿಯೂ ಆಗಿಲ್ಲ. ಟರ್ಕಿಯ ಫ್ಯಾಕ್ಟ್‌ಚೆಕ್ ಸಂಸ್ಥೆ 'ಟೆಯಿಟ್' ಅನ್ನು ಸಂಪರ್ಕಿಸಿದಾಗ, ಸಂಸ್ಥೆಯ ಸಂಪಾದಕ ಬೆಸಿರ್ ಕೊರ್ಕ್‌ಮಜ್ ಅವರು 'ಅಂತಹ ಯಾವುದೇ ಪ್ರಕಟಣೆಯನ್ನು ಸರ್ಕಾರ ಹೊರಡಿಸಿಲ್ಲ. ನೋಟಿಸ್‌ನಲ್ಲಿ ಇಂಗ್ಲಿಷ್‌ನಲ್ಲಿ ಬರೆದಿರುವುದು ಕೂಡ ಸಮರ್ಪಕವಾಗಿಲ್ಲ' ಎಂದು ಹೇಳಿದ್ದಾರೆ ಎಂದು ಬೂಮ್ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಗುಂಡಣ್ಣ

ಮಡಿಯುವ ಮೊದಲು ಏನಾದರೂ ಮಾಡು

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

198

ದೇವದುರ್ಗ ತಾಲ್ಲೂಕಿನ ಕೋತಿಗುಡ್ಡ ಎಂಬ ಗ್ರಾಮದಲ್ಲಿ ರಮೇಶ ಬಲ್ಲಿದ್ ಎಂಬ ಹುಡುಗ ಇದ್ದ. 10–15 ವರ್ಷದವರೆಗೂ ದನ, ಕುರಿ ಕಾಯುತ್ತಿದ್ದ. ಅವನು ಶಾಲೆಗೆ ಹೋಗಿಲ್ಲ, ಅಕ್ಷರ ಕಲಿತಿಲ್ಲ. ಅಂತಹ ಹುಡುಗನನ್ನು ಬೆಂಗಳೂರಿನ 'ಹೆಡ್ ಹೆಲ್ಡ್ ಹೈ' ಎಂಬ ಸಂಸ್ಥೆಯವರು ಕರೆದುಕೊಂಡು ಹೋಗಿ ಇಂಗ್ಲಿಷ್ ಕಲಿಸಿದರು. ದನ ಕಾಯುವ ಹುಡಗನಿಗೆ ಕಮ್ಯುನಿಕೇಷನ್ ಇಂಗ್ಲಿಷ್, ಸ್ಪೋಕನ್ ಇಂಗ್ಲಿಷ್, ಬೇಸಿಕ್ ಕಂಪ್ಯೂಟರ್ ಕಲಿಸಿದರು. ಸುಮಾರು ಒಂದು ವರ್ಷದಲ್ಲಿ ರಮೇಶ ಇಂಗ್ಲಿಷ್ ಕಲಿತ. ಅವ ಈಗ ಹೇಗೆ ಆಗಿದ್ದಾನೆಂದರೆ, ಬಿಎಡ್ ಮಾಡುವವರಿಗೆ, ಟೀಚರ್ ಆಗುವವರಿಗೆ, ಕೆಎಎಸ್, ಐಎಎಸ್ ಆಗುವವರಿಗೆ, ಜೆಇಇ ಮಾಡುವವರಿಗೆ ಇಂಗ್ಲಿಷ್ ಹೇಳಿಕೊಡುತ್ತಿದ್ದಾನೆ. ಇಂಗ್ಲಿಷ್ ವ್ಯಾಕರಣ ಕಲಿಸುತ್ತಾನೆ. ಸುಮಾರು 4ರಿಂದ 5 ಲಕ್ಷ ಮಕ್ಕಳ ಜೊತೆ ಸಂವಾದ ಮಾಡಿದ್ದಾನೆ. ಕರ್ನಾಟಕದ ಹಳ್ಳಿಗಳ ಮಕ್ಕಳಿಗೆ ಇಂಗ್ಲಿಷ್ ಭಯ ಹೋಗಬೇಕು ಎಂದು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ 700ಕ್ಕೂ ಹೆಚ್ಚು ಕಾರ್ಯಕ್ರಮ ಮಾಡಿದ್ದಾನೆ. 'ನಿನ್ನ ಹತ್ರ ಯಾವುದಾದರೂ ಸರ್ಟಿಫಿಕೇಟ್ ಇದೆಯಾ' ಎಂದು ಕೇಳಿದರೆ 'ನಮಗೂ ಸರ್ಟಿಫಿಕೇಟ್‌ಗೂ ಬಹಳ ದೂರ' ಅನ್ನುತ್ತಾನೆ. ಅವನ ಬಳಿ ಸರ್ಟಿಫಿಕೇಟ್ ಇಲ್ಲ; ಆದರೆ ಬಹಳಷ್ಟು ಜನರಿಂದ 'ಈತ ಚೆನ್ನಾಗಿ ಇಂಗ್ಲಿಷ್ ಮಾತನಾಡುತ್ತಾನೆ' ಎಂದು ಸರ್ಟಿಫೈ ಆಗಿದ್ದಾನೆ. ಶಾಲೆಗೆ ಹೋದವರಿಗೇ ಇಂಗ್ಲಿಷ್ ಬರಲ್ಲ. ಅಂತಹದ್ದರಲ್ಲಿ ಶಾಲೆಯ ಮೆಟ್ಟಿಲು ಹತ್ತದ ರಮೇಶ್ ಬಲ್ಲಿದ್ ಇಂಗ್ಲಿಷ್ ಕಲಿತು, ಕಂಪ್ಯೂಟರ್ ಕಲಿತು ಇನ್ನೊಬ್ಬರಿಗೆ ಕಲಿಸುವ ಮಟ್ಟಕ್ಕೆ ಬೆಳೆದಿದ್ದು ಒಂದು ಸಾಧನೆ. ನಮ್ಮಲ್ಲಿ ಒಂದು ಗಾದೆ ಮಾತಿದೆ. ಮಾಡು ಇಲ್ಲವೇ ಮಡಿ ಅಂತ. ಆದರೆ ಅದು ಹಾಗಲ್ಲ. ಮಡಿಯುವ ಮುನ್ನ ಏನಾದರೂ ಸಾಧನೆ ಮಾಡಬೇಕು ಎನ್ನುವುದಕ್ಕೆ ರಮೇಶ್ ಉದಾಹರಣೆ.

ಕಳೆದ ವರ್ಷ ಬಾನಾಪುರದ ಬಳಿ ಒಂದು ಅಪಘಾತವಾಯಿತು. ಒಬ್ಬ ಯುವಕ ಗಾಯಗೊಂಡ. ಅವನನ್ನು ದವಾಖಾನೆಗೆ ಕರೆದುಕೊಂಡು ಹೋದರು. ಆತ ಕೋಮಾದಲ್ಲಿದ್ದ. ಕೆಲವು ದಿನ ಆದ ಮೇಲೆ ಅವನ ಬ್ರೇನ್ ಡೆಡ್ ಆಯಿತು. ಆತ ಗ್ರಾಮ ಪಂಚಾಯ್ತಿ ಸದಸ್ಯನೂ ಆಗಿದ್ದ. ಆ ಯುವಕನ ಹೆಸರು ಮಲ್ಲಪ್ಪ ಉದ್ದಾರ್. ಆತನ ಬ್ರೇನ್ ಡೆಡ್ ಆಗಿದೆ ಎನ್ನುವುದು ಗೊತ್ತಾದ ನಂತರ ಆತನ ತಾಯಿ ಮತ್ತು ಇತರ ಸಹೋದರರು ಕೂಡಿ ಒಂದು ನಿರ್ಣಯ ಮಾಡಿದರು. ತನ್ನ ಮಗ ಹೇಗೂ ಬದುಕುವುದಿಲ್ಲ ಎಂದು ತಿಳಿದು ಅವನ ಅಂಗಾಂಗ ದಾನ ಮಾಡಲು ಒಪ್ಪಿಗೆ ಕೊಟ್ಟರು. ಅವರ ಅಂಗಾಂಗಗಳನ್ನು ರಾಜ್ಯದ ಬೇರೆ ಬೇರೆ ಭಾಗಗಳಿಗೆ ಝೀರೊ ಟ್ರಾಫಿಕ್‌ನಲ್ಲಿ ತೆಗೆದುಕೊಂಡು ಹೋಗಲಾಯಿತು. ಮಲ್ಲಪ್ಪ ಉದ್ದಾರ್ ಅವರು ತೀರಿಕೊಂಡರು. ಆದರೆ ಅಂಗಾಂಗ ದಾನ ಮಾಡಿದ್ದರಿಂದ ನಾಲ್ಕು ಮಂದಿ ಜೀವ ಉಳಿಸಿದರು. ನೇತ್ರದಾನ, ರಕ್ತದಾನ ಅಂಗಾಂಗ ದಾನದ ಬಗ್ಗೆ ಸಾಮಾಜಿಕ ಜಾಗೃತಿ ಮೂಡಬೇಕು. ಅನ್ನದಾನ, ವಿದ್ಯಾದಾನ, ಶ್ರಮದಾನ ನಮಗೆ ಗೊತ್ತಿದೆ. ಅದರಿಂದ ಪುಣ್ಯ ಬರುತ್ತದೆ ಎಂದು ನಮ್ಮ ಹಿರಿಯರು ಹೇಳುತ್ತಿದ್ದರು. ಅದರ ಜೊತೆಗೆ ದೇಹದಾನ, ಅಂಗಾಂಗ ದಾನದ ಬಗ್ಗೆಯೂ ಜಾಗೃತಿ ಆಗಬೇಕು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಮೇ 20, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣ ಸಪ್ತಮಿ ಗಂ. 5-52 ನಂತರ ಅಷ್ಟಮಿ ಗಂ.28-56 ನಕ್ಷತ್ರ: ಧನಿಷ್ಠ ಗಂ. 19-32 ಯೋಗ: ಇಂದ್ರ ಗಂ. 26-50 ಕರಣ: ಬವ ಗಂ. 5-52, ವೃಷಭ ಮಾಸದ 06 ನೇ ದಿನ.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-07 ಸೂರ್ಯಾಸ್ತ : 06-47
ಮುಸ್ಲಿಂ ದಿನಾಂಕ : 21 ಜುಲ್ಕಾಯದ್
ಅದೃಷ್ಟ ಸಂಖ್ಯೆ : 1, 8

ಮೇಷ: ಮುಂಜಾನೆ ಏಳುವಾಗಲೇ ಉತ್ಸಾಹಿಗಳಾಗಿರುತ್ತೀರಿ. ರಕ್ಷಣಾ ವಿಭಾಗದಲ್ಲಿ ಕಾರ್ಯನಿರ್ವಹಿಸಲು ಆಯ್ಕೆಗೊಳ್ಳುವಿರಿ. ಜಗದ್ಗುರುವಿನ ದರ್ಶನ ಚೈತನ್ಯ ನೀಡುವುದು.

ವೃಷಭ: ಆತ್ಮವಿಶ್ವಾಸ ರೂಢಿಸಿಕೊಂಡು ಪರಿಶ್ರಮದಿಂದ ಪ್ರಗತಿಯ ಹಾದಿಗೆ ಹೋಗಬೇಕು. ವ್ಯಾಪಾರ ನಿಮಿತ್ತ ಭೇಟಿ ಮಾಡುವಿರಿ. ಹಿರಿಯ ಅಧಿಕಾರಿಗಳಿಗೆ ಬೇಡಿಕೆಗಳನ್ನು ಸ್ಪಷ್ಟವಾಗಿ ತಿಳಿಸಿ.

ಮಿಥುನ: ಮಕ್ಕಳ ಹೆಸರಿನಲ್ಲಿ ನಿವೇಶನ ಖರೀದಿಸುವ ಯೋಚನೆಗಳು ಬರಲಿವೆ. ಸರ್ಕಾರಿ ಅಧಿಕಾರಿಗಳು ಬಡ್ತಿ ಪಡೆದುಕೊಳ್ಳುವಿರಿ. ಶ್ರೀ ಸುಬ್ರಹ್ಮಣ್ಯನ ಸೇವೆ ಮಾಡುವುದರಿಂದ ಶುಭವಿರುವುದು.

ಕರ್ಕಾಟಕ: ರಾಜಕೀಯ ಭವಿಷ್ಯದ ಬಗ್ಗೆ ನಿರ್ಧಾರ ಕೈಗೊಳ್ಳಲು ಚಿಂತನೆ ಮಾಡಬೇಕು. ಮಗಳ ಮದುವೆ ಖರ್ಚನ್ನು ಸರಿದೂಗಿಸುವಿರಿ. ಕಾಗದಪತ್ರಗಳ ನಿರ್ವಹಣೆಯಲ್ಲಿ ಎಚ್ಚರವಿರಲಿ. ಹೊಸ ವಸ್ತುಗಳನ್ನು ಕೊಳ್ಳುವ ಯೋಗವಿದೆ.

ಸಿಂಹ: ಪೂರ್ವ ಆಲೋಚನೆಯ ಕೌಟುಂಬಿಕ ಅಭಿವೃದ್ಧಿಯ ಕೆಲಸಗಳು ಮಂದಗತಿಯಲ್ಲಿ ಸಾಗಲಿವೆ. ಗದ್ದೆ ಅಥವಾ ತೋಟದ ಕೆಲಸಗಳಿಗೆ ಮಗನಿಂದ ದೈಹಿಕ ಮತ್ತು ಆರ್ಥಿಕ ಸಹಾಯ ಸಿಗುವುದು. ರುಚಿ ಊಟ ಸವಿಯುವಿರಿ.

ಕನ್ಯಾ: ಸತ್ಯ ಮಾರ್ಗದಿಂದ ಕಾರ್ಯಪ್ರವೃತ್ತರಾದಲ್ಲಿ ಅಭಿವೃದ್ಧಿ ಅನುಭವಕ್ಕೆ ಬರಲಿದೆ. ದಿನದ ಕೆಲಸ ಕಾರ್ಯಗಳಲ್ಲಿ ಬದಲಾವಣೆಗಳು ಇರುವುದಿಲ್ಲ. ಗುಪ್ತಚರ ದಳ ಮಂದಿಗೆ ಕಾರ್ಯಭಾರಗಳು ಹೆಚ್ಚಲಿವೆ.

ತುಲಾ: ಸ್ನೇಹಿತರು ಹಾಗೂ ಹಿತಚಿಂತಕರು ಸಹಾಯಕ್ಕೆ ಎಂದಿಗೂ ಇರುವವರೆಂಬ ನಂಬಿಕೆ ಬರುವುದು. ಮಹಾಗಣಪತಿಯ ದರ್ಶನ ಅಥವಾ ಸ್ಮರಣೆಯಿಂದ ದಿನ ಪ್ರಾರಂಭಿಸಿದರೆ ಮನಸ್ಸಿಗೆ ನೆಮ್ಮದಿ.

ವೃಶ್ಚಿಕ: ಕಾರ್ಯರಂಗದಲ್ಲಿ ಮುನ್ನಡೆಗೆ ಸಹೋದ್ಯೋಗಿಗಳ ನಿರ್ಧಾರಗಳಿಂದ ಸಮಸ್ಯೆ ಉಂಟಾಗಬಹುದು. ಸೂಕ್ಷ್ಮವಾಗಿ ಯೋಚಿಸಿ ಸ್ವಂತ ನಿರ್ಧಾರ ತೆಗೆದುಕೊಳ್ಳುವುದರಿಂದ ಕೆಲಸ ಕಾರ್ಯಗಳು ಸಾಗಲಿವೆ.

ಧನು: ಸಾಲ ಮರುಪಾವತಿ ಮಾಡುವ ತೀರ್ಮಾನ ಮಾಡಿ. ಹೊಸ ಮನೆ ನಿರ್ಮಾಣಕ್ಕಾಗಿ ಹೆಚ್ಚಿನ ತಯಾರಿಯನ್ನು ನಡೆಸುವಿರಿ. ಅಧಿಕಾರಿಗಳ ಸಂಪರ್ಕದಿಂದ ಕೆಲಸಗಳಿಗೆ ಪುಷ್ಟಿ ದೊರೆಯಲಿದೆ.

ಮಕರ: ಎಲ್ಲರಿಗೂ ಬೇಕಾಗುವ ವ್ಯಕ್ತಿತ್ವ ನಿಮ್ಮದಾಗಲಿದೆ. ಕುಟುಂಬದ ಹಾಗೂ ಸ್ನೇಹಿತರ ನಡುವಿನ ಸಂಬಂಧಗಳು ಇನ್ನಷ್ಟು ಉತ್ತಮಗೊಳ್ಳುವುದು. ಪತ್ನಿಯ ಆರೋಗ್ಯದಲ್ಲಿ ಸಮಸ್ಯೆ ಎದುರಾಗಬಹುದು.

ಕುಂಭ: ವಂಶಪಾರಂಪರ್ಯವಾಗಿ ಬಂದ ವೃತ್ತಿ ಮತ್ತಷ್ಟು ಏಳಿಗೆ ಕಾಣಲಿದೆ. ಕಷ್ಟ ಕಾಲದಲ್ಲಿ ಹೇಳಿಕೊಂಡಿರುವ ಹರಕೆ ತೀರಿಸುವ ಸಲುವಾಗಿ ಮಂಜುನಾಥ ಸ್ವಾಮಿಯ ದರ್ಶನ ಮಾಡಿ.

ಮೀನ: ಸಮಾಜ ಸೇವೆಯನ್ನು ಹವ್ಯಾಸವನ್ನಾಗಿ ಬೆಳೆಸಿಕೊಂಡಿರುವ ನಿಮಗೆ ಪ್ರಚಾರದ ಜೊತೆಗೆ ರಾಜಕೀಯ ಸೇರಲು ಆಹ್ವಾನ ದೊರೆಯಲಿದೆ. ಅಣ್ಣ ತಮ್ಮಂದಿರ ನಡುವಿನ ಕಲಹಕ್ಕೆ ನ್ಯಾಯ ಹೇಳುವುದು ಸರಿಯಲ್ಲ.

ಪದಬಂಧ 6048

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬಂಜರು ಭೂಮಿಯಲ್ಲಿದ್ದಾಗ ತೋರಿದ ಒಣಆಡಂಬರ! (2)
3.ಸರ ತರಲು ಈ ಅರ್ಜೆಂಟು! (4)
5.ವನದೊಳಗೆ ದೊರೆತಿರುವ ಬಟ್ಟೆ (3)
7.ಕಣ್ಣ ಕೊನೆಯ ನೋಟ (4)
9.ಯಾವುದೇ ವಿಷಯದ ಕ್ರಮಬದ್ಧವಾದ ನಿರೂಪಣೆ (3)
10.ಸಾಲ ಮಾಡಿ ನೋಡಿರುವ ಸಮುದ್ರ (3)
11.ಜೀರ್ಣೋದ್ಧಾರ ಮಾಡಿದುದು (4)
13.ಪ್ರಾಯಕ್ಕೆ ಬರುತ್ತಿರುವ ಹಸು (3)
15.ಒಂಚೂರು ರಸಿಕತೆಯೇ ಇಲ್ಲದವನು! (4)
16.ಎದೆಯನ್ನು ಹೊಟ್ಟೆಯಿಂದ ಬೇರ್ಪಡಿಸುವ ಸೂಕ್ಷ್ಮ ಅಂಗ (2)

ಮೇಲಿಂದ ಕೆಳಕ್ಕೆ
2.ಈತ ದುಡ್ಡಿಲ್ಲದವ (3)
3.ಅವನ ಮುಖವಿದು (3)
4.ಸರಕ್ಕನೆ ಹೋಗಿ ತಂದಿರುವ ಸಾಮಾನು (3)
6.ಸರ ಧರಿಸಿದವನ ಪಾಳಿ (3)
8.ಪಾಲು ಮಾಡೆಂದು ಬರೆದ ಪತ್ರ (3)
9.ವನದೊಳಗೆ ಮಾಡಿದ ಕ್ಷೌರ (3)
10.ಕಣದೊಳಗೆ ಮಾಡಿಕೊಂಡಿರುವ ಮದುವೆ (3)
12.ಆಸಕ್ತನಾದವನು ಇಲ್ಲಿದ್ದಾನೆ (3)
13.ಸೊಳ್ಳೆ ಇಲ್ಲಿಯೇ ಹಾರುತ್ತಿದೆ (3)
14.ಕಕ್ಕಾವಿಕ್ಕಿಯಾಗಿ ನೋಡುತ್ತಿರುವ ಪೆದ್ದ! (3)

6047ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಜವಾಬ್ದಾರಿ 5.ಜಟಿಲ
6.ಪುರೋಹಿತ 8.ನಲುಮೆ
10.ಕಾಳಗ 11.ಅಗುಳು
12.ಲಶುನ 14.ಹಕೀಕತ್ತು
16.ಕನಸು 17.ನವಿರೆಳೆ

ಮೇಲಿಂದ ಕೆಳಕ್ಕೆ:
1.ಯಜಮಾನ 2.ಜಲ
3.ರಿಪು 4.ಅಂತರಂಗ
9.ಮೆದುಳು 10.ಕಾದಲ
11.ಅನಾಹತ 13.ನವಸುಮ
15.ತ್ತುನ 16.ಕಳೆ

ಸುಡೊಕು 6432

6		4	9		7	3		8
				4				
	7	8	2			4		6
7					8		6	
	8		4			7	3	
		5		7				
4	9		3	8		6		1
	6						8	
8		7			4	2		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6431 ಸುಡೊಕು

9	1	7	3	5	8	6	2	4
8	4	6	9	2	7	5	1	3
2	5	3	4	1	6	9	7	8
5	3	8	1	6	2	7	4	9
4	2	9	7	3	5	1	8	6
6	7	1	8	4	9	2	3	5
3	8	5	6	7	1	4	9	2
7	9	2	5	8	4	3	6	1
1	6	4	2	9	3	8	5	7

ನಾಲ್ಕು ವರ್ಷಗಳಲ್ಲಿ 24 ಸಾವಿರ ಪ್ರಕರಣ ದಾಖಲು • ಬಸ್ ಹತ್ತಲು ಪ್ರಯಾಣಿಕರ ಪಡಿಪಾಟಲು

ನಿರ್ಬಂಧಿತ ಪ್ರದೇಶದಲ್ಲಿ ಖಾಸಗಿ ವಾಹನ ಹಾವಳಿ

• ಆದಿತ್ಯ ಕೆ.ಎ.

ಜಾಲಹಳ್ಳಿ ಕ್ರಾಸ್‌ನಲ್ಲಿ ಬಿಎಂಟಿಸಿ ಬಸ್ ನಿಲುಗಡೆ ಮಾಡುವ ಸ್ಥಳದಲ್ಲಿ ಖಾಸಗಿ ವಾಹನಗಳು ನಿಂತಿರುವುದು



ಬೆಂಗಳೂರು: ಬಿಎಂಟಿಸಿ ಹಾಗೂ ಕೆಎಸ್‌ಆರ್‌ಟಿಸಿ ಬಸ್ ನಿಲುಗಡೆಗೆ ನಿಗದಿ ಪಡಿಸಿರುವ ಸ್ಥಳಗಳಲ್ಲಿ ಖಾಸಗಿ ಬಸ್, ಕ್ಯಾಬ್, ಆಟೊ ನಿಲುಗಡೆ ಮಾಡುವುದು ನಗರದ ಹಲವು ಕಡೆ ಮುಂದುವರಿದಿದೆ. ಇದರಿಂದ ಸಾರಿಗೆ ಸಂಸ್ಥೆಯ ಬಸ್‌ಗಳನ್ನು ನಿಲ್ಲಿಸುವುದಕ್ಕೂ ಸ್ಥಳಾವಕಾಶ ಇಲ್ಲವಾಗಿದೆ. ಸಾರಿಗೆ ಸಂಸ್ಥೆಯ ಬಸ್ ಹತ್ತುವುದಕ್ಕೂ ಪ್ರಯಾಣಿಕರು ಪಡಿಪಾಟಲು ಪಡುತ್ತಿದ್ದಾರೆ.

ಸಂಚಾರ ನಿಯಮ ಉಲ್ಲಂಘಿಸಿದ್ದ ಖಾಸಗಿ ವಾಹನಗಳ ವಿರುದ್ಧ ಕಾರ್ಯಾಚರಣೆ ನಡೆಸುತ್ತಿರುವ ಸಂಚಾರ ಪೊಲೀಸರು, ಕಳೆದ ನಾಲ್ಕು ವರ್ಷಗಳಲ್ಲಿ 24,123 ಪ್ರಕರಣ ದಾಖಲಿಸಿಕೊಂಡು, ಖಾಸಗಿ ವಾಹನಗಳ ಚಾಲಕರಿಗೆ ಬಿಸಿ ಮುಟ್ಟಿಸಿದ್ದಾರೆ. ಆದರೂ, ಸಮಸ್ಯೆ ಬಗೆಹರಿದಂತೆ ಕಾಣಿಸುತ್ತಿಲ್ಲ.

ರಾಜಾಜಿನಗರದ ರಾಜ್‌ಕುಮಾರ್ ರಸ್ತೆಯಲ್ಲಿರುವ ಬಸ್ ನಿಲ್ದಾಣ, ಯಶವಂತಪುರದ ಗೋವರ್ಧನ್ ಚಿತ್ರಮಂದಿರದ ಬಳಿ, ಗೊರಗುಂಟೆಪಾಳ್ಯ ಜಂಕ್ಷನ್ ಹಾಗೂ ಕೆಎಲ್‌ಇ ದಂತ ವೈದ್ಯಕೀಯ ಕಾಲೇಜು, ಜಾಲಹಳ್ಳಿ ಜಂಕ್ಷನ್, ಎಂಟನೇ ಮೈಲಿ, ಮೈಸೂರು ರಸ್ತೆಯ ಸ್ಯಾಟಲೈಟ್ ಬಸ್ ನಿಲ್ದಾಣ, ದೀಪಾಂಜಲಿನಗರ, ಕೆಂಗೇರಿ, ಶಿರ್ಕೆ ವೃತ್ತ, ಬಿಬಿಎಂಪಿ ಪ್ರಧಾನ ಕಚೇರಿ ಜಂಕ್ಷನ್, ಮೆಜೆಸ್ಟಿಕ್ ಸುತ್ತಮುತ್ತಲ ರಸ್ತೆಗಳು, ಹೆಬ್ಬಾಳ ರಸ್ತೆಯ ಎಸ್ಟೀಮ್ ಮಾಲ್, ಯಲಹಂಕ ಉಪ ನಗರ... ಹೀಗೆ ನಗರದ ಹಲವು ಕಡೆಯ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣಗಳ ಬಳಿ, ಖಾಸಗಿ ವಾಹನಗಳೇ ಪ್ರತಿನಿತ್ಯ ಕಾಣಿಸುತ್ತಿವೆ.

ಸಾರಿಗೆ ಸಂಸ್ಥೆಯ ಬಸ್‌ಗಳಿಗೆ ಪ್ರಯಾಣಿಕರು ಹತ್ತುವಾಗ, ಇಳಿಯುವಾಗ ಆಟೊಗಳು, ಕ್ಯಾಬ್ ಸೇರಿ ಖಾಸಗಿ ವಾಹನಗಳು ಅಡ್ಡ ಬರುತ್ತಿವೆ. ಬಸ್ ಹತ್ತುವ ಆತುರದಲ್ಲಿರುವ ವಯಸ್ಕರು, ಮಹಿಳೆಯರು ಹಾಗೂ ಮಕ್ಕಳಿಗೆ ಖಾಸಗಿ ವಾಹನಗಳು ಡಿಕ್ಕಿ ಹೊಡೆಯುತ್ತಿರುವ ಪರಿಣಾಮ ಅವರು ಗಾಯಗೊಂಡು ಆಸ್ಪತ್ರೆ ಸೇರುತ್ತಿದ್ದಾರೆ.

ವಾರಾಂತ್ಯದ ವೇಳೆ ಸಮಸ್ಯೆ ತೀವ್ರ: ವಾರಾಂತ್ಯ, ಸಾಲು ಸಾಲು ರಜಾ ದಿನಗಳು ಹಾಗೂ ಹಬ್ಬಗಳ ಸಂದರ್ಭದಲ್ಲಿ ಊರು, ಪ್ರವಾಸಕ್ಕೆಂದು ಪ್ರಯಾಣಿಕರು ಖಾಸಗಿ ಬಸ್ ಹಾಗೂ ಕ್ಯಾಬ್‌ಗಳನ್ನು ಬುಕ್ ಮಾಡಿಕೊಂಡಿರುತ್ತಾರೆ. ನಿಗದಿತ ಸಮಯಕ್ಕೂ ಮೊದಲೇ ಖಾಸಗಿ ಬಸ್‌ಗಳು ರಸ್ತೆಬದಿಗೆ ಬಂದು ನಿಲುಗಡೆ ಆಗಿರುತ್ತವೆ. ಇದರಿಂದ ಬಿಎಂಟಿಸಿ ಹಾಗೂ ಕೆಎಸ್‌ಆರ್‌ಟಿಸಿ ಬಸ್ ಹಾಗೂ ಸಾರ್ವಜನಿಕರ ಇತರೆ ವಾಹನಗಳ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿದೆ. ರಸ್ತೆಯ ಬದಿಯಲ್ಲೇ ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ಖಾಸಗಿ ವಾಹನಗಳನ್ನು ನಿಲುಗಡೆ ಮಾಡುತ್ತಿರುವ ಕಾರಣ ಹಿಂಬದಿಯ ವಾಹನಗಳು ಸಾಲುಗಟ್ಟಿ ನಿಲ್ಲುವ ಪರಿಸ್ಥಿತಿ ಇದೆ. ಗೋವರ್ಧನ ಚಿತ್ರಮಂದಿರದ ಎದುರು ಸಮಸ್ಯೆ ತೀವ್ರವಾಗಿದೆ ಎಂದು ಸ್ಥಳೀಯರು ಹೇಳಿದರು.

ಊರಿಗೆ ಹೋಗಲೆಂದು ಗೋವರ್ಧನ ಚಿತ್ರಮಂದಿರದ ಬಳಿಗೆ ಸಾವಿರಾರು ಪ್ರಯಾಣಿಕರು ಬರುತ್ತಾರೆ. ಮಳೆ ಬಂದರೆ ಈ ಸ್ಥಳದಲ್ಲಿ ಪ್ರಯಾಣಿಕರು ನಿಲುವುದಕ್ಕೂ ಸೂಕ್ತ ಸ್ಥಳ ಇಲ್ಲ. ಮಳೆಯಲ್ಲೇ ತೊಯ್ಯುವ ಪರಿಸ್ಥಿತಿಯಿದೆ ಎಂದು ಹಲವರು ನೋವು ತೋಡಿಕೊಂಡಿದ್ದಾರೆ. ಇನ್ನು ರಸ್ತೆಯಲ್ಲಿ ವಾಹನ ನಿಲುಗಡೆಯ ವಿಚಾರಕ್ಕೆ ಗಲಾಟೆಗಳು ನಡೆದು ಪ್ರಕರಣಗಳು ಪೊಲೀಸ್ ಠಾಣೆಯ ಮೆಟ್ಟಿಲೇರಿವೆ.

‘ಬಿಎಂಟಿಸಿ ಬಸ್‌ಗಳು, ಬಿಬಿಎಂಪಿ ವ್ಯಾಪ್ತಿಯ 25 ಕಿ.ಮೀ ವರೆಗೆ ಕಾರ್ಯಾಚರಣೆ ನಡೆಸುತ್ತಿವೆ. ಬೆಂಗಳೂರು ನಗರ ಹಾಗೂ ಹೊರವಲಯದ ಪ್ರಯಾಣಿಕರ ಬೇಡಿಕೆಗೆ ಅನುಗುಣವಾಗಿ ಬಸ್ ನಿಲುಗಡೆ ಮಾಡಲಾಗುತ್ತಿದೆ. ಬಸ್ ನಿಲ್ದಾಣಗಳ ಬಳಿ, ಖಾಸಗಿ ವಾಹನಗಳನ್ನು ನಿಲ್ಲಿಸುತ್ತಿರುವುದು ಕಂಡುಬಂದರೆ ಸಾರಿಗೆ ಸಂಸ್ಥೆಯ ‘ಸಾರಥಿ ಗಸ್ತು ಪಡೆ’ಯ ಸಿಬ್ಬಂದಿ ಹಾಗೂ ಸಂಚಾರ ಪೊಲೀಸರು ಅವುಗಳನ್ನು ತೆರವು ಮಾಡುತ್ತಿದ್ದಾರೆ. ಜತೆಗೆ, ಖಾಸಗಿ ವಾಹನಗಳ ವಿರುದ್ಧ ವಿಶೇಷ ಕಾರ್ಯಾಚರಣೆಯನ್ನೂ ನಡೆಸಲಾಗುತ್ತಿದೆ’ ಎಂದು ಮೂಲಗಳು ತಿಳಿಸಿವೆ.

ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣಗಳಲ್ಲಿ ಖಾಸಗಿ ವಾಹನಗಳ ನಿಲುಗಡೆಗೆ ಅವಕಾಶವಿಲ್ಲ. ನಿಯಮ ಉಲ್ಲಂಘನೆ ಕಂಡುಬಂದರೆ ಚಾಲಕರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದೆ

ಎಂ.ಎನ್.ಅನುಚೇತ್, ಜಂಟಿ ಪೊಲೀಸ್ ಕಮಿಷನರ್, ಸಂಚಾರ ವಿಭಾಗ

11,924 ಚಾಲಕರಿಗೆ ತರಬೇತಿ

ಸಂಚಾರ ನಿರ್ವಹಣಾ ಕೇಂದ್ರದಲ್ಲಿ ಬಿಎಂಟಿಸಿ ಬಸ್ ಚಾಲಕರಿಗೆ ರಸ್ತೆಗಳಲ್ಲಿ ವಾಹನ ಚಾಲನೆ ಮಾಡುವಾಗ ಅನುಸರಿಬೇಕಾದ ಕ್ರಮಗಳ ಕುರಿತು ತರಬೇತಿ ನೀಡಲಾಗುತ್ತಿದೆ. ಸಂಚಾರ ದಟ್ಟಣೆ ಆಗದಂತೆ ಕ್ರಮ ವಹಿಸುವುದು, ಅಪಘಾತವಾಗದ ರೀತಿಯಲ್ಲಿ ವಾಹನ ಚಾಲನೆ, ಪ್ರಯಾಣಿಕರು ಹಾಗೂ ಎದುರು ವಾಹನಗಳ ಚಾಲಕರ ಜತೆಗೆ ಸಂಯಮದಿಂದ ವರ್ತನೆ ಮಾಡಬೇಕು ಎಂದು ಚಾಲಕರಿಗೆ ತರಬೇತಿಯಲ್ಲಿ ತಿಳಿಸಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ 11,924 ಮಂದಿಗೆ ತರಬೇತಿ ನೀಡಲಾಗಿದೆ ಎಂದು ಸಂಚಾರ ಪೊಲೀಸರು ತಿಳಿಸಿದರು.

ಸುಗಮ ಸಂಚಾರಕ್ಕೆ ವ್ಯವಸ್ಥೆ

- ಸಾರಿಗೆ ಸಂಸ್ಥೆಯ ಬಸ್ ನಿಲುಗಡೆ ಸ್ಥಳಗಳಲ್ಲಿ ಖಾಸಗಿ ವಾಹನಗಳು ನಿಲುಗಡೆ ಮಾಡುವುದನ್ನು ತಡೆಗಟ್ಟಲು ‘ಕೋಬ್ರಾ ಸಿಬ್ಬಂದಿ’ ನಿಯೋಜನೆ
- ನಿಗದಿತ ಸ್ಥಳಗಳಲ್ಲಿಯೇ ಬಿಎಂಟಿಸಿ ಬಸ್‌ಗಳನ್ನು ನಿಲುಗಡೆ ಮಾಡಲಾಗುತ್ತಿದೆಯೇ ಎಂಬುದನ್ನು ಪರಿಶೀಲಿಸಲು ‘ಸಾರಥಿ ಗಸ್ತು ಪಡೆ’ ನೇಮಕ
- ಅಗತ್ಯವಿರುವ ಮತ್ತಷ್ಟು ಸ್ಥಳಗಳಲ್ಲಿ ಬಸ್ ಬೇ ನಿರ್ಮಾಣಕ್ಕೆ ಅನುಮತಿ
- ಸಾರ್ವತ್ರಿಕ ರಜಾ ದಿನಗಳು, ಹಬ್ಬಗಳ ಸಂದರ್ಭ ಹಾಗೂ ಇತರೆ ವಿಶೇಷ ದಿನಗಳಲ್ಲಿ ಪ್ರಮುಖ ಬಸ್ ನಿಲ್ದಾಣಗಳಲ್ಲಿ ಹೆಚ್ಚುವರಿ ಅಧಿಕಾರಿ, ಸಿಬ್ಬಂದಿ ನಿಯೋಜಿಸಿ ಸುಗಮ ಸಂಚಾರಕ್ಕೆ ವ್ಯವಸ್ಥೆ

ಸುದ್ದಿ 2 ನಿಮಿಷ

ಷೇರು ಮಾರುಕಟ್ಟೆ ಜಾಹೀರಾತು ₹2.39 ಕೋಟಿ ವಂಚನೆ

ಬೆಂಗಳೂರು: ಷೇರು ಮಾರುಕಟ್ಟೆ ಜಾಹೀರಾತು ನಂಬಿ ಸಾಫ್ಟ್‌ವೇರ್ ಎಂಜಿನಿಯರ್‌ರೊಬ್ಬರು ₹2.39 ಕೋಟಿ ಹೂಡಿಕೆ ಮಾಡಿ ವಂಚನೆಗೆ ಒಳಗಾಗಿದ್ದಾರೆ. ಟೆಕಿ ನೀಡಿದ ದೂರಿನ ಮೇರೆಗೆ ವೈಟ್‌ಫೀಲ್ಡ್ ಸಿಇಎನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಜನವರಿ 21ರಂದು 41 ವರ್ಷದ ಟೆಕಿ, ಫೇಸ್‌ಬುಕ್ ನೋಡುತ್ತಿದ್ದ ವೇಳೆ ಆಲಿಸ್ ಬ್ಲೂ ಎಂಬ ಟ್ರೇಡಿಂಗ್ ವ್ಯವಹಾರದ ಜಾಹೀರಾತು ಕಾಣಿಸಿಕೊಂಡಿತು. ಅದರ ಮೇಲೆ ಕ್ಲಿಕ್ ಮಾಡಿದಾಗ ಆಲಿಸ್ ಬ್ಲೂ ವಾಟ್ಸ್‌ಆ್ಯಪ್ ಗ್ರೂಪ್‌ಗೆ ಜಾಯಿನ್ ಆಗಿದ್ದರು. ಇದರಲ್ಲಿ ಪೂಜಾ ಶೈನ್ ಎಂಬಾಕೆ ಟೆಕಿಗೆ ಕರೆ ಮಾಡಿ, ‘ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭಾಂಶ ಸಿಗಲಿದೆ’ ಎಂದು ನಂಬಿಸಿದ್ದಳು. ಆಕೆಯ ಸೂಚನೆಯಂತೆ ಲಿಂಕ್ ಬಳಸಿ ಅಪ್ಲಿಕೇಷನ್ ಡೌನ್ ಲೋಡ್ ಮಾಡಿಕೊಂಡು, ಮೊದಲು ₹50 ಸಾವಿರ ಹೂಡಿಕೆ ಮಾಡಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಹೆಚ್ಚಿನ ಹಣ ಹೂಡಿಕೆ ಮಾಡಿದರೆ ಅಧಿಕ ಕಮಿಷನ್ ಸಿಗಲಿದೆ ಎಂಬ ವಂಚಕರ ಮಾತು ನಂಬಿದ ಟೆಕಿ, ಅವರು ಸೂಚಿಸಿದ ವಿವಿಧ ಬ್ಯಾಂಕ್ ಖಾತೆಗೆ ಹಂತ ಹಂತವಾಗಿ ಹಣ ವರ್ಗಾವಣೆ ಮಾಡಿದ್ದರು. ಇದಕ್ಕೆ ಪ್ರತಿಯಾಗಿ ಅಪ್ಲಿಕೇಷನ್‌ನಲ್ಲಿ ಲಾಭಾಂಶ ಬಂದಿರುವುದರ ಬಗ್ಗೆ ತೋರಿಸಲಾಗಿತ್ತು’ ಎಂದು ಹೇಳಿದ್ದಾರೆ.

‘ಲಾಭಾಂಶ ಪಡೆಯಲು ಟೆಕಿ ಪ್ರಯತ್ನಿಸಿದಾಗ ಸಾಧ್ಯವಾಗಲಿಲ್ಲ. ಈ ಬಗ್ಗೆ ಕರೆ ಮಾಡಿ ವಿಚಾರಿಸಿದಾಗ ಮತ್ತಷ್ಟು ಹಣ ಪಾವತಿಸುವಂತೆ ವಂಚಕರು ಹೇಳಿದ್ದಾರೆ. ಆಗ ಮತ್ತೆ ಲಕ್ಷಾಂತರ ರೂಪಾಯಿ ಹಣ ವರ್ಗಾವಣೆ ಮಾಡಿದ್ದಾರೆ. ಆಗಲೂ ಸಾಧ್ಯವಾಗಲಿಲ್ಲ. ಅಷ್ಟು ಹೊತ್ತಿಗೆ ₹ 2.39 ಕೋಟಿ ಹೂಡಿಕೆ ಮಾಡಲಾಗಿತ್ತು. ಹೂಡಿಕೆ ಬಗ್ಗೆ ಸಲಹೆ ಕೊಡುತ್ತಿದ್ದವರಿಗೆ ಕರೆ ಮಾಡಿದಾಗ ಅವರು ಸಂಪರ್ಕಕ್ಕೆ ಸಿಗಲಿಲ್ಲ’ ಎಂದು ತಿಳಿಸಿದ್ದಾರೆ.

ಸಂತ್ರಸ್ತನ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ವಂಚಕರ ಬ್ಯಾಂಕ್ ಖಾತೆಗಳ ವಿವರ ಪಡೆದು ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಬಸ್ ಚಕ್ರಕ್ಕೆ ಸಿಲುಕಿ ಮಹಿಳೆ ಸಾವು

ಬೆಂಗಳೂರು: ಬಸ್‌ನಿಂದ ಇಳಿಯುವ ವೇಳೆ ಕೆಳಗೆ ಬಿದ್ದ ಮಹಿಳೆ ಚಕ್ರಕ್ಕೆ ಸಿಲುಕಿ ಮೃತಪಟ್ಟಿರುವ ಘಟನೆ ಬ್ಯಾಟರಾಯನಪುರ ಸಂಚಾರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಪೀಣ್ಯ ಎರಡನೇ ಹಂತದ ಹೆಗ್ಗನಹಳ್ಳಿಯ 12ನೇ ಕ್ರಾಸ್ ನಿವಾಸಿ ಕೃಷ್ಣವೇಣಿ (58) ಮೃತ ಮಹಿಳೆ.

ಎರಡು ತಿಂಗಳಿನಿಂದ ಕೃಷ್ಣವೇಣಿ ಅವರು ಕುಟುಂಬದವರ ಜತೆ ನಗರದಲ್ಲಿ ವಾಸ ಮಾಡುತ್ತಿದ್ದರು. ಸಂಬಂಧಿಕರೊಬ್ಬರ ಅಂತ್ಯ-ಕ್ರಿಯೆಗಾಗಿ ತಮಿಳುನಾಡಿಗೆ ಹೋಗಿ ಕಾರ್ಯ ಮುಗಿಸಿಕೊಂಡು ರಾತ್ರಿ ಬಸ್ ಹತ್ತಿದ್ದಾರೆ. ಬಸ್ ಬೆಳಗಿನ ಜಾವ 4.30ರ ಸುಮಾರಿಗೆ ಮೈಸೂರು ರಸ್ತೆಯ ಸ್ಯಾಟಲೈಟ್ ಬಸ್ ನಿಲ್ದಾಣದ ತಮಿಳುನಾಡು ಪ್ಲಾಟ್‌ಫಾರ್ಮ್‌ಗೆ ಬಂದು ನಿಂತಿದೆ. ಆಗ ಮಳೆ ಬರುತ್ತಿತ್ತು.

ಕೃಷ್ಣವೇಣಿ ಅವರು ಬಸ್ ಇಳಿದು ಯಾವ ಕಡೆ ಹೋಗಬೇಕು ಎಂದು ಯೋಚಿಸುತ್ತಿರುವಾಗ ಏಕಾಏಕಿ ಬಸ್ ಚಲಿಸಿದ್ದರಿಂದ ಹಿಂಬದಿ ಚಕ್ರಕ್ಕೆ ಸಿಲುಕಿ ಮೃತಪಟ್ಟಿದ್ದಾರೆ.

ಕೃಷ್ಣವೇಣಿ ಮನೆಗೆ ಬಾರದಿದ್ದಾಗ ಕುಟುಂಬದವರು ಮೊಬೈಲ್‌ಗೆ ಕರೆ ಮಾಡಿದ್ದಾರೆ. ಅಪಘಾತದ ಸ್ಥಳದಲ್ಲಿ ಬಿದ್ದಿದ್ದ ಮೊಬೈಲ್ ಕರೆ ಸ್ವೀಕರಿಸಿದ ಸಾರ್ವಜನಿಕರೊಬ್ಬರು ಸಾವಿನ ವಿಷಯ ತಿಳಿಸಿದ್ದಾರೆ.

ಬ್ಯಾಟರಾಯನಪುರ ಸಂಚಾರಿ ಠಾಣೆ ಪೊಲಿಸರು ಸ್ಥಳಕ್ಕೆ ಭೇಟಿ ನೀಡಿ, ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿನ ‘ವಾರ್‌ರೂಂ’ಗೆ ಭೇಟಿ, ಪರಿಸ್ಥಿತಿ ಅವಲೋಕನ

ಮಳೆ–ಹಾನಿ: ಸಿ.ಎಂ, ಡಿಸಿಎಂ ನಾಳೆ ನಗರ ಪ್ರದಕ್ಷಿಣೆ

ಪ್ರಜಾವಾಣಿ ವಾರ್ತೆ

ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿರುವ ‘ವಾರ್‌ರೂಂ’ಗೆ ಸೋಮವಾರ ಸಂಜೆ ಭೇಟಿ ನೀಡಿದ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅವರಿಗೆ ಬಿಬಿಎಂಪಿ ಆಡಳಿತಾಧಿಕಾರಿ ತುಷಾರ್ ಗಿರಿನಾಥ್ ಪರಿಸ್ಥಿತಿಯನ್ನು ವಿವರಿಸಿದರು. ಶಾಸಕರಾದ ಎಂ.ಆರ್. ಸೀತಾರಾಂ, ಸಚಿವ ಕೆ.ಜೆ. ಜಾರ್ಜ್, ಸರ್ಕಾರದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಸೋಮವಾರ ಸಂಜೆ ವೇಳೆ ಸಂಚಾರ ದಟ್ಟಣೆ ಹೆಚ್ಚಿರುವ ಕಾರಣ ಜನರಿಗೆ ತೊಂದರೆಯಾಗುತ್ತದೆ ಎಂದು ಮನಗಂಡು, ಮೇ 21ರಂದು ಇಡೀ ನಗರದ ಪ್ರದಕ್ಷಿಣೆ ಮಾಡಿ ಪರಿಸ್ಥಿತಿ ಅವಲೋಕಿಸಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಉಪ ಮುಖ್ಯಮಂತ್ರಿ ಹಾಗೂ ಬೆಂಗಳೂರಿನ ಶಾಸಕರೊಂದಿಗೆ ನಗರ ಪ್ರದಕ್ಷಿಣೆ ಮಾಡಲಾಗುವುದು. ಸೂಕ್ಷ್ಮ ಪ್ರದೇಶಗಳಿಗೆ ಭೇಟಿ ನೀಡಿ ಜನರ ಅಹವಾಲುಗಳನ್ನು ಆಲಿಸಲಾಗುವುದು. ಅಧಿಕಾರಿಗಳು ಏನು ಮಾಡುತ್ತಿದ್ದಾರೆ ಎನ್ನುವುದನ್ನು ಪರಿಶೀಲಿಸಿ ಅಗತ್ಯ ಸೂಚನೆಗಳನ್ನು ಕೊಡಲಾಗುವುದು ಎಂದರು.

ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿರುವ ‘ವಾರ್‌ರೂಂ’ಗೆ ಭೇಟಿ ನೀಡಿ, ನಗರದ ಹಲವು ಪ್ರದೇಶಗಳಲ್ಲಿ ಮಳೆಯಿಂದ ಉಂಟಾಗಿರುವ ಪರಿಸ್ಥಿತಿಯನ್ನು ಅವಲೋಕಿಸಿದ ನಂತರ ಸುದ್ದಿಗಾರರಿಗೆ ಮಾಹಿತಿ ನೀಡಿದರು.

‘ನಗರದಲ್ಲಿ ರಾಜಕಾಲುವೆಗಳು ಒತ್ತುವರಿ ಆಗಿದ್ದು, ಚರಂಡಿಗಳು ಚಿಕ್ಕದಾಗಿದ್ದು, ಹೂಳು ತುಂಬಿದೆ. ಇದನ್ನು ತೆರವು ಮಾಡಲು ನಗರ ಪಾಲಿಕೆಯವರಿಗೆ ಅನೇಕ ಬಾರಿ ಸೂಚನೆ ನೀಡಲಾಗಿದ್ದು, ಇನ್ನೂ ಕಾಮಗಾರಿಗಳು ನಡೆಯುತ್ತಿವೆ. 859.90 ಕಿ.ಮೀ ಉದ್ದದ ರಾಜಕಾಲುವೆಗಳಲ್ಲಿ 195 ಕಿ.ಮೀ ಉದ್ದದಲ್ಲಿ ತಡೆಗೋಡೆ ನಿರ್ಮಾಣ ಕಾರ್ಯ ಚಾಲ್ತಿಯಲ್ಲಿದ್ದು, 173 ಕಿ.ಮೀ ಉದ್ದದ ರಾಜಕಾಲುವೆ ಕಾಮಗಾರಿಯನ್ನು ₹2 ಸಾವಿರ ಕೋಟಿ ವೆಚ್ಚದಲ್ಲಿ ವಿಶ್ವಬ್ಯಾಂಕ್ ವತಿಯಿಂದ ಕೈಗೊಳ್ಳಲಾಗಿದೆ. ನಗರದಲ್ಲಿ ಸುಮಾರು 210 ತಗ್ಗು ಪ್ರದೇಶಗಳನ್ನು ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಎಂದು ಗುರುತು ಮಾಡಲಾಗಿದೆ. 166 ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ. ಬಾಕಿ 44 ಪ್ರದೇಶಗಳಲ್ಲಿ ತಾತ್ಕಾಲಿಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ಪೈಕಿ 24 ಕಾಮಗಾರಿ ಪ್ರಗತಿಯಲ್ಲಿದ್ದು, ಇವು ಪೂರ್ಣಗೊಂಡರೆ ಈ ಸಮಸ್ಯೆ ಬಹಳಷ್ಟು ಕಡಿಮೆಯಾಗಲಿದೆ’ ಎಂದು ಸಿದ್ದರಾಮಯ್ಯ ತಿಳಿಸಿದರು.

‘ರಾಜಕಾಲುವೆಗಳು 4,292 ಸ್ಥಳಗಳಲ್ಲಿ ಒತ್ತುವರಿಯಾಗಿದ್ದು, ಈ ಪೈಕಿ 2,326 ಸ್ಥಳಗಳ ಒತ್ತುವರಿಯನ್ನು ತೆರವುಗೊಳಿಸಲಾಗಿದೆ. ಒತ್ತಿವರಿಯಾಗದಂತೆ ನೋಡಿಕೊಳ್ಳಲು ಸೂಚನೆ ನೀಡಲಾಗಿದೆ ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಒಂದೇ. ಸರ್ಕಾರ ಶ್ರೀಮಂತರು, ಬಡವರು ಎಂದು ತಾರತಮ್ಯ ಮಾಡುವುದಿಲ್ಲ’ ಎಂದು ಮುಖ್ಯಮಂತ್ರಿ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಶೇ 70ರಷ್ಟು ಪ್ರದೇಶಗಳ ಸಮಸ್ಯೆ ನಿವಾರಣೆ’

‘ಮಳೆ ನೀರಿನಿಂದ ಉಂಟಾಗುವ ಅವಘಡಗಳನ್ನು ತಪ್ಪಿಸಲು ಮೊದಲೇ ಸಜ್ಜಾಗಿದ್ದೆವು. ನಾವು ಶೇ 70ರಷ್ಟು ಪ್ರದೇಶಗಳಲ್ಲಿನ ಸಮಸ್ಯೆಗಳನ್ನು ನಿವಾರಣೆ ಮಾಡಿದ್ದೇವೆ. ಈಗಾಗಲೇ ಇಡೀ ನಗರದಾದ್ಯಂತ 197 ಕಿ.ಮೀ ಉದ್ದದ ಮಳೆನೀರುಗಾಲುವೆ ನಿರ್ಮಾಣದ ಕೆಲಸ ನಡೆಯುತ್ತಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಸಿಲ್ಕ್ ಬೋರ್ಡ್ ಹಾಗೂ ರಾಜರಾಜೇಶ್ವರಿನಗರ ಆರ್ಚ್ ಬಳಿ ಮಳೆ ನೀರಿನಿಂದ ಉಂಟಾದ ಪರಿಸ್ಥಿತಿಯನ್ನು ಸೋಮವಾರ ರಾತ್ರಿ ಅವಲೋಕಿಸಿ ಅವರು ಸುದ್ದಿಗಾರೊಂದಿಗೆ ಮಾತನಾಡಿದರು.

‘ಮಳೆಯಿಂದ ಉಂಟಾಗಿರುವ ಸಮಸ್ಯೆಗಳನ್ನು ನಿವಾರಿಸಲು ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಬೆಂಗಳೂರಿನ ಜನತೆ ಯಾವುದೇ ಕಾರಣಕ್ಕೂ ಗಾಬರಿಗೆ ಒಳಗಾಗುವುದು ಬೇಡ’ ಎಂದರು.

‘ಸಿಲ್ಕ್ ಬೋರ್ಡ್, ಹೆಬ್ಬಾಳದ ನಂತರದ ಭಾಗ, ಯಲಹಂಕದಲ್ಲಿ ಹೆಚ್ಚು ಮಳೆ ಸುರಿದಿದೆ. ಇಲ್ಲಿ ಒಂದೆರಡು ಕಡೆ ರೈಲ್ವೆ ಅಂಡರ್ ಪಾಸ್ ಕೆಲಸ ನಡೆಯುತ್ತಿದೆ. ಆ ಕಾರಣ ನೀರು ನಿಂತು ಹೆಚ್ಚು ತೊಂದರೆಯಾಗುತ್ತಿದೆ. ಆದ್ದರಿಂದ ಆ ಇಲಾಖೆಯವರ ಜೊತೆ ಸಮನ್ವಯ ಸಾಧಿಸಿ ಕೆಲಸ ಮಾಡಲಾಗುವುದು’ ಎಂದು ಹೇಳಿದರು.

ಕೇಂದ್ರ ಸಚಿವ ಕುಮಾರಸ್ವಾಮಿ ಅವರು ‘ಗ್ರೇಟರ್ ಬೆಂಗಳೂರಲ್ಲ, ಲೂಟರ್ ಬೆಂಗಳೂರು’ ಎಂದು ಕರೆದಿರುವ ಬಗ್ಗೆ ಸುದ್ದಿಗಾರರು ಕೇಳಿದಾಗ, ‘ಕುಮಾರಸ್ವಾಮಿ ಹಾಗೂ ಬಿಜೆಪಿ ನಾಯಕರು ಹತಾಶೆಯ ಮನುಷ್ಯರು’ ಎಂದು ಹೇಳಿದರು.

‘ರಸ್ತೆ ವಿಸ್ತರಣೆಗೆ ಅಕ್ಕಪಕ್ಕದ ಕಟ್ಟಡಗಳನ್ನು ಒಡೆಯಬೇಕಾಗುತ್ತದೆ. ಇದು ಸಾಕಷ್ಟು ವೆಚ್ಚದಾಯಕ. ಈಗ ಮೇಲ್ಸೇತುವೆ ಹಾಗೂ ಸುರಂಗ ರಸ್ತೆಗಳೇ ಪರಿಹಾರ. ಜೊತೆಗೆ ಪರ್ಯಾಯ ಮಾರ್ಗಗಳ ಹುಡುಕಾಟ ನಡೆಸುತ್ತಿದ್ದೇವೆ. ₹1 ಲಕ್ಷ ಕೋಟಿಗೂ ಅಧಿಕ ಹಣವನ್ನು ಮೆಟ್ರೊ, ಪೆರಿಫೆರಲ್ ರಿಂಗ್ ರಸ್ತೆ, ಬೆಂಗಳೂರು ಅಭಿವೃದ್ಧಿಗೆ ಹೂಡಿಕೆ ಮಾಡಿದ್ದೇವೆ’ ಎಂದರು.

ಮಾನ್ಯತಾ ಟೆಕ್ ಪಾರ್ಕ್ ಒತ್ತುವರಿ ಬಗ್ಗೆ ಕೇಳಿದಾಗ, ‘ಈ ವಿಚಾರವಾಗಿ ಕೆಲವರು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದಾರೆ. ವಿಪತ್ತು ನಿರ್ವಹಣಾ ಕೇಂದ್ರಕ್ಕೂ ಎಚ್ಚರಿಕೆ ನೀಡಿದ್ದೆವು. ಈಗ ಅಲ್ಲಿ ಸಮಸ್ಯೆ ಸರಿಪಡಿಸಿ ನೀರು ಹರಿಯಲು ಅವಕಾಶ ನೀಡಲಾಗಿದೆ’ ಎಂದು ತಿಳಿಸಿದರು.

‘ಗ್ರೇಟರ್ ಬೆಂಗಳೂರು ವಾಟರ್ ಬೆಂಗಳೂರಾಗಿದೆ’ ಎನ್ನುವ ವಿಪಕ್ಷಗಳ ಟೀಕೆಗಳ ಬಗ್ಗೆ ಸುದ್ದಿಗಾರರು ಕೇಳಿದಾಗ, ‘ನಾವು ಬೆಂಗಳೂರಿನ ಎಷ್ಟು ಸಮಸ್ಯೆಗಳನ್ನು ನಿವಾರಿಸಿದ್ದೇವೆ ಎಂಬುದರ ಬಗ್ಗೆ ನಮ್ಮ ಜೊತೆ ಚರ್ಚೆಗೆ ಅವರು ಬರಲಿ. ಕೇವಲ ಆರೋಪ ಮಾಡಿ ಹಿಟ್ ಅಂಡ್ ರನ್ ಮಾಡುವುದಲ್ಲ. ಅವರು ಪಟ್ಟಿ ಮಾಡಿಕೊಂಡು ಬರಲಿ’ ಎಂದು ಹೇಳಿದರು.

ಭಾರತ ಧರ್ಮಶಾಲೆಯಲ್ಲ: ‘ಸುಪ್ರೀಂ’

ಪ್ರಜಾವಾಣಿ ವಾರ್ತೆ

ನವದೆಹಲಿ: ಈಗಾಗಲೇ 140 ಕೋಟಿ ಜನಸಂಖ್ಯೆ ಹೊಂದಿರುವ ಭಾರತವು ಕಷ್ಟಪಡುತ್ತಿದೆ. ಇಂಥ ಸಂದರ್ಭದಲ್ಲಿ ವಿಶ್ವದಾದ್ಯಂತ ಇರುವ ನಿರಾಶ್ರಿತರಿಗೆ ಆಶ್ರಯ ಕಲ್ಪಿಸಲು ಭಾರತವು ಧರ್ಮಶಾಲೆಯಲ್ಲ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ಶ್ರೀಲಂಕಾ ಪ್ರಜೆಯೊಬ್ಬರು ತಮ್ಮ ಗಡೀಪಾರು ವಿರೋಧಿಸಿ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ದೀಪಾಂಕರ್ ದತ್ತಾ ಮತ್ತು ಕೆ. ವಿನೋದ್ ಚಂದ್ರನ್ ಅವರಿದ್ದ ಪೀಠ ನಡೆಸಿತು.

ಒಂದು ವೇಳೆ ಭಾರತವು ವಿಶ್ವದಲ್ಲಿನ ನಿರಾಶ್ರಿತರಿಗೆ ಆಶ್ರಯ ನೀಡಲು ಮುಂದಾದಲ್ಲಿ, ನೆರೆರಾಷ್ಟ್ರಗಳಿಂದ ನಿರಾಶ್ರಿತರ ಮಹಾಪೂರವೇ ಹರಿದು ಬರಲಿದೆ ಎಂದು ಪೀಠ ಹೇಳಿದೆ.

ಶ್ರೀಲಂಕಾದ ಭಯೋತ್ಪಾದಕ ಸಂಘಟನೆ ಎಲ್‌ಟಿಟಿಇಯ ಜೊತೆ ನಂಟು ಹೊಂದಿದ ಶಂಕೆ ಮೇರೆಗೆ ಶ್ರೀಲಂಕಾದ ಪ್ರಜೆಯನ್ನು 2015ರಲ್ಲಿ ಬಂಧಿಸಲಾಗಿತ್ತು. ಯುಎಪಿಎ ಕಾಯ್ದೆಯಡಿ ಆತ ತಪ್ಪಿತಸ್ಥ ಎಂದು ಸಾಬೀತಾಗಿತ್ತು. ಹೀಗಾಗಿ, ಈತನಿಗೆ ನ್ಯಾಯಾಲಯವು 10 ವರ್ಷ ಕಾರಾಗೃಹ ಶಿಕ್ಷೆ ವಿಧಿಸಿತ್ತು.

2022ರಲ್ಲಿ ಈತನ ಶಿಕ್ಷೆ ಅವಧಿಯನ್ನು 10 ವರ್ಷದಿಂದ 7 ವರ್ಷಕ್ಕೆ ಇಳಿಸಿದ್ದ ಮದ್ರಾಸ್ ಹೈಕೋರ್ಟ್, ಶಿಕ್ಷೆಯ ಅವಧಿ ಮುಗಿದ ಕೂಡಲೇ ದೇಶ ತೊರೆಯಬೇಕು ಎಂದು ಸೂಚಿಸಿತ್ತು.

ನೆಲಮಂಗಲ ಪಟ್ಟಣದಲ್ಲಿ ಭಾನುವಾರ ಮಧ್ಯರಾತ್ರಿಯಿಂದ ಸೋಮವಾರ ಬೆಳಗಿನ ಜಾವದವರೆಗೆ ಸುರಿದ ಮಳೆಗೆ ಅಡಕಮಾರನಹಳ್ಳಿ ಬಳಿ ರಾಷ್ಟ್ರೀಯ ಹೆದ್ದಾರಿ ಜಲಾವೃತವಾಯಿತು

ಕಾಲುವೆಯಲ್ಲಿ ಕೊಂಬೆಗಳು

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಸೋಮವಾರ ಮುಂಜಾನೆ ಸುರಿದ ಭಾರಿ ಮಳೆಯಿಂದಾಗಿ ರಾಜಗೋಪಾಲನಗರ ವಾರ್ಡ್ ಬಸಪ್ಪನ ಕಟ್ಟೆ ಹಿಂಭಾಗದ ಭೈರವೇಶ್ವರ ನಗರದಲ್ಲಿರುವ ರಾಜಕಾಲುವೆ ಉಕ್ಕಿ ಹರಿದು ರಸ್ತೆ ಮತ್ತು ಅಕ್ಕಪಕ್ಕದ ಮನೆಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಯಾಯಿತು.

'150ಕ್ಕೂ ಹೆಚ್ಚು ಮನೆಗಳಿಗೆ ಮಳೆ ನೀರು ನುಗ್ಗಿ ಮನೆಯಲ್ಲಿದ್ದ ದವಸ ಧಾನ್ಯಗಳು, ಬಟ್ಟೆ, ಪೀಠೋಪಕರಣಗಳು ಹಾಳಾಗಿವೆ. ರಾತ್ರಿಯಿಂದ ನೀರನ್ನು ಹೊರಗೆ ಹಾಕಿ ಸಾಕಾಗಿದೆ' ಎಂದು ಸ್ಥಳೀಯ ನಿವಾಸಿ ಜಿ.ವಿ.ದೊಡ್ಡ ನಾಗಪ್ಪ ಆಕ್ರೋಶ ವ್ಯಕ್ತಪಡಿಸಿದರು.

‘ಪಾರ್ಕ್‌ನಲ್ಲಿದ್ದ ಮರಗಳ ಕೊಂಬೆಗಳನ್ನು ಕಡಿದು ಭೈರವೇಶ್ವರ ನಗರದ 2ನೇ ಎ ಮುಖ್ಯರಸ್ತೆಯಲ್ಲಿರುವ ಈ ರಾಜಕಾಲುವೆಯಲ್ಲಿ ಹಾಕಲಾಗಿದೆ. ಈವರೆಗೆ ಅವುಗಳನ್ನು ತೆರವುಗೊಳಿಸಿಲ್ಲ. ಹೀಗಾಗಿ ಮಳೆ ನೀರು ಸರಾಗವಾಗಿ ಹರಿಯದೆ ಅಂಗಡಿಗಳಿಗೆ, ಅಕ್ಕಪಕ್ಕದ ಮನೆಗಳಿಗೆಲ್ಲ ನುಗ್ಗಿದೆ. ವಿದ್ಯುತ್ ಸಂಪರ್ಕವೂ ಕಡಿತವಾಗಿದೆ' ಎಂದು ಅಂಗಡಿ ಮಾಲೀಕ ಹಾಲಪ್ಪ ಬೇಸರ ವ್ಯಕ್ತಪಡಿಸಿದರು.

ಮಳೆ ಅನಾಹುತ: ವಿರೋಧ ಪಕ್ಷದ ನಾಯಕ ಆರ್. ಅಶೋಕ ಆಗ್ರಹ

‘ಪರಿಹಾರಕ್ಕೆ ₹1,000 ಕೋಟಿ ಕೊಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಳೆಯಿಂದ ಆಗಿರುವ ಅನಾಹುತದ ಪರಿಹಾರ ಕಾರ್ಯಕ್ಕೆ ತಕ್ಷಣವೇ ₹1,000 ಕೋಟಿ ಬಿಡುಗಡೆ ಮಾಡಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ಆಗ್ರಹಿಸಿದ್ದಾರೆ.



ಆರ್ ಅಶೋಕ

ಭಾನುವಾರ ರಾತ್ರಿ ನಗರದಲ್ಲಿ 103 ರಿಂದ 130 ಮಿಲಿ ಮೀಟರ್‌ನಷ್ಟು ಮಳೆಯಾಗಿದೆ. ಇದರಿಂದ ನಗರದಲ್ಲಿ ಭಾರಿ ಅವಾಂತರ ಸೃಷ್ಟಿಯಾಗಿದೆ. ಆದ್ದರಿಂದ ತ್ವರಿತವಾಗಿ ಪರಿಹಾರ ಕಾರ್ಯ ಕೈಗೆತ್ತಿಕೊಂಡು ಸಂತ್ರಸ್ತರ ನೆರವಿಗೆ ಧಾವಿಸಬೇಕು ಎಂದು ಅವರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಗ್ರೇಟರ್ ಬೆಂಗಳೂರು ಇವತ್ತು ವಾಟರ್ ಬೆಂಗಳೂರು ಆಗಿದೆ. ಸ್ವಲ್ಪ ಮಳೆಯಾದರೂ ಬೆಂಗಳೂರು ಮಹಾನಗರ ನೀರಿನಲ್ಲಿ ಮುಳುಗುವಂತಾಗಿದೆ

ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಮುಂಗಾರು ಪೂರ್ವದ ಒಂದೇ ಒಂದು ಮಳೆ ಕಾಂಗ್ರೆಸ್ ಸರ್ಕಾರದ ‘ಬ್ರ್ಯಾಂಡ್ ಬೆಂಗಳೂರಿನ’ ನಿಜ ಬಣ್ಣ ಬಯಲು ಮಾಡಿದೆ. ಇಂತಹ ಸನ್ನಿವೇಶದಲ್ಲಿ ಸಂತ್ರಸ್ತರ ನೆರವಿಗೆ ಧಾವಿಸಬೇಕಿದ್ದ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಸಾಧನಾ ಸಮಾವೇಶದಲ್ಲಿ ಮುಳುಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಗರದ ಅನೇಕ ಬಡಾವಣೆಗಳು ಜಲಾವೃತವಾಗಿವೆ. ನೂರಾರು ವಾಹನಗಳು ಪ್ರವಾಹದಲ್ಲಿ ತೇಲಿ ಹೋಗಿವೆ. ಇಡೀ ರಾತ್ರಿ ಜನರು ಜಾಗರಣೆ ಮಾಡುವಂತಾಗಿದೆ. ಅವರಿಗೆ ಊಟದ ವ್ಯವಸ್ಥೆ ಇಲ್ಲ. ಇಷ್ಟಾದರೂ ಬಿಬಿಎಂಪಿ ಜನರ ನೆರವಿಗೆ ಮುಂದಾಗಿಲ್ಲ. ಬೆಂಗಳೂರಿನ ಮಾನ ವಿಶ್ವಮಟ್ಟದಲ್ಲಿ ಹರಾಜಾಗಿದೆ ಎಂದು ಅಶೋಕ ಟೀಕಿಸಿದ್ದಾರೆ.

ಹೆಬ್ಬಾಳ, ಕೋರಮಂಗಲ ಮತ್ತು ವೃಷಭಾವತಿ ಕಣಿವೆಯಲ್ಲಿ ಪ್ರವಾಹ ಬಂದಿದೆ. ಇನ್ನೂ ಮೂರು ನಾಲ್ಕು ದಿನ ಭಾರಿ ಮಳೆ ಬೀಳುತ್ತದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ತಕ್ಷಣ ತುರ್ತು ಪರಿಹಾರ ಕಾರ್ಯಪಡೆ ರಚಿಸಿ, ಸಹಾಯವಾಣಿ ಆರಂಭಿಸಬೇಕು. ನೀರು ನುಗ್ಗಿರುವ ಮನೆಗಳಿಗೆ ಕನಿಷ್ಠ ₹1 ಲಕ್ಷ ಪರಿಹಾರ ವಿತರಿಸಬೇಕು. ಆ ಮನೆಯವರಿಗೆ ಊಟ, ತಿಂಡಿ ವ್ಯವಸ್ಥೆ ಮಾಡಿ ಎರಡು ತಿಂಗಳಿಗೆ ಆಗುವಷ್ಟು ಪರಿಹಾರ ವಿತರಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಹಿಂದಿನ ವರ್ಷದ ಲೋಪಗಳಿಂದ ಪಾಠ ಕಲಿಯದ ಸರ್ಕಾರದ ಬೇಜವಾಬ್ದಾರಿತನದಿಂದ ನಗರದಲ್ಲಿ ಇಷ್ಟೆಲ್ಲಾ ಅನಾಹುತಗಳು ಸಂಭವಿಸಿವೆ. ಮುಂಜಾಗ್ರತೆಯಿಂದ ಮೋರಿ, ಚರಂಡಿ, ರಾಜಕಾಲುವೆಗಳಲ್ಲಿ ಹೂಳು ತೆಗೆಸುವ ಕೆಲಸ ಮಾಡಬೇಕಿತ್ತು. ನಗರದ ಅನೇಕ ಕಡೆಗಳಲ್ಲಿ ವೈಟ್‌ಟಾಪಿಂಗ್ ಮತ್ತು ರಿಪೇರಿ ಕಾಮಗಾರಿ ನಡೆಯುತ್ತಿದ್ದು, ಅಲ್ಲಿನ ಅವಶೇಷಗಳನ್ನು ತೆರವು ಮಾಡಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ ಎಂದು ಹೇಳಿದ್ದಾರೆ.

50ಕ್ಕೂ ಹೆಚ್ಚು ಮನೆಗಳಿಗೆ ನುಗ್ಗಿದ ನೀರು

ಕೆಂಗೇರಿ: ದವಸ ಧಾನ್ಯ, ಬಟ್ಟೆ, ಗೃಹೋಪಯೋಗಿ ವಸ್ತುಗಳು ನೀರು ಪಾಲು

ಪ್ರಜಾವಾಣಿ ವಾರ್ತೆ

ಕೆಂಗೇರಿ: ಭಾನುವಾರ ರಾತ್ರಿಯಿಂದ ಸೋಮವಾರ ಮುಂಜಾನೆವರೆಗೆ ಸುರಿದ ಭಾರಿ ಮಳೆಯಿಂದಾಗಿ ಕೆಂಗೇರಿ ಪೆಟ್ರೋಲ್ ಬಂಕ್ ಬಳಿಯ ಸುಮಾರು 30 ಮನೆಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಯಾಯಿತು.

ಪಕ್ಕದಲ್ಲೇ ಇರುವ ರಾಜಕಾಲುವೆ ತುಂಬಿ ಹರಿದ ಪರಿಣಾಮ ಮನೆಗಳಿಗೆ ನೀರು ನುಗ್ಗಿ ದವಸ ಧಾನ್ಯ, ಬಟ್ಟೆ ಹಾಗೂ ಇತರೆ ಗೃಹೋಪಯೋಗಿ ವಸ್ತುಗಳು ನೀರು ಪಾಲಾದವು.

ಕೆಂಗೇರಿ ಗುಟ್ಟೆ ಆಂಜನೇಯ ಸ್ವಾಮಿ ಬೀದಿ ಬಳಿಯ ರಸ್ತೆಗಳಲ್ಲೂ ರಾಜಕಾಲುವೆ ನೀರು ಹರಿದು ಅಕ್ಕಪಕ್ಕದ ಒಂಬತ್ತು ಮನೆಗಳಿಗೆ ನೀರು ನುಗ್ಗಿದ್ದು, ಲಕ್ಷಾಂತರ ರೂಪಾಯಿ ಮೌಲ್ಯದ ಎಲೆಕ್ಟ್ರಾನಿಕ್ ಉಪಕರಣಗಳು ಹಾಳಾಗಿವೆ ಎಂದು ಸ್ಥಳೀಯ ನಿವಾಸಿ ವೇಣು ಮಾಧವ ಭಟ್ ಅವಲತ್ತುಕೊಂಡರು.

‘ವಿಜಯಶ್ರೀ ಬಡಾವಣೆಯ 5, 6 ಮತ್ತು 7ನೇ ಅಡ್ಡರಸ್ತೆಯಲ್ಲಿರುವ 15ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿದೆ. ಕೆಲ ಮನೆಯ ಫ್ರಿಜ್, ಟಿವಿಗಳಿಗೆ ಹಾನಿಯಾಗಿದೆ. ಸಮೀಪದಲ್ಲಿರುವ ವೆಂಕಟೇಶ್ವರ ದೇವಾಲಯ ಸಮೀಪದಲ್ಲಿ 2 ಅಡಿಗೂ ಹೆಚ್ಚು ನೀರು ಸಂಗ್ರಹಗೊಂಡಿತ್ತು’ ಎಂದು ಸ್ಥಳೀಯ ಮುಖಂಡ ಮೈಲಸಂದ್ರ ನಾಗರಾಜ್ ತಿಳಿಸಿದರು.

ಶಾಸಕರ ನೆರವು: ಮಳೆಯಿಂದ ಸಮಸ್ಯೆಗೆ ಈಡಾದ ಸ್ಥಳಗಳಿಗೆ ಭೇಟಿ ನೀಡಿದ ಬಿಬಿಎಂಪಿ ಅಧಿಕಾರಿಗಳು ಸಿಬ್ಬಂದಿ ನೆರವಿನೊಂದಿಗೆ ಮಳೆ ನೀರು ತೆರವುಗೊಳಿಸಿದರು.

‘ಮಳೆ ನೀರು ಸಮಸ್ಯೆ ಪರಿಹಾರಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಬಾಧಿತ ಕುಟುಂಬಗಳಿಗೆ ದಿನಸಿ ಸಾಮಗ್ರಿ ವಿತರಿಸಲಾಗುವುದು’ ಎಂದು ಶಾಸಕ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಅಟ್ಟೂರು ಗ್ರಾಮದಲ್ಲಿರುವ ಕಾಶಿ ವಿಶ್ವನಾಥ ದೇವಸ್ಥಾನ ಜಲಾವೃತಗೊಂಡಿದೆ

ಅಟ್ಟೂರು: ಕಾಶಿ ವಿಶ್ವನಾಥ ದೇವಸ್ಥಾನ ಜಲಾವೃತ

ಯಲಹಂಕ: ಭಾನುವಾರ ರಾತ್ರಿ ಸುರಿದ ಭಾರೀ ಮಳೆಯಿಂದ ಅಟ್ಟೂರು ಗ್ರಾಮ-ದಲ್ಲಿರುವ ಕಾಶಿ ವಿಶ್ವನಾಥ ದೇವಸ್ಥಾನ ಜಲಾವೃತಗೊಂಡಿತು.

ದೇವಸ್ಥಾನದ ಸಮೀಪದಲ್ಲೇ ಅಟ್ಟೂರು ಕೆರೆಯಿದ್ದು, ರಸ್ತೆಯಿಂದ ತುಸು ಕೆಳಗೆ ದೇವಸ್ಥಾನವಿದೆ. ಮಳೆ ನೀರು ಹರಿದು ಹೋಗಲು ಅವಕಾಶವಿಲ್ಲದೆ ಅರ್ಧಭಾಗ ದೇವಸ್ಥಾನ ಜಲಾವೃತಗೊಂಡಿತು.

ದೇವಸ್ಥಾನದಲ್ಲಿ ಸೋಮವಾರ ನಡೆಯುವ ವಿಶೇಷ ಪೂಜೆಗಾಗಿ ಮಳೆಯ ನಡುವೆಯೂ ದೇವರ ದರ್ಶನಕ್ಕಾಗಿ ಬಂದಿದ್ದ ನೂರಾರು ಭಕ್ತರು, ದೇವಸ್ಥಾನ ಜಲಾವೃತಗೊಂಡಿರುವುದನ್ನು ಕಂಡು ಮನೆಗೆ ವಾಪಸಾದರು. ಮೋಟಾರ್ ಪಂಪ್ ಮೂಲಕ, ಸಂಗ್ರಹವಾಗಿದ್ದ ನೀರನ್ನು ಹೊರಹಾಕಲಾಯಿತು ಎಂದು ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ವರದರಾಜು ಆರ್ ತಿಳಿಸಿದರು.

ಮಳೆ ಬಂದಾಗ ಉದ್ಭವಿಸುವ ಈ ಸಮಸ್ಯೆಗೆ ಸಂಬಂಧಪಟ್ಟ ಅಧಿಕಾರಿಗಳು ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ.

ಇತ್ತೀಚೆಗೆ ಅಟ್ಟೂರು ಗ್ರಾಮದಿಂದ ಉಪನಗರ ನಾಲ್ಕನೇ ಹಂತಕ್ಕೆ ಸಂಪರ್ಕ ಕಲ್ಪಿಸಲು ಹೊಸ ರಸ್ತೆಯನ್ನು 3 ಅಡಿಗಳಷ್ಟು ಎತ್ತರಿಸಿ ಅಭಿವೃದ್ಧಿಪಡಿಸಲಾಗಿದೆ. ದೇವಸ್ಥಾನ ರಸ್ತೆಗಿಂತ ಕೆಳಗಿರುವುದರಿಂದ ಜಲಾವೃತಗೊಂಡಿದೆ. ಸಮಸ್ಯೆ ನಿವಾರಣೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ಬಿಬಿಎಂಪಿ ಕಾರ್ಯನಿರ್ವಾಹಕ ಎಂಜಿನಿಯರ್ ಸುಧಾಕರರೆಡ್ಡಿ ತಿಳಿಸಿದರು.

ಸಾಯಿ ಬಡಾವಣೆ: ಜನಜೀವನ ಅಸ್ತವ್ಯಸ್ತ

ಕೆ.ಆರ್.ಪುರ: ಭಾನುವಾರ ರಾತ್ರಿಯಿಂದ ಸೋಮವಾರ ಮುಂಜಾನೆವರೆಗೆ ಸುರಿದ ಭಾರಿ ಮಳೆಗೆ ಹೊರಮಾವು ವಾರ್ಡ್‌ನ ಸಾಯಿ ಬಡಾವಣೆ, ವಡ್ಡರಪಾಳ್ಯ, ನಾರ್ತ್ ವುಡ್ ಬಡಾವಣೆ, ಪೂಜಪ್ಪ ಬಡಾವಣೆ, ಗ್ರೀನ್ ಬಡಾವಣೆಗಳು ಸಂಪೂರ್ಣ ಜಲಾವೃತಗೊಂಡು, ಜನರು ಮನೆಯಿಂದ ಹೊರಬರಲಾಗದ ಸ್ಥಿತಿ ನಿರ್ಮಾಣವಾಯಿತು.

ಮಳೆಯ ನೀರು ಪ್ರವಾಹದಂತೆ ವಸತಿ ಸಮುಚ್ಚಯ ಮತ್ತು ಮನೆಗಳಿಗೆ ನುಗ್ಗಿತ್ತು. ಪ್ರವಾಹ ಪರಿಸ್ಥಿತಿಯಿಂದಾಗಿ ಜನರು ಮನೆಯ ತಾರಸಿ ಮತ್ತು ಬಾಲ್ಕನಿಗಳ ಮೇಲೆ ರಾತ್ರಿ ಕಳೆಯುವಂತಾಯಿತು. ರಾತ್ರಿ ಕಳೆದು ಬೆಳಗಾದರೂ ಊಟ–ಉಪಹಾರ, ಔಷಧಿಗಳು ಸಿಗದೆ ಹೈರಾಣಾದರು.

ಲಕ್ಷಾಂತರ ರೂಪಾಯಿ ಮೌಲ್ಯದ ಗೃಹೋಪಯೋಗಿ ವಸ್ತುಗಳು ಕಾರು, ಬೈಕ್, ಎಲೆಕ್ಟ್ರಾನಿಕ್ ವಸ್ತುಗಳು, ದವಸ– ಧಾನ್ಯಗಳು ತೊಯ್ದುಹೋಗಿದ್ದವು. ವಿಷ ಜಂತುಗಳು, ಗೃಹೋಪಯೋಗಿ ವಸ್ತುಗಳು ನೀರಿನಲ್ಲಿ ತೇಲಾಡಿದವು.

ರಸ್ತೆಯಲ್ಲಿ ನಾಲ್ಕು ಅಡಿಗೂ ಹೆಚ್ಚು ನೀರು ನಿಂತಿದ್ದರಿಂದ ನಿವಾಸಿಗಳು, ಮಕ್ಕಳನ್ನು ಶಾಲೆ–ಕಾಲೇಜುಗಳಿಗೆ ಕರೆದೊಯ್ಯಲು ಕೆಲಕಾಲ ಅಡ್ಡಿಯಾಯಿತು. ಬೆಳಿಗ್ಗೆಯಿಂದ ಊಟ, ನೀರಿಲ್ಲದೆ ಬಳಲಿದ್ದ ಜನರಿಗೆ ಬಿಬಿಎಂಪಿ ಸಿಬ್ಬಂದಿ ಬೋಟ್, ಟ್ರ್ಯಾಕ್ಟರ್‌ಗಳ ಮೂಲಕ ಆಹಾರದ ಪೊಟ್ಟಣ ಮತ್ತು ನೀರಿನ ಬಾಟಲ್‌ಗಳನ್ನು ವಿತರಿಸಿದರು.

ಎಲ್ಲೆಲ್ಲಿ ಏನೇನಾಯ್ತು?

- ಮಹದೇವಪುರದಲ್ಲಿ 10 ಪ್ರದೇಶಗಳು ಜಲಾವೃತ, ನಿವಾಸಿಗಳಿಗೆ ಟ್ರ್ಯಾಕ್ಟರ್ ಮೂಲಕ ಉಪಾಹಾರ, ನೀರು ಪೂರೈಕೆ
- ರಾಜಕಾಲುವೆಗಳಿಂದ ನೀರು ಹಿಮ್ಮುಖವಾಗಿ ಹರಿದು ಎಚ್‌ಆರ್ ಬಿಆರ್ ಲೇಔಟ್, ಹೊರಮಾವು, ಬೈರಸಂದ್ರ ಲೇಔಟ್ ಜಲಾವೃತ
- ವೃಷಭಾವತಿ ಕಣಿವೆಯಲ್ಲಿ ನೀರಿನಮಟ್ಟ ಹೆಚ್ಚಾಗಿ ಮೂರು ಹಸು, ಒಂದು ಕರು ಹಾಗೂ ಒಂದು ಎಮ್ಮೆ ಸಾವು
- ಧರೆಗುರುಳಿದ 27 ಮರಗಳು, 43 ಮರದ ಕೊಂಬೆಗಳು, ತೆರವು ಕಾರ್ಯಾಚರಣೆಗೆ 30 ತಂಡ

ಸಿಲ್ಕ್‌ಬೋರ್ಡ್ ಜಂಕ್ಷನ್‌ನಲ್ಲಿ ಮಳೆ ನೀರಿನಲ್ಲೇ ಸಾಗಿದ ವಾಹನಗಳು
ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

ಭಾರಿ ಮಳೆ: ಮುಳುಗಿದ ರಸ್ತೆಗಳು ಟ್ರ್ಯಾಕ್ಟರ್, ಬೋಟ್‌ಗಳಲ್ಲಿ ಸಂಚಾರ

ಜಲಾವೃತಗೊಂಡಿರುವ ಸಾಯಿಲೇಔಟ್‌ನ ಮನೆಯಲ್ಲಿ ಸಿಲುಕಿದ್ದ ನಿವಾಸಿಯೊಬ್ಬರನ್ನು ಬಿಬಿಎಂಪಿ ಸಿಬ್ಬಂದಿ ರಕ್ಷಿಸಿ ಸುರಕ್ಷಿತ ಪ್ರದೇಶಕ್ಕೆ ಕರೆದೊಯ್ದರು ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ

ಧಾರಾಕಾರ ಮಳೆಯಿಂದಾಗಿ 'ರಾಷ್ಟ್ರೀಯ ಕ್ರೀಡಾ ಗ್ರಾಮ'ದ (ನ್ಯಾಷನಲ್ ಗೇಮ್ಸ್ ವಿಲೇಜ್) ಗೋದಾವರಿ ಅಪಾರ್ಟ್‌ಮೆಂಟ್ ಮುಂಭಾಗ ಮರ ಬಿದ್ದು ಎರಡು ಕಾರುಗಳು ಜಖಂಗೊಂಡಿದ್ದವು

–ಪ್ರಜಾವಾಣಿ ಚಿತ್ರ:ರಂಜು ಪಿ

ರಾತ್ರಿ ಮಳೆಗೆ ಅರ್ಧ ರಾಜಧಾನಿ ಮುಳುಗಡೆ



ಶಾಂತಿನಗರದ ಸಿಸಿಬಿ ಕಚೇರಿಗೆ ನೀರು ನುಗ್ಗಿರುವ ದೃಶ್ಯ

ಧಾರಾಕಾರ ಮಳೆಯಿಂದಾಗಿ ಶಾಂತಿನಗರ ಬಿಎಂಟಿಸಿ ಬಸ್ ಡಿಪೊದಲ್ಲಿ ಬಸ್‌ಗಳು ನೀರಿನಲ್ಲಿ ಮುಳುಗಿರುವ ದೃಶ್ಯ –ಪ್ರಜಾವಾಣಿ ಚಿತ್ರ

ಕೋರಮಂಗಲದ 80 ಅಡಿ ರಸ್ತೆಯಲ್ಲಿರುವ ಅಪಾರ್ಟ್‌ಮೆಂಟ್‌ವೊಂದರ ನೆಲಮಹಡಿ ಸಂಪೂರ್ಣ ಜಲಾವೃತವಾಗಿ, 100ಕ್ಕೂ ಹೆಚ್ಚು ದ್ವಿಚಕ್ರ ವಾಹನಗಳು ನೀರಿನಲ್ಲಿ ಸಿಲುಕಿದ್ದವು

ಸೋಮವಾರ ಸುರಿದ ಧಾರಾಕಾರ ಮಳೆಯಿಂದಾಗಿ ನಗರದ ಬಳ್ಳಾರಿ ರಸ್ತೆ ಇಡೀ ದಿನ ವಾಹನ ದಟ್ಟಣೆಯಿಂದ ಕೂಡಿತ್ತು ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಆರ್‌ಎಂವಿ 2ನೇ ಹಂತದಲ್ಲಿರುವ ರೈಲ್ವೆ ಅಂಡರ್‌ಪಾಸ್‌ನಲ್ಲಿ ಮಳೆ ನೀರು ಸಂಗ್ರಹಗೊಂಡು ಸರಕು ಸಾಗಣೆ ವಾಹನ ಮುಳುಗಿರುವುದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಳುಗಿರುವ ರಸ್ತೆಗಳು, ರಸ್ತೆಗಳಲ್ಲೇ ಕೆಟ್ಟು ನಿಂತ ಕಾರು, ಬೈಕುಗಳು, ಬಸ್‌ಗಳು, ಜಲಾವೃತಗೊಂಡ ಬಡಾವಣೆಗಳು, ಬೈಕ್- ಕಾರಲ್ಲಿ ಓಡಾಡುತ್ತಿದ್ದ ರಸ್ತೆಯಲ್ಲಿ ಟ್ರ್ಯಾಕ್ಟರ್, ಬೋಟುಗಳಲ್ಲಿ ಪ್ರಯಾಣಿಸಿದ ನಾಗರಿಕರು, ಬಿಬಿಎಂಪಿ ಅಧಿಕಾರಿಗಳು...

ನಗರದಲ್ಲಿ ಭಾನುವಾರ ತಡರಾತ್ರಿಯಿಂದ ಸೋಮವಾರ ಮುಂಜಾನೆವರೆಗೆ ಸುರಿದ ಬಿರುಸಾದ ಮಳೆಯಿಂದ ಉಂಟಾದ ಅವಾಂತರಗಳಿವು.

ಸುಮಾರು ನಾಲ್ಕು ಗಂಟೆ ಸುರಿದ ಭಾರಿ ಮಳೆಗೆ ಬಿಬಿಎಂಪಿ ವ್ಯಾಪ್ತಿಯ ಎಂಟು ವಲಯಗಳಲ್ಲಿ ನಾಲ್ಕು ವಲಯಗಳ ಪ್ರದೇಶಗಳು ಜಲಾವೃತಗೊಂಡಿವೆ. ಮಹದೇವಪುರ, ಯಲಹಂಕ, ಬೊಮ್ಮನಹಳ್ಳಿ ಹಾಗೂ ಪೂರ್ವ ವಲಯದ ಹಲವು ರಸ್ತೆಗಳಲ್ಲಿ ನೀರು ನಿಂತು ವಾಹನ ಸವಾರರು ಸಂಕಷ್ಟ ಅನುಭವಿಸಿದರೆ, ಕೆಲವು ಬಡಾವಣೆಗಳಲ್ಲಿನ ಮನೆಗಳಿಗೆ ನೀರು ನುಗ್ಗಿ ನಿವಾಸಿಗಳು ಪರಿತಪಿಸಿದರು.

ಮಳೆಯಿಂದಾಗಿ ವಿಲ್ಸನ್ ಗಾರ್ಡನ್ ಮುಖ್ಯರಸ್ತೆ ಜಲಾವೃತಗೊಂಡಿದ್ದು, ರಸ್ತೆಯಲ್ಲೇ ಬಸ್ಸು ಕಾರುಗಳು ಕೆಟ್ಟು ನಿಂತವು. ಸಮೀಪ-ದಲ್ಲಿರುವ ಲೋಕೋಪಯೋಗಿ ಇಲಾಖೆಯ ವಸತಿಗೃಹಗಳಿಗೆ ನೀರು ನುಗ್ಗಿದ್ದು, ನಿವಾಸಿಗಳು ಪರದಾಡುವಂತಾಯಿತು.

ಮಾಗಡಿ ರಸ್ತೆಯ ಕೆ.ಪಿ.ಅಗ್ರಹಾರದ 7ನೇ ಅಡ್ಡರಸ್ತೆ ಸಂಪೂರ್ಣ ಜಲಾವೃತಗೊಂಡು ಅಕ್ಕಪಕ್ಕದ ಮನೆಗಳಿಗೆ ನೀರು ನುಗ್ಗಿದೆ. ರಸ್ತೆಯಲ್ಲಿ ನಿಲ್ಲಿಸಿದ್ದ ವಾಹನಗಳು ನೀರಿನಲ್ಲಿ ತೇಲಿದವು. ಮನೆಗಳ ಬೇಸ್‌ಮೆಂಟ್ ಪ್ರದೇಶಕ್ಕೆ ನೀರು ನುಗ್ಗಿತು. ನೀರನ್ನು ಹೊರ ಹಾಕಲು ಹರಸಾಹಸಪಡಬೇಕಾಯಿತು.

ಶಾಂತಿನಗರದ ಬಿಎಂಟಿಸಿ ಬಸ್ ನಿಲ್ದಾಣಕ್ಕೆ ನೀರು ನುಗ್ಗಿ ಬಸ್‌ಗಳು ಸಂಚರಿಸದಂತಾ-ಯಿತು. ಕೋರಮಂಗಲ ಕಣಿವೆಯಿಂದ ನೀರು ಹಿಮ್ಮುಖವಾಗಿ ಹರಿದಿದ್ದರಿಂದ ಬಸ್ ನಿಲ್ದಾಣದಲ್ಲಿ ನೀರು ತುಂಬಿಕೊಂಡಿತು.

ಥಣಿಸಂದ್ರದ ಎಂ.ಎಸ್.ರಾಮಯ್ಯ ನಾರ್ತ್ ಸಿಟಿ ರಸ್ತೆಗಳು ಜಲಾವೃತಗೊಂಡಿದ್ದವು. ಮಾನ್ಯತಾ ಟೆಕ್ ಪಾರ್ಕ್‌ಗೆ ಮಳೆ ನೀರು ನುಗ್ಗಿ ಅವಾಂತರ ಸೃಷ್ಟಿಯಾಗಿತ್ತು. ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ತುಂಬಿಕೊಂಡಿದ್ದ ಮಳೆ ನೀರನ್ನು ಅಗ್ನಿಶಾಮಕ ದಳದವರು ಹೆಚ್ಚುವರಿ ಮೋಟಾರ್‌ಗಳ ಮೂಲಕ ತೆರವು ಗೊಳಿಸಿದರು. ನಿರ್ಮಾಣ ಹಂತದಲ್ಲಿರುವ ಸಿಲ್ಕ್ ಬೋರ್ಡ್ ಮೆಟ್ರೊ ನಿಲ್ದಾಣಕ್ಕೆ ಮಳೆ ನೀರು ನುಗ್ಗಿದೆ. ನಿಲ್ದಾಣದ ಎದುರಿನ ರಸ್ತೆಯಲ್ಲೂ ನೀರು ನಿಂತು ವಾಹನಸವಾರರು ಪರದಾಡುವಂತಾಯಿತು.

ಚಾಮರಾಜಪೇಟೆ, ಅರಮನೆ ಮೈದಾನದ ಬಳಿ ಬೃಹತ್ ಮರಗಳು ಧರೆಗುರುಳಿದ್ದು, ಸಂಚಾರಕ್ಕೆ ತೊಂದರೆಯಾಯಿತು.

ಆಡಳಿತಾಧಿಕಾರಿ, ಮುಖ್ಯ ಆಯುಕ್ತರಿಂದ ಪರಿಶೀಲನೆ: ಬಿಬಿಎಂಪಿ ಆಡಳಿತಾಧಿಕಾರಿ ತುಷಾರ್ ಗಿರಿನಾಥ್ ಹಾಗೂ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಮಳೆಯಿಂದ ಜಲಾವೃತವಾದ ಸ್ಥಳಗಳಿಗೆ ಸೋಮವಾರ ಭೇಟಿ ನೀಡಿ ಪರಿಶೀಲಿಸಿದರು.

ಮಹದೇವಪುರ ವಲಯದ ಸಾಯಿ ಲೇಔಟ್‌ನಲ್ಲಿ ಟ್ರ್ಯಾಕ್ಟರ್‌ನಲ್ಲಿ ಸಂಚರಿಸಿದ ತುಷಾರ್ ಗಿರಿನಾಥ್, 'ಸಾಯಿಲೇಔಟ್ ಹಾಗೂ ಪಕ್ಕದಲ್ಲಿರುವ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜಲಾವೃತವಾಗಿದೆ. ಗೆದ್ದಲಹಳ್ಳಿ ಬಳಿ ರೈಲ್ವೆ ವೆಂಟ್ ವಿಸ್ತರಣೆ ಮಾಡಬೇಕಿದ್ದು, ಅದಕ್ಕೆ ಈಗಾಗಲೇ ಕಾರ್ಯಾದೇಶ ನೀಡಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸಲು ಸೂಚಿಸಲಾಗಿದೆ' ಎಂದರು.

'ಶ್ರೀಸಾಯಿ ಲೇಔಟ್‌ನಲ್ಲಿ ನೀರಿನ ಮಟ್ಟ ತಗ್ಗಲು ಸ್ವಲ್ಪ ಸಮಯ ಬೇಕಾಗುತ್ತದೆ. ಇವತ್ತು ರಾತ್ರಿ ಮತ್ತೆ ಮಳೆಯಾದರೆ ಮುನ್ನೆಚ್ಚರಿಕೆ ಕ್ರಮವಾಗಿ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳ-ಲಾಗಿದೆ. ಪ್ರವಾಹ ಸ್ಥಳಗಳಿಂದ ಹೊರಬರಲು ನಿವಾಸಿಗಳಿಗೆ ಸೂಚನೆ ನೀಡಲಾಗಿದೆ. ಹೊರ ಬರದೆ ಇರುವ ಸಾರ್ವಜನಿಕರಿಗೆ ಸ್ಥಳದಲ್ಲಿಯೇ ಆಹಾರ, ನೀರು ಅಗತ್ಯ ವಸ್ತುಗಳನ್ನು ತಲುಪಿಸುತ್ತೇವೆ' ಎಂದು ತಿಳಿಸಿದರು.

'ಸಾಯಿ ಲೇಔಟ್‌ನಲ್ಲಿ ಅಕ್ರಮ ನಿರ್ಮಾಣ-ಗಳಿದ್ದು, ಅವುಗಳಿಂದ ಸಮಸ್ಯೆ ಉಂಟಾಗಿದೆ' ಎಂದು ಬಿಡಿಎ ಆಯುಕ್ತ ಜಯರಾಂ ತಿಳಿಸಿದರು. 'ಅಕ್ರಮ ಕಟ್ಟಡಗಳ ತೆರವಿಗೆ ಕ್ರಮ ಕೈಗೊಳ್ಳುತ್ತೀರಾ' ಎಂಬ ಸುದ್ದಿಗಾರರ ಪ್ರಶ್ನೆಗೆ ಜಯರಾಂ ನಿರುತ್ತರರಾದರು.

ಬೆಳ್ಳಂದೂರು ಪರಿಶೀಲನೆ: ಮುಖ್ಯ ಆಯುಕ್ತರಾದ ಮಹೇಶ್ವರ್ ರಾವ್ ಅವರು ಬೆಳ್ಳಂದೂರು ಕೆರೆಯ ಒಳಹರಿವಿನ ಬಳಿ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

'ಕೆ-100, ಕೆ-200 ಬೃಹತ್ ನೀರುಗಾಲುವೆಗಳು ಸಂಪರ್ಕ ಕಲ್ಪಿಸುವ ಸ್ಥಳದಲ್ಲಿ ಅಗಲ ಕಡಿಮೆ ಇರುವುದರಿಂದ, ನೀರಿನ ಹರಿವಿನ ಮಟ್ಟ ಹೆಚ್ಚಾಗಿ ಮಡಿವಾಳದ ಡಾಲರ್ಸ್ ಕಾಲೊನಿ, ಕೋರಮಂಗಲದ 6ನೇ ಬ್ಲಾಕ್, ಈಜೀಪುರ ಪ್ರದೇಶಗಳು ಜಲಾವೃತವಾಗಿವೆ' ಎಂದು ತಿಳಿಸಿದರು.

ಮುಂದುವರಿದ ಮಳೆ: ಸೋಮವಾರ ಮಧ್ಯಾಹ್ನ ಆರಂಭವಾದ ಮಳೆ, ಸಂಜೆಯವರೆಗೆ ಸುರಿಯಿತು. ದೊರೆಸಾನಿ ಪಾಳ್ಯ, ಬಿಳೇಕಹಳ್ಳಿ, ಹಂಪಿನಗರದಲ್ಲಿ ತಲಾ 3.4 ಸೆಂ.ಮೀ ಮಳೆಯಾಯಿತು. ಕೋರಮಂಗಲ, ವಿದ್ಯಾಪೀಠ, ಕೆಂಗೇರಿ, ರಾಜರಾಜೇಶ್ವರಿನಗರ, ನಾಗಪುರ, ಬಸವೇಶ್ವರನಗರ, ಕೊಡಿಗೇಹಳ್ಳಿ, ರಾಜಾಜಿನಗರ, ಹೆಮ್ಮಿಗೆಪುರ, ಅರಕೆರೆ, ಹೆಮ್ಮಿಗೆಪುರ, ನಂದಿನಿ ಲೇಔಟ್ ಸುತ್ತಮುತ್ತ ಪ್ರದೇಶದಲ್ಲಿ ತಲಾ 2 ಸೆಂ.ಮೀ ಮಳೆಯಾಯಿತು.

ಎಲ್ಲೆಲ್ಲಿ ಎಷ್ಟು ಮಳೆ?

(ಭಾನುವಾರ ರಾತ್ರಿಯಿಂದ ಸೋಮವಾರ ಮುಂಜಾನೆವರೆಗೆ– ಸೆಂ.ಮೀನಲ್ಲಿ)

ಕೆಂಗೇರಿ	13.2
ಯಲಹಂಕ	10.35
ಅಟ್ಟೂರು	10.35
ಚೌಡೇಶ್ವರಿ	10.35
ಕೋರಮಂಗಲ	9.65
ಬೊಮ್ಮನಹಳ್ಳಿ	9.65
ಬಸವೇಶ್ವರನಗರ	9.45
ಅಗ್ರಹಾರ ದಾಸರಹಳ್ಳಿ	9.45
ಎಚ್‌ಎಎಲ್ ವಿಮಾನ ನಿಲ್ದಾಣ	9.3
ಕುಮಾರಸ್ವಾಮಿ ಲೇಔಟ್	9.25
ಬಸವನಗುಡಿ	9.25
ವಿದ್ಯಾಪೀಠ	9.25
ಮಾರತ್ತಹಳ್ಳಿ	9.15
ಹಂಪಿ ನಗರ	9.1
ಗಾಳಿ ಆಂಜನೇಯ ದೇವಸ್ಥಾನ	9.1
ಬಾಗಲಕುಂಟೆ	8.9
ಮಾರುತಿ ಮಂದಿರ	8.9
ಕಾಟನ್ ಪೇಟೆ	8.9
ಚಾಮರಾಜಪೇಟೆ	8.8
ವಿಶ್ವೇಶ್ವರಪುರ	8.8
ಸಂಪಂಗಿರಾಮನಗರ	8.8
ಯಶವಂತಪುರ	8.8
ಶೆಟ್ಟಿಹಳ್ಳಿ	8.8
ಬ್ಯಾಟರಾಯನಪುರ	8.65
ಜಕ್ಕೂರು	8.65
ಪೂರ್ವ ಬಾಣಸವಾಡಿ	8.5
ಎಚ್‌ಬಿಆರ್ ಲೇಔಟ್	8.5
ನಾಗಾಪುರ	8.4
ರಾಜರಾಜೇಶ್ವರಿನಗರ	7.95
ಹೊರಮಾವು	7.95
ಜ್ಞಾನಭಾರತಿ	7.95
ಸಂಪಂಗಿರಾಮನಗರ	7.85
ರಾಜರಾಜೇಶ್ವರಿನಗರ	7.8
ವನ್ನರಪೇಟ್	7.55
ಎಚ್‌ಎಸ್‌ಆರ್ ಲೇಔಟ್	7.3
ಮನೋರಾಯನಪಾಳ್ಯ	7.2
ಪುಲಕೇಶಿನಗರ	7.2
ರಾಧಾಕೃಷ್ಣ ದೇವಸ್ಥಾನ ವಾರ್ಡ್	7.0
ಕೊಡಿಗೇಹಳ್ಳಿ	7.0
ವಿ.ನಾಗೇನಹಳ್ಳಿ	7.0
ಪೀಣ್ಯ ಕೈಗಾರಿಕಾ ಪ್ರದೇಶ	6.85
ಹೆಗ್ಗೇನಹಳ್ಳಿ	6.85
ಜಕ್ಕೂರು	6.75
ನಾಗರಬಾವಿ	6.55
ಹೇರೋಹಳ್ಳಿ	6.55
ನಂದಿನಿ ಲೇಔಟ್	6.2
ಮಾರಪ್ಪನಪಾಳ್ಯ	6.2
ಸಾರಕ್ಕಿ	6.15
ಕೋಣನಕುಂಟೆ	6.15
ದೊರೆಸಾನಿಪಾಳ್ಯ	6.15
ಬೆಳ್ಳಂದೂರು	6.1
ಎಚ್.ಗೊಲ್ಲಹಳ್ಳಿ	6.05
ಹೆಮ್ಮಿಗೆಪುರ	6.05
ಪಟ್ಟಾಭಿರಾಮನಗರ	5.9
ಲಕ್ಕಸಂದ್ರ	5.9
ನಾಯಂಡಹಳ್ಳಿ	5.8
ಕೊನೇನ ಅಗ್ರಹಾರ	54.5
ರಾಜಮಹಲ್ ಗುಟ್ಟಹಳ್ಳಿ	5.1
ದಯಾನಂದನಗರ	5.0
ಬಿಟಿಎಂ ಲೇಔಟ್	5.0
ಬಿಳೇಕಹಳ್ಳಿ	5.0
ರಾಜಾಜಿನಗರ	5.0

27 ಮರ ಧರೆಗೆ; 29 ಕೆರೆಗಳು ಭರ್ತಿ

ಬೆಂಗಳೂರು: ನಗರದಲ್ಲಿ 27 ಮರಗಳು ಹಾಗೂ 43 ರೆಂಬೆಗಳು ಧರೆಗುರುಳಿದ್ದು, 30 ತಂಡಗಳು ತೆರವು ಕಾರ್ಯಾಚರಣೆ ನಡೆಸುತ್ತಿವೆ. ಯಲಹಂಕ ವಲಯ ವ್ಯಾಪ್ತಿಯಲ್ಲಿ 29 ಕೆರೆಗಳಿದ್ದು, ಎಲ್ಲಾ ಕೆರೆಗಳೂ ಸಂಪೂರ್ಣ ತುಂಬಿವೆ ಎಂದು ಬಿಬಿಎಂಪಿ ತಿಳಿಸಿದೆ.

ಮಳೆಯಿಂದಾಗುವ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಯಾವುದೇ ದೂರುಗಳಿದ್ದಲ್ಲಿ ನಾಗರಿಕರು ಬಿಬಿಎಂಪಿ ಸಹಾಯವಾಣಿ 1533ಗೆ ಕರೆ ಮಾಡಿ ಮಾಹಿತಿ ನೀಡಬಹುದು.

ಮಹದೇವಪುರ ವಲಯದಲ್ಲಿ ಸುಮಾರು 10 ಕಡೆ ಜಲಾವೃತವಾಗಿದೆ. ಸಾಯಿ ಲೇಔಟ್ ಪ್ರದೇಶವು ಸಂಪೂರ್ಣ ಜಲಾವೃತವಾಗಿದ್ದು, ಆರು ಟ್ರ್ಯಾಕ್ಟರ್, ಎರಡು ಜೆಸಿಬಿ, 35 ಸಿಬ್ಬಂದಿ, ಮೂರು ಅಗ್ನಿ ಶಾಮಕ ವಾಹನ, ಎಸ್‌ಡಿಆರ್‌ಎಫ್ ತಂಡದಿಂದ ಎರಡು ಬೋಟ್ ಮೂಲಕ ಸುರಕ್ಷಿತ ಕ್ರಮ ಕೈಗೊಳ್ಳಲಾಗುತ್ತಿದೆ. ಸ್ಥಳೀಯ ನಿವಾಸಿಗಳಿಗೆ ಉಪಾಹಾರ, ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಬಿಬಿಎಂಪಿ ತಿಳಿಸಿದೆ.

ಮಾರತ್‌ಹಳ್ಳಿಯ ದೀಪ ನರ್ಸಿಂಗ್ ಹೋಂ, ಚಿನ್ನ-ಪ್ಪನಹಳ್ಳಿ 5ನೇ ಕ್ರಾಸ್, ಪಣತ್ತೂರು ರೈಲ್ವೆ ಕೆಳಸೇತುವೆ, ಗ್ರೀನ್ ಹುಡ್, ಇಬ್ಬಲೂರು ಜಂಕ್ಷನ್, ಬಾಲಾಜಿ ಲೇಔಟ್ - ಕೊತ್ತನೂರು, ಎ. ನಾರಾಯಣಪುರದ ಕೃಷ್ಣ ನಗರ, ಸುನೀಲ್ ಲೇಔಟ್, ಹರಳೂರು, ಬಿ.ಎಸ್.ಪಿ ಲೇಔಟ್‌ನ ಕಸವನಹಳ್ಳಿ ಕಡೆಗಳಲ್ಲಿ ರಸ್ತೆಗಳ ಮಳೆ ನೀರು ಮತ್ತು ಮನೆಗಳಿಗೆ ನೀರು ನುಗ್ಗಿದ್ದು, ಬಹುತೇಕ ಕಡೆ ಸಮಸ್ಯೆ ಬಗೆಹರಿಸಲಾಗಿದೆ.

ಪೂರ್ವ ವಲಯದಲ್ಲಿ ರಾಜಕಾಲುವೆಯಲ್ಲಿ ನೀರು ತುಂಬಿ ಹಿಮ್ಮುಖವಾಗಿ ಚಲಿಸಿದ್ದು, ಎಚ್‌ಬಿಆರ್ 5, 6, 7, 8ನೇ ಬ್ಲಾಕ್, ಬೈರಸಂದ್ರ ಲೇಔಟ್, ಕೆಂಪೇಗೌಡ ರಸ್ತೆ, ಕಾಮರಾಜ ನಗರ ಪ್ರದೇಶಗಳು ಜಲಾವೃತವಾಗಿವೆ. ನೀರು ಹೊರ ಹಾಕಲು ನಿರ್ವಹಣಾ ತಂಡಗಳು, ಆರು ಟ್ರ್ಯಾಕ್ಟರ್‌ಗಳ ತಂಡ, ಎರಡು ಜೆಸಿಬಿಗಳು ಹಾಗೂ 10 ಪಂಪ್‌ಗಳು ಕಾರ್ಯನಿರ್ವಹಿಸುತ್ತಿವೆ.

ಬೊಮ್ಮನಹಳ್ಳಿ ವಲಯದ ಎಚ್.ಎಸ್.ಆರ್ ಲೇಔಟ್ 6 ಮತ್ತು 7ನೇ ಸೆಕ್ಟರ್ ಮತ್ತು ಬನ್ನೇರುಘಟ್ಟ ಬಿಳೇಕಹಳ್ಳಿ ಸಿಗ್ನಲ್ ರಸ್ತೆಯಲ್ಲಿ ನೀರು ತುಂಬಿದ್ದು, ಯಲಚೇನಹಳ್ಳಿಯಲ್ಲಿ ಮನೆಗಳಿಗೆ ನೀರು ನುಗ್ಗಿದೆ. ನಿರ್ವಹಣಾ ತಂಡ ಹಾಗೂ ಪಂಪ್‌ಗಳ ವ್ಯವಸ್ಥೆ ಮಾಡಿ ಸಮಸ್ಯೆ ಬಗೆಹರಿಸಲಾಗಿದೆ.

ಬೆಳ್ಳಂದೂರು ಬಳಿ ಮಳೆ ನೀರಿನ ಹರಿವಿನ ಮಟ್ಟವನ್ನು ಕಡಿಮೆ ಮಾಡಲು ತಾತ್ಕಾಲಿಕವಾಗಿ ಜೆಸಿಬಿ ಮೂಲಕ ಬಂಡ್ ತೆರವುಗೊಳಿಸಿ ನೀರು ಸರಾಗವಾಗಿ ಹರಿದು ಹೋಗಲು ಅನುವು ಮಾಡಲಾಗಿದೆ. ವೃಷಭಾವತಿ ವ್ಯಾಲಿ ಗಾಳಿ ಆಂಜನೇಯ ದೇವಸ್ಥಾನದ ಬಳಿ ಜಲಾವೃತವಾಗಿ ಮನೆಗಳಿಗೆ ನೀರು ನುಗ್ಗಿದೆ.

ಯಲಹಂಕ ವಲಯದ ಚೌಡೇಶ್ವರಿ ನಗರದ ಅಟ್ಟೂರು ವ್ಯಾಪ್ತಿಯಲ್ಲಿ ಸುಮಾರು 15 ಮನೆಗಳಿಗೆ, ಡಿಫೆನ್ಸ್ ಲೇಔಟ್ ಹಾಗೂ ದ್ವಾರಕಾ ನಗರದಲ್ಲಿ ಸುಮಾರು ಐದು ಮನೆಗಳಿಗೆ ನೀರು ನುಗ್ಗಿತ್ತು.

ರಾಜರಾಜೇಶ್ವರಿ ನಗರ ವಲಯದ ಐಡಿಯಲ್ ಹೋಮ್ಸ್ 1ನೇ ಎ ಕ್ರಾಸ್ ವೃಷಭಾವತಿ ವ್ಯಾಲಿಯಲ್ಲಿ ನೀರಿನ ಮಟ್ಟ ಹೆಚ್ಚಾಗಿ ಹಿಮ್ಮುಖವಾಗಿ ಚಲಿಸಿದ ಪರಿಣಾಮ ಮೂರು ಹಸು, ಒಂದು ಕರು ಹಾಗೂ ಒಂದು ಎಮ್ಮೆ ಸೇರಿ 5 ಜಾನುವಾರಗಳು ಮೃತಪಟ್ಟಿವೆ. ಅಲ್ಲದೆ, 12 ಮನೆಗಳಿಗೆ ನೀರು ನುಗ್ಗಿದ್ದು, ಸೈಡ್ ಡ್ರೈನ್‌ಗಳನ್ನು ಸ್ವಚ್ಛಗೊಳಿಸಿ ನೀರು ಹರಿದು ಹೋಗುವಂತೆ ವ್ಯವಸ್ಥೆ ಮಾಡಲಾಗಿದೆ.

ಕೆಂಗೇರಿ ಬಳಿಯ ಕೋಟೆ ಲೇಔಟ್‌ನಲ್ಲಿ ಹಲವು ಮನೆಗಳಿಗೆ ನೀರು ನುಗ್ಗಿದ್ದು, ನಾಲ್ಕು ಪಂಪ್‌ಗಳನ್ನು ಅಳವಡಿಸಿ ನೀರು ತೆರವು ಕಾರ್ಯ ಮಾಡಲಾಗಿದೆ.

ಎಚ್‌ಬಿಆರ್ ಲೇಔಟ್‌ನಲ್ಲಿ ರಸ್ತೆ ಜಲಾವೃತಗೊಂಡಿರುವುದು

ಬಸ್ ಮೇಲೆ ಬಿದ್ದ ಮರದ ಕೊಂಬೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ ಭವನಕ್ಕೆ ಹೋಗುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಮೇಲೆ ಮರದ ಬೃಹತ್ ಕೊಂಬೆ ಮುರಿದು ಬಿದ್ದಿದೆ. ತಕ್ಷಣವೇ ಚಾಲಕ ಬಸ್ ಅನ್ನು ಬಲಕ್ಕೆ ಚಲಾಯಿಸುವ ಮೂಲಕ ಪ್ರಾಣ ಹಾನಿ ತಪ್ಪಿಸಿದ್ದಾರೆ.

ಪ್ಯಾಲೆಸ್ ಗುಟ್ಟಹಳ್ಳಿಯ ಅರಮನೆ ಮೈದಾನದ ಮುಂಭಾಗ ಗೇಟ್ ನಂಬರ್ 7ರ ಬಳಿ ಬಸ್ ಚಲಿಸುತ್ತಿತ್ತು. ಈ ವೇಳೆ ರಸ್ತೆ ಬದಿಯ ಮರದ ಕೊಂಬೆ ಬಸ್ ಮೇಲೆ ಬಿದ್ದಿದೆ. ಕೊಂಬೆ ಬೀಳುತ್ತಿರುವುದನ್ನು ಗಮನಿಸಿದ ಚಾಲಕ ನಾಗರಾಜು, ರಸ್ತೆಯ ಬಲಕ್ಕೆ ಬಸ್ ತಿರುಗಿಸಿದ್ದಾರೆ. ಹೀಗಾಗಿ ಕೊಂಬೆ ಬಸ್‌ನ ಕನ್ನಡಿ ಮೇಲೆ ಬಿದ್ದಿದೆ.

'ಒಂದು ವೇಳೆ ಮರದ ಕೊಂಬೆ ಬಸ್ ಮೇಲೆ ಬಿದ್ದಿದ್ದರೆ, ಪ್ರಾಣ ಹಾನಿ ಸಂಭವಿಸುವ ಸಾಧ್ಯತೆ ಇತ್ತು. ಬಸ್‌ನಲ್ಲಿ 67 ಪ್ರಯಾಣಿಕರಿದ್ದು, ಎಲ್ಲರೂ ಸುರಕ್ಷಿತ-ವಾಗಿದ್ದಾರೆ. ಅವರಿಗೆ ಬೇರೆ ಬಸ್ ವ್ಯವಸ್ಥೆ ಮಾಡಿ ಕಳುಹಿಸಲಾಗಿದೆ' ಎಂದು ಚಾಲಕ ನಾಗರಾಜ್ ತಿಳಿಸಿದರು.

ಈ ಘಟನೆಯಿಂದ ಬೆಂಗ-ಳೂರು-ಬಳ್ಳಾರಿ ರಸ್ತೆಯಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು. ಬಿಬಿಎಂಪಿ ಸಿಬ್ಬಂದಿ ಸ್ಥಳಕ್ಕೆ ಬಂದು ಮರದ ಕೊಂಬೆಗಳನ್ನು ತೆರವುಗೊಳಿಸಿದ್ದಾರೆ. ಸಂಚಾರ ಪೊಲೀಸರು ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಸಿಲ್ಕ್ ಬೋರ್ಡ್ ಜಂಕ್ಷನ್‌ನ ಮೆಟ್ರೊ ನಿಲ್ದಾಣ ಬಳಿ ಪ್ರವಾಹ ಸ್ವರೂಪದಲ್ಲಿ ನೀರು ನಿಂತಿರುವುದು. ಸಂಚಾರಕ್ಕೆ ಅನುವು ಮಾಡಿಕೊಡಲು ಅಗ್ನಿಶಾಮಕ ಸಿಬ್ಬಂದಿ ಶ್ರಮಿಸಿದರು.

ಬೊಮ್ಮನಹಳ್ಳಿ: ಮನೆಗಳಿಗೆ ನುಗ್ಗಿದ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾನುವಾರ ತಡರಾತ್ರಿ ಮತ್ತು ಸೋಮವಾರ ಮುಂಜಾನೆ ಸುರಿದ ಭಾರಿ ಮಳೆಯಿಂದಾಗಿ ಹೆಚ್‌ಎಸ್‌ಆರ್ ಬಡಾವಣೆ, ಬಂಡೇಪಾಳ್ಯ, ಮಂಗಮ್ಮನಪಾಳ್ಯದಲ್ಲಿ ಮನೆಗಳಿಗೆ ನೀರು ನುಗ್ಗಿ ಜನಜೀವನ ಅಸ್ತವ್ಯಸ್ತವಾಗಿದೆ.

ಹೆಚ್‌ಎಸ್‌ಆರ್ ಬಡಾವಣೆಯ ಸೆಕ್ಟರ್ 6 ಮತ್ತು 7ರಲ್ಲಿ ಹಲವು ಮನೆಗಳ ಸೆಲ್ಲರ್‌ಗಳಿಗೆ ನೀರು ನುಗ್ಗಿದೆ. ಲಾರೆನ್ಸ್ ಶಾಲೆಯ ಹಿಂಭಾಗದಲ್ಲಿರುವ ಉದ್ಯಾನವು ಪೂರ್ತಿ ಜಲಾವೃತವಾಗಿದೆ. ಹಲವು ಪ್ರಮುಖ ರಸ್ತೆಗಳು ಮಳೆಯ ರಭಸಕ್ಕೆ ಕುಸಿದಿವೆ.

ಬಂಡೇಪಾಳ್ಯದ ಅಂಬೇಡ್ಕರ್ ನಗರ, ಮಂಗ-ಮ್ಮನಪಾಳ್ಯದ ಮದೀನಾ ನಗರದಲ್ಲಿ ಹಲವು ಮನೆಗಳಿಗೆ ಕೊಳಚೆ ನೀರು ನುಗ್ಗಿದ್ದರಿಂದ ನಿವಾಸಿಗಳು ರಾತ್ರಿಯಿಡಿ ನೀರು ಹೊರಹಾಕುವಲ್ಲಿ ನಿರತರಾಗಿದ್ದರು. ಒಳಚರಂಡಿ ನೀರು ಮನೆಯ ಸಂಪ್‌ಗಳಿಗೆ ಸೇರಿದ್ದರಿಂದ, ಜನರು ಕುಡಿಯಲೂ ನೀರಿಲ್ಲದೇ ಪರದಾಡಿದರು.

ಹೊಸೂರು ರಸ್ತೆಯ ಸಿಲ್ಕ್ ಬೋರ್ಡ್ ಜಂಕ್ಷನ್ ಬಳಿ ಪ್ರವಾಹದ ರೀತಿಯಲ್ಲಿ ನೀರು ನಿಂತಿದ್ದರಿಂದ ವಾಹನ ದಟ್ಟಣೆ ಹೆಚ್ಚಾಗಿತ್ತು. ಬಿಬಿಎಂಪಿ ಮತ್ತು ಅಗ್ನಿಶಾಮಕ ಸಿಬ್ಬಂದಿ ನೀರು ಹೊರಹಾಕಲು ಹರಸಾಹಸಪಟ್ಟರು.

'ಹೆಚ್‌ಎಸ್‌ಆರ್ ಬಡಾವಣೆಯಲ್ಲಿ ಚರಂಡಿಗಳ ಹೂಳು ತೆಗೆದಿಲ್ಲ. ರಸ್ತೆಗಳಿಗೆ ಸರಿಯಾಗಿ ಡಾಂಬರೀಕರಣ ಸರಿಯಾಗಿಲ್ಲ. ಇದರಿಂದ ಮಳೆನೀರು ಸರಾಗವಾಗಿ ನೀರುಗಾಲುವೆಗೆ ಹರಿದು ಹೋಗದೇ ಮನೆಗಳಿಗೆ ನುಗ್ಗುತ್ತಿದೆ. ಮಳೆಗಾಲಕ್ಕೂ ಮುನ್ನವೇ ಚರಂಡಿಗಳ ಹೂಳು ತೆಗೆಯಬೇಕು. ಆದರೆ ಅಧಿಕಾರಿಗಳು ಕಾಲಹರಣ ಮಾಡಿದ್ದಾರೆ' ಎಂದು ಹೆಚ್‌ಎಸ್‌ಆರ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಟಿ. ವಾಸುದೇವರೆಡ್ಡಿ ಆರೋಪಿಸಿದರು.

'ಮಂಗಮ್ಮನಪಾಳ್ಯದ ಮದಿನಾ ನಗರದ ವೆಂಕೋಜಿರಾವ್ ಖಾನೆ ಮತ್ತು ಪಾಪುಲರ್ ಕಾಲೊನಿ ವ್ಯಾಪ್ತಿಯಲ್ಲಿ ಒಳಚರಂಡಿ ಸೇರಿ ಯಾವುದೇ ಅಭಿವೃದ್ಧಿ ಕಾರ್ಯಗಳು ಆಗಿಲ್ಲ' ಎಂದು ನಿವಾಸಿ ಸಯ್ಯದ್ ನಜೀರ್ ದೂರಿದರು.

'ಬಂಡೇಪಾಳ್ಯದಲ್ಲಿ ಒಳಚರಂಡಿ ನೀರು ಮನೆಗಳಿಗೆ ನುಗ್ಗಿದೆ. ಅಧಿಕಾರಿಗಳಿಗೆ ಕರೆ ಮಾಡಿದರೆ 'ನಾವೆಲ್ಲಾ ಹೆಚ್‌ಎಸ್‌ಆರ್ ಲೇಔಟ್‌ನಲ್ಲಿದ್ದೇವೆ' ಎನ್ನುತ್ತಿದ್ದಾರೆ. ಹಾಗಿದ್ದರೆ ನಾವು ಮನುಷ್ಯರಲ್ಲವೇ? ಇದುವರೆಗೂ ಒಬ್ಬ ಅಧಿಕಾರಿಯೂ ಇತ್ತ ತಿರುಗಿ ನೋಡಿಲ್ಲ ಎಂದು ಬಂಡೇಪಾಳ್ಯ ನಿವಾಸಿ ನೇತ್ರಾವತಿ ಆಕ್ರೋಶ ವ್ಯಕ್ತಪಡಿಸಿದರು.

ಸಂಗೊಳ್ಳಿ ರಾಯಣ್ಣ ಶೌರ್ಯಭೂಮಿ ಉದ್ಘಾಟನಾ ಸಮಾರಂಭ

ಹಿಂದುಳಿದ ವರ್ಗಗಳ ಕಲ್ಯಾಣ

- ಸ್ವಯಂ ಉದ್ಯೋಗ ಸಾಲ ಯೋಜನೆ ಅಡಿಯಲ್ಲಿ 9,561 ಫಲಾನುಭವಿಗಳಿಗೆ ಒಟ್ಟು ₹95.42 ಕೋಟಿ ಸಾಲ ಮತ್ತು ಸಹಾಯಧನ ನೀಡಲಾಗಿದೆ
- ಅರಿವು ಶೈಕ್ಷಣಿಕ ಸಾಲ ಯೋಜನೆ ಅಡಿಯಲ್ಲಿ 5,822 ಫಲಾನುಭವಿಗಳಿಗೆ ಒಟ್ಟು ₹53.50 ಕೋಟಿ ಸಾಲ ಒದಗಿಸಲಾಗಿದೆ
- 2024–25ನೇ ಸಾಲಿನ ಬಜೆಟ್ ಘೋಷಣೆಯಂತೆ, ಹಿಂದುಳಿದ ವರ್ಗಗಳ 150 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಆರಂಭಕ್ಕೆ ಕ್ರಮ. ಒಟ್ಟು 825 ಹುದ್ದೆಗಳ ನೇಮಕಾತಿಗೆ ಮಂಜೂರಾತಿ
- ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ 6,674 ಕೊಳವೆಬಾವಿಗಳನ್ನು ಕೊರೆಯಿಸಲು ಮಂಜೂರಾತಿ ನೀಡಲಾಗಿದೆ

ಸಮಾಜ ಕಲ್ಯಾಣ ಇಲಾಖೆ

- ಪರಿಶಿಷ್ಟ ಜಾತಿಗಳ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆ (ಟಿಎಸ್‌ಪಿ) ಅಡಿಯಲ್ಲಿ 2023–24ರಲ್ಲಿ ₹35,221 ಕೋಟಿ ಹಂಚಿಕೆ ಹಾಗೂ ₹34,245 ಕೋಟಿ ವೆಚ್ಚ. 2024–25ನೇ ಸಾಲಿನಲ್ಲಿ ₹39,957 ಕೋಟಿ ಹಂಚಿಕೆ, ₹38,591 ಕೋಟಿ ವೆಚ್ಚ
- ಸಮಾಜ ಕಲ್ಯಾಣ ಇಲಾಖೆಗೆ 2023–24ರಲ್ಲಿ ₹5,264 ಕೋಟಿ ಹಂಚಿಕೆಯಾಗಿದ್ದು, ₹5,117 ಕೋಟಿ ಬಿಡುಗಡೆ. 2024–25ರಲ್ಲಿ ₹6,192 ಕೋಟಿ ಹಂಚಿಕೆ ಮತ್ತು ₹5,969 ಕೋಟಿ ಬಿಡುಗಡೆ
- 2023-24ರಲ್ಲಿ ಪರಿಶಿಷ್ಟ ಜಾತಿಯ 10.03 ಲಕ್ಷ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ₹221.87 ಕೋಟಿ, 2024–25ರಲ್ಲಿ 9.89 ಲಕ್ಷ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ₹173.45 ಕೋಟಿ ವಿದ್ಯಾರ್ಥಿ ವೇತನ ಮಂಜೂರು ಹಾಗೂ ಅವರ ಬ್ಯಾಂಕ್ ಖಾತೆಗಳಿಗೆ ಜಮೆ
- 2023-24ರಲ್ಲಿ ಪರಿಶಿಷ್ಟ ಜಾತಿಯ 3.41 ಲಕ್ಷ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ₹503.72 ಕೋಟಿ, 2024–25ರಲ್ಲಿ 3.47 ಲಕ್ಷ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ₹619.08 ಕೋಟಿ ವಿದ್ಯಾರ್ಥಿವೇತನ ಮಂಜೂರು ಹಾಗೂ ಅವರ ಬ್ಯಾಂಕ್ ಖಾತೆಗಳಿಗೆ ಜಮೆ

ಅಲ್ಪಸಂಖ್ಯಾತರ ಕಲ್ಯಾಣ

- ಅಲ್ಪಸಂಖ್ಯಾತರ ನಿರ್ದೇಶನಾಲಯಕ್ಕೆ ಎರಡು ಆರ್ಥಿಕ ವರ್ಷಗಳಲ್ಲಿ ಒಟ್ಟು ₹4,431 ಕೋಟಿ ಅನುದಾನ ಹಂಚಿಕೆ
- 2024–25ನೇ ಸಾಲಿನಲ್ಲಿ ಕ್ರೈಸ್ತ ಧರ್ಮೀಯರ ಶೈಕ್ಷಣಿಕ ಸಂಸ್ಥೆಗಳ ಅಭಿವೃದ್ಧಿಗಾಗಿ ₹85 ಕೋಟಿ ನೀಡಲಾಗಿದೆ. ಜೈನ, ಬೌದ್ಧ ಮತ್ತು ಸಿಖ್ ಸಮುದಾಯದ ಅಭಿವೃದ್ಧಿಗಾಗಿ ₹40 ಕೋಟಿ ವೆಚ್ಚ
- ಅಲ್ಪಸಂಖ್ಯಾತ ಸಮುದಾಯಗಳ 12.72 ಲಕ್ಷ ವಿದ್ಯಾರ್ಥಿಗಳಿಗೆ ಒಟ್ಟು ₹416.39 ಕೋಟಿ ವಿದ್ಯಾರ್ಥಿ ವೇತನ
- 2024–25ನೇ ಸಾಲಿನಲ್ಲಿ ಹೊಸದಾಗಿ 50 ಮೌಲಾನಾ ಆಜಾದ್ ಮಾದರಿ ಶಾಲೆಗಳನ್ನು ಆರಂಭಿಸಲಾಗಿದೆ. 2025–26ನೇ ಸಾಲಿನಲ್ಲಿ ಇನ್ನೂ 50 ಶಾಲೆಗಳ ಸ್ಥಾಪನೆಗೆ ಕ್ರಮ

ಜಲಸಂಪನ್ಮೂಲ ಇಲಾಖೆ

- 2023–24ನೇ ಸಾಲಿನಲ್ಲಿ ಇಲಾಖೆಗೆ ಒಟ್ಟು ₹16,369 ಕೋಟಿ, 2024–25ನೇ ಸಾಲಿನಲ್ಲಿ ₹19,121 ಕೋಟಿ ಅನುದಾನ ಹಂಚಿಕೆ
- ಎತ್ತಿನಹೊಳೆ ಯೋಜನೆಯ ಮೊದಲನೇ ಹಂತದ ಏತ ನೀರಾವರಿ ಕಾಮಗಾರಿಗಳು, ವಿದ್ಯುತ್ ಪೂರೈಕೆ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಯೋಜನೆ ಅಡಿಯಲ್ಲಿ ವೇದಾ ಕಣಿವೆ ಮೂಲಕ ವಾಣಿವಿಲಾಸ ಸಾಗರ ಅಣೆಕಟ್ಟೆಗೆ ತಾತ್ಕಾಲಿಕವಾಗಿ ನೀರು ಹರಿಸಲಾಗಿದೆ
- ತಾಂತ್ರಿಕ ದೋಷದಿಂದ ಕೊಚ್ಚಿಹೋಗಿದ್ದ ತುಂಗಭದ್ರಾ ಜಲಾಶಯದ 19ನೇ ಗೇಟ್‌ಗೆ ಒಂದು ವಾರದ ಅವಧಿಯಲ್ಲಿ ಸ್ಟಾಪ್‌ಲಾಗ್ ಅಳವಡಿಸಿ, ನೀರು ವ್ಯರ್ಥವಾಗಿ ಹರಿದುಹೋಗುವುದನ್ನು ತಡೆಯಲಾಗಿದೆ. ದುರ್ಬಲವಾಗಿರುವ ಗೇಟ್‌ಗಳ ಅಳವಡಿಕೆಗೆ ಕ್ರಮ ತೆಗೆದುಕೊಳ್ಳಲಾಗಿದೆ



ಕೆರೆ ಅಭಿವೃದ್ಧಿ ಕಾಮಗಾರಿ ಪರಿಶೀಲನೆ

ಪೌರ ಕಾರ್ಮಿಕರ ಕಾಯಂ ನೇಮಕಾತಿ

ಬಿಬಿಎಂಪಿ (ಈಗ ಗ್ರೇಟರ್ ಬೆಂಗಳೂರು ಪ್ರಾಧಿಕಾರ) ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ 12 ಸಾವಿರಕ್ಕೂ ಹೆಚ್ಚು ಪೌರಕಾರ್ಮಿಕರನ್ನು ರಾಜ್ಯ ಸರ್ಕಾರವು ಕಾಯಂ ನೇಮಕಾತಿ ಮಾಡಿದೆ. ರಾಜ್ಯ ಸರ್ಕಾರದ 'ಡಿ' ದರ್ಜೆಯ ನೌಕರರಿಗೆ ಸಿಗುವ ಸಂಬಳ ಮತ್ತು ಇತರೆ ಸವಲತ್ತುಗಳನ್ನು ಪೌರ ಕಾರ್ಮಿಕರಿಗೂ ನೀಡಿದೆ. ರಾಜ್ಯದ ಎಲ್ಲ 38,000 ಪೌರ ಕಾರ್ಮಿಕರ ಕಾಯಂ ನೇಮಕಾತಿಗೆ ಕ್ರಮ ತೆಗೆದುಕೊಳ್ಳುವುದಾಗಿ ಹೇಳಿದೆ.

12,692 ಕಾಯಂ ನೇಮಕಾತಿ ಪತ್ರ ಪಡೆದ ಪೌರ ಕಾರ್ಮಿಕರು

₹39,000 ಕಾಯಂ ಆದ ಪೌರ ಕಾರ್ಮಿಕರಿಗೆ ದೊರೆಯಲಿರುವ ಸಂಬಳ

ನೂರು ವರ್ಷಗಳಲ್ಲಿ ಮಾಡಲಾಗದ ಕೆಲಸವನ್ನು ನಮ್ಮ ಸರ್ಕಾರ ಕಂದಾಯ ಇಲಾಖೆ ಮೂಲಕ ಮಾಡುತ್ತಿದೆ. 'ಭೂ ಗ್ಯಾರಂಟಿ' ಇತಿಹಾಸದ ಪುಟ ಸೇರಲಿದೆ. ಪ್ರತಿ ವ್ಯಕ್ತಿಗೂ ತಾನು ವಾಸವಿರುವ ಜಾಗವನ್ನು ತನ್ನದಾಗಿಸಿಕೊಳ್ಳುವ ಆಸೆ ಇರುತ್ತದೆ. ಪರಿಶಿಷ್ಟರು, ಹಿಂದುಳಿದವರು ಹಾಗೂ ಭೂರಹಿತವಾಗಿರುವವರು ಕಳೆದ ಹಲವು ವರ್ಷಗಳಿಂದ ದಾಖಲೆ ಇಲ್ಲದೆ ಮನೆ ಕಟ್ಟಿಕೊಂಡು ಪರದಾಡುತ್ತಿದ್ದರು. ಹೀಗಾಗಿ ನಮ್ಮ ಸರ್ಕಾರ ಇದಕ್ಕೆ ಪರಿಹಾರ ನೀಡಿದೆ

ಡಿ.ಕೆ.ಶಿವಕುಮಾರ್
ಉಪ ಮುಖ್ಯಮಂತ್ರಿ

ಪಂಚ ಗ್ಯಾರಂಟಿ ಜತೆ 'ಭೂ ಗ್ಯಾರಂಟಿ'

ಪಂಚ ಗ್ಯಾರಂಟಿ ಯೋಜನೆಗಳನ್ನು ಎರಡು ವರ್ಷ ಯಶಸ್ವಿಯಾಗಿ ಜಾರಿ ಮಾಡಿ ಮೂರನೇ ವರ್ಷಕ್ಕೆ ಮುಂದಡಿ ಇಟ್ಟಿರುವ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ, ಸಣ್ಣ ಹಿಡುವಳಿದಾರರ ಬಹುಕಾಲದ ಸಂಕಷ್ಟಕ್ಕೆ ಪರಿಹಾರ ಕಲ್ಪಿಸಲು 'ಭೂ ಗ್ಯಾರಂಟಿ' ಯೋಜನೆಯನ್ನು ಜಾರಿಗೆ ತಂದಿದೆ.

ಪ್ರತಿ ನಾಗರಿಕನಿಗೂ ಸಮಯಕ್ಕೆ ಸರಿಯಾದ ಸೇವೆಗಳು ಸಿಗಬೇಕು. ಭೂ ಒಡೆತನದಲ್ಲಿ ಸ್ಪಷ್ಟತೆ ಇರಬೇಕು. ಸರ್ಕಾರಿ ಕಚೇರಿಗಳಲ್ಲಿ ಅನಗತ್ಯ ವಿಳಂಬ ಇರಬಾರದು. ಆಡಳಿತವನ್ನು ಸುಧಾರಿಸುವುದಷ್ಟೇ ಅಲ್ಲ, ವಿಶ್ವಾಸ ಮರುಸ್ಥಾಪಿಸಿ, ಎಲ್ಲರನ್ನೂ ಒಳಗೊಂಡ ಪಾರದರ್ಶಕ ಸೌಲಭ್ಯ ಎಲ್ಲರಿಗೂ ಸಿಗಬೇಕು ಎಂಬ ಉದ್ದೇಶದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಶಯದಂತೆ 'ಭೂ ಗ್ಯಾರಂಟಿ' ಯೋಜನೆಯನ್ನು ಜಾರಿಗೆ ತರಲಾಗಿದೆ.

'ಭೂ ಗ್ಯಾರಂಟಿ'ಯಿಂದ ಕಾಗದದ ಕಗ್ಗಂಟು, ದೀರ್ಘ ಕಾಯುವಿಕೆ, ಅನಿಶ್ಚಿತ ಗತಕಾಲ ಈಗ ಮರೆಯಾಗಲಿದೆ. ಆಡಳಿತ ಮರುಹುಟ್ಟು ಪಡೆದು, ಕಂದಾಯ ಸೇವೆಗಳು ಸರಳ, ಸುಲಭ, ಸುಲಲಿತವಾಗಿವೆ. ಭೂ ಒಡೆತನ ಈಗ ನಿರ್ದಿಷ್ಟ ಭದ್ರತೆ ಪಡೆಯಲಿದ್ದು, ಯಾವುದೇ ಗೊಂದಲವಿರುವುದಿಲ್ಲ. ತಂತ್ರಜ್ಞಾನದ ಸ್ಪರ್ಶದಿಂದ ಎಲ್ಲವೂ ಸುಗಮವಾಗಿ, ಕ್ಷಿಪ್ರವಾಗಿ ದಾಖಲೆಗಳು ಸ್ವಯಂ ನವೀಕರಣವಾಗುತ್ತವೆ. ಯಾವುದೇ ರೀತಿಯ ತಪ್ಪು, ವಿಳಂಬಕ್ಕೆ ಇಲ್ಲಿ ಅವಕಾಶವಿರುವುದಿಲ್ಲ. 'ಭೂ ಗ್ಯಾರಂಟಿ' ತಂತ್ರಜ್ಞಾನದ ಸೇವೆ ನೀಡುವುದಷ್ಟೇ ಅಲ್ಲದೆ, ಎಲ್ಲ ರೀತಿಯಲ್ಲೂ ಸನ್ನದ್ಧವಾಗಿ, ನಾಳಿನ ಸವಾಲುಗಳಿಗೆ ಸಿದ್ಧವಾಗಿರುವುದು. ಆಡಳಿತವನ್ನು ಸುಧಾರಿಸಿ, 'ನೆಮ್ಮದಿ ಗ್ಯಾರಂಟಿ' ನೀಡುವ ಯೋಜನೆಯಾಗಿದೆ.

ಹಲವಾರು ವರ್ಷಗಳಿಂದ ರಾಜ್ಯದಲ್ಲಿ ನೆಲೆಗೊಂಡಿದ್ದರೂ ದಾಖಲೆರಹಿತವಾಗಿ ತಾಂಡ, ಹಟ್ಟಿ, ಹಾಡಿ, ದೊಡ್ಡಿ, ಪಾಳ್ಯ, ಮಜರೆ, ಕ್ಯಾಂಪ್, ಕಾಲೊನಿಗಳಲ್ಲಿ ಜನರು ವಾಸಿಸುತ್ತಿದ್ದರು. ವಾಸದ ಮನೆಗಳ ಹಕ್ಕು ದಾಖಲೆ ಇಲ್ಲದಿರುವುದರಿಂದ ಸರ್ಕಾರಿ ಸೌಲಭ್ಯಗಳಿಂದ ವಂಚಿತರಾಗಿದ್ದರು. ಇಂತಹ ಗ್ರಾಮಗಳನ್ನು ಗುರುತಿಸಿ, ಕಂದಾಯ ಗ್ರಾಮಗಳನ್ನಾಗಿ ಘೋಷಿಸಿ, ನಿವಾಸಿಗಳಿಗೆ ಹಕ್ಕುದಾಖಲೆಗಳನ್ನು ನೀಡಲಾಗುತ್ತಿದೆ. 3616 ದಾಖಲೆರಹಿತ ಜನವಸತಿಗಳನ್ನು ಗುರುತಿಸಲಾಗಿದ್ದು, ಅದರಲ್ಲಿ 2,628 ಜನವಸತಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಗುರುತಿಸಿ ಅಧಿಸೂಚಿಸಲಾಗಿದೆ. ಒಂದು ಲಕ್ಷಕ್ಕೂ ಹೆಚ್ಚಿನ ಕುಟುಂಬಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮೇ 20ರಂದು ಹಕ್ಕುಪತ್ರ ವಿತರಿಸಲಿದ್ದಾರೆ.

ಭೂ–ಸುರಕ್ಷಾ

ಕಂದಾಯ ಇಲಾಖೆಯ ಎಲ್ಲ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಲು ಭೂಸುರಕ್ಷಾ ಯೋಜನೆಯನ್ನು ರಾಜ್ಯ ಸರ್ಕಾರ ಆರಂಭಿಸಿದೆ. ರಾಜ್ಯದ 240 ತಾಲ್ಲೂಕುಗಳಲ್ಲಿ ಯೋಜನೆ ಆರಂಭಿಸಲಾಗಿದ್ದು, ಪ್ರತಿ ತಾಲ್ಲೂಕಿಗೆ 10 ಡೆಸ್ಕ್‌ಟಾಪ್‌ಗಳು, 5 ಸ್ಕ್ಯಾನರ್‌ಗಳು ಮತ್ತು 6 ಡೇಟಾ ಎಂಟ್ರಿ ಆಪರೇಟರ್‌ಗಳನ್ನು ನಿಯೋಜನೆ ಮಾಡಲಾಗಿದೆ. ಈವರೆಗೆ ರಾಜ್ಯದಾದ್ಯಂತ 21 ಕೋಟಿಗೂ ಅಧಿಕ ಪುಟಗಳ ಭೂದಾಖಲೆಗಳನ್ನು ಡಿಜಿಟಲೀಕರಿಸಲಾಗಿದೆ.

ಲ್ಯಾಂಡ್ ಬೀಟ್

ಸರ್ಕಾರಿ ಭೂಮಿಯನ್ನು ರಕ್ಷಣೆ ಮಾಡಲು ಲ್ಯಾಂಡ್ ಬೀಟ್ ತಂತ್ರಾಂಶವನ್ನು ಜಾರಿಗೆ ತರಲಾಗಿದೆ. ಲ್ಯಾಂಡ್ ಬೀಟ್ ಆ್ಯಪ್‌ನಲ್ಲಿ ಸರ್ಕಾರಿ ಭೂಮಿಯ ಫೋಟೊ, ವಿಡಿಯೊ, ಜಿಯೊ–ಫೆನ್ಸಿಂಗ್ ಮಾಡುವ ಮೂಲಕ ಸರ್ಕಾರಿ ಭೂಮಿಯನ್ನು ರಕ್ಷಣೆ ಮಾಡಲಾಗುತ್ತಿದೆ. ಲ್ಯಾಂಡ್ ಬೀಟ್ ಆ್ಯಪ್ ಮೂಲಕ 14.2 ಲಕ್ಷ ಜಮೀನುಗಳ ಪೈಕಿ 96.1% ಸರ್ಕಾರಿ ಭೂಮಿಗಳನ್ನು ಪರಿಶೀಲಿಸಲಾಗಿದೆ.

ನನ್ನ ಭೂಮಿ

ನನ್ನ ಭೂಮಿ ಯೋಜನೆಯ ಮೂಲಕ ದಶಕಗಳ ಹಿಂದೆ ಭೂಮಿ ಮಂಜೂರಾಗಿದ್ದು, ಪೋಡಿಯಾಗದಿರುವ ರೈತರಿಗೆ ಪೋಡಿ ಮಾಡಿ ಹೊಸ ಪಹಣಿ ನೀಡಲಾಗುತ್ತಿದೆ.ಈವರೆಗೆ 91 ಸಾವಿರ ರೈತರ ಜಮೀನುಗಳಿಗೆ ಪೋಡಿ ಮಾಡಲು ತಹಶೀಲ್ದಾರ್ ಅನುಮೋದನೆ ನೀಡಿದ್ದು, ಈ ಪೈಕಿ 30 ಸಾವಿರ ಜಮೀನುಗಳಿಗೆ ಪಹಣಿ ಸೃಜನೆ ಪ್ರಕ್ರಿಯೆ ಜಾರಿಯಲ್ಲಿದೆ.

ಹಕ್ಕು ಪತ್ರ

ಕರ್ನಾಟಕದ ಬುಡಕಟ್ಟು, ಭೂರಹಿತ ಮತ್ತು ಅರಣ್ಯದಂಚಿನ ಸಮುದಾಯಗಳು ಸಾಗುವಳಿ ಮಾಡುತ್ತಿದ್ದ ಭೂಮಿಗೆ ದಶಕಗಳಿಂದ ಹಕ್ಕುಪತ್ರವಿರಲಿಲ್ಲ. ಇದರಿಂದ ವಸತಿ, ಸಾಲ, ವಿಮೆ, ಕಲ್ಯಾಣ ಯೋಜನೆಗಳಿಂದ ವಂಚಿತರಾಗಿದ್ದರು. ಕಂದಾಯ ಇಲಾಖೆಯ ಹಕ್ಕುಪತ್ರ ಯೋಜನೆಯು ಇವರಿಗೆಲ್ಲ ಕಾನೂನುಬದ್ಧ ಮಾಲೀಕತ್ವ ನೀಡುವ ಗುರಿ ಹೊಂದಿದೆ. ಬುಡಕಟ್ಟು ಮತ್ತು ಅರಣ್ಯಾಧಾರಿತ ಸಮುದಾಯಗಳಿಗೆ ವಿಶೇಷ ಗಮನ ನೀಡಲಾಗಿದೆ. 2025ರಲ್ಲಿ ರಾಜ್ಯದಾದ್ಯಂತ 1 ಲಕ್ಷ ಡಿಜಿಟಲ್ ಹಕ್ಕುಪತ್ರಗಳನ್ನು ವಿತರಿಸಲಾಗುವುದು

ನ್ಯಾಯದೀಕ್ಷೆಗೆ ತಂತ್ರಜ್ಞಾನದ ಸ್ಪರ್ಶ

ಕಂದಾಯ ನ್ಯಾಯಾಲಯ ಪ್ರಕರಣ ಮೇಲ್ವಿಚಾರಣಾ ವ್ಯವಸ್ಥೆ(ಆರ್‌ಸಿಸಿಇಎಂಎಸ್ ತಂತ್ರಾಂಶ)ಯನ್ನು ಎಂಡ್–ಟು–ಎಂಡ್ ಡಿಜಿಟಲೀಕರಣ ಮಾಡಲಾಗಿದ್ದು, ಸಂಪೂರ್ಣವಾಗಿ ಕಾಗದರಹಿತವಾಗಿದೆ. ಕಳೆದ ಎರಡು ವರ್ಷಗಳಲ್ಲಿ ಒಟ್ಟು 1.9 ಲಕ್ಷ ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ.

ನನ್ನ ಆಸ್ತಿ

ರಾಜ್ಯದ ಎಲ್ಲ ರೈತರ ಪಹಣಿಗಳಿಗೆ (ಆರ್‌ಟಿಸಿ) ತಮ್ಮ ಆಧಾರ್ ಸಂಖ್ಯೆಯನ್ನು ಜೋಡಣೆ ಮಾಡಲು 'ನನ್ನ ಆಸ್ತಿ' ಯೋಜನೆಯನ್ನು ಆರಂಭಿಸಲಾಗಿದೆ. ಗ್ರಾಮ ಆಡಳಿತಾಧಿಕಾರಿಗಳು ಪ್ರತಿ ರೈತನ ಮನೆಗೆ ಭೇಟಿ ನೀಡಿ ಮೊಬೈಲ್ ಆ್ಯಪ್ ಬಳಸಿ ಇ–ಕೆವೈಸಿ ಮೂಲಕ ಪಹಣಿಗಳಿಗೆ ಆಧಾರ್ ಜೋಡಣೆ ಮಾಡಿದ್ದಾರೆ. ಇ–ಕೆವೈಸಿ ಮೂಲಕ 73.5 ಲಕ್ಷ ವಿಶಿಷ್ಟ (ಯುನೀಕ್) ಭೂ ಮಾಲೀಕರನ್ನು ಆರ್‌ಟಿಸಿಯೊಂದಿಗೆ ಜೋಡಿಸಲಾಗಿದೆ.

*ಪಹಣಿಗಳಿಗೆ ಆಧಾರ್ ಜೋಡಣೆ ಸಮಯದಲ್ಲಿ 52 ಲಕ್ಷ ಲ್ಯಾಂಡ್ ಪಾರ್ಸೆಲ್‌ಗಳ ಮಾಲೀಕರು ಪೌತಿಯಾಗಿರುವುದು ಕಂಡು ಬಂದಿದೆ. (ಒಬ್ಬ ಮಾಲೀಕನು ಒಂದಕ್ಕಿಂತ ಹೆಚ್ಚು ಲ್ಯಾಂಡ್ ಪಾರ್ಸೆಲ್ ಹೊಂದಿರಬಹುದು). ಇಂತಹ ಪ್ರಕರಣಗಳಲ್ಲಿ ಇ–ಪೌತಿ ಆಂದೋಲನದ ಮೂಲಕ ವಾರಸುದಾರರಿಗೆ ಖಾತೆ ಮಾಡಲಾಗುವುದು.

ಬಗರ್ ಹುಕುಂ

ಬಗರ್ ಹುಕುಂ ಪ್ರಕ್ರಿಯೆಯನ್ನು ಎಂಡ್–ಟು–ಎಂಡ್ ಡಿಜಿಟಲೈಸ್ ಮಾಡಲಾಗಿದ್ದು, ಅತ್ಯಂತ ಪಾರದರ್ಶಕವಾಗಿ ವರ್ಷಗಳಿಂದ ನೈಜವಾಗಿ ಉಳುಮೆ ಮಾಡುತ್ತಿರುವ ಬಡರೈತರಿಗೆ ಸಾಗುವಳಿ ಚೀಟಿ ನೋಂದಾಯಿಸಿ, ಹೊಸ ಪಹಣಿ ನೀಡಲಾಗುತ್ತಿದೆ.

ಪ್ರಸ್ತುತಿ: ಪಿ.ವಿ ಬ್ರ್ಯಾಂಡ್ ಸ್ಪಾಟ್

ಕನ್ನಡಿಗರ ಹೃದಯ ಗೆದ್ದ 'ಕೈ' ಸರ್ಕಾರ

ಪ್ರಚಂಡ 'ಜನಮತ' ದೊಂದಿಗೆ ಅಧಿಕಾರದ ಚುಕ್ಕಾಣಿಯನ್ನು ಹಿಡಿದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆಯುವ ಮೂಲಕ 'ಜನಮನ'ವನ್ನು ಗೆದ್ದಿದೆ. ಚುನಾವಣೆಯಲ್ಲಿ ಜನತಾ ಜನಾರ್ದನರಿಗೆ ಕೊಟ್ಟ ವಾಗ್ದಾನವನ್ನು ಪೂರೈಸಿರುವುದು ಮಾತ್ರವಲ್ಲದೇ, ಅವರ ನಾಡಿಮಿಡಿತಕ್ಕೆ ಅನುಗುಣವಾಗಿ ಸರ್ಕಾರ ಹೆಜ್ಜೆ ಇಡುವ ಮೂಲಕ ಕನ್ನಡಿಗರ ಹೃದಯ ಗೆದ್ದಿರುವುದು ಸಿದ್ದರಾಮಯ್ಯ ನೇತೃತ್ವದ ಜನಮುಖಿ ಸರ್ಕಾರದ ಹೆಗ್ಗಳಿಕೆ.

'ಗ್ಯಾರಂಟಿ' ಸಿದ್ದರಾಮಯ್ಯ ಸರ್ಕಾರದ ಹೆಗ್ಗುರುತು. ಬಡ ಮತ್ತು ದುಡಿಯುವ ವರ್ಗದ ಸಬಲೀಕರಣಕ್ಕಾಗಿ ಆರಂಭಿಸಿದ ಪಂಚ ಗ್ಯಾರಂಟಿ ಯೋಜನೆಗಳು ರಾಜ್ಯದ ಉದ್ದಗಲಕ್ಕೂ ಮನೆ ಮನೆಯನ್ನೂ ತಲುಪಿವೆ. ಈ ವರ್ಗದ ಆರ್ಥಿಕ ಸ್ಥಿತಿಗತಿ ಸುಧಾರಿಸುವಲ್ಲಿ ಗ್ಯಾರಂಟಿ ಮಹತ್ವದ ಪಾತ್ರವಹಿಸಿದೆ. ಇದರ ಖ್ಯಾತಿ ಮತ್ತು ಜನಪ್ರಿಯತೆ ದೇಶದಗಲ ವ್ಯಾಪಿಸಿತು. ಗ್ಯಾರಂಟಿಗಳಿಂದ ದೇಶವೇ ದಿವಾಳಿಯಾಗಲಿದೆ ಎಂದು ಹಂಗಿಸಿದ್ದ ಪ್ರಧಾನಿ ನರೇಂದ್ರ ಮೋದಿಯವರು ಲೋಕಸಭೆ ಚುನಾವಣೆ ವೇಳೆ, 'ಮೋದಿ ಗ್ಯಾರಂಟಿ' ಎಂದು ಘೋಷಿಸಿಕೊಳ್ಳಬೇಕಾದ ಅನಿವಾರ್ಯವೂ ಸೃಷ್ಟಿಯಾಯಿತು. ಬಿಜೆಪಿಯು ವಿವಿಧ ರಾಜ್ಯಗಳ ಚುನಾವಣೆಗಳಲ್ಲಿ, ಬೇರೆ ದಾರಿಯೇ ಇಲ್ಲದೇ ಗ್ಯಾರಂಟಿಯನ್ನೇ ನೆಚ್ಚಿಕೊಳ್ಳಬೇಕಾಯಿತು. ಅಪ್ಪಿ–ಒಪ್ಪಿಕೊಳ್ಳಬೇಕಾಯಿತು. ಇದಲ್ಲವೇ 'ಗ್ಯಾರಂಟಿ'ಯ ಮಹಿಮೆ!

ಹೌದು, ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಅಧಿಕಾರ ಗ್ರಹಣ ಮಾಡಿದ ದಿನವೇ ಗ್ಯಾರಂಟಿ ಯೋಜನೆಗಳನ್ನು ಪ್ರಕಟಿಸಿದರು. ಸಹಜವಾಗಿ ವಿರೋಧ ಪಕ್ಷಗಳ ಕೆಂಗಣ್ಣಿಗೆ ಈ ಯೋಜನೆಗಳು ಗುರಿಯಾದವು. ಇನ್ನಿಲ್ಲದ ಟೀಕೆ– ಟಿಪ್ಪಣಿಗಳಿಗೂ ಗುರಿಯಾಗಬೇಕಾಯಿತು. ರಾಜ್ಯವನ್ನು ದಿವಾಳಿ ಅಂಚಿಗೆ ಒಯ್ದಿದ್ದಾರೆ ಎಂಬ ಹುಯಿಲೆಬ್ಬಿಸಲಾಯಿತು. ಆದರೆ, ವಾಸ್ತವ ಬೇರೆಯೇ ಆಗಿತ್ತು. ಶಕ್ತಿ, ಗೃಹಲಕ್ಷ್ಮಿ, ಗೃಹಜ್ಯೋತಿ, ಯುವ ನಿಧಿ ಮತ್ತು ಅನ್ನಭಾಗ್ಯ; ಈ ಯೋಜನೆಗಳು ಕಲ್ಯಾಣ ರಾಜ್ಯವೊಂದರ ಆಶಯಕ್ಕನುಗುಣವಾದ ಕಲ್ಯಾಣಕಾರಿ ಯೋಜನೆಗಳೇ ಆಗಿದ್ದವು. ಸರ್ಕಾರಕ್ಕೆ ಎರಡು ವರ್ಷ ತುಂಬಿದ ಬೆನ್ನಲ್ಲಿ ಒಮ್ಮೆ ಹಿಂತಿರುಗಿ ನೋಡಿದಾಗ ಹೆಮ್ಮೆಪಡಬಹುದಾದ ಸಾಧನೆ ಎಂಬುದರಲ್ಲಿ ಎರಡು ಮಾತಿಲ್ಲ.

'ಗ್ಯಾರಂಟಿ'ಯ ಹೊರತಾಗಿಯೂ ಎಲ್ಲ ಜಾತಿ, ಧರ್ಮ, ಪ್ರದೇಶಗಳನ್ನು ಮೀರಿ ಬಡವರು, ಶೋಷಿತರು, ಅವಕಾಶ ವಂಚಿತರು, ಮಹಿಳೆಯರು, ಕಾರ್ಮಿಕರು, ರೈತರು ಮತ್ತು ಬಡವರ ತುಟಿಯಲ್ಲಿ ಸಿದ್ದರಾಮಯ್ಯ ಸರ್ಕಾರ ಮಂದಹಾಸ ಮೂಡಿಸಿದೆ. ಅವರ ಜೀವನದಲ್ಲಿ ಭರವಸೆ ಮೂಡಿಸಿದೆ. ಬಸವಣ್ಣ, ಗಾಂಧೀಜಿ, ಬಾಬಾಸಾಹೇಬ್ ಅಂಬೇಡ್ಕರ್ ಅವರ ಆದರ್ಶಗಳನ್ನು ಕಾರ್ಯಕ್ರಮಗಳ ಸಾಕಾರಗೊಳಿಸಿದ ಸಂತೃಪ್ತಿ ಜನರಲ್ಲಿ ಮೂಡಿಸಿದೆ.

ಕಳೆದ ಲೋಕಸಭಾ ಚುನಾವಣೆ ವೇಳೆ ಪ್ರಧಾನಿ ನರೇಂದ್ರಮೋದಿ ಅವರು 'ಗ್ಯಾರಂಟಿ' ಪದವನ್ನು ಜಪಿಸಿದ್ದು ಮಾತ್ರವಲ್ಲದೇ, ಹರಿಯಾಣ, ಮಹಾರಾಷ್ಟ್ರ ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲೂ ಗ್ಯಾರಂಟಿ ಯೋಜನೆಗಳನ್ನು ಪ್ರಕಟಿಸಿದರು. ಇದಕ್ಕೆ ಕರ್ನಾಟಕದ 'ಗ್ಯಾರಂಟಿ' ಸ್ಫೂರ್ತಿ ಅಲ್ಲದೇ ಬೇರೇನೂ ಅಲ್ಲ.

'ಗ್ಯಾರಂಟಿ'ಯ ಅಬ್ಬರದ ಮಧ್ಯೆ ಸರ್ಕಾರ ಕಳೆದು ಹೋಗಿಲ್ಲ. ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಯಲ್ಲೂ ಸರ್ಕಾರ ಕೊಡುಗೆ ಕಡಿಮೆ ಏನಲ್ಲ. ಜಾಗತಿಕ ಬಂಡವಾಳ ಹೂಡಿಕೆ, ಜಿಎಸ್‌ಟಿ ಸಂಗ್ರಹದಲ್ಲೂ ಕರ್ನಾಟಕ ದೇಶದಲ್ಲೇ ಅಗ್ರಗಣ್ಯ ಸ್ಥಾನದಲ್ಲಿದೆ. ಈ ಮೂಲಕ ಉದ್ಯೋಗ ಸೃಷ್ಟಿಯಲ್ಲಿ ಮುಂಚೂಣಿಯಲ್ಲಿದೆ. ಕೃಷಿ ಮತ್ತು ತೋಟಗಾರಿಕೆ ಕ್ಷೇತ್ರದಲ್ಲಿ ರೈತಾಪಿ ವರ್ಗಕ್ಕೆ ಬಡ್ಡಿ ರಹಿತ ಸಾಲ ಮತ್ತು ಇತರ ಹತ್ತು ಹಲವು ಸೌಲಭ್ಯಗಳನ್ನು ನೀಡಿ ಕೃಷಿ ಉತ್ಪನ್ನಗಳ ಉತ್ಪಾದಕತೆಯಲ್ಲೂ ಗಣನೀಯ ಪ್ರಗತಿ ಸಾಧಿಸಲಾಗಿದೆ.

ಗ್ಯಾರಂಟಿ ಯೋಜನೆಗಳ ಅಭಿವೃದ್ಧಿ

ಯೋಜನೆ ಹೆಸರು	ಫಲಾನುಭವಿಗಳ ಸಂಖ್ಯೆ	ವೆಚ್ಚ (ಕೋಟಿ ರೂ.ಗಳಲ್ಲಿ)
ಶಕ್ತಿ ಯೋಜನೆ	458 ಕೋಟಿ	11,403
ಗೃಹಲಕ್ಷ್ಮಿ ಯೋಜನೆ	1.27 ಕೋಟಿ	47,773
ಗೃಹಜ್ಯೋತಿ ಯೋಜನೆ	1.63 ಕೋಟಿ	18,900
ಅನ್ನಭಾಗ್ಯ ಯೋಜನೆ	4.52 ಕೋಟಿ	14,023
ಯುವನಿಧಿ	3.70 ಲಕ್ಷ	376
5 ಗ್ಯಾರಂಟಿ ಯೋಜನೆಗಳ ಒಟ್ಟು ವೆಚ್ಚ		92,475

ಅನ್ನಭಾಗ್ಯ

ಹಸಿವು ತಣಿಸುವ 'ಅನ್ನಭಾಗ್ಯ'

'ಅನ್ನ ಪರಬ್ರಹ್ಮ ಸ್ವರೂಪಂ' ಎನ್ನುತ್ತಾರೆ. ಆದರೆ, ಹಸಿವನ್ನು ತಣಿಸುವ ಅಮೃತ– ಅನ್ನವೇ ಶ್ರೇಷ್ಠ ಎಂಬುದನ್ನು ಪರಿಗಣಿಸಿದ ರಾಜ್ಯ ಸರ್ಕಾರ 'ಅನ್ನಭಾಗ್ಯ' ಯೋಜನೆ ಜಾರಿಗೆ ತಂದಿದೆ. ಕಳೆದ ಎರಡು ವರ್ಷಗಳಲ್ಲಿ ಹಸಿವು ಮುಕ್ತಗೊಳಿಸುವಲ್ಲಿ ಸರ್ಕಾರ ಯಶಸ್ವಿಯಾಗಿದೆ. ಅನ್ನಭಾಗ್ಯ ಯೋಜನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರೂಪಿಸಿ ಹಸಿವನ್ನು ತಣಿಸುವ ಕಾರ್ಯ ಮಾಡುತ್ತಿದ್ದಾರೆ.

ಮೊದಲ ಬಾರಿಗೆ ಸಿಎಂ ಆಗಿ 2013ರಲ್ಲಿ ಅಧಿಕಾರ ಸ್ವೀಕರಿಸಿದ ಕೆಲವೇ ಕ್ಷಣಗಳಲ್ಲಿ 'ಅನ್ನಭಾಗ್ಯ' ಯೋಜನೆಯನ್ನು ಘೋಷಿಸಿದ್ದ ಸಿದ್ದರಾಮಯ್ಯ ಅವರು, ಎರಡನೇ ಬಾರಿ ಮುಖ್ಯಮಂತ್ರಿಯಾದಾಗ 10 ಕೆಜಿ ಅಕ್ಕಿ ನೀಡುವ ಮೂಲಕ ಯೋಜನೆಗೆ ಪುಷ್ಟಿ ನೀಡಿದರು. ಬಡವರ ಹಸಿವನ್ನು ದೂರಾಗಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಕೇಂದ್ರ ಸರ್ಕಾರ ಹೆಚ್ಚುವರಿ ಅಕ್ಕಿಯನ್ನೂ ನೀಡದೇ ಅಸಹಕಾರ ತೋರಿತು. ಅಕ್ಕಿಯ ಅಲಭ್ಯತೆಯ ನಡುವೆಯೂ ಎದೆಗುಂದದೆ ಪ್ರತಿ ಸದಸ್ಯನಿಗೆ 10 ಕೆಜಿ ಅಕ್ಕಿ ಒದಗಿಸುವ ಕ್ರಾಂತಿಕಾರಕ ಕ್ರಮ ಅನುಷ್ಠಾನಗೊಳಿಸಿದೆ. ಈ ಕ್ರಾಂತಿಕಾರಿ ಯೋಜನೆಯಲ್ಲಿ 4,35,82,455 ಫಲಾನುಭವಿಗಳು ಲಾಭ ಪಡೆಯುತ್ತಿದ್ದು, ಇದಕ್ಕಾಗಿ ₹14,023 ಕೋಟಿ ಇದುವರೆಗೂ ವೆಚ್ಚ ಮಾಡಲಾಗಿದೆ.

ಬದುಕು ಕಟ್ಟಿಕೊಟ್ಟ 'ಗೃಹಲಕ್ಷ್ಮಿ'

ಗೃಹಲಕ್ಷ್ಮಿ

ಸಮಾಜದ ಪ್ರತಿಯೊಬ್ಬರಿಗೂ ಪ್ರಗತಿಯ ಫಲಗಳು ಸಿಗಬೇಕು, ಎಲ್ಲರೂ ಅಭಿವೃದ್ಧಿಯ ಪಾಲುದಾರರಾಗಬೇಕು ಎನ್ನುವ ಆಶಯದಡಿ ರೂಪಿಸಿದ 'ಗೃಹಲಕ್ಷ್ಮಿ' ಯೋಜನೆ ಮಹಿಳೆಯರಿಗೆ ಸ್ವಾವಲಂಬಿ ಬದುಕು ಕಟ್ಟಿಕೊಳ್ಳುವಲ್ಲಿ ಆಸರೆಯಾಗಿದೆ.

ಮನೆಯ ಯಜಮಾನಿಯ ಬ್ಯಾಂಕ್ ಖಾತೆಗೆ ನೇರವಾಗಿ ತಿಂಗಳಿಗೆ ₹2000 ನೀಡುವ ಯೋಜನೆ ಬಡಮಹಿಳೆಯರಿಗೆ ಆರ್ಥಿಕ ಚೈತನ್ಯ ತುಂಬಿದೆ. ಒಟ್ಟು ಫಲಾನುಭವಿಗಳ ಸಂಖ್ಯೆ 1.27 ಕೋಟಿ ಇದ್ದು, ಇದುವರೆಗೂ 'ಡಿಬಿಟಿ' ಮೂಲಕ ₹2 ಸಾವಿರ ತಲುಪಿದೆ. ಇದಕ್ಕಾಗಿ ₹42,530 ಕೋಟಿ ವೆಚ್ಚ ಮಾಡಲಾಗಿದೆ.

ಬಡವರ ಆಶಾಕಿರಣ

ಗೃಹ ಜ್ಯೋತಿ

ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿರುವ 'ಗೃಹಜ್ಯೋತಿ' ಬಡವರ ಬಾಳಿನ ಬೆಳಕು.

ರಾಜ್ಯದ ಪ್ರತಿ ಮನೆಯ ಗೃಹ ಬಳಕೆಗೆ 200 ಯೂನಿಟ್‌ವರೆಗೆ ಈ ಯೋಜನೆಯಡಿ ಉಚಿತ ವಿದ್ಯುತ್ ನೀಡಲಾಗುತ್ತಿದೆ. ಬಡವರು, ಮಧ್ಯಮ ವರ್ಗದವರು, ರೈತರು, ಹಿಂದುಳಿದ ವರ್ಗದವರ ಬದುಕಲ್ಲಿ ಬೆಳಕು ನೀಡಿದೆ. ದೇಶದಲ್ಲಿಯೇ ಇದೊಂದು ಮಾದರಿ ಯೋಜನೆಯಾಗಿದೆ. ತಿಂಗಳಿಗೆ 200 ಯೂನಿಟ್‌ಗಿಂತ ಕಡಿಮೆ ಬಳಸಿದ್ದವರಿಗೆ ಉಚಿತ ವಿದ್ಯುತ್ ನೀಡಲಾಗಿತ್ತು. ಗೃಹಜ್ಯೋತಿ ಯೋಜನೆ ಫಲಾನುಭವಿಗಳ ಸಂಖ್ಯೆ 1.63 ಕೋಟಿ ತಲುಪಿ ₹14,950 ಕೋಟಿ ಈವರೆಗೆ ವ್ಯಯಿಸಲಾಗಿದೆ.

ನಿರುದ್ಯೋಗಿಗಳಿಗೆ ಆಸರೆ 'ಯುವ'

ನಿರುದ್ಯೋಗಿ ಯುವಜನರಲ್ಲಿ ವಿಶ್ವಾಸ ಮೂಡಿಸುವ 'ಯುವನಿಧಿ' ಯೋಜನೆಯಡಿ,

ಯುವನಿಧಿ

ಪದವೀಧರ ಯುವಕ, ಯುವತಿಯರಿಗೆ ₹3000 ಹಾಗೂ ಡಿಪ್ಲೊಮಾ ಪಡೆದವರಿಗೆ ₹1500 ನಿರುದ್ಯೋಗ ಭತ್ಯೆ ನೀಡುತ್ತಿರುವ ಈ ಯೋಜನೆಯಡಿ ರಾಜ್ಯದ 2.7 ಲಕ್ಷ ಫಲಾನುಭವಿಗಳು ನೋಂದಾಸಿಕೊಂಡಿದ್ದಾರೆ. ಯುವನಿಧಿ ಅನುದಾನದಲ್ಲಿ ಸರ್ಕಾರ ಇದುವರೆಗೆ ₹326.95 ಕೋಟಿ ವೆಚ್ಚ ಮಾಡುವ ಮೂಲಕ ಕರ್ನಾಟಕದ ಯುವಪೀಳಿಗೆಯ ಬದುಕಿನ ಆಶಾಕಿರಣ ಹೊರಹೊಮ್ಮಿದೆ.

ಮಹಿಳಾ ಸಬಲೀಕರಣಕ್ಕೆ 'ಶಕ್ತಿ'

ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಮೊಟ್ಟ ಮೊದಲು ಪರಿಚಯಿಸಿದ 'ಶಕ್ತಿ' ಯೋಜನೆ ಮಹಿಳೆಯರನ್ನು ಮುಖ್ಯವಾಹಿನಿಗೆ ತರುವುದು ಮಾತ್ರವಲ್ಲದೇ ಮಹಿಳಾ ಸಬಲೀಕರಣದಲ್ಲಿ ಮಹತ್ವದ ಪಾತ್ರ ವಹಿಸಿದೆ. ಯೋಜನೆ ಬಗ್ಗೆ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಾಧ್ಯಮಗಳು ಅಧ್ಯಯನ ನಡೆಸಿ ಪ್ರಶಂಸೆ ವ್ಯಕ್ತಪಡಿಸಿವೆ. ಈಗಾಗಲೇ 455 ಕೋಟಿ ಮಹಿಳೆಯರು ಉಚಿತವಾಗಿ ಪ್ರಯಾಣ ಮಾಡುವ ಮೂಲಕ ಯೋಜನೆಯ ಪ್ರಯೋಜನ ಪಡೆದಿದ್ದಾರೆ. ಇದುವರೆಗೂ ₹11,403 ಕೋಟಿ ವ್ಯಯ ಮಾಡಲಾಗಿದೆ.

ಶಕ್ತಿ

ಮಹಿಳೆಯರು, ವಿದ್ಯಾರ್ಥಿನಿಯರು ಹಾಗೂ ಲಿಂಗತ್ವ ಅಲ್ಪಸಂಖ್ಯಾತರಿಗೆ ಉಚಿತ ಬಸ್ ಪ್ರಯಾಣ ಸೌಲಭ್ಯ ಕಲ್ಪಿಸುವ 'ಶಕ್ತಿ' ಯೋಜನೆ ಮಹಿಳೆಯರ ಮತ್ತು ನಾಡಿನ ಸಬಲೀಕರಣಕ್ಕೆ ಪುಷ್ಟಿ ನೀಡಿದೆ. ಪ್ರತಿನಿತ್ಯ ದೂರದ ಊರುಗಳಿಗೆ ತೆರಳಿ ಹೆಚ್ಚಿನ ಆದಾಯದ ಉದ್ಯೋಗ ಹೊಂದಲು, ಓದುವ ಹೆಣ್ಣು ಮಕ್ಕಳ ಕನಸುಗಳಿಗೆ ರೆಕ್ಕೆ ಮೂಡಿಸಲು, ಬಡ ಮತ್ತು ಮಧ್ಯಮ ವರ್ಗದ ಮಹಿಳೆಯರು ಪ್ರವಾಸ ಮುಂತಾದ ಚಟುವಟಿಕೆ ಕೈಗೊಳ್ಳಲು ಸಹಕಾರಿಯಾಗಿದೆ.

ಸರ್ವೋದಯವೇ ನಮ್ಮ ಪವಿತ್ರ ತತ್ವ



• ಸಿದ್ದರಾಮಯ್ಯ

ನಮ್ಮ ಸಾಧನೆಗಳ ಸಂಭ್ರಮಕ್ಕೆ ಎರಡಲ್ಲ; ಈಗ ಏಳುವರ್ಷ. 2013ರಲ್ಲಿ ನಾನು ಮುಖ್ಯಮಂತ್ರಿಯಾಗಿ ಐದು ವರ್ಷಗಳಲ್ಲಿ ಕೈಗೊಂಡ ಹಲವಾರು ಕಾರ್ಯಕ್ರಮಗಳು ಈಗಲೂ ಯಶಸ್ವಿಯಾಗಿ ಮುಂದುವರಿಯುತ್ತಿದ್ದು ಜನರು ಅದರ ಪ್ರಯೋಜನವನ್ನು ಈಗಲೂ ಪಡೆಯುತ್ತಿದ್ದಾರೆ. ಅನ್ನಭಾಗ್ಯ, ಕ್ಷೀರಭಾಗ್ಯ, ಕ್ಷೀರಧಾರೆ, ವಿದ್ಯಾಸಿರಿ, ಮಾತೃಪೂರ್ಣ, ಕೃಷಿಭಾಗ್ಯ, ಅನಿಲಭಾಗ್ಯ, ಅನುಗ್ರಹ, ಪಶುಭಾಗ್ಯ, ಇಂದಿರಾ ಕ್ಯಾಂಟೀನ್ ಮೊದಲಾದ ಕಾರ್ಯಕ್ರಮಗಳು, ರೈತರ ಸಾಲ ಮನ್ನಾದಂತಹ ದಿಟ್ಟ ನಿರ್ಧಾರಗಳು, ಪ್ರಗತಿಪರವಾಗಿರುವ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಕಾಯ್ದೆ, ನೀರಾವರಿ ಕ್ಷೇತ್ರಕ್ಕೆ ನೀಡಿದ್ದ ದಾಖಲೆಯ ಅನುದಾನ, ಬಂಡವಾಳ ಹೂಡಿಕೆಯಿಂದಾಗಿ ಕೈಗಾರಿಕಾ ಕ್ಷೇತ್ರದಲ್ಲಿ ನಡೆದ ಮೌನಕ್ರಾಂತಿ ಎಲ್ಲವೂ ಈಗ ಫಲ ಕೊಡುತ್ತಿವೆ.

ಇವುಗಳ ಜೊತೆಗೆ ನಮ್ಮ ಈಗಿನ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಫಲ ಕೂಡಾ ಜನರಿಗೆ ಸಿಗುತ್ತಿದೆ. ಸಂತೃಪ್ತಿಯಿಂದ ಕೂಡಿದ ಅವರ ಆಶೀರ್ವಾದವೇ ನಮ್ಮ ಸರ್ಕಾರಕ್ಕೆ ಪ್ರೇರಣೆ ಮತ್ತು ಬಲ.

ರಾಜಕೀಯ ಸುಭದ್ರತೆ ಮತ್ತು ಸುಸ್ಥಿರವಾದ ಆಡಳಿತ, ಅಭಿವೃದ್ಧಿಯ ರಥದ ಎರಡು ಚಕ್ರಗಳು. ಈ ಎರಡು ಚಕ್ರಗಳಲ್ಲಿ ಒಂದರಲ್ಲಿ ಬಿರುಕು ಕಾಣಿಸಿಕೊಂಡರೂ ಅಭಿವೃದ್ಧಿಯ ರಥ ಮುಗ್ಗರಿಸುತ್ತದೆ. ನಮ್ಮ ರಾಜ್ಯದ ಪ್ರಜ್ಞಾವಂತ ಜನತೆ ಇದನ್ನು ನೋಡಿದ್ದಾರೆ ಮತ್ತು ಅನುಭವಿಸಿದ್ದಾರೆ. 2004ರಿಂದ 2013ರ ವರೆಗೆ ಮತ್ತು 2018ರಿಂದ 2023ರ ವರೆಗಿನ ಒಟ್ಟು ಹದಿನೈದು ವರ್ಷಗಳ ಅವಧಿಯಲ್ಲಿ ರಾಜ್ಯದ ಜನತೆ ಅಭದ್ರ ರಾಜಕೀಯದ ದುಷ್ಪರಿಣಾಮಗಳನ್ನು ಕಣ್ಣಾರೆ ಕಂಡಿದ್ದು ಮಾತ್ರವಲ್ಲ ಅನುಭವಿಸಿದ್ದಾರೆ. ಈ ಕಾರಣಕ್ಕಾಗಿಯೇ 2023ರ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ ಮತದಾರರು ಪ್ರಚಂಡ ಬಹುಮತವನ್ನು ನೀಡಿ ನಮ್ಮ ಕೈಗೆ ಆಡಳಿತದ ಚುಕ್ಕಾಣಿ ಕೊಟ್ಟಿದ್ದಾರೆ.

ರಾಜಕೀಯ ಸುಭದ್ರತೆಯಿಂದ ಮಾತ್ರ ಅಭಿವೃದ್ಧಿ ಸಾಧ್ಯ ಎನ್ನುವುದು ಅವರಿಗೆ ಮನದಟ್ಟಾಗಿದೆ. ಅಭಿವೃದ್ಧಿಗೆ ಸಂಬಂಧಿಸಿದಂತೆ ಹಲವಾರು ಮಾದರಿಗಳಿವೆ. ನಾನು ಪುಸ್ತಕಗಳನ್ನು ಓದಿ ಅರ್ಥಶಾಸ್ತ್ರವನ್ನು ಅರ್ಥಮಾಡಿಕೊಂಡವನಲ್ಲ. ನಾನು ಜನರ ಜೊತೆಯಲ್ಲಿ ಒಡನಾಟ ಇಟ್ಟುಕೊಂಡು ಅವರ ಕಷ್ಟ-ಸುಖಗಳನ್ನು ಅರ್ಥಮಾಡಿಕೊಂಡು ಆ ಅನುಭವದಿಂದ ಅರ್ಥಶಾಸ್ತ್ರವನ್ನು ತಿಳಿದುಕೊಂಡವನು.

ನನ್ನ ಅಭಿವೃದ್ಧಿಯ ಮಾದರಿಯ ಕೇಂದ್ರ ಸ್ಥಾನದಲ್ಲಿರುವುದು ಒಬ್ಬ ಸಾಮಾನ್ಯ ಮನುಷ್ಯ. ಈ ಸಾಮಾನ್ಯ ಮನುಷ್ಯ ಎಲ್ಲ ಜಾತಿ-ಧರ್ಮ-ಪ್ರದೇಶಗಳಿಗೆ ಸೇರಿರುವ ಬಡವರು, ಶೋಷಿತರು, ಅವಕಾಶ ವಂಚಿತರು, ಮಹಿಳೆಯರು, ರೈತರು, ಕಾರ್ಮಿಕರು, ವಿದ್ಯಾರ್ಥಿಗಳ ಪ್ರತಿನಿಧಿ. ಸರ್ಕಾರ ಎನ್ನುವುದು ಪಕ್ಷ, ಪ್ರದೇಶ, ಜಾತಿ, ಧರ್ಮಗಳನ್ನೆಲ್ಲ ಮೀರಿದ್ದು ಎನ್ನುವುದು ನನ್ನ ಬಲವಾದ ನಂಬಿಕೆ.

ರಾಜ್ಯಕ್ಕೆ ಮುಖ್ಯಮಂತ್ರಿಯಾದವರು ಮನೆ ಯಜಮಾನನ ಹಾಗೆ. ಆತ ಕುಟುಂಬದ ಸದಸ್ಯರನ್ನೆಲ್ಲ ಸಮಭಾವದಿಂದ ನೋಡಿಕೊಳ್ಳಬೇಕಾಗುತ್ತದೆ. ಅದೇ ವೇಳೆ ಕುಟುಂಬದ ಸದಸ್ಯರಲ್ಲಿ ದುರ್ಬಲರಾಗಿ ಇದ್ದವರ ಬಗ್ಗೆ ತುಸು ಹೆಚ್ಚಿನ ಕಾಳಜಿ ತೋರಿಸಬೇಕಾಗುತ್ತದೆ. ಅದೇ ಸಾಮಾಜಿಕ ನ್ಯಾಯ. ಸಾಮಾಜಿಕ ನ್ಯಾಯ ಎಂದರೆ ಒಬ್ಬರಿಂದ ಕಿತ್ತುಕೊಂಡು ಮತ್ತೊಬ್ಬರಿಗೆ ಕೊಡುವುದಲ್ಲ. ಎಲ್ಲರೂ ಕೂಡಿ ಹಂಚಿ ತಿನ್ನುವುದು.

‘ಮೇಲ್ಮಟ್ಟದಲ್ಲಿ ಅಭಿವೃದ್ಧಿ ಚಟುವಟಿಕೆಗಳು ನಡೆದರೆ ಅದರ ಫಲ ಕೆಳಮಟ್ಟದಲ್ಲಿರುವ ಸಮುದಾಯಕ್ಕೂ ತನ್ನಿಂದತಾನೇ ಹರಿದುಹೋಗುತ್ತದೆ’ ಎಂದು ಕೆಲವು ಆರ್ಥಿಕ ತಜ್ಞರು ಅಭಿಪ್ರಾಯಪಡುತ್ತಾರೆ. ನಾನು ಇದನ್ನು ಒಪ್ಪುವುದಿಲ್ಲ. ಸಾಮಾಜಿಕ ತಾರತಮ್ಯದಿಂದ ಕೂಡಿದ ಸಮಾಜದಲ್ಲಿ ಕೆಳಮಟ್ಟದಲ್ಲಿರುವ ಸಮುದಾಯವನ್ನು ಗುರಿಯಾಗಿಟ್ಟುಕೊಂಡು ಯೋಜನೆಗಳನ್ನು ರೂಪಿಸಿದರೆ ಮಾತ್ರ ಅದು ಬೇಗ ಅವರನ್ನು ತಲುಪುತ್ತದೆ ಎಂದು ನಾನು ನಂಬಿದ್ದೇನೆ. ನಮ್ಮ ‘ಕರ್ನಾಟಕ ಅಭಿವೃದ್ಧಿ ಮಾದರಿ’ ಈ ಸ್ವರೂಪದ್ದು.

ನಮ್ಮದು ಸರ್ವರನ್ನೂ ಒಳಗೊಂಡಿರುವ, ಸರ್ವರನ್ನು ಬೆಸೆಯುವ ಮತ್ತು ಸರ್ವರಿಗೂ ಸಮಪಾಲು-ಸಮಬಾಳು ನೀಡಬೇಕೆಂಬ ಪ್ರಾಮಾಣಿಕ ಆಶಯದ ಸರ್ಕಾರ. ನಾಡಿನ ಪ್ರತಿಯೊಬ್ಬ ಪ್ರಜೆಯ ಜೀವನಮಟ್ಟ ಸುಧಾರಣೆಯನ್ನು ಗುರಿಯಾಗಿಟ್ಟುಕೊಂಡ ಸರ್ವೋದಯ ತತ್ವದ ಅಭಿವೃದ್ಧಿ ಮಾದರಿ. ಇದನ್ನು ನಾನು `ಕರ್ನಾಟಕ ಅಭಿವೃದ್ಧಿ ಮಾದರಿ' ಎಂದು ಹೆಮ್ಮೆಯಿಂದ ಕರೆಯುತ್ತೇನೆ.

ನಮ್ಮ ಅಭಿವೃದ್ಧಿಗೆ ಮಾದರಿಗೆ ಸಾಮಾಜಿಕ ನ್ಯಾಯದ ಮೂಲಪುರುಷ ಬಸವಣ್ಣ, ಗ್ರಾಮಸ್ವರಾಜ್ಯದ ಹರಿಕಾರ ಮಹಾತ್ಮ ಗಾಂಧೀಜಿ ಮತ್ತು ಸಾಮಾಜಿಕ ಪ್ರಜಾಪ್ರಭುತ್ವದ ಕನಸು ಕಂಡಿದ್ದ ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ನಾಡಿನ ಅನೇಕ ಚಿಂತಕರ ಚಿಂತನೆಗಳು ಪ್ರೇರಣೆ ನೀಡಿವೆ. ಅಭಿವೃದ್ಧಿ ಎನ್ನುವುದು ನಮ್ಮ ಹೃದಯದ ಮಾತೇ ವಿನಃ ಕೇವಲ ಬುದ್ಧಿಯದ್ದಲ್ಲ. ಸರ್ವರಿಗೂ ಸಮಾನ ಅವಕಾಶ ನಾವು ನಂಬಿರುವ ಸತ್ವಭರಿತ ಪವಿತ್ರ ತತ್ವ.

ನಾನು ಮೊದಲ ಬಾರಿ ಮುಖ್ಯಮಂತ್ರಿಯಾಗಿ ಸಂವಿಧಾನದ ಮೇಲೆ ಆಣೆ ಇಟ್ಟು ಪ್ರಮಾಣ ವಚನ ಸ್ವೀಕರಿಸಿದ ದಿನವೇ ಮನಸ್ಸಿನಲ್ಲೊಂದು ಪ್ರಮಾಣ ಸ್ವೀಕರಿಸಿದ್ದೆ. ಅದು ನುಡಿದಂತೆ ನಡೆಯಬೇಕು ಎನ್ನುವ ತೀರ್ಮಾನದ ಪ್ರಮಾಣ. 2013ರ ಚುನಾವಣಾ ಪೂರ್ವದಲ್ಲಿ ನಮ್ಮ ಕಾಂಗ್ರೆಸ್ ಪಕ್ಷ 165 ಭರವಸೆಗಳನ್ನು ನೀಡಿತ್ತು ಅದರಲ್ಲಿ 158ಕ್ಕೂ ಹೆಚ್ಚು ಭರವಸೆಗಳನ್ನು ಐದು ವರ್ಷಗಳ ಅವಧಿಯಲ್ಲಿ ಈಡೇರಿಸಿದ್ದೆವು. ಅದರ ಜೊತೆಗೆ ಇನ್ನೂ ಸುಮಾರು 30 ಹೊಸ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದೆವು. ಕಳೆದ ವಿಧಾನಸಭಾ ಚುನಾವಣೆಯ ಪೂರ್ವದಲ್ಲಿ 593 ಭರವಸೆಗಳನ್ನು ನಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ನೀಡಿದ್ದೆವು. ಕಳೆದ ಎರಡು ವರ್ಷಗಳ ಅವಧಿಯಲ್ಲಿ 242 ಭರವಸೆಗಳನ್ನು ಈಡೇರಿಸಿದ್ದೇವೆ. ನಾವು ಕನಸುಗಳನ್ನು ಮಾರಾಟ ಮಾಡಿ, ಸುಳ್ಳು ಭರವಸೆಗಳನ್ನು ನೀಡಿ ಅಧಿಕಾರಕ್ಕೆ ಬಂದವರಲ್ಲ. ಒಂದು ಸರ್ಕಾರದ ಮಿತಿಯಲ್ಲಿ ಜನರ ಹಿತಕ್ಕಾಗಿ ಏನು ಕೆಲಸ ಮಾಡಲಿಕ್ಕೆ ಸಾಧ್ಯ ಇದೆಯೋ ಅವುಗಳನ್ನು ನಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದೇವೆ. ಅದನ್ನೇ ಅನುಷ್ಠಾನಕ್ಕೆ ತರುತ್ತಿದ್ದೇವೆ.

ಜನರು ಬೆವರು ಹರಿಸಿ ಗಳಿಸಿದ ತೆರಿಗೆ ಹಣದಲ್ಲಿ ರಾಜ್ಯದ ಸಂಪನ್ಮೂಲವನ್ನು ಬಳಸಿಕೊಂಡು ರೂಪಿಸುವ ಯೋಜನೆಗಳು ನಾಡಿನ ಪ್ರತಿಯೊಬ್ಬರಿಗೂ ತಲುಪಿ ಅವರ ಬದುಕು ಹಸನಾಗಬೇಕು. ನಾಡಿನ ಪ್ರತಿಮನೆಯಲ್ಲಿಯೂ ಸರ್ಕಾರದ ಯೋಜನೆಗಳ ಫಲಾನುಭವಿಗಳು ಇರಬೇಕು ಎನ್ನುವುದು ನನ್ನ ಅಭಿವೃದ್ಧಿಯ ಕಲ್ಪನೆ. ಇದನ್ನು ರಾಜ್ಯದಲ್ಲಿ ಸಾಕಾರಗೊಳಿಸಿದ್ದೇನೆ ಎನ್ನುವ ಭರವಸೆ ನನಗಿದೆ.

ನಮ್ಮ ಪಂಚ ಗ್ಯಾರಂಟಿ ಯೋಜನೆಗಳಿಗಾಗಿ ಇಲ್ಲಿಯ ವರೆಗೆ ಸುಮಾರು ₹90,000 ಕೋಟಿ ರೂಪಾಯಿ ಖರ್ಚಾಗಿದ್ದು, ಇದರಿಂದಾಗಿ ಪ್ರತಿಯೊಂದು ಕುಟುಂಬದ ಸರಾಸರಿ ತಿಂಗಳ ಆದಾಯ ಐದರಿಂದ ಹತ್ತು ಸಾವಿರ ರೂಪಾಯಿ ಹೆಚ್ಚಾಗಿದೆ.

ನಮ್ಮ ಗ್ಯಾರಂಟಿ ಯೋಜನೆಗಳು ನಾಡಿನ ಜನರ ಕಷ್ಟಕಾರ್ಪಣ್ಯಗಳನ್ನು ತಗ್ಗಿಸಿ, ಘನತೆಯ ಜೀವನದ ಮೂಲಕ ಬದುಕು ಕಟ್ಟಿಕೊಳ್ಳಲು ಒದಗಿಸಿರುವ ರಕ್ಷಣೆಗಳಾಗಿವೆ. ಬೆಲೆ ಏರಿಕೆ, ಆರ್ಥಿಕ ಹೊರೆ, ಬಡತನಗಳಂತಹ ಮಹಾಮಾರಿಗಳ ವಿರುದ್ಧ ಒದಗಿಸಿರುವ ಪ್ರಬಲ ಅಸ್ತ್ರಗಳಾಗಿವೆ. ಪ್ರತಿಯೊಬ್ಬ ನಾಗರಿಕನೂ ಸಮಾಜದಲ್ಲಿ ಆತ್ಮಗೌರವದಿಂದ ಬಾಳಲು, ತನ್ನ ಪ್ರಾಥಮಿಕ ಅವಶ್ಯಕತೆಗಳಿಗಾಗಿ ಯಾರ ಮುಂದೆಯೂ ದೈನ್ಯನಾಗದೆ ಬದುಕಲು ಒದಗಿಸಿರುವ ಆಸರೆಗಳಾಗಿವೆ.

ಇದೇ ವಿಚಾರವನ್ನು ವಿಸ್ತೃತ ನೆಲೆಯಲ್ಲಿ ನೋಡುವುದಾದರೆ, ಮೇಲಿನ ಆಸರೆಗಳು ವ್ಯಕ್ತಿಗತ ನೆಲೆಯ ಚೌಕಟ್ಟುಗಳನ್ನು ಹೊಂದಿದ್ದರೆ, ಪ್ರಸ್ತುತ ನಮ್ಮ ಮುಂದಿರುವ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯ ವರದಿ ಹಾಗೂ ಕೈಗೊಂಡಿರುವ ಪರಿಶಿಷ್ಟ ಜಾತಿ ಸಮಗ್ರ ಸಮೀಕ್ಷೆಯಂತಹ ಸಾಮಾಜಿಕ ನ್ಯಾಯದ ಕ್ರಮಗಳು ಸಾಮುದಾಯಿಕ ಸ್ವರೂಪವನ್ನು ಹೊಂದಿರುವಂತಹವಾಗಿವೆ. ಇವು ದಮನಿತ, ಹಿಂದುಳಿದ ಸಮುದಾಯಗಳ ಸಾಮಾಜಿಕ ಸಬಲೀಕರಣದ ಭಾಗವಾಗಿ, ಸಾಂವಿಧಾನಿಕ ಆಶಯಗಳನ್ನು ಸಾಕಾರಗೊಳಿಸುವ ಮಾರ್ಗವಾಗಿ ಕೈಗೊಂಡಿರುವ ಕ್ರಮಗಳಾಗಿವೆ.

ಸರ್ಕಾರಿ ಕಾಮಗಾರಿಗಳ ಗುತ್ತಿಗೆಯಲ್ಲಿ ತಂದಿರುವ ಮೀಸಲಾತಿಯಂತಹ ಕ್ರಾಂತಿಕಾರಕ ಕ್ರಮವೂ ಕೂಡ ಇದೇ ಆಶಯದಿಂದ ಮೂಡಿರುವುದಾಗಿದೆ. ಹೀಗೆ ಎಲ್ಲರ ಅಭ್ಯುದಯವನ್ನು ಒಳಗೊಳ್ಳುವ ಮಾನವಿಕ, ಸಾಮಾಜಿಕ ಪ್ರಗತಿಯ ತೇರನ್ನು ನಮ್ಮ ಸರ್ಕಾರವು ಯಶಸ್ವಿಯಾಗಿ ಎಳೆಯುತ್ತಿದೆ.

ಜನತೆಯ ನಿತ್ಯದ ಬದುಕಿಗೆ ಸಂಬಂಧಿಸಿದ ಮೂಲಭೂತ ಅಗತ್ಯಗಳಾದ ಆಹಾರ, ವಸತಿ, ಆರೋಗ್ಯ, ಶಿಕ್ಷಣದಂಥ ಕ್ಷೇತ್ರಗಳಿಗೆ ನಮ್ಮ ಸರ್ಕಾರ ಆದ್ಯತೆ ನೀಡಿದೆ. ಆ ಮೂಲಕ ಇಲ್ಲಿನ ಜನಜೀವನದಲ್ಲಿ ಧನಾತ್ಮಕ ಬದಲಾವಣೆಗೆ ಕಾರಣವಾಗಿದ್ದೇವೆ. ಮತ್ತೊಂದೆಡೆ ಬಂಡವಾಳ ಹೂಡಿಕೆಯೂ ಸೇರಿದಂತೆ ಆರ್ಥಿಕ, ಔದ್ಯಮಿಕ ಹಾಗೂ ಔದ್ಯೋಗಿಕ ಕ್ಷೇತ್ರಗಳಲ್ಲಿ ಸಕಾರಾತ್ಮಕ ವಾತಾವರಣವನ್ನು ರೂಪಿಸಿದ್ದೇವೆ. ❖

ಪ್ರತಿಯೊಂದು ಮನೆಗೂ ತಲುಪಿತು ಫಲ

ರಾಜಕಾರಣ ಎನ್ನುವುದು ಅಧಿಕಾರ ಎಂದು ನಾನೆಂದೂ ತಿಳಿದುಕೊಂಡವನಲ್ಲ, ನನ್ನ ಪಾಲಿಗೆ ಅದು ಜನರ ಸೇವೆ ಮಾಡಲು ಒದಗಿಬಂದ ಅವಕಾಶ. ಚುನಾವಣಾ ಕಾಲದ ರಾಜಕೀಯ ವಾಗ್ವಾದಗಳೇನೇ ಇರಲಿ, ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ನಂತರ ರಾಜ್ಯದ ಜನರಿಗೆ ನಾನು ಉತ್ತರದಾಯಿ. ಸರ್ಕಾರ ಎನ್ನುವುದು ಪಕ್ಷ, ಪ್ರದೇಶ, ಜಾತಿ,ಧರ್ಮಗಳನ್ನೆಲ್ಲ ಮೀರಿದ್ದು. ಅನ್ನಭಾಗ್ಯ, ಶಕ್ತಿ, ಗೃಹಲಕ್ಷ್ಮಿ, ಗೃಹಜ್ಯೋತಿ ಮತ್ತು ಯುವನಿಧಿ ಎನ್ನುವ ನಮ್ಮ ಪಂಚ ಗ್ಯಾರಂಟಿ ಯೋಜನೆಗಳನ್ನು ಸೇರಿಸಿಕೊಂಡರೆ ನಮ್ಮ ರಾಜ್ಯದ ಪ್ರತಿಯೊಂದು ಮನೆಯಲ್ಲಿಯೂ ನಮ್ಮ ಸರ್ಕಾರದ ಒಂದಲ್ಲ ಒಂದು ಯೋಜನೆಯ ಫಲಾನುಭವಿಗಳಿದ್ದಾರೆ. ಇವರಲ್ಲಿ ಎಲ್ಲ ಜಾತಿ, ಧರ್ಮ, ಪಕ್ಷ, ಪ್ರದೇಶಗಳ ಜನರಿದ್ದಾರೆ.

ಬನ್ನಿ ವಿಪಕ್ಷ ನಾಯಕರೇ... ಪಂಥಾಹ್ವಾನ

ಉದ್ಯಮಸ್ನೇಹಿ ನಾಡು, ಕುಶಲ ಮಾನವ ಸಂಪನ್ಮೂಲದ ಬೀಡಾಗಿ ಕರ್ನಾಟಕವನ್ನು ಕಟ್ಟುತ್ತಿದ್ದೇವೆ. ಸರ್ಕಾರದ ಸಾಧನೆಯ ಆಧಾರದಲ್ಲಿ ನಮ್ಮನ್ನು ಮುಖಾಮುಖಿ ಎದುರಿಸುವ ಆತ್ಮವಿಶ್ವಾಸ ನಮ್ಮ ಪ್ರತಿ ಪಕ್ಷಗಳ ನಾಯಕರಲ್ಲಿ ಖಂಡಿತಾ ಇಲ್ಲ. ಅವರೆಲ್ಲರೂ ಜಾತಿ ಮತ್ತು ಧರ್ಮಗಳನ್ನು ದಾಳಗಳನ್ನಾಗಿ ಮಾಡಿ ಸಮಾಜವನ್ನು ಒಡೆದು ಅದರ ಮೂಲಕ ರಾಜಕೀಯ ಲಾಭ ಪಡೆಯುವ ಹುನ್ನಾರದಲ್ಲಿದ್ದಾರೆ.

ರಾಜಕೀಯದ ಸಂವಾದಗಳು ಜನಪರವಾಗಿರಬೇಕು, ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರಬೇಕು. ರಾಜ್ಯ ಸರ್ಕಾರದ ಸಾಧನೆಯ ಬಗ್ಗೆ ಮಾತ್ರವಲ್ಲ, ಕೇಂದ್ರ ಸರ್ಕಾರದ ಅನುದಾನದ ಕಡಿತದ ಮೂಲಕ ರಾಜ್ಯ ಸರ್ಕಾರಕ್ಕೆ ಮಾಡುತ್ತಿರುವ ಅನ್ಯಾಯದ ಬಗ್ಗೆಯೂ ಬಹಿರಂಗ ಚರ್ಚೆಗೆ ನಾನು ಸಿದ್ಧನಿದ್ದೇನೆ. ಇದು ನನ್ನ ಪಂಥಾಹ್ವಾನ.

ಪ್ರಣಾಳಿಕೆಯ ಸೊಲ್ಲೆತ್ತದ ಮೋದಿ

ಕೇಂದ್ರ ಸರ್ಕಾರವಾಗಲಿ ಇಲ್ಲವೇ ಬಿಜೆಪಿ ಅಧಿಕಾರದಲ್ಲಿರುವ ಬೇರೆ ರಾಜ್ಯಗಳ ಸರ್ಕಾರವಾಗಲಿ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಗಳು ಮತ್ತು ಅವುಗಳ ಅನುಷ್ಠಾನದ ಲೆಕ್ಕವನ್ನು ಮತದಾರರ ಮುಂದೆ ಇಡುವ ಧೈರ್ಯವನ್ನು ಇಲ್ಲಿಯವರೆಗೆ ಮಾಡಿಲ್ಲ. 2018ರಿಂದ 2023ರ ವರೆಗೆ ನಮ್ಮ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಗಳ ಪೈಕಿ ಶೇಕಡಾ ಹತ್ತರಷ್ಟನ್ನೂ ಈಡೇರಿಸಿಲ್ಲ. ಕೇಂದ್ರದಲ್ಲಿ ಅಧಿಕಾರದಲ್ಲಿರುವ ಪ್ರಧಾನಿ ನರೇಂದ್ರ ಮೋದಿಯವರು ಚುನಾವಣಾ ಪ್ರಣಾಳಿಕೆಯಲ್ಲಿನ ಭರವಸೆಗಳ ಬಗ್ಗೆ ಸೊಲ್ಲನ್ನೇ ಎತ್ತುವುದಿಲ್ಲ.

ಈ ರೀತಿಯ ಆತ್ಮವಂಚನೆಯ ನಡವಳಿಕೆಯ ಕಾರಣದಿಂದಾಗಿಯೇ ಸಮಾಜದಲ್ಲಿ ರಾಜಕಾರಣಿಗಳ ಬಗ್ಗೆ ಸದ್ಭಾವನೆ ಇಲ್ಲ. ರಾಜಕಾರಣಿಗಳು ಸುಳ್ಳು ಹೇಳುತ್ತಾರೆ, ಮೋಸ ಮಾಡುತ್ತಾರೆ, ವಚನ ಭ್ರಷ್ಟರಾಗುತ್ತಾರೆ ಎಂಬೆಲ್ಲ ಅಭಿಪ್ರಾಯಗಳು ಜನರಲ್ಲಿದೆ. ಅದು ಅವರ ಅನುಭವದ ಮಾತು, ಅದನ್ನು ತಪ್ಪೆಂದು ನಾನು ವಾದ ಮಾಡಲಿಕ್ಕೆ ಹೋಗುವುದಿಲ್ಲ. ಈ ಅಭಿಪ್ರಾಯವನ್ನು ಹೋಗಲಾಡಿಸುವ ಬಹುದೊಡ್ಡ ಜವಾಬ್ದಾರಿ ಎಲ್ಲ ರಾಜಕೀಯ ಪಕ್ಷಗಳ ನಾಯಕರ ಮೇಲೆ ಇದೆ.

‘ಗ್ಯಾರಂಟಿ’ಗೆ ವಿಶ್ವಸಂಸ್ಥೆ ಮೆಚ್ಚುಗೆ

ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಾದ ‘ಗೃಹ ಜ್ಯೋತಿ’, ‘ಶಕ್ತಿ’, ‘ಗೃಹಲಕ್ಷ್ಮೀ’ ಮಹಿಳೆಯರು ಬದುಕು ಕಟ್ಟಿಕೊಳ್ಳುವಲ್ಲಿ ಮಹತ್ತರ ಪಾತ್ರ ವಹಿಸಿವೆ. ಈ ಯೋಜನೆಗಳು ಬಡವರ, ಮಧ್ಯಮವರ್ಗದವರ, ನೊಂದವರ, ತುಳಿತಕ್ಕೊಳಗಾದವರ ಬಾಳಿನಲ್ಲಿ ಕೊಂಚ ನೆಮ್ಮದಿ ತಂದಿದ್ದು ಮಾತ್ರವಲ್ಲದೇ, ಫಲಾನುಭವಿಗಳ ಬದುಕಿನಲ್ಲಿ ಆರ್ಥಿಕ ಮತ್ತು ಸಾಮಾಜಿಕ ಚೇತರಿಕೆ ನೀಡಿರುವುದಕ್ಕೆ ಸಾಕಷ್ಟು ಉದಾಹರಣೆಗಳು ಉಂಟು.

ಮಹಿಳಾ ಸಬಲೀಕರಣಕ್ಕೆ ಸರ್ಕಾರ ಕೈಗೊಂಡಿರುವ ವಿವಿಧ ಕ್ರಮಗಳು ಮತ್ತು ಯೋಜನೆಗಳ ಬಗ್ಗೆ ವಿಶ್ವಸಂಸ್ಥೆ ಸಾಮಾನ್ಯ ಸಭೆಯ ಅಧ್ಯಕ್ಷ ಫಿಲೆಮನ್ ಯಾಂಗ್ ಅವರೇ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಫಿಲೆಮನ್ ಅವರು ಫೆಬ್ರುವರಿ ತಿಂಗಳಲ್ಲಿ ಬೆಂಗಳೂರಿಗೆ ಭೇಟಿ ನೀಡಿದ್ದ ವೇಳೆ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವಲ್ಲಿ ರಾಜ್ಯ ಸರ್ಕಾರದ ಕ್ರಮಗಳ ಬಗ್ಗೆ ಅಧಿಕಾರಿಗಳ ಜತೆ ಮಾತುಕತೆ ನಡೆಸಿದರು.

ಮಹಿಳಾ ಸಬಲೀಕರಣದಲ್ಲಿ ಗ್ಯಾರಂಟಿಗಳಾದ ಗೃಹಲಕ್ಷ್ಮೀ, ಶಕ್ತಿ ಮತ್ತು ಗೃಹಜ್ಯೋತಿ ಯೋಜನೆಗಳು ಹೇಗೆ ನೆರವಾಗುತ್ತಿವೆ ಎಂಬುದನ್ನು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಫಿಲೆಮನ್‌ಗೆ ವಿವರಿಸಿದರು.

‘ಒಂದು ರಾಜ್ಯ, ಹಲವು ಜಗತ್ತು’ ಕುರಿತಾದ ಪುಸ್ತಕವನ್ನು ಫಿಲೆಮನ್ ಅವರಿಗೆ ಉಡುಗೊರೆಯಾಗಿ ನೀಡಿದರು. ಸ್ತ್ರೀ ಸ್ವಾವಲಂಬನೆ ಗುರಿಯಾಗಿಸಿ ಷರತ್ತು ರಹಿತವಾಗಿ ಪ್ರತಿ ಮನೆಯೊಡತಿ ಬ್ಯಾಂಕ್ ಖಾತೆಗೆ ತಿಂಗಳಿಗೆ ₹2,000 ಜಮೆ ಮಾಡುವ ‘ಗೃಹ ಲಕ್ಷ್ಮೀ’, ರಾಜ್ಯ ರಸ್ತೆ ಸಾರಿಗೆ ನಿಗಮ/ಸಂಸ್ಥೆ ಹಾಗೂ ಬಿಎಂಟಿಸಿ ಬಸ್‌ಗಳಲ್ಲಿ ರಾಜ್ಯದ ಮಹಿಳೆಯರಿಗೆ ಉಚಿತ ಪ್ರಯಾಣ ವ್ಯವಸ್ಥೆ ಕಲ್ಪಿಸಿರುವ ‘ಶಕ್ತಿ’ ಹಾಗೂ ಪ್ರತಿ ಮನೆಗೆ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ಒದಗಿಸುವ ‘ಗೃಹ ಜ್ಯೋತಿ’ ಕುರಿತು ಮಾಹಿತಿ ನೀಡಿದರು.

ಹಸಿವು, ಅಪೌಷ್ಟಿಕತೆ ತಡೆಗಟ್ಟುವುದು, ಕೌಶಲಾಧಾರಿತ ಉದ್ಯೋಗಾವಕಾಶ, ಅಡುಗೆ ಅನಿಲ ಪೂರೈಕೆ, ಉಚಿತ ವಿದ್ಯುತ್ ಪೂರೈಕೆ ಕುರಿತು ಕಾರ್ಯಕ್ರಮಗಳ ಬಗ್ಗೆಯೂ ವಿವರಿಸಿದರು. ಮಹಿಳೆಯರು ಸ್ವಸಹಾಯ ಗುಂಪುಗಳನ್ನು ಸಂಘಟಿಸಲು , ಕೃಷಿ ಮತ್ತು ತೋಟಗಾರಿಕಾ ಉತ್ಪನ್ನಗಳ ಮೌಲ್ಯವರ್ಧನೆಗೆ ಪ್ರೋತ್ಸಾಹ, ಸಮಗ್ರ ಮತ್ತು ಸಾವಯವ ಕೃಷಿಗೆ ಪ್ರೋತ್ಸಾಹ ಕ್ರಮಗಳು ಸಮಗ್ರ ಹವಾಮಾನ ಬದಲಾವಣೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲು ಸಹಾಯ ಮಾಡುತ್ತದೆ ಎಂದು ಸಂತಸ ವ್ಯಕ್ತಪಡಿಸಿದರು.

ವಿಶ್ವಸಂಸ್ಥೆ ಸಾಮಾನ್ಯ ಸಭೆಯ ಅಧ್ಯಕ್ಷ ಫಿಲೆಮನ್ ಯಾಂಗ್ ಅವರಿಗೆ ‘ಒಂದು ರಾಜ್ಯ ಹಲವು ಜಗತ್ತು’ ಪುಸ್ತಕ ನೀಡಿದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್

ರಾಜ್ಯದಲ್ಲಿ ಸಾಮಾಜಿಕ-ಆರ್ಥಿಕ ಮತ್ತು ರಾಜಕೀಯ ಸಮಾನತೆಯನ್ನು ಉತ್ತೇಜಿಸಲು ಮಹಿಳಾ ಪರ ಕಾರ್ಯಕ್ರಮಗಳನ್ನು ಮುನ್ನಡೆಸುತ್ತಿರುವ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾಳಜಿಯನ್ನು ಫಿಲೆಮನ್ ಯಾಂಗ್ ಶ್ಲಾಘಿಸಿದರು. ಮುಂದಿನ ದಿನಗಳಲ್ಲಿ ವಿಶ್ವಸಂಸ್ಥೆಯ ಕಾರ್ಯಾಗಾರಗಳಲ್ಲಿ ಕರ್ನಾಟಕದ ಯಶೋಗಾಥೆಗಳನ್ನು ಹಂಚಿಕೊಳ್ಳುವಂತೆ ಸಲಹೆ ನೀಡಿದರು. ಇತರೆ ದೇಶಗಳು ಸಹ ಈ ಅತ್ಯುತ್ತಮ ಯೋಜನೆಗಳನ್ನು ಅಳವಡಿಸಿಕೊಳ್ಳಬಹುದು ಎಂದೂ ಅವರು ಅಭಿಪ್ರಾಯ ಪಟ್ಟರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ವಿಧಾನಸೌಧ ಆವರಣದಲ್ಲಿ ನಾಡದೇವಿ ಭುವನೇಶ್ವರಿಯ 25 ಅಡಿ ಎತ್ತರದ ಕಂಚಿನ ಪ್ರತಿಮೆ ಅನಾವರಣ

ಆಡಳಿತ ವಿಕೇಂದ್ರೀಕರಣಕ್ಕೆ ‘ಗ್ರೇಟರ್ ಬೆಂಗಳೂರು’

ರಾಜಧಾನಿ ಬೆಂಗಳೂರಿನ ಸಮಗ್ರ ಅಭಿವೃದ್ಧಿ ಹಾಗೂ ಸ್ಥಳೀಯ ಆಡಳಿತಕ್ಕೆ ಹೆಚ್ಚಿನ ಒತ್ತು ನೀಡಲು ವಿಕೇಂದ್ರೀಕರಣಕ್ಕೆ ಹೆಚ್ಚು ಅನುವಾಗುವಂತೆ ‘ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ’ಯನ್ನು ಮೇ 15ರಿಂದ ರಾಜ್ಯ ಸರ್ಕಾರ ಜಾರಿಗೊಳಿಸಿದೆ.

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ ಜಾರಿಯಾದ ಮೇಲೆ ಮುಖ್ಯಮಂತ್ರಿಯವರ ನೇತೃತ್ವದ ‘ಗ್ರೇಟರ್ ಬೆಂಗಳೂರು ಪ್ರಾಧಿಕಾರ’ (ಜಿಬಿಎ) 120 ದಿನಗಳಲ್ಲಿ ರಚನೆಯಾಗಲಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿ ಬೆಂಗಳೂರು ಅಭಿವೃದ್ಧಿ ಸಚಿವರು ಉಪಾಧ್ಯಕ್ಷರಾಗಿರುತ್ತಾರೆ. ಗ್ರೇಟರ್ ಬೆಂಗಳೂರು ವ್ಯಾಪ್ತಿಯ ಶಾಸಕರು–ಸಚಿವರು, ನಗರಾಭಿವೃದ್ಧಿ ಸಚಿವರು, ಪಾಲಿಕೆಗಳ ಮೇಯರ್‌ಗಳು, ಬಿಡಿಎ ಆಯುಕ್ತ, ಬೆಂಗಳೂರು ಜಲಮಂಡಳಿ ಅಧ್ಯಕ್ಷ, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ, ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ, ಕಂದಾಯ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಪೊಲೀಸ್ ಕಮಿಷನರ್, ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ, ರಾಜ್ಯ ಅಗ್ನಿಶಾಮಕ ಮತ್ತು ತುರ್ತುಸೇವೆಗಳ ನಿರ್ದೇಶಕ, ನಗರ ಭೂಸಾರಿಗೆ ನಿರ್ದೇಶನಾಲಯದ ಆಯುಕ್ತ, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಮಹಾನಗರ ಆಯುಕ್ತ ಸದಸ್ಯರಾಗಲಿದ್ದಾರೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

ಪ್ರಸ್ತುತಿ: ಪಿ.ವಿ ಬ್ರ್ಯಾಂಡ್ ಸ್ಪಾಟ್

ಗ್ರಾಮೀಣಾಭಿವೃದ್ಧಿ ಇಲಾಖೆ

- ನರೇಗಾ ಯೋಜನೆ ಅಡಿ 2023–24ನೇ ಸಾಲಿನಲ್ಲಿ ₹3,837 ಕೋಟಿ, 2024–25ನೇ ಸಾಲಿನಲ್ಲಿ ₹4,714 ಕೋಟಿ ಕೂಲಿ ಮೊತ್ತ ಪಾವತಿ ಮಾಡಲಾಗಿದೆ
- ಜಲಜೀವನ ಅಭಿಯಾನದ ಅಡಿಯಲ್ಲಿ 2023–24ನೇ ಸಾಲಿನಲ್ಲಿ ₹20,800 ಕೋಟಿ ವೆಚ್ಚದಲ್ಲಿ 16.09 ಲಕ್ಷ ಮನೆಗಳಿಗೆ ನಲ್ಲಿ ನೀರಿನ ಸಂಪರ್ಕ
- ಸ್ವಚ್ಛ ಭಾರತ ಅಭಿಯಾನದ ಅಡಿಯಲ್ಲಿ 1.71 ಲಕ್ಷ ಮನೆಗಳಲ್ಲಿ ಶೌಚಾಲಯ ನಿರ್ಮಾಣ. ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ತಲಾ ₹25 ಲಕ್ಷ ವೆಚ್ಚದಲ್ಲಿ 400 ಸಮುದಾಯ ಶೌಚಾಲಯ ನಿರ್ಮಾಣಕ್ಕೆ ಅನುಮೋದನೆ

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

- ರಾಜ್ಯದಲ್ಲಿ ₹6,57,660 ಕೋಟಿ ಹೂಡಿಕೆಗೆ 115 ಒಡಂಬಡಿಕೆ. 2,32,771 ಉದ್ಯೋಗ ಸೃಷ್ಟಿಯ ನಿರೀಕ್ಷೆ
- ಏಕಗವಾಕ್ಷಿ ವ್ಯವಸ್ಥೆ ಜಾರಿ 906 ಬಂಡವಾಳ ಹೂಡಿಕೆ ಯೋಜನೆಗಳಿಗೆ ಅನುಮೋದನೆ ₹1,13,200 ಕೋಟಿ ಬಂಡವಾಳ ಹೂಡಿ, 2,23,982 ಜನರಿಗೆ ಉದ್ಯೋಗವಕಾಶ
- ಬೆಂಗಳೂರಿನ ದೊಡ್ಡಬಳ್ಳಾಪುರ-ದಾಬಸ್‌ಪೇಟೆ ರಸ್ತೆಯಲ್ಲಿ ಕ್ವಿನ್‌ಸಿಟಿ ನಿರ್ಮಾಣಕ್ಕೆ ಸಿದ್ಧತೆ. 17 ಕೈಗಾರಿಕಾ ಪ್ರದೇಶಗಳಿಗೆ ವಿಶೇಷ ಹೂಡಿಕೆ ಸ್ಥಾನ
- ಇನ್‌ವೆಸ್ಟ್ ಕರ್ನಾಟಕ–2025. ₹6.23 ಲಕ್ಷ ಕೋಟಿ ಹೂಡಿಕೆ ಒಪ್ಪಂದ 1,101 ಕಂಪನಿಗಳಿಗೆ ಅನುಮೋದನೆ
- ಬೆಂಗಳೂರಿನಲ್ಲಿ 2ನೇ ವಿಮಾನನಿಲ್ದಾಣ ಸ್ಥಾಪಿಸಲು ಸಿದ್ಧತೆ ಆರಂಭ. ಕನಕಪುರ, ನೆಲಮಂಗಲ ಬಳಿ ಎರಡು ಸ್ಥಳಗಳ ಪರಿಶೀಲನೆ

ಶಾಲಾ ಶಿಕ್ಷಣ ಇಲಾಖೆ

2023-24

- 1.4 ಕೋಟಿ ಶಾಲಾ ವಿದ್ಯಾರ್ಥಿಗಳಲ್ಲಿ ಸಂವಿಧಾನದ ಆಶಯಗಳ ಬಗ್ಗೆ ಅರಿವು ಮೂಡಿಸಲು ಸಂವಿಧಾನ ಪೀಠಿಕೆ ಓದು ಕಾರ್ಯಕ್ರಮ
- 11,494 ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು, 43 ಸಾವಿರ ಅತಿಥಿ ಶಿಕ್ಷಕರ ನೇಮಕ
- ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಗೆ ವಾರ್ಷಿಕ ಮೂರು ಪರೀಕ್ಷಾ ವ್ಯವಸ್ಥೆ, ವೆಬ್‌ಕಾಸ್ಟಿಂಗ್ ಜಾರಿ

2024-25

- ಅಜೀಂ ಪ್ರೇಮ್‌ಜಿ ಫೌಂಡೇಷನ್ ಸಹಯೋಗದಲ್ಲಿ ಮಧ್ಯಾಹ್ನದ ಬಿಸಿಯೂಟಕ್ಕೆ ವಾರದಲ್ಲಿ ಆರು ದಿನ ಮೊಟ್ಟೆ ವಿತರಣೆ
- 500 ಶಾಲೆಗಳನ್ನು ಕೆಪಿಎಸ್ ಶಾಲೆಗಳನ್ನಾಗಿ ಪರಿವರ್ತನೆ, ಕಲ್ಯಾಣ ಕರ್ನಾಟಕದಲ್ಲಿ ಅಕ್ಷರ ಆವಿಷ್ಕಾರ ಯೋಜನೆ
- ಮಕ್ಕಳಲ್ಲಿ ಸಾಮಾಜಿಕ ಸಾಮರಸ್ಯ, ವೈಜ್ಞಾನಿಕ ಮನೋಭಾವ, ಸಹಬಾಳ್ವೆಯ ವಿದ್ಯಾ-ಕೇಂದ್ರಗಳನ್ನಾಗಿ ರೂಪಿಸಲು ‘ನಾವು-ಮನುಜರು’ ಕಾರ್ಯಕ್ರಮ

ಉನ್ನತ ಶಿಕ್ಷಣ ಇಲಾಖೆ

2023-24

- 1242 ಸಹಾಯಕ ಪ್ರಾಧ್ಯಾಪಕರ ನೇಮಕ. 20 ಸಾವಿರ ವಿದ್ಯಾರ್ಥಿಗಳಿಗೆ ಕೌಶಲ ತರಬೇತಿ

2024-25

- ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಮೂಲಸೌಕರ್ಯಕ್ಕೆ ₹277 ಕೋಟಿ, ಪಾಲಿಟೆಕ್ನಿಕ್, ಎಂಜಿನಿಯರಿಂಗ್‌ಗೆ ₹142 ಕೋಟಿ ವೆಚ್ಚ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ

- ಗೃಹಲಕ್ಷ್ಮಿ ಯೋಜನೆಯಡಿ ಪ್ರತಿ ಮಹಿಳೆಗೆ ಮಾಸಿಕ ₹2000ದಂತೆ 1,23,95,327 ಮಹಿಳೆಯರಿಗೆ ₹42,530.72 ಕೋಟಿಗಳ ಹಣ ಜಮೆ
- 259 ಅಂಗನವಾಡಿಯ 3,093 ಮಕ್ಕಳಿಗೆ ಎಲ್‌ಕೆಜಿ, ಯುಕೆಜಿ ತರಗತಿ. 175 ನಗರ ಮತ್ತು 417 ಗ್ರಾಮೀಣ ಪ್ರದೇಶದ ಅಂಗನವಾಡಿ ಕೇಂದ್ರಗಳ ಸ್ವಂತ ಕಟ್ಟಡ ನಿರ್ಮಾಣಕ್ಕೆ ₹85 ಕೋಟಿ ಅನುದಾನ
- ₹1,452 ಕೋಟಿಗಳ ಅನುದಾನದಲ್ಲಿ 43.20 ಲಕ್ಷ ಫಲಾನುಭವಿಗಳಿಗೆ ಪೂರಕ ಪೌಷ್ಟಿಕ ಆಹಾರ, ಹಾಲು ಮತ್ತು ಮೊಟ್ಟೆ ವಿತರಣೆ
- 6 ವರ್ಷದೊಳಗಿನ ಮಕ್ಕಳಿಗೆ 5 ಹೊಸ ದತ್ತು ಕೇಂದ್ರಗಳ ಆರಂಭ, 11,358 ಅಂಕವಿಕಲ ಮಕ್ಕಳ ಶಿಕ್ಷಣಕ್ಕೆ ವಾರ್ಷಿಕ ₹80 ಕೋಟಿ ವೆಚ್ಚ
- ಪ್ರತಿ ಅಂಗನವಾಡಿ ಕೇಂದ್ರಗಳಿಗೆ ರೂ.೧.೦೦ ಲಕ್ಷಗಳಂತೆ ರಾಜ್ಯದ ಒಟ್ಟು 17,551 ಅಂಗನವಾಡಿ ಕೇಂದ್ರಗಳ ಉನ್ನತೀಕರಣಕ್ಕೆ ₹174.75 ಕೋಟಿ ಅನುದಾನ

ಗುತ್ತಿಗೆಯಲ್ಲಿ ಮೀಸಲಾತಿ

ಸಿವಿಲ್ ಕಾಮಗಾರಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಗುತ್ತಿಗೆದಾರರಿಗೆ ನೀಡಲಾಗಿದ್ದ ಮೀಸಲಾತಿಯನ್ನು, ಹಿಂದುಳಿದ ವರ್ಗಗಳ ಗುತ್ತಿಗೆದಾರರಿಗೂ ಸಿದ್ದರಾಮಯ್ಯ ಸರ್ಕಾರವ ವಿಸ್ತರಿಸಿದೆ. ಹಿಂದುಳಿದ ವರ್ಗಗಳ ಪ್ರವರ್ಗ–1, ಪ್ರವರ್ಗ–2ಎ ಮತ್ತು ಪ್ರವರ್ಗ 2ಬಿ (ಮುಸ್ಲಿಮರು ಈ ವರ್ಗದಲ್ಲಿ ಬರುತ್ತಾರೆ) ಅಡಿಯಲ್ಲಿ ಬರುವ ಸಮುದಾಯಗಳಿಗೆ ಈ ಮೀಸಲಾತಿ ಸೌಲಭ್ಯ ಕಲ್ಪಿಸುವುದಕ್ಕೆ ಸರ್ಕಾರ ಮುಂದಾಗಿದೆ.

ಕರ್ನಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆಗೆ ಈ ಹಿಂದಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ತಿದ್ದುಪಡಿ ತಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಗುತ್ತಿಗೆದಾರರಿಗೆ ₹50 ಲಕ್ಷದವರೆಗಿನ ಕಾಮಗಾರಿಗಳಲ್ಲಿ ಶೇ 24.10ರಷ್ಟು ಮೀಸಲಾತಿ ಕಲ್ಪಿಸಲಾಗಿತ್ತು. ಈಗಿನ ಸರ್ಕಾರದ ಅವಧಿಯಲ್ಲಿ ಮತ್ತೆ ತಿದ್ದುಪಡಿ ತಂದು ₹1 ಕೋಟಿ ವೆಚ್ಚದ ಕಾಮಗಾರಿಗಳಿಗೆ ಮೀಸಲಾತಿಯನ್ನು ವಿಸ್ತರಿಸಿದೆ.

2024ರ ಜೂನ್ 10ರಂದು ಅಧಿಸೂಚನೆ ಹೊರಡಿಸಿದ ಸರ್ಕಾರ, ₹1 ಕೋಟಿವರೆಗಿನ ವೆಚ್ಚದ ಕಾಮಗಾರಿಗಳಲ್ಲಿ ಹಿಂದುಳಿದ ವರ್ಗಗಳ ಪ್ರವರ್ಗ–1ರ ಪಟ್ಟಿಯಲ್ಲಿರುವ ಜಾತಿಗಳಿಗೆ ಸೇರಿದ ಗುತ್ತಿಗೆದಾರರಿಗೆ ಶೇ 4ರಷ್ಟು ಮತ್ತು ಪ್ರವರ್ಗ–2ಎ ಪಟ್ಟಿಯಲ್ಲಿರುವ ಜಾತಿಗಳಿಗೆ ಸೇರಿದ ಗುತ್ತಿಗೆದಾರರಿಗೆ ಶೇ 15ರಷ್ಟು ಮೀಸಲಾತಿ ನೀಡಿತ್ತು.

ಪರಿಶಿಷ್ಟ ಜಾತಿ–ಪಂಗಡ, ಹಿಂದುಳಿದ ವರು ಹಾಗೂ ಮುಸ್ಲಿಂ ಸಮುದಾಯದ ಗುತ್ತಿಗೆದಾರರಿಗೆ ₹2 ಕೋಟಿ ವೆಚ್ಚದ ಕಾಮಗಾರಿಗಳು, ₹1 ಕೋಟಿವರೆಗಿನ ಸರಕು ಮತ್ತು ಸೇವೆಗಳ ಪೂರೈಕೆಯ ಟೆಂಡರ್‌ನಲ್ಲಿ ಮೀಸಲಾತಿ ಕಲ್ಪಿಸುವ ಸಲುವಾಗಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಮಸೂದೆ–2025 ಅನ್ನು ವಿಧಾನ ಮಂಡಲದ ಉಭಯ ಸದನಗಳಲ್ಲಿ ಮಂಡಿಸಿ ಅನುಮೋದನೆ ಪಡೆದಿದೆ.

ಪ್ರಜಾವಾಣಿ
14
ಪ್ರಜಾ ಪ್ಲಸ್
| ಮನರಂಜನೆ
| ಜಾಹೀರಾತು ಪ್ರೋತ್ಸಾಹ
| ಉದ್ಯಮ ಅಭಿವೃದ್ಧಿ
ಮಂಗಳವಾರ, 20 ಮೇ 2025

ಜನ್ಮದಿನಕ್ಕಿಲ್ಲ ಎನ್‌ಟಿಆರ್‌ನೀಲ್ ಗ್ಲಿಮ್ಸ್

ಜೂ.ಎನ್‌ಟಿಆರ್ ಜನ್ಮದಿನದಂದು(ಮೇ 20) '#ಎನ್‌ಟಿಆರ್-ನೀಲ್' ಸಿನಿಮಾದ ಗ್ಲಿಮ್ಸ್ ಬಿಡುಗಡೆಯಾಗುವುದಿಲ್ಲ ಎಂದು ಚಿತ್ರತಂಡ ತಿಳಿಸಿದೆ. ಈ ಸಿನಿಮಾ 2026ರ ಜೂನ್ 25ಕ್ಕೆ ಬಿಡುಗಡೆಯಾಗಲಿದೆ.

ಸ್ಟಾರ್‌ಗಳ ಸಿನಿಮಾಗಳಿಲ್ಲದೆ ಮುಚ್ಚುತ್ತಿರುವ ಥಿಯೇಟರ್ಸ್

ಅಭಿಲಾಷ್ ಪಿ.ಎಸ್.

'ಮೊದಲು ಶುಕ್ರವಾರದ ಮಾರ್ನಿಂಗ್ ಶೋಗೆ 'ಚಿತ್ರಮಂದಿರ ಭರ್ತಿಯಾಗಿದೆ' ಎಂಬ ಬೋರ್ಡ್ ಹಾಕುತ್ತಿದ್ದವು. ಇದೀಗ 'ಪ್ರೇಕ್ಷಕರಿಲ್ಲದೆ ಶೋ ಸ್ಥಗಿತಗೊಳಿಸಲಾಗಿದೆ' ಎಂದು ಹೇಳುವ ಸ್ಥಿತಿ ಬಂದಿದೆ...'

ಹೀಗೆಂದವರು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ, ಮೂರು ಚಿತ್ರಮಂದಿರಗಳ ಮಾಲೀಕ ಎಂ.ನರಸಿಂಹಲು. ಇಂತಹ ಸ್ಥಿತಿಯಲ್ಲಿ ರಾಜ್ಯದಲ್ಲಿನ ಚಿತ್ರಮಂದಿರಗಳನ್ನು ಉಳಿಸಿಕೊಳ್ಳಲು ಮುಖ್ಯಮಂತ್ರಿಗಳ ಮೊರೆ ಹೋಗಲು ಇದೀಗ ಚಿತ್ರರಂಗ ನಿರ್ಧರಿಸಿದೆ.

ಇತ್ತೀಚೆಗೆ ನಟ ಶಿವರಾಜ್‌ಕುಮಾರ್ ಅವರ ನಿವಾಸದಲ್ಲಿ ಚಿತ್ರರಂಗದ ಸಮಸ್ಯೆಗಳ ಬಗ್ಗೆ ಚರ್ಚಿಸಲು ಸಭೆಯೊಂದು ನಡೆದಿತ್ತು. ಈ ಸಭೆಯಲ್ಲಿ ಮುಖ್ಯವಾಗಿ ಚಿತ್ರಮಂದಿರಗಳ ಮಾಲೀಕರ ಸಮಸ್ಯೆಗಳು ವಿಸ್ತೃತವಾಗಿ ಚರ್ಚೆಯಾದವು. ಸಭೆಯಲ್ಲಿ ನಟರಾದ ದುನಿಯಾ ವಿಜಯ್, ಧ್ರುವ ಸರ್ಜಾ, ಗಣೇಶ್, ನಿರ್ಮಾಪಕರಾದ ಸಾ.ರಾ. ಗೋವಿಂದು, ಜಯಣ್ಣ, ಕೆ.ಪಿ. ಶ್ರೀಕಾಂತ್, ಬಿ.ಕೆ.ಗಂಗಾಧರ್, ಪ್ರದರ್ಶಕರ ಸಂಘದ ಅಧ್ಯಕ್ಷ ಕೆ.ವಿ. ಚಂದ್ರಶೇಖರ್ ಮುಂತಾದವರು ಭಾಗವಹಿಸಿದ್ದರು.

ಶಿವರಾಜ್‌ಕುಮಾರ್


ನರಸಿಂಹಲು

'ಸ್ಟಾರ್ ನಟರ ಚಿತ್ರಗಳಿಲ್ಲದೆ ಚಿತ್ರಮಂದಿರಗಳು ಮುಚ್ಚುವ ಹಂತಕ್ಕೆ ಬಂದಿವೆ. ಚಿತ್ರಮಂದಿರಗಳಿಗೆ ಜನರು ಬರುತ್ತಿಲ್ಲ. ದೊಡ್ಡ ಸಿನಿಮಾಗಳೇ ಇಲ್ಲ. ಇದರಿಂದಾಗಿ ಚಿತ್ರಮಂದಿರಗಳ ಮಾಲೀಕರು ಸಂಕಷ್ಟಕ್ಕೀಡಾಗಿದ್ದಾರೆ. ಸ್ಯಾಟಲೈಟ್, ಒಟಿಟಿ ವೇದಿಕೆಗಳು ಎಷ್ಟೇ ಇದ್ದರೂ ಸಿನಿಮಾಗಳು ಮೊದಲು ಚಿತ್ರಮಂದಿರಗಳಲ್ಲೇ ಬಿಡುಗಡೆಯಾಗಬೇಕಲ್ಲವೇ. ಇಲ್ಲಿಯೇ ಹೆಚ್ಚಿನ ಆದಾಯ ಬರುವುದು. ಚಿತ್ರಮಂದಿರಗಳೇ ಇಲ್ಲವಾದಲ್ಲಿ...ಹೀಗೊಂದು ಸ್ಥಿತಿ ಇದೀಗ ಬಂದಿದೆ. ಚಿತ್ರಮಂದಿರಗಳ ಸಂಖ್ಯೆ ಇಳಿಕೆಯಾಗುತ್ತಿದೆ. ಬೆಂಗಳೂರಿನಲ್ಲಿ ಇತ್ತೀಚೆಗೆ ಕಾವೇರಿ, ಉಮಾ, ರಂಗನಾಥ ಹಾಗೂ ವಿನಾಯಕ ಚಿತ್ರಮಂದಿರಗಳು ಮುಚ್ಚಿವೆ. ನನ್ನದೂ ಮೂರು ಚಿತ್ರಮಂದಿರಗಳಿವೆ. ಆದಾಯವಿಲ್ಲದೆ ಎಷ್ಟು ದಿನವೆಂದು ಸಿಬ್ಬಂದಿಗೆ ವೇತನ ನೀಡುತ್ತಿರಲು ಸಾಧ್ಯ? ಎಷ್ಟು ಸಾಲ ಮಾಡಲು ಸಾಧ್ಯ? ಪ್ರತಿ ತಿಂಗಳು ನನ್ನ ಎರಡು ಚಿತ್ರಮಂದಿರಗಳಿಗೆ ಐದೂವರೆ ಲಕ್ಷ ರೂಪಾಯಿ ವಿದ್ಯುತ್ ಬಿಲ್ ಬರುತ್ತಿದೆ. ಜನ ಬಂದಾಗಲಷ್ಟೇ ಚಿತ್ರಮಂದಿರಗಳನ್ನು ತೆರೆಯುವ ಸ್ಥಿತಿ ಬಂದಿದೆ. ಸ್ಟಾರ್ ನಟರೆಲ್ಲರನ್ನೂ ಕರೆದು ಮತ್ತೊಂದು ಸುತ್ತಿನ ಸಭೆ ನಡೆಸುವುದಾಗಿ ಶಿವರಾಜ್‌ಕುಮಾರ್ ಅವರು ತಿಳಿಸಿದ್ದಾರೆ. ಸ್ಟಾರ್ ನಟರ ಚಿತ್ರಗಳು ಕನಿಷ್ಠ ಎರಡು ತಿಂಗಳಿಗೆ ಒಂದು ಬರಬೇಕಿದೆ. ಹೆಚ್ಚು ಸಿನಿಮಾಗಳನ್ನು ಮಾಡುವ ಮನಃಸ್ಥಿತಿ ನಾಯಕರಿಗೇ ಬರಬೇಕು' ಎಂದರು ನರಸಿಂಹಲು.

'ಇರುವ ಚಿತ್ರಮಂದಿರಗಳನ್ನು ಉಳಿಸಿಕೊಳ್ಳಬೇಕಿದೆ. ಸರ್ಕಾರದಿಂದ ಸಬ್ಸಿಡಿ ಹಾಗೂ ಚಿತ್ರಮಂದಿರಗಳ ನವೀಕರಣಕ್ಕೆ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡಬೇಕು. ಈ ನಿಟ್ಟಿನಲ್ಲಿ ಇದೇ ತಿಂಗಳಾಂತ್ಯಕ್ಕೆ ಶಿವರಾಜ್‌ಕುಮಾರ್ ಅವರ ಸಮ್ಮುಖದಲ್ಲಿ ಮುಖ್ಯಮಂತ್ರಿಯವರನ್ನು ಭೇಟಿಯಾಗಿ ಮನವಿ ಸಲ್ಲಿಸಲಿದ್ದೇವೆ' ಎಂದರು. ❖

'120 ಚಿತ್ರಮಂದಿರಗಳು ತಾತ್ಕಾಲಿಕ ಸ್ಥಗಿತ'

'ಕಳೆದ ಎರಡ್ಮೂರು ತಿಂಗಳಲ್ಲಿ ರಾಜ್ಯದಾದ್ಯಂತ ಸುಮಾರು 120 ಚಿತ್ರಮಂದಿರಗಳು ತಾತ್ಕಾಲಿಕವಾಗಿ ಸ್ಥಗಿತವಾಗಿವೆ. ಸದ್ಯಕ್ಕೆ ಸ್ಟಾರ್ಸ್ ಸಿನಿಮಾಗಳಿಲ್ಲ. ಮುಂದೆ ಸರಣಿಯಾಗಿ ಸ್ಟಾರ್‌ಗಳ ಸಿನಿಮಾಗಳು ಬಿಡುಗಡೆಯಾಗಲಿವೆ.

ಅಲ್ಲಿಯವರೆಗೆ ಚಿತ್ರಮಂದಿರಗಳನ್ನು ಉಳಿಸಿಕೊಳ್ಳುವುದು ಬಹುಮುಖ್ಯ. ಮುಂದಿನ ಎರಡು ವರ್ಷ ಚಿತ್ರಮಂದಿರಗಳಿಗೆ ವಿದ್ಯುತ್ ಸಬ್ಸಿಡಿ, ತೆರಿಗೆ ಸಬ್ಸಿಡಿ ಅಗತ್ಯವಾಗಿದೆ. ಈ ಬೇಡಿಕೆಗಳನ್ನು ಮುಖ್ಯಮಂತ್ರಿಗಳ ಮುಂದೆ ಇಡಲಿದ್ದೇವೆ. ಸ್ಟಾರ್ ನಟರ ಸಿನಿಮಾಗಳು ವಿಳಂಬವಾಗುತ್ತಿರುವ ಬಗ್ಗೆಯೂ ಶಿವರಾಜ್‌ಕುಮಾರ್ ಅವರು ಸಂಬಂಧಪಟ್ಟವರೊಂದಿಗೆ ಮಾತನಾಡಿದ್ದಾರೆ. ಮುಂದಿನ ಆರರಿಂದ ಒಂಬತ್ತು ತಿಂಗಳಲ್ಲಿ ಹಲವು ಸ್ಟಾರ್ ನಟರ ಚಿತ್ರಗಳು ತೆರೆಗೆ ಬರುತ್ತಿವೆ. ಈ ಅವಧಿಯಲ್ಲಿ ಸಿನಿಮಾವಿಲ್ಲವೆಂದು ಚಿತ್ರಮಂದಿರಗಳನ್ನು ಮುಚ್ಚುತ್ತಿದ್ದಾರೆ. ಸರ್ಕಾರ ಏನೇ ಸಹಾಯ ಮಾಡಿದರೂ ಸಿನಿಮಾವಿಲ್ಲವೆಂದರೆ ಪ್ರಯೋಜನವಿಲ್ಲ. ಮುಖ್ಯವಾಗಿ ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ಚಿತ್ರಮಂದಿರಗಳ ಸ್ಥಿತಿ ಘೋರವಾಗಿದೆ' ಎನ್ನುತ್ತಾರೆ ಪ್ರದರ್ಶಕರ ಸಂಘದ ಅಧ್ಯಕ್ಷ ಕೆ.ವಿ.ಚಂದ್ರಶೇಖರ್.

ಕಾವೇರಿ ಚಿತ್ರಮಂದಿರ

ಸ್ಟಾರ್ ನಟರ ಸಿನಿಮಾಗಳಿಲ್ಲ!

2025ರ ಐದು ತಿಂಗಳು ಮುಗಿಯುತ್ತಾ ಬಂದಿದೆ. ಇಲ್ಲಿಯವರೆಗೂ ಸ್ಟಾರ್ ನಟರ ಸಿನಿಮಾ ರಿಲೀಸ್ ಆಗಿಲ್ಲ. ಯುವ ರಾಜ್‌ಕುಮಾರ್ ನಟನೆಯ 'ಎಕ್ಕ' ಸಿನಿಮಾ ಜೂನ್ 6ರಂದು ರಿಲೀಸ್ ಆಗಲಿದೆ ಎಂದು ಚಿತ್ರತಂಡ ತಿಳಿಸಿದೆ. ಆದರೆ ಇದು ಮುಂದಕ್ಕೆ ಹೋಗುವ ಸಾಧ್ಯತೆಯೇ ದಟ್ಟವಾಗಿ ಕಾಣುತ್ತಿದೆ. ಆಗಸ್ಟ್ 15ರಂದು '45' ಹಾಗೂ ಅಕ್ಟೋಬರ್ 2ರಂದು 'ಕಾಂತಾರ' ಪ್ರೀಕ್ವೆಲ್ ಹೊರತುಪಡಿಸಿ ಬೇರೆ ಯಾವ ಸ್ಟಾರ್ ನಟರ ಚಿತ್ರಗಳ ಬಿಡುಗಡೆ ದಿನಾಂಕ ಘೋಷಣೆಯಾಗಿಲ್ಲ.

ಎಂಆರ್‌ಟಿ ತೆಕ್ಕೆಗೆ 'ಚೌಕಿದಾರ್'

ಪೃಥ್ವಿ, ಧನ್ಯಾ

'ದಿಯಾ' ಖ್ಯಾತಿಯ ಪೃಥ್ವಿ ಅಂಬಾರ್ ಹಾಗೂ ಧನ್ಯಾ ರಾಮ್‌ಕುಮಾರ್ ನಟಿಸಿರುವ 'ಚೌಕಿದಾರ್' ಸಿನಿಮಾದ ಚಿತ್ರೀಕರಣ ಪೂರ್ಣಗೊಂಡಿದ್ದು, ಚಿತ್ರ ಬಿಡುಗಡೆಗೆ ಸಜ್ಜಾಗುತ್ತಿದೆ. 'ರಥಾವರ' ಸಿನಿಮಾ ನಿರ್ದೇಶಿಸಿದ್ದ ಚಂದ್ರಶೇಖರ್ ಬಂಡಿಯಪ್ಪ ಆ್ಯಕ್ಷನ್ ಕಟ್ ಹೇಳಿರುವ ಈ ಸಿನಿಮಾದ ಆಡಿಯೊ ಹಕ್ಕುಗಳನ್ನು ಲಹರಿ ಸಂಸ್ಥೆಯ ಭಾಗವಾಗಿರುವ ಎಂಆರ್‌ಟಿ ಮ್ಯೂಸಿಕ್ ಖರೀದಿಸಿದೆ. ಒಂದೊಳ್ಳೆಯ ಮೊತ್ತಕ್ಕೇ ಹಕ್ಕುಗಳು ಮಾರಾಟವಾಗಿವೆ ಎಂದು ಚಿತ್ರತಂಡ ತಿಳಿಸಿದೆ. ಸಿನಿಮಾದಲ್ಲಿ ರಗಡ್ ಪಾತ್ರಕ್ಕೆ ಪೃಥ್ವಿ ಬಣ್ಣಹಚ್ಚಿದ್ದಾರೆ. 'ಚೈತ್ರದ ಪ್ರೇಮಾಂಜಲಿ' ಚಿತ್ರದ ನಾಯಕಿ ಶ್ವೇತಾ ಕೂಡ ಈ ಸಿನಿಮಾದಲ್ಲಿ ಅಭಿನಯಿಸಿದ್ದಾರೆ. ಈ ಮೂಲಕ ಅವರು ಮತ್ತೊಮ್ಮೆ ಬೆಳ್ಳಿಪರದೆಗೆ ಕಾಲಿಟ್ಟಿದ್ದಾರೆ. ಡೈಲಾಗ್ ಕಿಂಗ್ ಸಾಯಿಕುಮಾರ್ ಕೂಡ ಈ ಸಿನಿಮಾದಲ್ಲಿದ್ದಾರೆ. ನಟಿ ಸುಧಾರಾಣಿ ಈ ಚಿತ್ರದಲ್ಲಿ ಪೊಲೀಸ್ ಅಧಿಕಾರಿಯಾಗಿ ಬಣ್ಣಹಚ್ಚಿದ್ದಾರೆ. ಚಿತ್ರಕ್ಕೆ ಸಚಿನ್ ಬಸ್ರೂರು ಸಂಗೀತ ನೀಡಿದ್ದಾರೆ. ಹಾಡುಗಳಿಗೆ ವಿ. ನಾಗೇಂದ್ರ ಪ್ರಸಾದ್, ಪ್ರಮೋದ್ ಮರವಂತೆ, ಸಂತೋಷ್ ನಾಯಕ್ ಸಾಹಿತ್ಯವಿದೆ. 'ಚೌಕಿದಾರ್' ಬಹುಭಾಷೆಯಲ್ಲಿ ಮೂಡಿಬರಲಿದ್ದು, ಸಿನಿಮಾವನ್ನು ಕಲ್ಲಹಳ್ಳಿ ಚಂದ್ರಶೇಖರ್ ನಿರ್ಮಾಣ ಮಾಡಿದ್ದಾರೆ.

ಜೀ5ನಲ್ಲಿ ಮೇ28ಕ್ಕೆ ಅಜ್ಞಾತವಾಸಿ

ಹೇಮಂತ್ ಎಂ.ರಾವ್ ನಿರ್ಮಾಣದ, ಜನಾರ್ದನ್ ಚಿಕ್ಕಣ್ಣ ನಿರ್ದೇಶನದ 'ಅಜ್ಞಾತವಾಸಿ' ಸಿನಿಮಾ ಏ.11ರಂದು ಚಿತ್ರಮಂದಿರಗಳಲ್ಲಿ ತೆರೆಕಂಡಿತ್ತು. ಇದೀಗ ಈ ಸಿನಿಮಾ ಒಟಿಟಿ ವೇದಿಕೆಗೆ ಬರಲು ಸಜ್ಜಾಗಿದೆ.

ನಟ ರಂಗಾಯಣ ರಘು ಅವರು ಮುಖ್ಯಭೂಮಿಕೆಯಲ್ಲಿ ನಟಿಸಿದ್ದ ಈ ಸಿನಿಮಾ ಮೇ 28ರಿಂದ ಜೀ5 ಒಟಿಟಿ ವೇದಿಕೆಯಲ್ಲಿ ವೀಕ್ಷಣೆಗೆ ಲಭ್ಯವಾಗಲಿದೆ ಎಂದು ಚಿತ್ರತಂಡ ತಿಳಿಸಿದೆ. ಮಲೆನಾಡ ಸಣ್ಣ ಹಳ್ಳಿಯ ಜಮೀನ್ದಾರ ಶಂಕರಪ್ಪನ ನಿಧನದಿಂದ ಈ ಚಿತ್ರದ ಕಥೆ ತೆರೆದುಕೊಳ್ಳುತ್ತದೆ. ಅದೊಂದು ಸಹಜ ಸಾವು ಅಂದುಕೊಂಡವರಿಗೆ ಅದು ಸಹಜ ಸಾವಲ್ಲ, ಕೊಲೆ ಎಂದು ಠಾಣೆಯಲ್ಲಿ ಎಷ್ಟೋ ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರುವ ಪೊಲೀಸ್ ಅಧಿಕಾರಿ ಹೇಳುತ್ತಾರೆ. ಯಾರು ಈ ಕೊಲೆ ಮಾಡಿದವರು, ಅದರ ಹಿಂದಿನ ಕಥೆಯೇ 'ಅಜ್ಞಾತವಾಸಿ'. ಚಿತ್ರದಲ್ಲಿ ಪೊಲೀಸ್ ಇನ್‌ಸ್ಪೆಕ್ಟರ್ ಪಾತ್ರವನ್ನು ರಂಗಾಯಣ ರಘು ನಿರ್ವಹಿಸಿದ್ದಾರೆ. ಶರತ್ ಲೋಹಿತಾಶ್ವ, ಸಿದ್ದು ಮೂಲಿಮನಿ, ಪಾವನಾ ಗೌಡ, ರವಿಶಂಕರ್ ಗೌಡ, ಯಮುನಾ ಶ್ರೀನಿಧಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ❖

ರಾಮ್ ಹೊಸ ಸಿನಿಮಾ '69'

ಶ್ರುತಿ ಬೇಕಲ್

'ನಹಿ ಜ್ಞಾನೇನ ಸದೃಶಂ' ಎಂಬ ಸಿನಿಮಾವನ್ನು ನಿರ್ದೇಶಿಸಿ, ನಟಿಸಿದ್ದ ರಾಮ್ ಹೊಸ ಪ್ರಾಜೆಕ್ಟ್ ಕೈಗೆತ್ತಿಕೊಂಡಿದ್ದಾರೆ. ಅಮೆರಿಕದಲ್ಲಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿರುವ ರಾಮ್ ಬಿಡುವಿನ ವೇಳೆಯಲ್ಲಿ '69' ಎಂಬ ಶೀರ್ಷಿಕೆಯುಳ್ಳ ಸಿನಿಮಾವೊಂದನ್ನು ಮಾಡಿದ್ದಾರೆ.

ಇಡೀ ಚಿತ್ರವು ಪ್ರಯೋಗಾತ್ಮಕ ರೀತಿಯಲ್ಲಿ ಎರಡು ಪಾತ್ರಗಳ ಸುತ್ತ ಸಾಗುವುದು ವಿಶೇಷ. ಗಂಡ ಹೆಂಡತಿ ತಮಗೆ ತಿಳಿಯದೆ ಟೈಂ ಲೂಪ್‌ನಲ್ಲಿ ಸಿಲುಕಿಕೊಂಡು ಪಡಬಾರದ ಕಷ್ಟಗಳನ್ನು ಅನುಭವಿಸುತ್ತಾರೆ. ಇದರಿಂದ ಹೊರ ಬರಲು ಮಾಡಿದ ತಂತ್ರಗಳೇನು? ಕೊನೆಗೆ ಅದರಲ್ಲಿ ಸಫಲರಾಗುತ್ತಾರೆಯೇ ಎನ್ನುವುದು ಚಿತ್ರದ ಕಥೆ. ಹಾಸ್ಯದ ಮಿಶ್ರಣವೂ ಚಿತ್ರದಲ್ಲಿದೆ. ಚಿತ್ರದಲ್ಲಿ ನಾಯಕಿಯಾಗಿ ಶ್ರುತಿ ಬೇಕಲ್ ನಟಿಸಿದ್ದಾರೆ. ಮೂರು ಹಾಡುಗಳಿಗೆ ಶಲೀಂ ರಾಜ್ ಸಂಗೀತ ನೀಡಿದ್ದಾರೆ. ಹರ್ಷ ಮಹದೇಶ್ವರ್ ಛಾಯಾಚಿತ್ರಗ್ರಹಣ, ಚಂದನ್.ಪಿ ಸಂಕಲನ, ರಾಮ್ ಮತ್ತು ಸುದರ್ಶನ ಸಂಭಾಷಣೆ ಚಿತ್ರಕ್ಕಿದೆ. ಅಮೆರಿಕಾದ ರ್‍ಯಾನ್‌ಸಂ ಕ್ಯಾನ್ಯನ್, ಟೆಕ್ಸಾಸ್‌ನಲ್ಲಿ ಚಿತ್ರೀಕರಣ ನಡೆಸಲಾಗಿದೆ. ಚಿತ್ರವನ್ನು ಮೊದಲು ವಿದೇಶದಲ್ಲಿ ಬಿಡುಗಡೆಗೊಳಿಸಿ ನಂತರದಲ್ಲಿ ಕರ್ನಾಟಕದಲ್ಲಿ ರಿಲೀಸ್ ಮಾಡುವ ಯೋಜನೆ ರಾಮ್ ಅವರದ್ದಾಗಿದೆ. ❖

ಪಾಕ್‌ನಿಂದ ಅಣ್ವಸ್ತ್ರ ಬಳಕೆಯ ಸಂದೇಶ ಇರಲಿಲ್ಲ • ಸಂಸದೀಯ ಸ್ಥಾಯಿ ಸಮಿತಿಗೆ ಮಿಸ್ರಿ ಮಾಹಿತಿ

ಸೇನಾ ಸಂಘರ್ಷ ಶಮನ: ದ್ವಿಪಕ್ಷೀಯ ನಿರ್ಧಾರ

ವಿಕ್ರಮ್ ಮಿಸ್ರಿ

ನವದೆಹಲಿ (ಪಿಟಿಐ): 'ಪಾಕಿಸ್ತಾನದಿಂದ ಅಣ್ವಸ್ತ್ರ ಬಳಕೆಯ ಕುರಿತ ಯಾವುದೇ ಸಂದೇಶ ಬಂದಿಲ್ಲ' ಎಂದು ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಅವರು ಸೋಮವಾರ ಸಂಸದೀಯ ಸಮಿತಿಗೆ ತಿಳಿಸಿದರು. .

ಭಾರತ ಮತ್ತು ಪಾಕಿಸ್ತಾನದ ನಡುವಿನ ಸಂಘರ್ಷವು ಯಾವಾಗಲೂ ಗಡಿ ವ್ಯಾಪ್ತಿಯಲ್ಲೇ ನಡೆದಿದೆ. ವಿದೇಶಾಂಗ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸಂಸದ ಶಶಿ ತರೂರ್ ಅಧ್ಯಕ್ಷತೆಯಲ್ಲಿ ನಡೆದ ಸಂಸತ್ತಿನ ಸ್ಥಾಯಿ ಸಮಿತಿ ಸಭೆಗೆ ಅವರು ವಿವರಣೆ ನೀಡಿದರು ಎಂದು ಮೂಲಗಳು ಹೇಳಿವೆ.

> **ಮಿಸ್ರಿ ವಿರುದ್ಧದ ಟ್ರೋಲ್ ಅನ್ನು ಸರ್ವಾನುಮತದಿಂದ ಖಂಡಿಸಲಾಯಿತು. ನಿರ್ಣಯ ಅಂಗೀಕರಿಸಲು ಸಭೆ ಬಯಸಿತ್ತು. ಆದರೆ, ಹಾಗೆ ಮಾಡದಂತೆ ಮಿಸ್ರಿ ಕೋರಿದರು**
> **ಶಶಿ ತರೂರ್,** ಸಂಸದೀಯ ಸ್ಥಾಯಿ ಸಮಿತಿ ಅಧ್ಯಕ್ಷ

ಉಭಯ ದೇಶಗಳ ನಡುವಿನ ಸೇನಾ ಸಂಘರ್ಷವನ್ನು ನಿಲ್ಲಿಸುವಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ನಿರ್ವಹಿಸಿದ ಪಾತ್ರದ ಕುರಿತ ಕೆಲ ಸಂಸದರು ಕೇಳಿದ ಪ್ರಶ್ನೆಗೆ, 'ಎರಡೂ ದೇಶಗಳ ಸೇನಾ ಸಂಘರ್ಷವನ್ನು ನಿಲ್ಲಿಸುವ ನಿರ್ಧಾರವನ್ನು ದ್ವಿಪಕ್ಷೀಯ ಮಟ್ಟದಲ್ಲಿ ತೆಗೆದುಕೊಳ್ಳಲಾಗಿದೆ' ಎಂದು ಉತ್ತರಿಸಿದರು. ಅವರು ಸರ್ಕಾರದ ನಿಲುವನ್ನು ಪುನರುಚ್ಚರಿಸಿದರು.

ಸೇನಾ ಸಂಘರ್ಷ ಶಮನಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಮಾಧ್ಯಮಗಳಲ್ಲಿ ಟ್ರಂಪ್ ಮಾಡಿದ ಪ್ರತಿಪಾದನೆಗಳ ಕುರಿತು ವಿರೋಧ ಪಕ್ಷಗಳ ಸದಸ್ಯರು ಕೇಳಿದಾಗ, 'ಅಮೆರಿಕದ ಅಧ್ಯಕ್ಷರು ಹಾಗೆ ಮಾಡಲು ನನ್ನ ಅನುಮತಿ ಪಡೆಯಲಿಲ್ಲ' ಎಂದು ವ್ಯಂಗ್ಯವಾಗಿ ಹೇಳಿದರು.

ಸಂಘರ್ಷದ ವೇಳೆ ಪಾಕಿಸ್ತಾನವು ಚೀನಾ ವೇದಿಕೆಗಳನ್ನು ಬಳಸಿಕೊಂಡಿದೆಯೇ ಎಂದು ಕೆಲ ಸಂಸದರು ಪ್ರಶ್ನಿಸಿದರು. ಭಾರತವು ಪಾಕ್‌ನ ವಾಯು ನೆಲೆಗಳ ಮೇಲೆ ದಾಳಿ ಮಾಡಿದ್ದರಿಂದ ಅದು ಅಪ್ರಸ್ತುತ ಎಂದು ಮಿಸ್ರಿ ಪ್ರತಿಕ್ರಿಯಿಸಿದರು ಎಂದು ಮೂಲಗಳು ಹೇಳಿವೆ.

ಟರ್ಕಿ, ಭಾರತ ವಿರೋಧಿ ನಿಲುವು ವ್ಯಕ್ತಪಡಿಸಿದ್ದ ಕುರಿತ ಪ್ರಶ್ನೆಗೆ, 'ಆ ದೇಶವು ಸಾಂಪ್ರದಾಯಿಕವಾಗಿ ಭಾರತವನ್ನು ಬೆಂಬಲಿಸುತ್ತಿರಲಿಲ್ಲ' ಎಂದರು.

ಸಮಿತಿ ಖಂಡನೆ: ಸೇನಾ ಕಾರ್ಯಾಚರಣೆ ನಿಲ್ಲಿಸಿದ ಕುರಿತ ಮಾಹಿತಿಯನ್ನು ಸುದ್ದಿಗೋಷ್ಠಿಯಲ್ಲಿ ಪ್ರಕಟಿಸಿದ ಮಿಸ್ರಿ ವಿರುದ್ಧ ಸಾಮಾಜಿಕ ಮಾಧ್ಯಮಗಳಲ್ಲಿ ಟ್ರೋಲ್ ಮಾಡಿದ್ದನ್ನು ಸಮಿತಿಯ ಸದಸ್ಯರು ಸರ್ವಾನುಮತದಿಂದ ಖಂಡಿಸಿದರು. ಮಿಸ್ರಿ ಅವರ ವೃತ್ತಿಪರ ನಡವಳಿಕೆಯನ್ನು ಸದಸ್ಯರು ಶ್ಲಾಘಿಸಿದರು ಎಂದು ಮೂಲಗಳು ಹೇಳಿವೆ.

ಮೂರು ಗಂಟೆಗಳ ಕಾಲ ನಡೆದ ಸಭೆಯಲ್ಲಿ ಸಮಿತಿ ಸದಸ್ಯರಾದ ಟಿಎಂಸಿಯ ಅಭಿಷೇಕ್ ಬ್ಯಾನರ್ಜಿ, ಕಾಂಗ್ರೆಸ್‌ನ ರಾಜೀವ್ ಶುಕ್ಲಾ, ದೀಪೇಂದರ್ ಹೂಡಾ, ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಓವೈಸಿ ಮತ್ತು ಬಿಜೆಪಿಯ ಅಪರಾಜಿತ ಸಾರಂಗಿ, ಅರುಣ್ ಗೋವಿಲ್ ಸೇರಿದಂತೆ 24 ಸದಸ್ಯರು ಭಾಗವಹಿಸಿದ್ದರು.

ಪಹಲ್ಗಾಮ್ ದಾಳಿ ಬಳಿಕ ಪ್ರತೀಕಾರ ತೆಗೆದುಕೊಳ್ಳಲು ಭಾರತ ನಡೆಸಿದ 'ಆಪರೇಷನ್ ಸಿಂಧೂರ್' ಮತ್ತು ಆ ನಂತರ ಎರಡೂ ದೇಶಗಳ ನಡುವಿನ ಸೇನಾ ಸಂಘರ್ಷ ನಡೆದ ಹಿನ್ನೆಲೆಯಲ್ಲಿ ಈ ಸಭೆ ನಡೆಯಿತು. ಉಭಯ ದೇಶಗಳು ಮೇ 10ರಂದು ಸೇನಾ ಕಾರ್ಯಾಚರಣೆ ನಿಲ್ಲಿಸುವ ಒಪ್ಪಂದ ಮಾಡಿಕೊಂಡವು.

'ಪಹಲ್ಗಾಮ್ ದಾಳಿಯೇ ಸಂಘರ್ಷಕ್ಕೆ ಕಾರಣ'

ಮಾಸ್ಕೊ (ಪಿಟಿಐ): ಭಾರತ ಹಾಗೂ ಪಾಕಿಸ್ತಾನದ ನಡುವೆ ಸಂಘರ್ಷ ಉಲ್ಬಣಿಸಲು ಪಹಲ್ಗಾಮ್‌ನಲ್ಲಿ ಉಗ್ರರು ನಡೆಸಿದ ದಾಳಿಯೇ ಕಾರಣ. ಭಾರತವು ಆ ದಾಳಿಗೆ ಪ್ರತಿಕ್ರಿಯೆ ನೀಡುವುದು ಅನಿವಾರ್ಯವಿತ್ತು ಎಂದು ರಷ್ಯಾದಲ್ಲಿರುವ ಭಾರತದ ರಾಯಭಾರಿ ವಿನಯ್ ಕುಮಾರ್ ಹೇಳಿದ್ದಾರೆ.

ರಷ್ಯಾದ ತೈಲವನ್ನು ಭಾರತದ ಮಾರುಕಟ್ಟೆಗೆ ಪೂರೈಸಲು ಎಲ್ಲ ರೀತಿಯ ಬೆಂಬಲ ನೀಡಲಾಗುವುದು ಎಂದೂ ಅವರು 'ಇಸ್‌ವೆಸ್ಟಿಯಾ' ದಿನಪತ್ರಿಕೆಗೆ ನೀಡಿರುವ ಸಂದರ್ಶನದಲ್ಲಿ ತಿಳಿಸಿದ್ದಾರೆ.

ಪಾಕಿಸ್ತಾನದ ಸೇನಾ ಮುಖ್ಯಸ್ಥರು ಸಂಘರ್ಷ ವಿರಾಮಕ್ಕೆ ಒಲವು ತೋರಿಸಿ, ಭಾರತದ ಸೇನಾ ಮುಖ್ಯಸ್ಥರೊಟ್ಟಿಗೆ ಮೊದಲು ಮಾತುಕತೆ ನಡೆಸಿದರು. ಹೀಗಾಗಿ ಸಂಘರ್ಷ ಶಮನಗೊಂಡಿತು ಎಂದು ವಿನಯ್ ಕುಮಾರ್ ಹೇಳಿದ್ದಾರೆ.

ಪಾಕಿಸ್ತಾನ ಅಣೆಕಟ್ಟೆ ಕಾಮಗಾರಿಗೆ ವೇಗ: ಚೀನಾ ಘೋಷಣೆ

ಬೀಜಿಂಗ್ (ಪಿಟಿಐ): ಪಹಲ್ಗಾಮ್ ದಾಳಿಯ ನಂತರ ಭಾರತವು 1960ರ ಸಿಂಧೂ ಜಲ ಒಪ್ಪಂದ ಅಮಾನತಿನಲ್ಲಿ ಇಟ್ಟ ಬೆನ್ನಲ್ಲೇ ಪಾಕಿಸ್ತಾನದ ಸಾರ್ವಕಾಲಿಕ ಪಾಲುದಾರ ಚೀನಾ ದೇಶವು ಪಾಕಿಸ್ತಾನದ ಅಣೆಕಟ್ಟೆ ಕಾಮಗಾರಿಯನ್ನು ಮತ್ತಷ್ಟು ಚುರುಕುಗೊಳಿಸುವುದಾಗಿ ಘೋಷಣೆ ಮಾಡಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಸೋಮವಾರ ಪಾಕಿಸ್ತಾನದ ಉಪ ಪ್ರಧಾನಿ ಇಶಾಕ್ ಡಾರ್ ಬೀಜಿಂಗ್‌ನಲ್ಲಿ ಚೀನಾ ವಿದೇಶಾಂಗ ಸಚಿವ ವಾಂಗ್ ಯಿ ಅವರನ್ನು ಭೇಟಿ ಮಾಡಿದ ಹೊತ್ತಿನಲ್ಲೇ ಅಣೆಕಟ್ಟೆ ಕಾಮಗಾರಿ ವೇಗದ ನಿರ್ಧಾರ ಹೊರಬಿದ್ದಿದೆ.

ಚೀನಾ ಸರ್ಕಾರಿ ಒಡೆತನದ ಎನರ್ಜಿ ಎಂಜಿನಿಯರಿಂಗ್ ಕಾರ್ಪೊರೇಷನ್ ವಾಯವ್ಯ ಪಾಕಿಸ್ತಾನದ ಖೈಬರ್ ಪಖ್ತುಂಕ್ವಾ ಪ್ರದೇಶದಲ್ಲಿ 2019ರಿಂದ ಮೊಹಮ್ಮದ್ ಜಲ ವಿದ್ಯುತ್ ಯೋಜನೆ ಕಾಮಗಾರಿ ನಡೆಸುತ್ತಿದೆ. ಮುಂದಿನ ವರ್ಷ ಈ ಕಾಮಗಾರಿ ಮುಗಿಯಬೇಕಿದೆ.

ಅಣೆಕಟ್ಟೆಗೆ ಕಾಂಕ್ರೀಟ್ ಭರ್ತಿ ಮಾಡುವ ಕೆಲಸ ನಡೆಯುತ್ತಿದೆ ಎಂದು ಇಲ್ಲಿನ ಸಿಸಿಟಿವಿ ವಾಹಿನಿಯು ಶನಿವಾರ ವರದಿ ಮಾಡಿದೆ. ಇದೊಂದು ಮೈಲಿಗಲ್ಲಿನ ನಿರ್ಮಾಣ ಕಾಮಗಾರಿ. ಪಾಕಿಸ್ತಾನದ ಈ ರಾಷ್ಟ್ರೀಯ ಜಲ ಯೋಜನೆ ಅಭಿವೃದ್ಧಿಗೆ ವೇಗ ನೀಡಲಿದೆ' ಎಂದು ಹಾಂಗ್‌ಕಾಂಗ್‌ನ 'ಸೌತ್ ಚೀನಾ ಮಾರ್ನಿಂಗ್ ಪೋಸ್ಟ್' ವರದಿ ಮಾಡಿದೆ.

ಭಾರತ-ಪಾಕ್ ಕದನ ವಿರಾಮಕ್ಕಾಗಿ ರಚನಾತ್ಮಕ ಪಾತ್ರ; ಚೀನಾ: ಭಾರತ-ಪಾಕಿಸ್ತಾನ ನಡುವಣ 'ಶಾಶ್ವತ ಕದನ ವಿರಾಮ' ಸ್ಥಾಪನೆಯಲ್ಲಿ ದೇಶವು ರಚನಾತ್ಮಕ ಪಾತ್ರ ವಹಿಸಲಿದೆ ಎಂದು ಚೀನಾ ಸೋಮವಾರ ಹೇಳಿದೆ.

ಪಾಕಿಸ್ತಾನದ ಉಪ ಪ್ರಧಾನಿ ಮತ್ತು ವಿದೇಶಾಂಗ ಸಚಿವ ಮಹಮ್ಮದ್ ಇಶಾಕ್ ಡಾರ್ ಅವರು ಚೀನಾದ ಉನ್ನತ ರಾಜತಾಂತ್ರಿಕ ಅಧಿಕಾರಿ ವಾಂಗ್ ಯಿ ಅವರೊಂದಿಗೆ ಮಾತುಕತೆಗಾಗಿ ಬೀಜಿಂಗ್‌ಗೆ ಸೋಮವಾರ ಭೇಟಿ ನೀಡಿದ್ದು, ಈ ವೇಳೆ ಚೀನಾ ಈ ಹೇಳಿಕೆ ನೀಡಿದೆ.

ಸೇನಾ ಸಿದ್ಧತೆ... ಜಮ್ಮು ಪ್ರದೇಶದ ನಿಯಂತ್ರಣ ರೇಖೆಯ (ಎಲ್‌ಒಸಿ) ಬಳಿಯ ಅಖ್ನೂರ್ ವಲಯದಲ್ಲಿ ಯುದ್ಧ ವಿಮಾನ ನಿಗ್ರಹ ಗನ್ ಅನ್ನು ಭಾರತೀಯ ಸೈನಿಕರು ಸೋಮವಾರ ಸಜ್ಜುಗೊಳಿಸಿದರು– ಎಎಫ್‌ಪಿ ಚಿತ್ರ

ಪಾಕ್ ಪರ ಬೇಹುಗಾರಿಕೆ: 12 ಬಂಧನ

ಚಂಡೀಗಢ/ಲಖನೌ (ಪಿಟಿಐ): 'ಪಾಕಿಸ್ತಾನದ ಗುಪ್ತಚರ ಅಧಿಕಾರಿಗಳಿಗೆ ಭಾರತದ ಸೇನಾ ಚಟುವಟಿಕೆಗಳ ಕುರಿತು, ಇಲ್ಲಿನ ಸೇನಾ ನೆಲೆಗಳ ಬಗ್ಗೆ ಮಾಹಿತಿ ಹಂಚಿಕೊಂಡ ಆರೋಪದಲ್ಲಿ ಹರಿಯಾಣದ ಯೂಟ್ಯೂಬರ್ ಜ್ಯೋತಿ ಮಲ್ಹೋತ್ರಾ ಸೇರಿ ಇಲ್ಲಿಯವರೆಗೆ ಒಟ್ಟು 12 ಜನರನ್ನು ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಕಳೆದ ಎರಡು ವಾರಗಳಲ್ಲಿ ಆರು ಮಂದಿ ಪಂಜಾಬ್, ನಾಲ್ವರನ್ನು ಹರಿಯಾಣದಿಂದ ಬಂಧಿಸಲಾಗಿದೆ. ಉತ್ತರ ಪ್ರದೇಶದಲ್ಲಿಯೂ ಬಂಧನಗಳಾಗಿವೆ. ಈ ಎಲ್ಲರೂ ಉತ್ತರ ಭಾರತದಲ್ಲಿ ಹರಡಿಕೊಂಡಿರುವ ಪಾಕಿಸ್ತಾನದ ಪರ ಬೇಹುಗಾರಿಕೆ ನಡೆಸುವ ದೊಡ್ಡ ಜಾಲದ ಭಾಗವಾಗಿದ್ದಾರೆ' ಎಂದರು.

'ಬಂಧಿತರಲ್ಲಿ ಇಬ್ಬರು ಮಹಿಳೆಯರಿದ್ದಾರೆ. ದೆಹಲಿಯಲ್ಲಿರುವ ಪಾಕಿಸ್ತಾನ ಹೈಕಮಿಷನ್ ಕಚೇರಿ ಅಧಿಕಾರಿ ಎಹ್ಸಾನ್ ಉರ್ ರಹೀಮ್ ಅಲಿಯಾಸ್ ಡ್ಯಾನಿಷ್ ಅವರೊಂದಿಗೆ ಈ ಇಬ್ಬರು ಮಹಿಳೆಯರೂ ಸಂಪರ್ಕ ಹೊಂದಿದ್ದರು. ಬೇಹುಗಾರಿಕೆ ನಡೆಸುತ್ತಿದ್ದಾರೆ ಎನ್ನುವ ಆರೋಪದಲ್ಲಿ ಡ್ಯಾನಿಷ್ ಅವರನ್ನು ಮೇ 13ರಂದು ಭಾರತವು ಗಡೀಪಾರು ಮಾಡಿತ್ತು' ಎಂದು ವಿವರಿಸಿದರು.

'ಬಂಧಿತರ ಹಣಕಾಸಿನ ವ್ಯವಹಾರ ಮತ್ತು ಅವರಿಂದ ಪಡೆದುಕೊಂಡ ಅವರ ಮೊಬೈಲ್‌ಗಳನ್ನು ಪರಿಶೀಲಿಸಲಾಗುತ್ತಿದೆ. ಇದಕ್ಕಾಗಿ ವಿಧಿವಿಜ್ಞಾನ ಪ್ರಯೋಗಾಲಯಗಳಿಗೆ ಕಳುಹಿಸಲಾಗಿದೆ. ಉತ್ತರ ಪ್ರದೇಶದ ರಾಮ್‌ಪುರದಲ್ಲಿ ಭಾನುವಾರ ವ್ಯಕ್ತಿಯೊಬ್ಬರನ್ನು ಬಂಧಿಸಲಾಗಿದೆ. ಇವರು ಪಾಕಿಸ್ತಾನದ ಐಎಸ್‌ಐ ಏಜೆಂಟ್ ಆಗಿದ್ದಾರೆ' ಎಂದರು.

ಪಂಜಾಬ್‌ನಲ್ಲಿ ಇಬ್ಬರ ಬಂಧನ

'ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐಗೆ ಭಾರತದ ಸೇನಾ ಮಾಹಿತಿಗಳನ್ನು ರವಾನಿಸುತ್ತಿದ್ದ ಆರೋಪದಲ್ಲಿ ಇಬ್ಬರನ್ನು ಬಂಧಿಸಲಾಗಿದೆ' ಎಂದು ಪಂಜಾಬ್‌ನ ಡಿಜಿಪಿ ಗೌರವ್ ಯಾದವ್ ಅವರು ಸೋಮವಾರ ಮಾಹಿತಿ ನೀಡಿದರು.

'ಮೇ 15ರಂದು ಖಚಿತ ಗುಪ್ತಚರ ಮಾಹಿತಿ ಮೇರೆಗೆ ಸುಖಪ್ರೀತ್ ಸಿಂಗ್ ಮತ್ತು ಕರಣ್‌ಬೀರ್ ಸಿಂಗ್ ಎಂಬುವರನ್ನು ಬಂಧಿಸಲಾಗಿದೆ. ಇವರು 'ಆಪರೇಷನ್ ಸಿಂಧೂರ' ಕುರಿತ ಮಾಹಿತಿಗಳನ್ನು ಪಾಕಿಸ್ತಾನಕ್ಕೆ ರವಾನಿಸಿದ್ದಾರೆ. ಪಂಜಾಬ್, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರದಲ್ಲಿನ ನಮ್ಮ ಸೇನಾ ಪಡೆಗಳ ಸಂಚಾರದ ಕುರಿತೂ ಮಾಹಿತಿ ರವಾನಿಸಿದ್ದಾರೆ' ಎಂದು ಗೌರವ್ ಅವರು 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

'ಬಂಧಿತರಿಂದ ಮೂರು ಮೊಬೈಲ್‌ಗಳನ್ನು ಮತ್ತು 8 ಕಾಟ್ರೇಜ್‌ಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ. ಮೊಬೈಲ್‌ಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೂ ಕಳುಹಿಸಲಾಗಿದೆ. ಈ ಇಬ್ಬರೂ ಸೇನಾ ಮಾಹಿತಿಗಳನ್ನು ಪಾಕಿಸ್ತಾನಕ್ಕೆ ರವಾನಿಸಿದ್ದು ಧೃಡಪಟ್ಟಿದೆ' ಎಂದೂ ಮಾಹಿತಿ ನೀಡಿದ್ದಾರೆ.

ವಾಯುಪಡೆಗೆ ನಷ್ಟವಾದ ವಿಮಾನಗಳೆಷ್ಟು: ದೇಶಕ್ಕೆ ಸತ್ಯ ತಿಳಿಸಲು ಮೋದಿ ಸರ್ಕಾರಕ್ಕೆ ಆಗ್ರಹ

ಜೈಶಂಕರ್ ಹೇಳಿಕೆಗೆ ರಾಹುಲ್ ಮತ್ತೆ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ರಾಹುಲ್ ಗಾಂಧಿ

ನವದೆಹಲಿ: 'ಆಪರೇಷನ್ ಸಿಂಧೂರ' ಬಗ್ಗೆ ಪಾಕಿಸ್ತಾನಕ್ಕೆ 'ಆರಂಭಿಕ' ಮಾಹಿತಿ ನೀಡಲಾಗಿತ್ತೆಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ನೀಡಿರುವ ಹೇಳಿಕೆಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮೋದಿ ನೇತೃತ್ವದ ಸರ್ಕಾರದ ವಿರುದ್ಧ ಮತ್ತೊಮ್ಮೆ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಈ ವಿಷಯದ ಬಗ್ಗೆ ದನಿ ಎತ್ತಿದ ಎರಡು ದಿನಗಳ ನಂತರ ಮತ್ತೊಮ್ಮೆ ರಾಹುಲ್, ಜೈಶಂಕರ್ ಅವರ ಹೇಳಿಕೆಯ ವಿಡಿಯೊವೊಂದನ್ನು 'ಎಕ್ಸ್'ನಲ್ಲಿ ಹಂಚಿಕೊಂಡಿದ್ದಾರೆ. 'ಇದೊಂದು ಅಪರಾಧ. ಇದರಿಂದ ಭಾರತೀಯ ಸೇನೆಯು ಎಷ್ಟು ಯುದ್ಧ ವಿಮಾನಗಳನ್ನು ಕಳೆದುಕೊಂಡಿದೆ ಎಂಬುದನ್ನು ದೇಶಕ್ಕೆ ತಿಳಿಸಬೇಕು' ಎಂದು ಒತ್ತಾಯಿಸಿದ್ದಾರೆ.

ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ಈ ಹೇಳಿಕೆಯನ್ನು ಕಳೆದ ಶನಿವಾರ ಅಲ್ಲಗಳೆದು, 'ಸತ್ಯ ತಿರುಚಲಾಗಿದೆ' ಎಂದೂ ಸ್ಪಷ್ಟನೆ ನೀಡಿತ್ತು. ಆದರೆ, ಕಾಂಗ್ರೆಸ್ ಪಕ್ಷವು ಜೈಶಂಕರ್ ಅವರ ಹೇಳಿಕೆಯನ್ನು ಮಾಜಿ ಪ್ರಧಾನಿ ಮೊರಾರ್ಜಿ ದೇಸಾಯಿ ಅವರು ಪಾಕಿಸ್ತಾನದ ಆಗಿನ ಅಧ್ಯಕ್ಷ ಜನರಲ್ ಜಿಯಾ-ಉಲ್-ಹಕ್ ಅವರೊಂದಿಗೆ ನಡೆಸಿದ್ದ ಮಾತುಕತೆಗೆ ಹೋಲಿಸಿದೆ.

> **ಜೈಶಂಕರ್ ಹೇಳಿಕೆಗಳು ಪಾಕಿಸ್ತಾನದ ಅಣ್ವಸ್ತ್ರದ ಬಗ್ಗೆ 'ರಾ' ಪತ್ತೆಹಚ್ಚಿದ ಕುರಿತು ಪಾಕ್‌ನ ಆಗಿನ ಅಧ್ಯಕ್ಷ ಜಿಯಾ-ಉಲ್-ಹಕ್‌ಗೆ ಆಗಿನ ಪ್ರಧಾನಿ ಮೊರಾರ್ಜಿ ದೇಸಾಯಿ ತಿಳಿಸಿದ್ದಕ್ಕಿಂತ ಕಡಿಮೆ ಪಾಪವೇನಲ್ಲ**
> **ಪವನ್ ಖೇರಾ,** ಕಾಂಗ್ರೆಸ್ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಅಧ್ಯಕ್ಷ

'ಆಪರೇಷನ್ ಸಿಂಧೂರ ಬಗ್ಗೆ ಪಾಕಿಸ್ತಾನಕ್ಕೆ ಮೊದಲೇ ತಿಳಿಸಿದ್ದರಿಂದ ನಾವು ಈ ಕಾರ್ಯಾಚರಣೆ ವೇಳೆ ಎಷ್ಟು ಯುದ್ಧ ವಿಮಾನಗಳನ್ನು ಕಳೆದುಕೊಳ್ಳಬೇಕಾಯಿತು ಎನ್ನುವುದನ್ನು ರಾಷ್ಟ್ರಕ್ಕೆ ತಿಳಿಸಬೇಕು. ಈ ವಿಚಾರದಲ್ಲಿ ಸಚಿವ ಜೈಶಂಕರ್ ಮೌನ ವಹಿಸಿದ್ದಾರೆ. ಅವರು ಬಾಯಿ ಬಿಡುತ್ತಿಲ್ಲ. ಇದೊಂದು ಲೋಪವಲ್ಲ, ಇದೊಂದು ಅಪರಾಧ. ದೇಶಕ್ಕೆ ಸತ್ಯ ತಿಳಿಸಬೇಕೆಂದು ನಾನು ಮತ್ತೊಮ್ಮೆ ಒತ್ತಾಯಿಸುತ್ತಿದ್ದೇನೆ' ಎಂದು ರಾಹುಲ್ ಹೇಳಿದ್ದಾರೆ.

ರಿಜಿಜು ಹೇಳಿಕೆ ಅಲ್ಲಗಳೆದ ಕಾಂಗ್ರೆಸ್

ನವದೆಹಲಿ: ಪಾಕಿಸ್ತಾನ ಪ್ರಾಯೋಜಿತ ಗಡಿಯಾಚೆಗಿನ ಭಯೋತ್ಪಾದನೆ ವಿರುದ್ಧ ರಾಜತಾಂತ್ರಿಕ ಅಭಿಯಾನಕ್ಕೆ ವಿವಿಧ ದೇಶಗಳಿಗೆ ಭೇಟಿ ನೀಡುವ ಸರ್ವ ಪಕ್ಷಗಳ ನಿಯೋಗಗಳಿಗೆ ಸದಸ್ಯರ ಹೆಸರು ನೀಡುವಂತೆ ಕೇಂದ್ರ ಸರ್ಕಾರ ಕೇಳಿಲ್ಲ ಎಂಬ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರ ಹೇಳಿಕೆಯನ್ನು ಕಾಂಗ್ರೆಸ್ ಸೋಮವಾರ ತಳ್ಳಿಹಾಕಿದೆ.

'ಸರ್ಕಾರವು ಕಾಂಗ್ರೆಸ್‌ಗೆ ತಮ್ಮ ಸದಸ್ಯರ ಹೆಸರು ನೀಡುವಂತೆ ಕೇಳಿಲ್ಲ. ಪ್ರಮುಖ ನಾಯಕರನ್ನಷ್ಟೇ ಸೌಜನ್ಯಕ್ಕೆ ಕರೆದಿದೆ' ಎಂಬ ರಿಜಿಜು ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ , 'ಅದು ಸಂಪೂರ್ಣ ಸುಳ್ಳು. ರಿಜುಜು ಅವರು ಮೇ 16ರ ಬೆಳಿಗ್ಗೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಯವರೊಂದಿಗೆ ಸಂಭಾಷಣೆ ನಡೆಸಿದ್ದಾರೆ. ಆ ಸಂಭಾಷಣೆಯನ್ನು ಆಧರಿಸಿ ನಾಲ್ವರ ಹೆಸರುಗಳನ್ನು ಸೂಚಿಸಿ ರಿಜಿಜು ಅವರಿಗೆ ಪತ್ರ ಕಳುಹಿಸಲಾಗಿದೆ' ಎಂದು ಹೇಳಿದ್ದಾರೆ.

ಪ್ರತಿಕ್ರಿಯೆಗೆ ತರೂರ್ ನಿರಾಕರಣೆ: 'ಆಪರೇಷನ್ ಸಿಂಧೂರ'ದ ನಂತರ ರಾಜತಾಂತ್ರಿಕ ಕಾರ್ಯಾಚರಣೆಯ ಭಾಗವಾಗಿ ವಿದೇಶಗಳಿಗೆ ಕಳುಹಿಸುತ್ತಿರುವ ಸರ್ವ ಪಕ್ಷಗಳ ನಿಯೋಗಗಳಿಗೆ ಸಂಸದರನ್ನು ಆಯ್ಕೆ ಮಾಡಿರುವ ರೀತಿಗೆ ತಮ್ಮದೇ ಪಕ್ಷದ ಆಕ್ಷೇಪ ಸೇರಿದಂತೆ ಇಂಡಿಯಾ ಮೈತ್ರಿಕೂಟದ ಪಕ್ಷಗಳ ಧೋರಣೆಗೆ ಪ್ರತಿಕ್ರಿಯಿಸಲು ಕಾಂಗ್ರೆಸ್ ನಾಯಕ ಶಶಿ ತರೂರ್ ಸೋಮವಾರ ನಿರಾಕರಿಸಿದ್ದಾರೆ.

'ಮೋದಿ ವರ್ಚಸ್ಸು ಕುಗ್ಗಿದೆ'

ಪ್ರಧಾನಿ ನರೇಂದ್ರ ಮೋದಿಯವರ ವರ್ಚಸ್ಸು ಕುಗ್ಗಿದೆ ಮತ್ತು ಅದಕ್ಕಾಗಿಯೇ ರಾಜತಾಂತ್ರಿಕ ನಿಯೋಗಗಳನ್ನು ವಿವಿಧ ದೇಶಗಳಿಗೆ ಕಳುಹಿಸಲಾಗುತ್ತಿದೆ ಎಂದು ಜೈರಾಮ್ ರಮೇಶ್ ಟೀಕಿಸಿದ್ದಾರೆ.

'11 ವರ್ಷಗಳ ಕಾಲ ವಿಪಕ್ಷಗಳನ್ನು ಅದರಲ್ಲೂ ವಿಶೇಷವಾಗಿ ಕಾಂಗ್ರೆಸ್ ಅನ್ನು ನಿಂದಿಸಿದ ಮತ್ತು ದೂಷಿಸಿದ ನಂತರ ಪ್ರಧಾನಿ ಮೋದಿಯವರು ಈಗ ಸರ್ವ ಪಕ್ಷಗಳ ನಿಯೋಗಗಳನ್ನು ವಿದೇಶಗಳಿಗೆ ಬಲವಂತದಿಂದ ಕಳುಹಿಸುತ್ತಿದ್ದಾರೆ' ಎಂದು ಅವರು ಟೀಕಿಸಿದ್ದಾರೆ.

'ನಿಜಸಂಗತಿ ಎಂದರೆ, ದೇಶದಲ್ಲಿನ ಬಿಜೆಪಿಯ ವಿಷಕಾರಿ ರಾಜಕಾರಣದಿಂದ ನಾವು ವಿದೇಶದಲ್ಲಿ ಭಾರಿ ಬೆಲೆ ತೆರುತ್ತಿದ್ದೇವೆ. ಬಿಸಿ ಗಾಳಿಯಿಂದ ತುಂಬಿದ ಸ್ವಯಂಘೋಷಿತ ವಿಶ್ವಗುರುಗಳ ಬಲೂನ್ ನಿಜವಾಗಿಯೂ ಪಂಕ್ಚರ್ ಆಗಿದೆ' ಎಂದು ಅವರು ಜರೆದಿದ್ದಾರೆ.

ಸಂಕ್ಷಿಪ್ತ ಸುದ್ದಿ

ಐಎಸ್‌ಐ ನಂಟಿನ ಶಂಕೆ: ಉದ್ಯಮಿ ಸೆರೆ

ಲಖನೌ: ಪಾಕಿಸ್ತಾನ ಗುಪ್ತಚರ ಸಂಸ್ಥೆ ಐಎಸ್‌ಐ ಪರವಾಗಿ ಕೆಲಸ ಮಾಡುತ್ತಿರುವ ಶಂಕೆ ಮೇಲೆ ರಾಮಪುರ ಮೂಲದ ಉದ್ಯಮಿ ಶೆಹಜಾದ್ ಎಂಬುವರನ್ನು ಉತ್ತರ ಪ್ರದೇಶದ ಭಯೋತ್ಪಾದಕ ನಿಗ್ರಹ ಪಡೆ (ಎಟಿಎಸ್) ಬಂಧಿಸಿದೆ.

ಭಾರತದ ಸೇನೆಗೆ ಸಂಬಂಧಿಸಿದ ಸೂಕ್ಷ್ಮ ಮತ್ತು ರಹಸ್ಯ ಮಾಹಿತಿಗಳನ್ನು ಪಾಕಿಸ್ತಾನದ ಜತೆ ಹಂಚಿಕೊಂಡ ಶಂಕೆ ಮೇಲೆ ಯೂಟ್ಯೂಬರ್ ಜ್ಯೋತಿ ಮಲ್ಹೋತ್ರಾ ಬಂಧಿಸಿದ ಬೆನ್ನಲ್ಲೇ ಉದ್ಯಮಿಯ ಬಂಧನವಾಗಿದೆ.

ರಾಮಪುರ ಜಿಲ್ಲೆ ಟಾಂಡಾ ನಿವಾಸಿ ಶೆಹಜಾದ್ ಅವರನ್ನು ಮೊರಾದಾಬಾದ್‌ನಲ್ಲಿ ಭಾನುವಾರ ಬಂಧಿಸಿದ್ದು, ಇವರು ಹಲವು ಬಾರಿ ಪಾಕಿಸ್ತಾನಕ್ಕೆ ಪ್ರಯಾಣಿಸಿದ್ದರು. ಐಎಸ್‌ಐನ ಹಲವರನ್ನು ಭೇಟಿ ಮಾಡಿ ಸೂಕ್ಷ್ಮ ಮಾಹಿತಿಗಳನ್ನು ಹಂಚಿಕೊಂಡಿದ್ದರು. ಮಧ್ಯವರ್ತಿಗಳ ಮೂಲಕ ಐಎಸ್‌ಐ ಏಜೆಂಟ್‌ಗಳಿಗೆ ಹಣಕಾಸು ನೆರವು ಒದಗಿಸಿದ್ದರು ಎಂದು ಎಟಿಎಸ್ ಮೂಲಗಳು ತಿಳಿಸಿವೆ.

ಪ್ರೊ. ಅಲಿ ಅರ್ಜಿ ವಿಚಾರಣೆಗೆ 'ಸುಪ್ರೀಂ' ಒಪ್ಪಿಗೆ

ನವದೆಹಲಿ (ಪಿಟಿಐ): 'ಆಪರೇಷನ್ ಸಿಂಧೂರ' ಕಾರ್ಯಾಚರಣೆಗೆ ಸಂಬಂಧಿಸಿದಂತೆ ಜಾಲತಾಣದಲ್ಲಿ ಪೋಸ್ಟ್ ಹಾಕಿದಕ್ಕಾಗಿ ಬಂಧಿಸಿರುವುದನ್ನು ಪ್ರಶ್ನಿಸಿದ್ದ ಅಶೋಕ ವಿ. ವಿ.ಯ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಅಲಿ ಖಾನ್ ಮಹಮೂದಾಬಾದ್ ಸಲ್ಲಿಸಿರುವ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ಸೋಮವಾರ ಒಪ್ಪಿಗೆ ಸೂಚಿಸಿದೆ. ಅಲಿ ಅವರ ಪರವಾಗಿ ಹಿರಿಯ ವಕೀಲ ಕಪಿಲ್ ಸಿಬಲ್ ಸಲ್ಲಿಸಿದ್ದ ಮನವಿಯನ್ನು ಪರಿಗಣಿಸಿದ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಮತ್ತು ನ್ಯಾಯಮೂರ್ತಿ ಆಗಸ್ಟೀನ್ ಜಾರ್ಜ್ ಮಸೀಹ್ ಅವರಿದ್ದ ಪೀಠವು, ಮಂಗಳವಾರ ಅಥವಾ ಬುಧವಾರ ವಿಚಾರಣೆ ನಡೆಸುವುದಾಗಿ ತಿಳಿಸಿತು.

ಪ್ರೊ.ಅಲಿಖಾನ್ ಬಂಧನಕ್ಕೆ ಕಾಂಗ್ರೆಸ್ ಖಂಡನೆ: ಅಶೋಕ ವಿಶ್ವವಿದ್ಯಾಲಯದ ಪ್ರೊ.ಅಲಿಖಾನ್ ಮಹಮೂದಾಬಾದ್ ಅವರ ಬಂಧನವನ್ನು ಕಾಂಗ್ರೆಸ್ ಸೋಮವಾರ ಖಂಡಿಸಿದ್ದು, ತನಗೆ ಇಷ್ಟವಾಗದ ಯಾವುದೇ ಅಭಿಪ್ರಾಯಕ್ಕೆ ಬಿಜೆಪಿ ಎಷ್ಟೊಂದು ಹೆದರುತ್ತದೆ ಎನ್ನುವುದನ್ನು ಇದು ತೋರಿಸುತ್ತದೆ ಎಂದು ಟೀಕಿಸಿದೆ.

ದುಬಾರಿ ಜೀವನ - ಅಭಿವೃದ್ಧಿ ಶೂನ್ಯ

ಇದುವೇ ಕಾಂಗ್ರೆಸ್ ಸರ್ಕಾರದ

ಬೆಲೆ ಏರಿಕೆಯ ಸಾಧನೆ

ಡೀಸೆಲ್
ಕಾಂಗ್ರೆಸ್ ಸರ್ಕಾರ
▲₹5.5 (ಪ್ರತೀ ಲೀ) ಹೆಚ್ಚಳ

ಪೆಟ್ರೋಲ್
ಕಾಂಗ್ರೆಸ್ ಸರ್ಕಾರ
▲₹3 (ಪ್ರತೀ ಲೀ) ಹೆಚ್ಚಳ

ಬಿಜೆಪಿ ಸರ್ಕಾರ
▼ 3% ಕಡಿಮೆ
ವಾಹನ ನೋಂದಣಿ

ಕಾಂಗ್ರೆಸ್ ಸರ್ಕಾರ
▲3% ಹೆಚ್ಚಳ

ಬಿಜೆಪಿ ಸರ್ಕಾರ
15% ಕಡಿಮೆ▼
ಬಸ್ ಟಿಕೆಟ್ ದರ

ಕಾಂಗ್ರೆಸ್ ಸರ್ಕಾರ
15% ಹೆಚ್ಚಳ▲

ಬಿಜೆಪಿ ಸರ್ಕಾರ
▼ ₹25 ಸಾವಿರ
ಟ್ರಾನ್ಸ್‌ಫಾರ್ಮರ್

ಕಾಂಗ್ರೆಸ್ ಸರ್ಕಾರ
▲ ₹3 ಲಕ್ಷ

ಬಿಜೆಪಿ ಸರ್ಕಾರ
₹39▼
ಹಾಲು

ಕಾಂಗ್ರೆಸ್ ಸರ್ಕಾರ
₹48▲

50ಕ್ಕೂ ಹೆಚ್ಚು ವಲಯಗಳ
ಬೆಲೆ ಏರಿಕೆ
ಕರ್ನಾಟಕ ಲೂಟಿ
ಕಾಂಗ್ರೆಸ್ ಡ್ಯೂಟಿ

ಬಿಜೆಪಿ ಸರ್ಕಾರ
▼ ₹10
ರೈತರ ಪಹಣಿ

ಕಾಂಗ್ರೆಸ್ ಸರ್ಕಾರ
▲₹100

ಬಿಜೆಪಿ ಸರ್ಕಾರ
₹20▼
ಮುದ್ರಾಂಕ ಶುಲ್ಕ

ಕಾಂಗ್ರೆಸ್ ಸರ್ಕಾರ
₹100▲

ಬಿಜೆಪಿ ಸರ್ಕಾರ
▼₹100
ಬಿಯರ್

ಕಾಂಗ್ರೆಸ್ ಸರ್ಕಾರ
▲ ₹170

ಬಿಜೆಪಿ ಸರ್ಕಾರ
₹900▼
ಸ್ಮಾರ್ಟ್ ಮೀಟರ್

ಕಾಂಗ್ರೆಸ್ ಸರ್ಕಾರ
₹8,510▲

ಸ್ಥಗಿತಗೊಂಡ ಬಿಜೆಪಿ ಆಡಳಿತದ ಜನಪರ ಯೋಜನೆಗಳು

- ರೈತ ವಿದ್ಯಾನಿಧಿ
- ಪಿಎಂ ಕಿಸಾನ್ ಸಮ್ಮಾನ್
- ಭಾಗ್ಯಲಕ್ಷ್ಮಿ
- ಉಚಿತ ಬೈಸಿಕಲ್
- ಹಾಲು ಉತ್ಪಾದಕರ ಸಬ್ಸಿಡಿ ಕಡಿತ

ಹೆಜ್ಜೆ ಇಡದ ಎರಡು ವರುಷ

ಬೆಲೆ ಏರಿಕೆ, ಭ್ರಷ್ಟತೆಯ ಕರಾಳ ಸ್ಪರ್ಶ

ಪ್ರಕಟಣೆ - **ಬಿಜೆಪಿ ಕರ್ನಾಟಕ**

ಷೇರುಪೇಟೆ ವಹಿವಾಟು 271



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	25,019
ಇಂದಿನ ಅಂತ್ಯ	24,945
▼	74
ದಿನದ ಕನಿಷ್ಠ	24,916

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹595
12 ಕ್ಕೆ	₹80
ಮೈಸೂರು	
100ಕ್ಕೆ	₹608

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಕೆ.ಜಿ)	₹223-544
ದ್ವಿತಳಿ (ಕೆ.ಜಿ)	₹255-636

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹193
ಆರ್‌ಎಸ್‌ಎಸ್-5	₹188
ಗುಡ್ ಲಾಟ್	₹178

(ಪ್ರತಿ ಕೆ.ಜಿಗೆ)

ಈರುಳ್ಳಿ (ಕ್ವಿಂಟಲ್‌ಗೆ)



ದಪ್ಪ	₹1,000-1,400
ಮಧ್ಯಮ	₹600-1,000
ಸಣ್ಣ	₹300-600

ಖಾದ್ಯ ತೈಲ ಮುಂಬೈ (10 ಕೆ.ಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1380 (1380)
ಸೋಯಾ (ರಿಫೈನ್ಡ್)	₹1270 (1265)
ಸೂರ್ಯಕಾಂತಿ (ರಿಫೈನ್ಡ್)	₹1305 (1300)
ಪಾಮೋಲಿನ್	₹1230 (1230)

ವಿನಿಮಯ ದರ

$ ಡಾಲರ್	85.42
£ ಪೌಂಡ್	114.38
€ ಯುರೊ	96.30
¥ ಯೆನ್ (100ಕ್ಕೆ)	59

ಯುಕೊ ಬ್ಯಾಂಕ್ ಮಾಜಿ ಸಿಎಂಡಿ ಬಂಧನ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಯುಕೊ ಬ್ಯಾಂಕ್‌ನ ಮಾಜಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ (ಸಿಎಂಡಿ) ಸುಬೋಧ್ ಕುಮಾರ್ ಗೋಯಲ್ ಅವರನ್ನು ₹6,200 ಕೋಟಿ ಹೆಚ್ಚು ಹಣದ ಅಕ್ರಮ ವರ್ಗಾವಣೆ ಆರೋಪದಡಿ ಬಂಧಿಸಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಸೋಮವಾರ ತಿಳಿಸಿದೆ.

ಕಾನ್‌ಕಾಸ್ಟ್ ಸ್ಟೀಲ್ ಆ್ಯಂಡ್ ಪವರ್ ಲಿಮಿಟೆಡ್ (ಸಿಎಸ್‌ಪಿಎಲ್) ಮತ್ತು ಇತರರ ವಿರುದ್ಧ ತನಿಖೆ ನಡೆಸುತ್ತಿರುವ ಪ್ರಕರಣದಲ್ಲಿ ಗೋಯಲ್ ಅವರನ್ನು ಮೇ 16ರಂದು ಇಲ್ಲಿನ ಅವರ ನಿವಾಸದಲ್ಲಿ ಬಂಧಿಸಲಾಯಿತು. ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಕುರಿತ ಕೋಲ್ಕತ್ತದ ವಿಶೇಷ ನ್ಯಾಯಾಲಯಕ್ಕೆ ಅವರನ್ನು ಮೇ 17ರಂದು ಹಾಜರುಪಡಿಸಲಾಯಿತು. ನ್ಯಾಯಾಲಯವು ಮೇ 21ರ ವರೆಗೆ ಇ.ಡಿ ಕಸ್ಟಡಿಗೆ ನೀಡಿದೆ ಎಂದು ತಿಳಿಸಿದೆ.

ಏಪ್ರಿಲ್ ತಿಂಗಳಲ್ಲಿ ಗೋಯಲ್ ಮತ್ತು ಇತರರ ನಿವಾಸದ ಮೇಲೆ ಈ ತನಿಖೆಯ ಭಾಗವಾಗಿ ಇ.ಡಿ ದಾಳಿ ನಡೆಸಿತ್ತು.

ಪ್ರಕರಣವೇನು?: ಸುಬೋಧ್ ಕುಮಾರ್ ಅವರು ಯುಕೊ ಬ್ಯಾಂಕ್‌ನ ಸಿಎಂಡಿ ಆಗಿದ್ದ ವೇಳೆ ಕಾನ್‌ಕಾಸ್ಟ್ ಸ್ಟೀಲ್ ಆ್ಯಂಡ್ ಪವರ್ ಲಿಮಿಟೆಡ್‌ಗೆ ₹6,210 ಕೋಟಿ ಮೊತ್ತದ ಸಾಲವನ್ನು ಮಂಜೂರು ಮಾಡಿದ್ದರು. ಈ ಹಣವನ್ನು ಕಂಪನಿಯು ಬೇರೆಡೆ ವರ್ಗಾವಣೆ ಮಾಡಿದೆ. ಇದಕ್ಕಾಗಿ ಗೋಯಲ್ ಕಂಪನಿಯಿಂದ ಕಿಕ್ ಬ್ಯಾಕ್ ಪಡೆದಿದ್ದಾರೆ ಎಂದು ಸಿಬಿಐ ತನ್ನ ಎಫ್‌ಐಆರ್‌ನಲ್ಲಿ ತಿಳಿಸಿತ್ತು. ಇದೇ ವೇಳೆ ಗೋಯಲ್ ನಗದು, ಸ್ಥಿರಾಸ್ತಿ, ಐಷಾರಾಮಿ ವಸ್ತುಗಳನ್ನು ಶೆಲ್ ಕಂಪನಿಗಳು, ನಕಲಿ ವ್ಯಕ್ತಿಗಳ ಮತ್ತು ಕುಟುಂಬ ಸದಸ್ಯರ ಮೂಲಕ ಪಡೆದುಕೊಂಡಿದ್ದಾರೆ ಎನ್ನುವುದು ಬಯಲಾಗಿತ್ತು.

ಈ ಶೆಲ್ ಕಂಪನಿಗಳು ಗೋಯಲ್ ಮತ್ತು ಅವರ ಕುಟುಂಬ ಸದಸ್ಯರ ಮಾಲೀಕತ್ವ ಅಥವಾ ನಿಯಂತ್ರಣದಲ್ಲಿವೆ. ಇವುಗಳ ಮೂಲಕ ಪಡೆದುಕೊಂಡಿರುವ ಹಲವಾರು ಆಸ್ತಿಗಳನ್ನು ಪತ್ತೆ ಹಚ್ಚಲಾಗಿದೆ ಎಂದು ತಿಳಿಸಿದೆ.

ತೊಗರಿ, ಸೋಯಾ ಅವರೆ, ನವಣೆ ಬೀಜ ಉತ್ಪಾದನೆ: ರೈತರಿಗೆ ಗುಣಮಟ್ಟದ ಬೀಜ ಖಾತ್ರಿ

ಕೃಷಿ ವಿವಿಯಿಂದ ರೈತರಿಗೆ ಬಿತ್ತನೆ ಬೀಜ

● ಚಂದ್ರಕಾಂತ ಮಸಾನಿ

ರಾಯಚೂರು: ಇಲ್ಲಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಬೀಜ ಘಟಕವು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ 3,400 ಕ್ವಿಂಟಲ್ ತಳಿವರ್ಧಕ ಹಾಗೂ ಗುಣಮಟ್ಟದ ಬೀಜ ಉತ್ಪಾದನೆ ಮಾಡಿ ಕಲ್ಯಾಣ ಕರ್ನಾಟಕದ ಜಿಲ್ಲೆಗಳ ರೈತರಿಗೆ ವಿತರಿಸಲು ಆರಂಭಿಸಿದೆ.

ಗುಣಮಟ್ಟದ ತೊಗರಿ, ಸೋಯಾ, ನವಣೆ, ಕಡಲೆ ಬೀಜ ಖರೀದಿಸಲು ಕಲಬುರಗಿ, ಕೊಪ್ಪಳ ಹಾಗೂ ಯಾದಗಿರಿ ಜಿಲ್ಲೆಗಳ ರೈತರು ತಂಡಗಳಲ್ಲಿ ಬಂದು ಬೀಜ ಖರೀದಿಸಲು ಆರಂಭಿಸಿದ್ದಾರೆ.

ವಿಶ್ವವಿದ್ಯಾಲಯವು 170 ನೋಂದಾಯಿತ ರೈತರ ಹೊಲಗಳಲ್ಲಿ ಪ್ರಮಾಣಿತ ಬೀಜಗಳ ಉತ್ಪಾದನೆ ಮಾಡಿ ರೈತರಿಂದ ಖರೀದಿಸಿ ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿರುವ ಕೃಷಿ ವಿಜ್ಞಾನ ಕೇಂದ್ರ (ಕೆವಿಕೆ), ಕೃಷಿ ಸಂಶೋಧನಾ ಕೇಂದ್ರ (ಎಆರ್‌ಎಸ್) ಹಾಗೂ ಕೃಷಿ ಶಿಕ್ಷಣ ವಿಸ್ತರಣಾ ಕೇಂದ್ರದಲ್ಲಿ (ಎಇಇಸಿ) ಬೀಜ ವಿತರಣಾ ಕೇಂದ್ರಗಳನ್ನು ತೆರೆದು ವಿತರಿಸುತ್ತಿದೆ. ರೈತರಿಗೆ ಅನುಕೂಲ ಮಾಡಿಕೊಡಲು ಪ್ರತಿ ಜಿಲ್ಲೆಗೆ ಒಬ್ಬರು ಸಂಯೋಜಕರನ್ನೂ ನೇಮಕ ಮಾಡಿದೆ.

ಒಂದು ಎಕರೆಗೆ ಒಂದು ಕೆ.ಜಿಯ ಒಂದು ಪ್ಯಾಕೆಟ್ ಬೀಜ ಕೊಡಲಾಗುತ್ತಿದೆ. ಮುಂಗಾರು ಹಂಗಾಮು ಆರಂಭವಾಗುವ ಮೊದಲೇ ರೈತರು ಬೀಜ ಖರೀದಿಸಿಟ್ಟುಕೊಂಡು ಬಿತ್ತನೆಗೆ ಸಿದ್ಧತೆಯನ್ನೂ ಆರಂಭಿಸಿದ್ದಾರೆ. ಕೃಷಿ ವಿಜ್ಞಾನಿಗಳ ಮೇಲ್ವಿಚಾರಣೆಯಲ್ಲೇ ಬೀಜ ಉತ್ಪಾದನೆಯಾಗುತ್ತಿರುವ ಕಾರಣ ಗುಣಮಟ್ಟದ ಬೀಜದ ಬಗ್ಗೆ ರೈತರಲ್ಲಿ ವಿಶ್ವಾಸ ಹುಟ್ಟಿದೆ.

'ಕೃಷಿ ವಿಶ್ವವಿದ್ಯಾಲಯದಿಂದ 10 ವರ್ಷಗಳಿಂದ ಬೀಜ ಒಯ್ಯುತ್ತಿರುವೆ. ಕಳೆದ ವರ್ಷ 110 ಎಕರೆ ಪ್ರದೇಶದಲ್ಲಿ 542 ಕ್ವಿಂಟಲ್ ತೊಗರಿ ಬಂದಿದೆ. ಈ ವರ್ಷ ಆರು ಕ್ವಿಂಟಲ್ ಬೀಜ ಖರೀದಿಸಿರುವೆ' ಎಂದು ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ತಾವರಗೇರಾದ ರೈತ ದೊಡ್ಡನಗೌಡ ಸರನಗೌಡ ಹೇಳಿದರು.

'ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಕಳೆದ ವರ್ಷ ಬೀಜ ಖರೀದಿಸಿದ್ದೆ. ಮೂರು ಎಕರೆಯಲ್ಲಿ 16 ಪ್ಯಾಕೆಟ್ ತೊಗರಿ ಬಂದಿದೆ. ₹1.13 ಲಕ್ಷ ಆದಾಯ ಬಂದಿದೆ. ಈ ವರ್ಷವೂ ತೊಗರಿ ಬೀಜ ಖರೀದಿ ಮಾಡಿರುವೆ' ಎಂದು ಲಿಂಗಸುಗೂರು ತಾಲ್ಲೂಕಿನ ಮುದಗಲ್‌ನ ಮೌಲಾಸಾಬ ತಿಳಿಸಿದರು.

'ವಿಶ್ವವಿದ್ಯಾಲಯವು ನೋಂದಾಯಿತ ರೈತರ ಹೊಲದಲ್ಲಿ ಪ್ರಮಾಣಿತ ಬೀಜ ಬೆಳೆಯುತ್ತಿದೆ. ತೊಗರಿ, ಸೋಯಾ, ನವಣೆ ಹಾಗೂ ಕಡಲೆಗೆ ಬೇಡಿಕೆ ಇದೆ. ವಿಶ್ವವಿದ್ಯಾಲಯದ ವೀಕ್ಷಣಾ ತಂಡವು ಬಿತ್ತನೆ ಸಂದರ್ಭ, ಬೆಳೆಯುವ, ಹೂವು ಬಿಡುವ, ಕಾಳು ಕಟ್ಟುವ ಹಾಗೂ ಕಟಾವು ಸಂದರ್ಭದಲ್ಲಿ ವಿಜ್ಞಾನಿಗಳ ವೀಕ್ಷಣಾ ತಂಡ ಭೇಟಿ ನೀಡಿ ಪರಿಶೀಲಿಸುತ್ತದೆ' ಎಂದು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಬೀಜ ಘಟಕದ ವಿಶೇಷ ಅಧಿಕಾರಿ ಅರುಣಕುಮಾರ ಹೊಸಮನಿ ಹೇಳಿದರು.

'ವೀಕ್ಷಣಾ ತಂಡದಲ್ಲಿ ರಾಜ್ಯ ಬೀಜ ನಿಗಮ, ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣನ ಸಂಸ್ಥೆ, ರಾಷ್ಟ್ರೀಯ ಬೀಜ ನಿಗಮ, ಕೃಷಿ ಇಲಾಖೆ, ಕರ್ನಾಟಕ ಸಹಕಾರ ಎಣ್ಣೆಬೀಜಗಳ ಬೆಳೆಗಾರರ ಒಕ್ಕೂಟದ ಸದಸ್ಯರೂ ಇದ್ದಾರೆ. ನಾಲ್ಕು ಹಂತಗಳಲ್ಲಿ ಪರಿಶೀಲನೆ ನಡೆದ ನಂತರವೇ ವಿಶ್ವವಿದ್ಯಾಲಯದ ಬ್ರ್ಯಾಂಡ್‌ನ ಅಡಿಯಲ್ಲೇ ಗುಣಮಟ್ಟದ ಬೀಜ ಮಾರಾಟಕ್ಕೆ ಬಿಡುಗಡೆ ಮಾಡಲಾಗುತ್ತಿದೆ' ಎಂದು ತಿಳಿಸಿದರು.

'ಒಣ ಬೇಸಾಯಕ್ಕೆ ಸೂಕ್ತವಾದ ತಳಿಗಳನ್ನು ವಿಶ್ವವಿದ್ಯಾಲಯವೇ ಅಭಿವೃದ್ಧಿಪಡಿಸಿ ಮಾರಾಟ ಮಾಡುತ್ತಿದೆ. ಟಿಎಸ್-3ಆರ್ ತೊಗರಿಗೆ ಹೆಚ್ಚಿನ ಬೇಡಿಕೆ ಇದೆ. ಮೊದಲು ಬಂದವರಿಗೆ ಆದ್ಯತೆ ಮೇಲೆ ಬೀಜ ಕೊಡುತ್ತಿದ್ದೇವೆ. ಕೃಷಿ ವಿಶ್ವವಿದ್ಯಾಲಯದ ಬೀಜೋತ್ಪಾದನೆ ಕಾರ್ಯಕ್ರಮ ಪರಿಗಣಿಸಿ ಐಸಿಎಆರ್-ಭಾರತೀಯ ಬೀಜ ವಿಜ್ಞಾನ ಸಂಸ್ಥೆಯು 2017-2018ರಲ್ಲಿ ಅತ್ಯುತ್ತಮ ಬೀಜೋತ್ಪಾದನಾ ಕೇಂದ್ರದ ಪ್ರಶಸ್ತಿಯನ್ನೂ ಪ್ರದಾನ ಮಾಡಿದೆ' ಎಂದು ಖುಷಿ ಹಂಚಿಕೊಂಡರು.

ಮುಖ್ಯಾಂಶಗಳು

- ಬೀಜ ಬೆಳೆಗಾರರ ಸಮಸ್ಯೆ ಪರಿಹಾರಕ್ಕೆ ವಾಟ್ಸ್‌ಆ್ಯಪ್ ಗ್ರೂಪ್
- ರೈತರ ಸಹಭಾಗಿತ್ವದಲ್ಲೇ ಬೀಜೋತ್ಪಾದನೆ
- ಗುಣಮಟ್ಟದ ಬೀಜ ಉತ್ಪಾದನೆಗೆ ಆದ್ಯತೆ

ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವು ಕಲ್ಯಾಣ ಕರ್ನಾಟಕ ಭಾಗವನ್ನು ಅತ್ಯುತ್ತಮ ಗುಣಮಟ್ಟದ ಬೀಜೋತ್ಪಾದನೆ ವಲಯವನ್ನಾಗಿ ಅಭಿವೃದ್ಧಿಪಡಿಸುವ ಉದ್ದೇಶ ಹೊಂದಿದೆ
ಅರುಣಕುಮಾರ ಹೊಸಮನಿ
ಬೀಜ ಘಟಕದ ವಿಶೇಷ ಅಧಿಕಾರಿ

ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಬೀಜ ಘಟಕದಲ್ಲಿ ಸಿದ್ಧಪಡಿಸಿದ ತಳಿವರ್ಧಕ ಹಾಗೂ ಗುಣಮಟ್ಟದ ತೊಗರಿ ಬೀಜದ ಪ್ಯಾಕೇಟ್ ಪ್ರದರ್ಶಿಸಿದ ಬೀಜ ಘಟಕದ ವಿಶೇಷ ಅಧಿಕಾರಿ ಅರುಣಕುಮಾರ ಹೊಸಮನಿ

ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ಬೀಜ

- ತೊಗರಿ–ಟಿಎಸ್-3ಆರ್
- ತೊಗರಿ–ಜೆಆರ್‌ಜಿ811
- ತೊಗರಿ– ಜೆಆರ್‌ಜಿ152
- ನವಣೆ–ಎಚ್‌ಎನ್-46
- ಸೋಯಾ ಅವರೆ–ಡಿಎಸ್‌ಬಿ21
- ಮೇವಿನ ಬೀಜ–ಸಿಒಎಸ್‌ಎಫ್-31
- ಸೆಣಬು–ಲೋಕಲ್
- ಹೈಬ್ರಿಡ್ ಸೂರ್ಯಕಾಂತಿ–ಆರ್‌ಎಸ್‌ಎಫ್‌ಎಚ್700

ಸಂಕ್ಷಿಪ್ತ ಸುದ್ದಿ

ಚಿನ್ನ, ಬೆಳ್ಳಿ ದರ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಏರಿಕೆಯಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹580 ಏರಿಕೆಯಾಗಿ, ₹97,030 ಆಗಿದೆ. ಆಭರಣ ಚಿನ್ನವು (ಶೇ 99.5 ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಹೆಚ್ಚಳವಾಗಿ, ₹96,580 ಆಗಿದೆ. ಬೆಳ್ಳಿ ದರವು ಕೆ.ಜಿಗೆ ₹500 ಹೆಚ್ಚಳವಾಗಿ, ₹98,500ರಂತೆ ಮಾರಾಟವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರವು ಸೋಮವಾರ ₹3,336 ಹೆಚ್ಚಳವಾಗಿ, ಪ್ರತಿ ಔನ್ಸ್ (28.34 ಗ್ರಾಂ) ದರ ₹2.77 ಲಕ್ಷವಾಗಿದೆ. ಹೀಗಾಗಿ ದೇಶದ ಮಾರುಕಟ್ಟೆಯಲ್ಲೂ ಹಳದಿ ಲೋಹದ ದರ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಎಂ.ಎಫ್ ನಿರ್ವಹಣಾ ಸಂಪತ್ತು ಏರಿಕೆ

ನವದೆಹಲಿ (ಪಿಟಿಐ): ಮ್ಯೂಚುವಲ್ ಫಂಡ್ (ಎಫ್.ಎಂ) ಸಂಸ್ಥೆಗಳ ನಿರ್ವಹಣಾ ಸಂಪತ್ತು 2024-25ರ ಆರ್ಥಿಕ ವರ್ಷದಲ್ಲಿ ಶೇ 23ರಷ್ಟು ಹೆಚ್ಚಾಗಿದ್ದು, ₹65 ಲಕ್ಷ ಕೋಟಿಯಷ್ಟಾಗಿದೆ.

2023–24ರ ಆರ್ಥಿಕ ವರ್ಷದ ಮಾರ್ಚ್ ಅಂತ್ಯಕ್ಕೆ ಉದ್ಯಮದ ನಿರ್ವಹಣಾ ಸಂಪತ್ತು ₹53 ಲಕ್ಷ ಕೋಟಿಯಷ್ಟಿತ್ತು. ಒಂದೇ ವರ್ಷದಲ್ಲಿ ಸಂಪತ್ತು ₹12 ಲಕ್ಷ ಕೋಟಿ ವೃದ್ಧಿಸಿದೆ. ಹೆಚ್ಚಿದ ಬಂಡವಾಳ ಒಳಹರಿವು, ದೇಶದ ಷೇರು ಸೂಚ್ಯಂಕಗಳ ಏರಿಕೆಯು ಸಂಪತ್ತು ಹೆಚ್ಚಾಗಲು ಕಾರಣವಾಗಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್ ಸಂಸ್ಥೆಗಳ ಒಕ್ಕೂಟ (ಎಎಂಎಫ್‌ಐ) ಸೋಮವಾರ ತಿಳಿಸಿದೆ.

ಮಾರ್ಚ್ ವೇಳೆಗೆ ಉದ್ಯಮದಲ್ಲಿ ಒಟ್ಟು 5.34 ಕೋಟಿ ಹೂಡಿಕೆದಾರರಿದ್ದಾರೆ. ಈ ಪೈಕಿ 1.38 ಕೋಟಿ (ಶೇ 26ರಷ್ಟು) ಮಹಿಳೆಯರಿದ್ದಾರೆ ಎಂದು ತಿಳಿಸಿದೆ.

ಸೆನ್ಸೆಕ್ಸ್, ನಿಫ್ಟಿ ಇಳಿಕೆ

ಮುಂಬೈ (ಪಿಟಿಐ): ದೇಶದ ಷೇರು ಸೂಚ್ಯಂಕಗಳು ಸೋಮವಾರದ ವಹಿವಾಟಿನಲ್ಲಿ ಇಳಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 271 ಅಂಶ ಇಳಿಕೆಯಾಗಿ, 82,059ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 74 ಅಂಶ ಕಡಿಮೆಯಾಗಿ, 24,945ಕ್ಕೆ ಕೊನೆಗೊಂಡಿದೆ.

ಎಟರ್ನಲ್, ಇನ್ಫೊಸಿಸ್, ಟಿಸಿಎಸ್, ಟೆಕ್ ಮಹೀಂದ್ರ, ರಿಲಯನ್ಸ್ ಇಂಡಸ್ಟ್ರೀಸ್, ಏಷ್ಯನ್ ಪೇಂಟ್ಸ್, ಎಚ್‌ಸಿಎಲ್ ಟೆಕ್, ಅದಾನಿ ಪೋರ್ಟ್ಸ್‌ನ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ. ಪವರ್ ಗ್ರಿಡ್, ಬಜಾಜ್ ಫೈನಾನ್ಸ್, ಎನ್‌ಟಿಪಿಸಿ, ಎಸ್‌ಬಿಐ, ಇಂಡಸ್‌ಇಂಡ್ ಬ್ಯಾಂಕ್‌ನ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಬೈಡನ್‌ಗೆ ಪ್ರಾಸ್ಟೇಟ್ ಕ್ಯಾನ್ಸರ್

ವಾಷಿಂಗ್ಟನ್ (ಎಪಿ): 'ಅಮೆರಿಕದ ಮಾಜಿ ಅಧ್ಯಕ್ಷ ಜೋ ಬೈಡನ್ ಅವರು ಪ್ರಾಸ್ಟೇಟ್ ಕ್ಯಾನ್ಸರ್‌ನಿಂದ ಬಳಲುತ್ತಿದ್ದಾರೆ' ಎಂದು ಅವರ ಕಚೇರಿ ತಿಳಿಸಿದೆ.

'82 ವರ್ಷದ ಬೈಡನ್ ಅವರಿಗೆ ಮೂತ್ರ ಪರೀಕ್ಷೆ ಆಧರಿಸಿ, ಪ್ರಾಸ್ಟೇಟ್‌ನಲ್ಲಿ ಗಂಟು ಇರುವುದನ್ನು ವೈದ್ಯರು ಪತ್ತೆಹಚ್ಚಿದ್ದರು. ಪರೀಕ್ಷೆಗೆ ಒಳಪಡಿಸಿದ ವೇಳೆ ಕ್ಯಾನ್ಸರ್ ಇರುವುದು ದೃಢಪಟ್ಟಿದೆ. ಕ್ಯಾನ್ಸರ್‌ನ ಜೀವಕೋಶಗಳು ಮೂಳೆಗೂ ವ್ಯಾಪಿಸಿವೆ' ಎಂದು ಹೇಳಿದೆ.

ದೇಶದ ಕೃಷಿ ವಲಯದ ಪ್ರಗತಿ ಶೇ 3.5ರಷ್ಟು ನಿರೀಕ್ಷೆ: ಚೌಹಾಣ್

ಶಿವರಾಜ್ ಸಿಂಗ್ ಚೌಹಾಣ್

ನವದೆಹಲಿ (ಪಿಟಿಐ): 'ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಕೃಷಿ ವಲಯದ ಬೆಳವಣಿಗೆ ಶೇ 3.5ರಷ್ಟಾಗುವ ನಿರೀಕ್ಷೆ ಇದೆ' ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಸೋಮವಾರ ಹೇಳಿದ್ದಾರೆ.

ಜಾಗತಿಕವಾಗಿ ಕೃಷಿ ವಲಯದ ಬೆಳವಣಿಗೆ ಶೇ 1.5ರಿಂದ ಶೇ 2ರಷ್ಟು ಇರುವುದನ್ನು ಉತ್ತಮ ಎಂದು ಪರಿಗಣಿಸಲಾಗುತ್ತದೆ. ಭಾರತ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಶೇ 3ರಿಂದ ಶೇ 3.5ರಷ್ಟು ದಾಖಲಿಸುವ ನಿರೀಕ್ಷೆ ಇದೆ ಎಂದು ಹೇಳಿದ್ದಾರೆ.

ಈ ಬಾರಿ ಮುಂಗಾರು ಚುರುಕಾಗಿದ್ದು, ಕೇರಳಕ್ಕೆ ಮೇ 27ರ ವೇಳೆಗೆ ಪ್ರವೇಶಿಸುವ ಸಾಧ್ಯತೆ ಇದೆ. ಸಾಮಾನ್ಯವಾಗಿ ಜೂನ್ 1ರಂದು ಪ್ರವೇಶಿಸಬೇಕಿತ್ತು. ಆದರೆ, ಐದು ದಿನದ ಮುಂಚೆ ಪ್ರವೇಶಿಸುತ್ತಿದ್ದು, ಸಾಮಾನ್ಯಕ್ಕಿಂತ ಹೆಚ್ಚಿನ ಮಳೆಯಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.

ಮೇ 29ರಿಂದ ಅಭಿಯಾನ: ಇದೇ 29ರಿಂದ ದೇಶದಾದ್ಯಂತ ವಿಕಸಿತ ಕೃಷಿ ಸಂಕಲ್ಪ ಅಭಿಯಾನ ಹಮ್ಮಿಕೊಳ್ಳಲಾಗಿದೆ. 15 ದಿನಗಳವರೆಗೆ ನಡೆಯುವ ಈ ಅಭಿಯಾನದಡಿ ದೇಶದಾದ್ಯಂತ 1.30 ಕೋಟಿ ರೈತರನ್ನು ತಲುಪುವ ಗುರಿಯನ್ನು ಹೊಂದಲಾಗಿದೆ. ಈ ವೇಳೆ ರೈತರಿಗೆ ಆಧುನಿಕ ತಂತ್ರಜ್ಞಾನ ಮತ್ತು ಹೊಸ ಬಿತ್ತನೆ ತಳಿಗಳ ಬಗ್ಗೆ ಅರಿವು ಮೂಡಿಸಲಿದೆ. ಆ ಮೂಲಕ ಮುಂಗಾರು ಅವಧಿಯಲ್ಲಿ ಉತ್ಪಾದನೆ ಹೆಚ್ಚಿಸುವ ಗುರಿ ಹೊಂದಲಾಗಿದೆ ಎಂದು ಸಚಿವರು ತಿಳಿಸಿದರು.

ಅಭಿಯಾನದ ಭಾಗವಾಗಿ 65 ಸಾವಿರ ಹಳ್ಳಿಗಳನ್ನು ತಲುಪಲಾಗುವುದು. ಭಾರತೀಯ ಕೃಷಿ ಸಂಶೋಧನಾ ಮಂಡಳಿಯ (ಐಸಿಎಆರ್) 3,749 ಕೃಷಿ ವಿಜ್ಞಾನಿಗಳು ಮತ್ತು 2,980 ಕೃಷಿ ವಿಜ್ಞಾನದ ಕೇಂದ್ರದ ಸಿಬ್ಬಂದಿ ಒಳಗೊಂಡ 2,170 ತಂಡವು ಪ್ರತಿ ದಿನ ಕನಿಷ್ಠ ಮೂರು ಪಂಚಾಯಿತಿಗೆ ಭೇಟಿ ನೀಡಲಿದೆ ಎಂದು ತಿಳಿಸಿದ್ದಾರೆ.

ಹಣ ಪಾವತಿಸುವಂತೆ ಚೋಕ್ಸಿಗೆ ಸೆಬಿ ನೋಟಿಸ್

ನವದೆಹಲಿ (ಪಿಟಿಐ): ಗೀತಾಂಜಲಿ ಜೆಮ್ಸ್ ಕಂಪನಿಯ ಷೇರುಗಳ ಅಕ್ರಮ ವಹಿವಾಟಿಗೆ ಸಂಬಂಧಿಸಿದ ಪ್ರಕರಣದಲ್ಲಿ ₹2.1 ಕೋಟಿ ಪಾವತಿಸುವಂತೆ ವಜ್ರದ ವ್ಯಾಪಾರಿ ಮೆಹುಲ್ ಚೋಕ್ಸಿಗೆ, ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ನೋಟಿಸ್ ನೀಡಿದೆ.

ಚೋಕ್ಸಿ, ಗೀತಾಂಜಲಿ ಜೆಮ್ಸ್ ಕಂಪನಿಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿದ್ದರು. ಮೇ 15ರಂದು ಸೆಬಿ, ನೋಟಿಸ್ ಜಾರಿಗೊಳಿಸಿದೆ. 15 ದಿನದೊಳಗೆ ₹2.1 ಕೋಟಿ ಪಾವತಿಸಬೇಕು. ಇದು ₹1.5 ಕೋಟಿ ದಂಡ ಮತ್ತು ₹60 ಲಕ್ಷ ಬಡ್ಡಿ ಒಳಗೊಂಡಿದೆ. ಬಾಕಿ ಪಾವತಿಸದಿದ್ದಲ್ಲಿ, ಆಸ್ತಿಗಳನ್ನು ಮಾರಾಟ ಮಾಡುವ ಮೂಲಕ ಮೊತ್ತವನ್ನು ವಸೂಲಿ ಮಾಡುವುದಾಗಿ ತಿಳಿಸಿದೆ.

ಕಂಪನಿಯ ಷೇರುಗಳ ಮಾರಾಟದಲ್ಲಿ ನಿಯಮ ಉಲ್ಲಂಘಿಸಿದ್ದಕ್ಕಾಗಿ 2022ರಲ್ಲಿ ಸೆಬಿ ₹1.5 ಕೋಟಿ ದಂಡ ವಿಧಿಸಿತ್ತು. ಆದರೆ, ಚೋಕ್ಸಿ ಪಾವತಿಸುವಲ್ಲಿ ವಿಫಲರಾಗಿದ್ದರು.

ಚೋಕ್ಸಿ ಅವರು ನೀರವ್ ಮೋದಿ ಅವರ ಸಂಬಂಧಿಯಾಗಿದ್ದು, ಇಬ್ಬರೂ ಸೇರಿ ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ ₹14 ಸಾವಿರ ಕೋಟಿಗಿಂತ ಹೆಚ್ಚಿನ ಮೊತ್ತವನ್ನು ವಂಚಿಸಿರುವ ಆರೋಪ ಎದುರಿಸುತ್ತಿದ್ದಾರೆ. ಕಳೆದ ತಿಂಗಳು ಬೆಲ್ಜಿಯಂನಲ್ಲಿ ಚೋಕ್ಸಿಯನ್ನು ಬಂಧಿಸಲಾಗಿತ್ತು.

ಬಡ್ಡಿದರ ಇಳಿಸಿದ ಎಸ್‌ಬಿಐ

ನವದೆಹಲಿ (ಪಿಟಿಐ): ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿದರವನ್ನು ಶೇ 0.20ರಷ್ಟು ಕಡಿತಗೊಳಿಸಿದೆ.

ಪರಿಷ್ಕೃತ ದರವು ಮೇ 16ರಿಂದ ಜಾರಿಗೆ ಬಂದಿದೆ.

ಎರಡು ವರ್ಷದಿಂದ ಮೂರು ವರ್ಷಕ್ಕಿಂತ ಕಡಿಮೆ ಅವಧಿಯ ನಿಶ್ಚಿತ ಠೇವಣಿಗೆ ಗರಿಷ್ಠ ಶೇ 6.7ರಷ್ಟು ಬಡ್ಡಿ ದರ ನೀಡಲಾಗುವುದು. ಮೂರು ವರ್ಷದಿಂದ ಐದು ವರ್ಷಕ್ಕಿಂತ ಕಡಿಮೆ ಅವಧಿಗೆ ಶೇ 6.55ರಷ್ಟು ಬಡ್ಡಿದರ ಇರಲಿದೆ. ಐದರಿಂದ ಹತ್ತು ವರ್ಷದೊಳಗಿನ ಠೇವಣಿಗೆ ಶೇ 6.30 ಮತ್ತು ಒಂದು ವರ್ಷದಿಂದ ಎರಡು ವರ್ಷದೊಳಗಿನ ಠೇವಣಿಗೆ ಶೇ 6.5 ಇರಲಿದೆ ಎಂದು ಬ್ಯಾಂಕ್ ತಿಳಿಸಿದೆ.

'ಅಮೃತ್ ವೃಷ್ಟಿ' (444 ದಿನ) ಯೋಜನೆಗೆ ಬಡ್ಡಿ ದರವನ್ನು ಶೇ 7.05ರಿಂದ ಶೇ 6.85ಕ್ಕೆ ಇಳಿಸಲಾಗಿದೆ. ಹಿರಿಯ ನಾಗರಿಕರು ಮತ್ತು ಅತಿ ಹಿರಿಯ ನಾಗರಿಕರು (80 ವರ್ಷ ಮೇಲ್ಪಟ್ಟವರು) ಹೆಚ್ಚಿನ ಬಡ್ಡಿ ದರ ಪಡೆಯುವ ಅರ್ಹತೆ ಹೊಂದಿದ್ದಾರೆ ಎಂದು ಸೋಮವಾರ ತಿಳಿಸಿದೆ.

ಕಳೆದ ತಿಂಗಳು ಆರ್‌ಬಿಐ ರೆಪೊ ದರ ಕಡಿತ ಮಾಡಿತ್ತು. ಹೀಗಾಗಿ ಎಸ್‌ಬಿಐ, ರೆಪೊ ದರ ಆಧರಿಸಿದ ಸಾಲದ ಮೇಲಿನ ಬಡ್ಡಿದರವನ್ನು ಶೇ 0.10ರಿಂದ ಶೇ 0.25ರಷ್ಟು ಇಳಿಸಿತ್ತು. ಇದೀಗ ಬ್ಯಾಂಕ್ ಮತ್ತೆ ಬಡ್ಡಿ ದರ ಕಡಿತಗೊಳಿಸಿದೆ.

ಜಲಸಾರಿಗೆ: ಭಾರತ ಮಾಲ್ದೀವ್ಸ್ ಒಪ್ಪಂದ

ಮಾಲೆ (ಪಿಟಿಐ): ದ್ವೀಪರಾಷ್ಟ್ರ ಮಾಲ್ದೀವ್ಸ್ ನಲ್ಲಿ ಜಲ(ದೋಣಿ) ಸಾರಿಗೆ ವ್ಯವಸ್ಥೆ ಯನ್ನು ಇನ್ನಷ್ಟು ಸುಧಾರಿಸಲು 10 ಕೋಟಿ ಎಂವಿಆರ್ (ಸುಮಾರು ₹55 ಕೋಟಿ) ನೆರವಿನ 13 ಒಡಂಬಡಿಕೆಗಳಿಗೆ ಭಾರತ ಸಹಿ ಹಾಕಿದೆ. ಸಮುದ್ರ ಸಾರಿಗೆ ಸಂಪರ್ಕ ವಿಸ್ತರಣೆ ಮತ್ತು ಸಮುದಾಯದ ಜೀವನ ಸುಧಾರಣೆಗೆ ಇದು ಸಹಕಾರಿಯಾಗಲಿದೆ.

ಮಾಲ್ದೀವ್ಸ್ ವಿದೇಶಾಂಗ ಸಚಿವ ಅಬ್ದುಲ್ಲಾ ಖಲೀಲ್ ಮತ್ತು ಅಲ್ಲಿರುವ ಭಾರತದ ಹೈಕಮಿಷನರ್ ಜಿ.ಬಾಲಸುಬ್ರಮಣಿಯನ್, ಭಾರತ ಅನುದಾನದ 13 ಯೋಜನೆಗಳ ಒಪ್ಪಂದಕ್ಕೆ ಭಾನುವಾರ ಸಹಿ ಹಾಕಿದರು. ಎರಡೂ ದೇಶಗಳ ಸಂಬಂಧ ಗಟ್ಟಿಗೊಳಿಸುವಲ್ಲಿ ಈ ಒಪ್ಪಂದ ಮೈಲುಗಲ್ಲಾಗಲಿದೆ.

ಎಜಿಆರ್ ಮನ್ನಾ ಕೋರಿದ್ದ ಅರ್ಜಿ ವಜಾ

ನವದೆಹಲಿ (ಪಿಟಿಐ): ವೊಡಾಫೋನ್, ಏರ್‌ಟೆಲ್ ಮತ್ತು ಟಾಟಾ ಟೆಲಿಸರ್ವೀಸಸ್ ಟೆಲಿಕಾಂ ಸಂಸ್ಥೆಗಳು 'ಹೊಂದಾಣಿಕೆ ಮಾಡಿದ ನಿವ್ವಳ ಆದಾಯ'ದ (ಎಜಿಆರ್) ಮನ್ನಾ ಕೋರಿ ಸಲ್ಲಿಸಿದ್ದ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಸೋಮವಾರ ವಜಾಗೊಳಿಸಿದೆ.

ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಮತ್ತು ಆರ್. ಮಹದೇವನ್ ಅವರನ್ನು ಒಳಗೊಂಡ ನ್ಯಾಯಪೀಠವು, ಅರ್ಜಿಗಳು 'ತಪ್ಪು ಗ್ರಹಿಕೆಯಿಂದ ಕೂಡಿವೆ' ಎಂದು ಹೇಳಿದೆ.

'ಈ ಅರ್ಜಿಗಳನ್ನು ನೋಡಿ ಆಘಾತವಾಗಿದೆ. ಬಹುರಾಷ್ಟ್ರೀಯ ಕಂಪನಿಗಳಿಂದ ಇದನ್ನು ನಿರೀಕ್ಷಿಸಿರಲಿಲ್ಲ. ಈ ಅರ್ಜಿಗಳನ್ನು ವಜಾಗೊಳಿಸುತ್ತೇವೆ' ಎಂದು ನ್ಯಾಯಪೀಠವು ವೊಡಾಫೋನ್ ಪರ ಹಾಜರಿದ್ದ ಹಿರಿಯ ವಕೀಲ ಮುಕುಲ್ ರೊಹಟಗಿ ಅವರಿಗೆ ತಿಳಿಸಿತು.

ವಿಚಾರಣೆ ಆರಂಭವಾದಾಗ ಅರ್ಜಿಯ ವಿಚಾರಣೆಯನ್ನು ಜುಲೈಗೆ ಮುಂದೂಡಲು ರೊಹಟಗಿ ಕೋರಿದರು. ಕೋರ್ಟ್ ಕಾರಣ ಕೇಳಿದಾಗ, 'ನ್ಯಾಯಾಲಯದ ಹೊರಗೆ ಸಮಸ್ಯೆ ಪರಿಹಾರಕ್ಕಾಗಿ ಯತ್ನಿಸುತ್ತಿದ್ದೇವೆ' ಎಂದು ತಿಳಿಸಿದರು.

ಸರ್ಕಾರವು ವೊಡಾಫೋನ್‌ನ ಶೇ 50ರಷ್ಟು ಮಾಲೀಕತ್ವವನ್ನು ಹೊಂದಿದೆ ಎಂದು ಮಾಹಿತಿ ನೀಡಿದರು.

ಆಗ ನ್ಯಾಯಪೀಠವು, 'ಸರ್ಕಾರವು ನಿಮಗೆ ಸಹಾಯ ಮಾಡಲು ಬಯಸಿದರೆ, ಸಹಾಯ ಮಾಡಲಿ. ಆ ಹಾದಿಗೆ ಅಡ್ಡ ಬರುವುದಿಲ್ಲ. ಆದರೆ ಈಗ ಅರ್ಜಿಯನ್ನು ವಜಾಗೊಳಿಸುತ್ತೇವೆ' ಎಂದು ತಿಳಿಸಿತು.

ಭಾರತದ ಟ್ರಾವೆಲ್ ಏಜೆನ್ಸಿ ಅಧಿಕಾರಿಗಳ ವೀಸಾಕ್ಕೆ ನಿರ್ಬಂಧ

ನ್ಯೂಯಾರ್ಕ್/ ವಾಷಿಂಗ್ಟನ್ (ಪಿಟಿಐ): ಅಕ್ರಮ ವಲಸೆಗೆ ನೆರವು ನೀಡುತ್ತಿರುವ ಕಾರಣ ಭಾರತದ ಟ್ರಾವೆಲ್ ಏಜೆನ್ಸಿಗಳ ಮಾಲೀಕರು, ಹಿರಿಯ ಅಧಿಕಾರಿಗಳು ಮತ್ತು ಪ್ರತಿನಿಧಿಗಳ ವೀಸಾ ಮೇಲೆ ನಿರ್ಬಂಧ ವಿಧಿಸಿರುವುದಾಗಿ ಅಮೆರಿಕ ಸೋಮವಾರ ತಿಳಿಸಿದೆ.

'ನಮ್ಮ ವಲಸೆ ನೀತಿಯು ಅಕ್ರಮ ವಲಸೆಯ ಅಪಾಯದ ಬಗ್ಗೆ ವಿದೇಶಿಗರಿಗೆ ಮಾಹಿತಿ ನೀಡುವುದು ಮಾತ್ರವಲ್ಲದೆ, ಅಕ್ರಮ ವಲಸೆಗೆ ನೆರವು ನೀಡಿದವರೂ ಸೇರಿದಂತೆ ಕಾನೂನು ಉಲ್ಲಂಘಿಸಿದ ಎಲ್ಲರನ್ನೂ ಹೊಣೆಗಾರರನ್ನಾಗಿಸುತ್ತದೆ' ಎಂದು ವಿದೇಶಾಂಗ ಸಚಿವಾಲಯವು ಹೇಳಿಕೆಯಲ್ಲಿ ತಿಳಿಸಿದೆ.

ಅಕ್ರಮ ವಲಸೆ ಮತ್ತು ಮಾನವ ಕಳ್ಳಸಾಗಾಣಿಕೆಯಲ್ಲಿ ನಿರತರಾದವರ ಮೇಲೆ ನಿಗಾ ಇಡಲು ಅಮೆರಿಕದ ರಾಯಭಾರ ಕಚೇರಿ ಮತ್ತು ಕಾನ್ಸುಲೇಟ್‌ಗಳು ಕಾರ್ಯನಿರತವಾಗಿವೆ ಎಂದು ತಿಳಿಸಿದೆ.

ಭಾರತದ ಯಾವ ಟ್ರಾವೆಲ್ ಏಜೆನ್ಸಿಗಳು ಮತ್ತು ಅವುಗಳ ಪ್ರತಿನಿಧಿಗಳ ವೀಸಾ ಮೇಲೆ ನಿರ್ಬಂಧ ವಿಧಿಸಲಾಗಿದೆ ಎಂಬ ಮಾಹಿತಿಯನ್ನು ದೆಹಲಿಯಲ್ಲಿರುವ ಅಮೆರಿಕ ರಾಯಭಾರ ಕಚೇರಿಯು ನೀಡಿಲ್ಲ.

ಅಡಿಕೆ ಧಾರಣೆ (₹ಗಳಲ್ಲಿ)

ಕುಮಟ		ಗೊರಬಲು	17730-30058	ಬಿಳಿಗೋಟು	19800-34399
ಚಾಲಿ	39999-41599	ರಾಶಿ	45009-57911	ಚಾಲಿ	35099-43099
ಚಿಪ್ಪು	19039-29299	ಸರಕು	52366-88896	ಕೆಂಪುಗೋಟು	16666-26009
ಕೋಕ	8019-10899	ಸಿದ್ದಾಪುರ		ರಾಶಿ	46259-49669
ಹೊಸಚಾಲಿ	30289-42099	ಬಿಳಿಗೋಟು	25109-31509	ಯಲ್ಲಾಪುರ	
ಸಾಗರ		ಚಾಲಿ	35099-41109	ಅಪಿ	60199-66915
ಬಿಳಿಗೋಟು	10611-27199	ಕೋಕ	14709-26899	ಬಿಳಿಗೋಟು	14899-32600
ಚಾಲಿ	22699-39309	ಹಳೆಚಾಲಿ	37699-40399	ಚಾಲಿ	33089-41460
ಕೋಕ	9369-24509	ಕೆಂಪುಗೋಟು	19609-22909	ಕೋಕ	8891-17699
ಕೆಂಪುಗೋಟು	11019-28669	ರಾಶಿ	41699-46299	ಕೆಂಪುಗೋಟು	14891-25199
ರಾಶಿ	33899-57999	ತಟ್ಟಿಬೆಟ್ಟೆ	29309-40009	ರಾಶಿ	39600-54599
ಸಿಪ್ಪೆಗೋಟು	7599-18499	ಶಿರಸಿ		ತಟ್ಟಿಬೆಟ್ಟೆ	27509-37769
ಶಿವಮೊಗ್ಗ		ಬೆಟ್ಟೆ	30699-43489		
ಬೆಟ್ಟೆ	46009-58199				

ಭಾರತ ವಿರೋಧಿ ಚಟುವಟಿಕೆ ಆರೋಪ: ನಿತಾಶಾ ಪೌರತ್ವ ರದ್ದು

ಲಂಡನ್ (ಪಿಟಿಐ): ಇಂಗ್ಲೆಂಡ್‌ನ ಯೂನಿವರ್ಸಿಟಿ ಆಫ್ ವೆಸ್ಟ್ ಮಿನ್‌ಸ್ಟರ್‌ನ ರಾಜ್ಯಶಾಸ್ತ್ರ ಮತ್ತು ಅಂತರರಾಷ್ಟ್ರೀಯ ಸಂಬಂಧಗಳ ಪ್ರಾಧ್ಯಾಪಕಿ, ಕಾಶ್ಮೀರ ಮೂಲದ ಶಿಕ್ಷಣ ತಜ್ಞೆ ನಿತಾಶಾ ಕೌಲ್ ತಮ್ಮ 'ಭಾರತೀಯ ಸಾಗರೋತ್ತರ ಪೌರತ್ವ'ವನ್ನು (ಒಸಿಐ) ಭಾರತ ವಿರೋಧಿ ಚಟುವಟಿಕೆಗಳ ಆರೋಪ ಹೊರಿಸಿ ಕೇಂದ್ರ ಸರ್ಕಾರ ರದ್ದು ಮಾಡಿದೆ ಎಂದು ಹೇಳಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಈ ಸಂಬಂಧ ಭಾನುವಾರ 'ಪೋಸ್ಟ್' ಮಾಡಿರುವ ಅವರು, 'ಭಾರತ ಸರ್ಕಾರದಿಂದ ಮಾಹಿತಿ ಸ್ವೀಕರಿಸಿದ್ದೇನೆ. ನೀವು ದ್ವೇಷಪೂರಿತ ಮತ್ತು ಅವಹೇಳನಕಾರಿ ಇತಿಹಾಸ-ಸಂಗತಿಗಳಿಂದ ಪ್ರೇರಿತರಾಗಿದ್ದೀರಿ' ಎಂದು ಅದು ಆರೋಪಿಸಿದೆ ಎಂದು ಉಲ್ಲೇಖಿಸಿದ್ದಾರೆ.

ಬೆಂಗಳೂರಿನ ಸಮ್ಮೇಳನವೊಂದರಲ್ಲಿ ಪಾಲ್ಗೊಳ್ಳಲು ಫೆಬ್ರುವರಿಯಲ್ಲಿ ತಮಗೆ ಅವಕಾಶ ನಿರಾಕರಿಸಿದ್ದನ್ನು ನೆನಪಿಸುತ್ತಾ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ನಿತಾಶಾ, 'ದ್ವೇಷದ ವಿರುದ್ಧ ಮಾತನಾಡುವ ಶಿಕ್ಷಣ ತಜ್ಞರನ್ನು ಭಾರತದಲ್ಲಿ ಬಂಧಿಸಲಾಗುತ್ತಿದೆ. ಅಲ್ಲದೇ ಹೊರದೇಶದಲ್ಲಿರುವ ಶಿಕ್ಷಣ ತಜ್ಞರನ್ನು ದೇಶ ಮತ್ತು ಕುಟುಂಬದಿಂದ ದೂರ ಮಾಡುವ ಪ್ರಯತ್ನ ನಡೆಯುತ್ತಿದೆ. ದೇಶದ ಒಳಗೆ ಮತ್ತು ಹೊರಗೆ ನಮಗೆ ಸವಾಲು ಒಡ್ಡಬೇಡಿ ಎನ್ನುವ ಸಂದೇಶ ರವಾನಿಸುವ ಪ್ರಯತ್ನ ಇದು' ಎಂದು ಆರೋಪಿಸಿದ್ದಾರೆ.

ವೆಸ್ಟ್‌ಮಿನ್‌ಸ್ಟರ್ ವಿಶ್ವವಿದ್ಯಾಲಯದ ಪ್ರಜಾಪ್ರಭುತ್ವ ಅಧ್ಯಯನ ಕೇಂದ್ರದ ನಿರ್ದೇಶಕರಾಗಿರುವ ನಿತಾಶಾ ತಮ್ಮ ಸಾಗರೋತ್ತರ ಪೌರತ್ವ ರದ್ದು ಮಾಡಿರುವುದನ್ನು ಖಂಡಿಸಿ, 'ಗಡಿಯಾಚೆಗಿನ ನಿರ್ಬಂಧವು ಹುಸಿ ನಂಬಿಕೆ, ಸೇಡಿನ ಕ್ರಮವಾಗಿದೆ. ಅಲ್ಪಸಂಖ್ಯಾತ ವಿರೋಧಿ ಮತ್ತು ಪ್ರಜಾಪ್ರಭುತ್ವ ವಿರೋಧಿ ನೀತಿಗಳ ವಿರುದ್ಧ ವಿದ್ವತ್‌ಪೂರ್ಣ ಕೆಲಸ ಮಾಡಿದ್ದಕ್ಕಾಗಿ ನನ್ನನ್ನು ಶಿಕ್ಷಿಸಲಾಗಿದೆ' ಎಂದಿದ್ದಾರೆ.

ಸುಪ್ರೀಂ ಕೋರ್ಟ್‌ಗೆ ರಾಷ್ಟ್ರಪತಿ ಪ್ರಶ್ನೆ ಬಿಜೆಪಿಯೇತರ ಸಿ.ಎಂ.ಗಳಿಗೆ ಸ್ಟಾಲಿನ್ ಪತ್ರ

ಚೆನ್ನೈ (ಪಿಟಿಐ): ಮಸೂದೆಗಳನ್ನು ಅಂಗೀಕರಿಸುವುದಕ್ಕೆ ರಾಜ್ಯಪಾಲ ಹಾಗೂ ರಾಷ್ಟ್ರಪತಿ ಅವರಿಗೆ ಕಾಲಮಿತಿ ನಿಗದಿ ಮಾಡಿದ ತೀರ್ಪಿನ ಬಗ್ಗೆ ರಾಷ್ಟ್ರಪತಿಯವರು ಸುಪ್ರೀಂ ಕೋರ್ಟ್‌ಗೆ ಕೆಲವು ಪ್ರಶ್ನೆಗಳನ್ನು ಕೇಳಿದ್ದಾರೆ. ರಾಷ್ಟ್ರಪತಿ ಅವರ ಈ ನಡೆಯನ್ನು ವಿರೋಧಿಸಿ ಎಂದು ಆಗ್ರಹಿಸಿ ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಅವರು 8 ರಾಜ್ಯಗಳ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದಾರೆ.

'ಮಸೂದೆಗಳನ್ನು ತಡೆಹಿಡಿಯಲಾಗುತ್ತಿರುವ ಬಗ್ಗೆ ನ್ಯಾಯಾಲಯ ಈಗಾಗಲೇ ವಿಚಾರಣೆ ನಡೆಸಿ, ತೀರ್ಪು ನೀಡಿದೆ. ಜೊತೆಗೆ, ಸುಪ್ರೀಂ ಕೋರ್ಟ್‌ನ ಸೂಚನೆಗಳನ್ನು, ಅದರ ಸೂಚನೆ ನೀಡುವ ಅಧಿಕಾರವನ್ನು ಪ್ರಶ್ನಿಸಲು ಸಾಧ್ಯವಿಲ್ಲ ಎನ್ನುವುದು ಎಲ್ಲರಿಗೂ ತಿಳಿದಿರುವ ವಿಚಾರ. ಆದರೂ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ ಸ್ಪಷ್ಟನೆಗಳು ಬೇಕಾಗಿವೆ. ಇದು ಈ ಸರ್ಕಾರದ ಕೆಟ್ಟ ಉದ್ದೇಶಗಳನ್ನು ತೋರಿಸುತ್ತದೆ' ಎಂದು ಬಿಜೆಪಿಯೇತರ ಸರ್ಕಾರಗಳ ಮುಖ್ಯಮಂತ್ರಿಗಳಿಗೆ ಬರೆದಿರುವ ಪತ್ರದಲ್ಲಿ ಹೇಳಿದ್ದಾರೆ.

'ನ್ಯಾಯಾಲಯದಲ್ಲಿ ವಾದಿಸಲು ನಾವೆಲ್ಲರೂ ಸೇರಿ ಕಾನೂನಾತ್ಮಕವಾದ ಕಾರ್ಯತಂತ್ರವೊಂದನ್ನು ರೂಪಿಸಬೇಕು. ಸಂವಿಧಾನದ ಮೂಲ ತತ್ವಗಳನ್ನು ರಕ್ಷಿಸುವುದಕ್ಕೆ ನಾವೆಲ್ಲರೂ ಒಗ್ಗಟ್ಟಾಗಿ ವೇದಿಕೆಯೊಂದನ್ನು ರೂಪಿಸಿಕೊಳ್ಳಬೇಕು. ಈ ವಿಚಾರದಲ್ಲಿ ನಿಮ್ಮ ತತ್‌ಕ್ಷಣದ ಮತ್ತು ವೈಯಕ್ತಿಕವಾದ ಭಾಗವಹಿಸುವಿಕೆಯನ್ನು ಎದುರು ನೋಡುತ್ತಿದ್ದೇನೆ' ಎಂದಿದ್ದಾರೆ.

ಕರ್ನಾಟಕ, ಪಶ್ಚಿಮ ಬಂಗಾಳ, ಹಿಮಾಚಲ ಪ್ರದೇಶ, ತೆಲಂಗಾಣ, ಕೇರಳ, ಜಾರ್ಖಂಡ್, ಪಂಜಾಬ್ ಮತ್ತು ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿಗಳಿಗೆ ಸ್ಟಾಲಿನ್ ಪತ್ರ ಬರೆದಿದ್ದಾರೆ.

ಕೇರಳದಲ್ಲಿ ಮಣಿಪುರ ಆರೋಪಿಯ ಸೆರೆ

ಪ್ರಜಾವಾಣಿ ವಾರ್ತೆ

ಗುವಾಹಟಿ: ಮಣಿಪುರದ ಜಿರಿಬಾಮ್ ಜಿಲ್ಲೆಯಲ್ಲಿ ಕುಕಿ ಸಮುದಾಯದ ಮಹಿಳಾ ವೈದ್ಯರೊಬ್ಬರನ್ನು ಕ್ರೂರವಾಗಿ ಹತ್ಯೆ ಮಾಡಿದ್ದ ಆರೋಪಿಯನ್ನು ಕೇರಳದ ಕಣ್ಣೂರು ಜಿಲ್ಲೆಯಲ್ಲಿ ಬಂಧಿಸಲಾಗಿದೆ.

ರಾಜ್‌ಕುಮಾರ್ ಮೈಪಕ್ಸಾನಾ ಬಂಧಿತ ಆರೋಪಿ. ಈತ ನಿಷೇಧಿತ ಬಂಡುಕೋರರ ಗುಂಪು ಪೀಪಲ್ಸ್ ರೆವಲ್ಯೂಷನರಿ ಪಾರ್ಟಿ ಆಫ್ ಕಂಗ್ಲೀಪಾಕ್‌ನ ಕೇಡರ್ ಎಂದು ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ತಿಳಿಸಿದೆ.

ಝೈರಾನ್ ಗ್ರಾಮದಲ್ಲಿ ಕಳೆದ ವರ್ಷದ ನವೆಂಬರ್‌ನಲ್ಲಿ ಜೋಸಾಂಗ್ಕಿಮ್ ಎಂಬ ಮಹಿಳೆಯನ್ನು ಹತ್ಯೆ ಮಾಡಲಾಗಿತ್ತು. ನಂತರ ಹಲವು ಮನೆಗಳಿಗೆ ಬೆಂಕಿ ಹಚ್ಚಿ ಲೂಟಿ ಮಾಡಲಾಗಿತ್ತು ಎಂದು ಎನ್‌ಐಎ ಸೋಮವಾರ ಹೇಳಿದೆ.

ಈ ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪದ ಮೇಲೆ ಕಣಿವೆ ಮೂಲದ ಬಂಡುಕೋರ ಗುಂಪುಗಳಾದ ಯುಎನ್‌ಎಲ್‌ಎಫ್ ಮತ್ತು ಕೆಕೆವಿಎಲ್‌ನ ಇಬ್ಬರು ಕಾರ್ಯಕರ್ತರನ್ನು ಎನ್‌ಐಎ ಬಂಧಿಸಿದೆ.

ಅಸ್ಸಾಂನಲ್ಲಿ ಬಂಧನ ಮಣಿಪುರದ ಕುಕಿ ಪ್ರಾಬಲ್ಯದ ಟೆಂಗ್‌ನೌಪಾಲ್ ಜಿಲ್ಲೆಯ ಮೊರೆಹ್‌ನಲ್ಲಿರುವ ಐಆರ್‌ಬಿ ಪೋಸ್ಟ್ ಮೇಲೆ ಕಳೆದ ವರ್ಷದ ಜ. 17ರಂದು ದಾಳಿ ನಡೆಸಿದ ಆರೋಪಿಯನ್ನು ಅಸ್ಸಾಂನಲ್ಲಿ ಬಂಧಿಸಲಾಗಿದೆ.

ಟೆಂಗ್‌ನೌಪಾಲ್ ನಿವಾಸಿ ಥಾಂಗ್ಮಿನ್ಲಾಲ್ ಅಲಿಯಾಸ್ ಲೆನಿನ್‌ನನ್ನು ಅಸ್ಸಾಂನ ಸಿಲ್ಚಾರ್‌ನಲ್ಲಿ ಭಾನುವಾರ ಬಂಧಿಸಲಾಗಿದ್ದು, ಈತ ಬಂಡುಕೋರ ಗುಂಪುಗಳೊಂದಿಗೆ ನಂಟು ಹೊಂದಿರುವ ಮಾಹಿತಿ ಇನ್ನೂ ಖಚಿತಪಟ್ಟಿಲ್ಲ ಎಂದು ಎನ್‌ಐಎ ಹೇಳಿದೆ. ಈ ಪ್ರಕರಣದಲ್ಲಿ ಬಂಧನಕ್ಕೊಳಗಾದ ಮೊದಲ ವ್ಯಕ್ತಿ ಈತನಾಗಿದ್ದಾನೆ.

ನೆದರ್ಲೆಂಡ್ಸ್‌ಗೆ ಜೈಶಂಕರ್ ಭೇಟಿ

ದಿ ಹೇಗ್ (ಪಿಟಿಐ): ಭಾರತ ಮತ್ತು ನೆದರ್ಲೆಂಡ್ಸ್‌ಗೆ ನಡುವಿನ ಸಂಬಂಧ ವೃದ್ಧಿಗೊಳಿಸುವ ನಿಟ್ಟಿನಲ್ಲಿ ಮಾತುಕತೆ ನಡೆಸಲು ವಿದೇಶಾಂಗ ಸಚಿವ ಜೈಶಂಕರ್ ಸೋಮವಾರ ನೆದರ್ಲೆಂಡ್ಸ್‌ಗೆ ಭೇಟಿ ನೀಡಿದ್ದಾರೆ.

ಮೂರು ದೇಶಗಳ ಪ್ರವಾಸ ಕೈಗೊಂಡಿರುವ ಸಚಿವರ ಮೊದಲ ಭೇಟಿ ಇದಾಗಿದೆ. ಅವರು ಡೆನ್ಮಾರ್ಕ್, ಜರ್ಮನಿಗೂ ತೆರಳಲಿದ್ದಾರೆ.

ಜೈಶಂಕರ್ ಅವರು ನೆದರ್ಲೆಂಡ್ಸ್‌ನ ವಿದೇಶಾಂಗ ಸಚಿವ ಕ್ಯಾಸ್ಪರ್ ವೆಲ್ಡ್‌ಕ್ಯಾಂಪ್ ಅವರನ್ನು ಭೇಟಿ ಮಾಡಿ, ದ್ವಿಪಕ್ಷೀಯ ಮಾತುಕತೆ ನಡೆಸಿದರು.

ಜೈಶಂಕರ್ ಭೇಟಿ ಕುರಿತಂತೆ ದಿ ಹೇಗ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಮಾಹಿತಿ ನೀಡಿದೆ.

ದ್ವಿಪಕ್ಷೀಯ ಸಂಬಂಧ, ಪ್ರಾದೇಶಿಕ ಮತ್ತು ಜಾಗತಿಕ ವಿಚಾರಗಳ ಕುರಿತು 3 ರಾಷ್ಟ್ರಗಳ ವಿದೇಶಾಂಗ ಸಚಿವರ ಜತೆಗೆ ಜೈಶಂಕರ್ ಚರ್ಚೆ ನಡೆಸುವ ನಿರೀಕ್ಷೆ ಇದೆ.

ಪುಟಿನ್, ಝೆಲೆನ್‌ಸ್ಕಿ ಜೊತೆ ಟ್ರಂಪ್ ಮಾತುಕತೆ

ವಾಷಿಂಗ್ಟನ್ (ಎಎಫ್‌ಪಿ): 'ರಷ್ಯಾ ಮತ್ತು ಉಕ್ರೇನ್ ದೇಶಗಳು ತಕ್ಷಣವೇ ಕದನ ವಿರಾಮದ ಕುರಿತು ಮಾತುಕತೆಗಳನ್ನು ಪ್ರಾರಂಭಿಸಲಿವೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.

ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರ ಜತೆಗೆ ಎರಡು ಗಂಟೆಗಳ ಕಾಲ ದೂರವಾಣಿ ಮೂಲಕ ಚರ್ಚಿಸಿದ ಅವರು, ಮಾತುಕತೆಯು 'ಅತ್ಯುತ್ತಮ'ವಾಗಿತ್ತು ಎಂದು ಸಾಮಾಜಿಕ ಮಾಧ್ಯಮದಲ್ಲಿ ಹೇಳಿದ್ದಾರೆ.

ಕದನ ವಿರಾಮಕ್ಕೆ ಸಂಬಂಧಿಸಿದಂತೆ ಟ್ರಂಪ್ ಅವರು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಮತ್ತು ಯುರೋಪ್‌ನ ನಾಯಕರ ಜತೆಗೂ ಮಾತುಕತೆ ನಡೆಸಿದರು.

'ಈ ಮಾತುಕತೆಗಳು ಯುದ್ಧ ಅಂತ್ಯದತ್ತ ಮಹತ್ವದ ಹೆಜ್ಜೆಯಾಗಿವೆ. ಕದನ ವಿರಾಮ ಷರತ್ತುಗಳ ಕುರಿತು ಎರಡೂ ಕಡೆಯವರು ನೇರವಾಗಿ ಮಾತುಕತೆ ನಡೆಸಲಿದ್ದಾರೆ' ಎಂದು ಅವರು ಒತ್ತಿ ಹೇಳಿದ್ದಾರೆ.

ರಷ್ಯಾ ಕದನ ವಿರಾಮಕ್ಕೆ ಒಪ್ಪದಿದ್ದರೆ ರಷ್ಯಾದ ಮೇಲೆ ಕಠಿಣ ನಿರ್ಬಂಧಗಳನ್ನು ವಿಧಿಸುವಂತೆ ಝೆಲೆನ್‌ಸ್ಕಿ ಅವರು ಟ್ರಂಪ್ ಅವರನ್ನು ಒತ್ತಾಯಿಸಿದ್ದಾರೆ ಎಂದು ಉಕ್ರೇನ್ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಪುರುಷ ಸಹಾಯಕರು ತಕ್ಷಣ ಬೇಕಾಗಿದ್ದಾರೆ. ರಾಮನಗರ ಬಳಿಯಿರುವ ರೆಸಾರ್ಟ್‌ಗೆ ಊಟ ವಸತಿಯೊಂದಿಗೆ. ಉತ್ತಮ ಸಂಬಳ. ಸಂಪರ್ಕಿಸಿ: 9663497356/ 8884811114

Marketing & Sales

Barrix® One for everyone
SALES OFFICERS WANTED
Locations: Raichur, Jewargi, Chikkamagaluru, Yadgir.
Qualification: PUC/Diploma/Degree
Experience: 3+ years in Agri Sales & Marketing
Send your CV to info@barrix.in (or) WhatsApp: 72595 86222

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000 ರಿಂದ 20,000,ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 6366625808, 6366627808.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ಲೇಡಿಸ್ ಬ್ಯೂಟಿ ಪಾರ್ಲರ್ ನಲಿ ಲೇಡಿಸ್ ಬ್ಯೂಟಿಷಿಯನ್ಸ್ ಬೇಕಾಗಿದ್ದರೆ. ತಿಂಗಳಿಗೆ ವೇತನ 10000/- Full ಟೈಮ್ & Part ಟೈಮ್ ಶೇಷಾದ್ರಿಪುರಂ ಬೆಂಗಳೂರು, ಸಂಪರ್ಕಿಸಿ: 7349494852

ಭವಿಷ್ಯ

Astrology

(ಪ್ರೇಮ ಭವಿಷ್ಯ) LOVE BREAKUP ಸ್ತ್ರೀಲೈಂಗಿಕ ಸಂಭೋಗ ವಶೀಕರಣ ಶತ್ರುಉಚ್ಚಾಟನೆ ಶತ್ರುಸ್ತಂಭನ ಶತ್ರುಸರ್ವನಾಶ ಇಷ್ಟಪಟ್ಟವರು ನಿಮ್ಮಂತೆ ಆಗಲು ಗಂಡಹೆಂಡತಿ ಸಮಸ್ಯೆ ಪರಿಹಾರಕ್ಕೆ ಮಂಜುನಾಥ್ ಭಟ್ 9663243202

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9886213331
+91 9845114560 | +91 9900428036

ಪ್ಲೇಆಫ್ ರೇಸ್‌ನಿಂದ ಹೊರಬಿದ್ದ ಲಖನೌ • ಫಲನೀಡದ ಮಾರ್ಷ್– ಏಡನ್ ಅರ್ಧಶತಕ

ಅಭಿಷೇಕ್ ಆಟಕ್ಕೆ ಒಲಿದ ಜಯ

ಅರ್ಧಶತಕ ದಾಖಲಿಸಿದ ಅಭಿಷೇಕ್ ಶರ್ಮಾ — ಎಎಫ್‌ಪಿ ಚಿತ್ರ

ಲಖನೌ (ಪಿಟಿಐ): ಎಡಗೈ ಬ್ಯಾಟರ್ ಅಭಿಷೇಕ್ ಶರ್ಮಾ (59; 20ಎ, 4x4, 6x6) ಅವರ ಬಿರುಸಿನ ಅರ್ಧಶತಕದ ಬಳಿಕ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳ ಉಪಯುಕ್ತ ಕೊಡುಗೆಯ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್ ತಂಡವು ಸೋಮವಾರ ಐಪಿಎಲ್ ಪಂದ್ಯದಲ್ಲಿ ಆರು ವಿಕೆಟ್‌ಗಳಿಂದ ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಮಣಿಸಿತು.

ಈ ಸೋಲಿನೊಂದಿಗೆ ಲಖನೌ ತಂಡದ ಪ್ಲೇಆಫ್ ಅವಕಾಶದ ಬಾಗಿಲು ಮುಚ್ಚಿತು. ಗುಜರಾತ್ ಟೈಟನ್ಸ್, ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಪಂಜಾಬ್ ಕಿಂಗ್ಸ್ ತಂಡಗಳು ಈಗಾಗಲೇ ಪ್ಲೇ ಆಫ್‌ಗೆ ಟಿಕೆಟ್ ಪಡೆದಿವೆ. ಕ್ಷೀಣ ಅವಕಾಶ ಹೊಂದಿದ್ದ ಲಖನೌ ತಂಡ ಹೊರಬಿದ್ದ ಕಾರಣ ಉಳಿದ ಒಂದು ಸ್ಥಾನಕ್ಕೆ ಮುಂಬೈ ಇಂಡಿಯನ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ತಂಡಗಳ ನಡುವೆ ಪೈಪೋಟಿಯಿದೆ. ಇದೇ 21ರಂದು ಈ ತಂಡಗಳು ಮುಖಾಮುಖಿಯಾಗಲಿದ್ದು, ಆ ಪಂದ್ಯ ನಿರ್ಣಾಯಕವಾಗುವ ಸಾಧ್ಯತೆಯಿದೆ.

ಇಲ್ಲಿನ ಏಕನಾ ಕ್ರೀಡಾಂಗಣದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಇಳಿಸಲ್ಪಟ್ಟ ಲಖನೌ ತಂಡ 7 ವಿಕೆಟ್‌ಗೆ 205 ರನ್‌ಗಳ ಸವಾಲಿನ ಮೊತ್ತ ಗಳಿಸಿತು. ಗುರಿ ಬೆನ್ನಟ್ಟಿದ ಹೈದರಾಬಾದ್ ತಂಡವು 10 ಎಸೆತಗಳು ಬಾಕಿ ಇರುವಂತೆ 4 ವಿಕೆಟ್‌ಗೆ 206 ರನ್ ಗಳಿಸಿ ಸಂಭ್ರಮಿಸಿತು. ಈ ಮೊದಲೇ ಪ್ಲೇ ಆಫ್ ರೇಸ್‌ನಿಂದ ಹೊರಬಿದ್ದಿರುವ ಹಾಲಿ ರನ್ನರ್ಸ್ ಅಪ್ ಹೈದರಾಬಾದ್ ತಂಡಕ್ಕೆ ಇದು 12 ಪಂದ್ಯಗಳಲ್ಲಿ ನಾಲ್ಕನೇ ಗೆಲುವಾಗಿದೆ.

ಟ್ರಾವಿಸ್ ಹೆಡ್ ಬದಲು ಅವಕಾಶ ಪಡೆದ ಅಥರ್ವ ತೈಡೆ (13) ಅವರು ಅಭಿಷೇಕ್ ಜೊತೆ ಇನಿಂಗ್ಸ್ ಆರಂಭಿಸಿದರು. ತೈಡೆ ಬೇಗ ನಿರ್ಗಮಿಸಿದರೂ ಅಭಿಷೇಕ್ ಅವರನ್ನು ಸೇರಿಕೊಂಡ ಇಶಾನ್ ಕಿಶನ್ (35) ಎರಡನೇ ವಿಕೆಟ್ ಜೊತೆಯಾಟದಲ್ಲಿ ವೇಗದ 82 (35 ಎಸೆತ) ರನ್ ಸೇರಿಸಿ ಗೆಲುವಿಗೆ ಮುನ್ನುಡಿ ಬರೆದರು.

ಮಧ್ಯಮ ಕ್ರಮಾಂಕದಲ್ಲಿ ಹೆನ್ರಿಚ್ ಕ್ಲಾಸನ್ (47;28ಎ) ಮತ್ತು ಕಮಿಂದು ಮೆಂಡಿಸ್ (32;21ಎ) ಜವಾಬ್ದಾರಿಯ ಆಟವಾಡಿದರು. ಈ ಮಧ್ಯೆ ಬಲ ಮಂಡಿರಜ್ಜು ಸ್ನಾಯು ಸೆಳೆತಕ್ಕೊಳಗಾದ ಮೆಂಡಿಸ್ ಆಟದಿಂದ ಹಿಂದೆ ಸರಿದರು. ನಂತರದಲ್ಲಿ ಅನಿಕೇತ್ ವರ್ಮಾ (ಔಟಾಗದೆ 5) ಮತ್ತು ನಿತೀಶ್ ಕುಮಾರ್ ರೆಡ್ಡಿ (ಔಟಾಗದೆ 5) ಗೆಲುವಿನ ಔಪಚಾರಿಕತೆ ಪೂರೈಸಿದರು.

ಮಾರ್ಷ್–ಏಡನ್ ಅಬ್ಬರ: ಇದಕ್ಕೆ ಮೊದಲು ಲಖನೌ ತಂಡವನ್ನು ಎಂದಿನಂತೆ ಮೂವರು ಪ್ರಮುಖ ಆಟಗಾರರು ಆಧರಿಸಿದರು. ಆರಂಭ ಆಟಗಾರರಾದ ಮಿಚೆಲ್ ಮಾರ್ಷ್ (65, 39 ಎ, 4x6, 6x6) ಮತ್ತು ಏಡನ್ ಮರ್ಕರಂ (61, 38 ಎ, 4x4, 6x4) ಅವರು ಮೊದಲ ವಿಕೆಟ್‌ಗೆ 115 ರನ್ ಸೇರಿಸಿ ಉತ್ತಮ ಅಡಿಪಾಯ ಹಾಕಿದರು. ನಾಲ್ಕನೇ ಕ್ರಮಾಂಕದಲ್ಲಿ ಆಡಲಿಳಿದ ನಿಕೋಲಸ್ ಪೂರನ್ ಉಪಯುಕ್ತ 45 ರನ್ ಗಳಿಸಿದರು.

ಮಾರ್ಷ್–ಏಡನ್ ಅವರ ಆಕರ್ಷಕ ಅರ್ಧ ಶತಕಗಳ ನೆರವಿನಿಂದ ಲಖನೌ ಸೂಪರ್ ಜೈಂಟ್ಸ್ ತಂಡ ಉತ್ತಮ ಆರಂಭ ಪಡೆದರೂ, ಕೊನೆಯ ಹಂತದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡ ರನ್‌ವೇಗಕ್ಕೆ ಒಂದಿಷ್ಟು ಕಡಿವಾಣ ಹಾಕಿತು. ಮೊದಲ 10 ಓವರುಗಳ ಆಟದಲ್ಲಿ ವಿಕೆಟ್ ನಷ್ಟವಿಲ್ಲದೇ 108 ರನ್ ಗಳಿಸಿದ್ದ ಲಖನೌ ದೊಡ್ಡ ಮೊತ್ತ ಪೇರಿಸುವಂತೆ ಕಂಡಿತ್ತು. ಆದರೆ ಸನ್‌ರೈಸರ್ಸ್ ಬೌಲರ್‌ಗಳು ಕೊನೆಯ 10 ಓವರುಗಳಲ್ಲಿ 97 ರನ್ ಬಿಟ್ಟುಕೊಟ್ಟರೂ 7 ವಿಕೆಟ್‌ಗಳನ್ನು ಪಡೆದು ಆತಿಥೇಯ ತಂಡಕ್ಕೆ ಕಡಿವಾಣ ಹಾಕಿದರು.

ನಿಕೋಲಸ್ ಪೂರನ್ ಅವರಿಗಿಂತ ಮೊದಲೇ ಕ್ರೀಸಿಗೆ ಬಂದ ನಾಯಕ ರಿಷಭ್ ಪಂತ್ (7) ಅವರ ಪರದಾಟ ಮುಂದುವರಿಯಿತು. ಈ ಋತುವಿನಲ್ಲಿ ಕ್ರಮಾಂಕದಲ್ಲಿ ಕೆಲವು ಬಾರಿ ಬದಲಾವಣೆ ಮಾಡಿದರೂ ಅವರಿಗೆ ಯಶಸ್ಸು ಒಲಿದಿಲ್ಲ. ಅವರು ಇಶಾನ್ ಮಾಲಿಂಗ ಅವರ ಯಾರ್ಕರ್ ಒಂದನ್ನು ತಡೆಯುವ ಯತ್ನದಲ್ಲಿ ಬೌಲರ್‌ಗೇ ಕ್ಯಾಚ್ ನೀಡಿದರು.

ಮಾರ್ಷ್ ನಿರ್ಗಮನದ ನಂತರ ರನ್‌ವೇಗ ತಗ್ಗಿತು. ನಿಕೋಲಸ್ ಪೂರನ್ ಆಕ್ರಮಣದ ಆಟಕ್ಕೆ ಯತ್ನಿಸಿದರೂ ಎಂದಿನಂತೆ ಸಿಕ್ಸರ್‌ಗಳನ್ನೆತ್ತಲು ಅವರಿಗೆ ಸಾಧ್ಯವಾಗಲಿಲ್ಲ. 16ನೇ ಓವರಿನಲ್ಲಿ ಮರ್ಕರಂ ನಿರ್ಗಮಿಸಿದ ಮೇಲೆ 40 ರನ್ ಅಂತರದಲ್ಲಿ ನಾಲ್ಕು ವಿಕೆಟ್‌ಗಳು ಬಿದ್ದವು. ಮರ್ಕರಂ ಅವರನ್ನು ಬೌಲ್ಡ್ ಮಾಡಿದ ಹರ್ಷಲ್ ಪಟೇಲ್ ಐಪಿಎಲ್‌ನಲ್ಲಿ 150ನೇ ವಿಕೆಟ್ ಪಡೆದರು. ಲಸಿತ್ ಮಾಲಿಂಗ (105 ಪಂದ್ಯ) ಅವರನ್ನು ಬಿಟ್ಟರೆ ಹರ್ಷಲ್ (117 ಪಂದ್ಯ) ಈ ಮೈಲಿಗಲ್ಲನ್ನು ವೇಗವಾಗಿ ದಾಟಿದ ಎರಡನೇ ಬೌಲರ್ ಎನಿಸಿದರು.

ಹಾಲಿ ಐಪಿಎಲ್‌ನಲ್ಲಿ ಮೊದಲ ಬಾರಿ ಬೌಲಿಂಗ್ ಮಾಡಿದ್ದ ನಿತೀಶ್ ರೆಡ್ಡಿ ಕೊನೆಯ ಓವರಿನಲ್ಲಿ 20 ರನ್ ಬಿಟ್ಟುಕೊಟ್ಟರು. ಕೊನೆಯ ಎಸೆತವನ್ನು ಆಕಾಶ್ ದೀಪ್ ಸಿಕ್ಸರ್‌ಗಟ್ಟುವ ಮೂಲಕ ತಂಡದ ಮೊತ್ತ 200 ದಾಟಿಸಿದರು.

ಸಂಕ್ಷಿಪ್ತ ಸ್ಕೋರು: ಲಖನೌ ಸೂಪರ್ ಜೈಂಟ್ಸ್: 20 ಓವರುಗಳಲ್ಲಿ 7 ವಿಕೆಟ್‌ಗೆ 205 (ಮಿಚೆಲ್ ಮಾರ್ಷ್ 65, ಏಡನ್ ಮರ್ಕರಂ 61, ನಿಕೋಲಸ್ ಪೂರನ್ 45; ಹರ್ಷ ದುಬೆ 44ಕ್ಕೆ1, ಹರ್ಷಲ್ ಪಟೇಲ್ 49ಕ್ಕೆ1, ಇಶಾನ್ ಮಾಲಿಂಗ 28ಕ್ಕೆ2, ನಿತೀಶ್ ಕುಮಾರ್ ರೆಡ್ಡಿ 28ಕ್ಕೆ1); ಸನ್‌ರೈಸರ್ಸ್ ಹೈದರಾಬಾದ್: 18.2 ಓವರುಗಳಲ್ಲಿ 4 ವಿಕೆಟ್‌ಗೆ 206 (ಅಭಿಷೇಕ್ ಶರ್ಮಾ 59, ಇಶಾನ್ ಕಿಶನ್ 35, ಹೆನ್ರಿಚ್ ಕ್ಲಾಸೆನ್ 47, ಕಮಿಂದು ಮೆಂಡಿಸ್ 32; ದಿಗ್ವೇಶ್ ರಾಠಿ 37ಕ್ಕೆ 2). ಪಂದ್ಯದ ಆಟಗಾರ: ಅಭಿಷೇಕ್ ಶರ್ಮಾ

ಚೆನ್ನೈ ಸೂಪರ್ ಕಿಂಗ್ಸ್‌ಗೆ ರಾಜಸ್ಥಾನ ಸವಾಲು ಇಂದು

ತಳದಲ್ಲಿರುವ ತಂಡಗಳ ಮುಖಾಮುಖಿ

ನವದೆಹಲಿ (ಪಿಟಿಐ): ಪಾಯಿಂಟ್ಸ್ ಪಟ್ಟಿಯ ತಳದಲ್ಲಿರುವ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ರಾಜಸ್ಥಾನ ರಾಯಲ್ಸ್ ತಂಡಗಳು ಮಂಗಳವಾರ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಮುಖಾಮುಖಿಯಾಗಲಿವೆ. ಐಪಿಎಲ್ ಪ್ಲೇ ಆಫ್ ದೃಷ್ಟಿಯಿಂದ ಈ ಪಂದ್ಯ ಏನೂ ಮಹತ್ವ ಪಡೆದಿಲ್ಲ ನಿಜ; ಆದರೆ ಸಿಎಸ್‌ಕೆಯು ಯುವ ತಂಡವನ್ನು ಕಟ್ಟುವ ಪ್ರಯತ್ನಕ್ಕೆ ಈಗಾಗಲೇ ಚಾಲನೆ ನೀಡಿದೆ.

ರಾಯಲ್ಸ್ ತಂಡಕ್ಕೆ ಮಂಗಳವಾರದ ಪಂದ್ಯ ಈ ಸಾಲಿನ ಕೊನೆಯದ್ದು. ಈ ತಂಡಕ್ಕೆ ವೈಭವ್ ಸೂರ್ಯವಂಶಿ ರೂಪದಲ್ಲಿ ಬೀಸಾಟವಾಡುವ ನಿರ್ಭೀತ ಆಟಗಾರ ದೊರೆತಿದ್ದು ಬಿಟ್ಟರೆ ಹಾಲಿ ಋತುವಿನಲ್ಲಿ ಸಂಭ್ರಮ ಪಡುವಂಥ ವಿಷಯ ಏನೂ ಇರಲಿಲ್ಲ. ಮೆಗಾ ಹರಾಜಿನಲ್ಲಿ ಬೌಲರ್‌ಗಳ ಆಯ್ಕೆಯಲ್ಲೂ ತಂಡ ಎಡವಿತ್ತು. 10 ತಂಡಗಳ ಲೀಗ್‌ನಲ್ಲಿ ಸದ್ಯ ಒಂಬತ್ತನೆ ಸ್ಥಾನದಲ್ಲಿದೆ. ಬೌಲರ್‌ಗಳು ಸಾಧಾರಣ ಪ್ರದರ್ಶನ ನೀಡಿದರೆ, ಅಗ್ರ ಕ್ರಮಾಂಕದ ಬ್ಯಾಟರ್‌ಗಳು ಮಿಂಚಿದ್ದಾರೆ.

ಜೋಸ್ ಬಟ್ಲರ್ ಅವರನ್ನು ಕೈಬಿಟ್ಟಿದ್ದು ದುಬಾರಿಯಾಯಿತು. ಆರ್ಚರ್ ಭರವಸೆಗೆ ತಕ್ಕಂತೆ ಬೌಲಿಂಗ್ ಮಾಡಲಿಲ್ಲ. ಭಾರತದ ಪ್ರಮುಖ ಬೌಲರ್‌ಗಳನ್ನು ಆಯ್ಕೆ ಮಾಡದ ಪರಿಣಾಮ ಎದುರಿಸಿತು.

ಆರಂಭದಲ್ಲಿ ತಳಕ್ಕೆ ಸರಿದಿದ್ದ ಮುಂಬೈ ಇಂಡಿಯನ್ಸ್ ಹಣೆಬರಹವನ್ನು ಬೌಲರ್‌ಗಳಾದ ಜಸ್‌ಪ್ರೀತ್ ಬೂಮ್ರಾ ಮತ್ತು ಟ್ರೆಂಟ್ ಬೌಲ್ಟ್ ಬದಲಿಸಿದರು. ಸಿರಾಜ್ ಮತ್ತು ಪ್ರಸಿದ್ಧಕೃಷ್ಣ ಗುಜರಾತ್ ಟೈಟನ್ಸ್ ಕೈಹಿಡಿದರು. 30 ವಿಕೆಟ್‌ಗಳನ್ನು ತಮ್ಮೊಳಗೆ ಪಡೆದರು. ರಾಯಲ್ಸ್‌ಗೆ ಇಂಥ ಯಾವುದೇ ಅವಕಾಶ ಇರಲಿಲ್ಲ. ಎದುರಾಳಿಗೆ ಆತಂಕ ಮೂಡಿಸುವಂಥ ಒಬ್ಬ ಬೌಲರ್ ಸಹ ತಂಡದಲ್ಲಿರಲಿಲ್ಲ.

ಅನುಭವಿ ಆಟಗಾರರಿಗೆ ಅವಕಾಶ ನೀಡಿದ ಚೆನ್ನೈ ಅದು ಫಲ ನೀಡುತ್ತಿಲ್ಲವೆಂದು ತಿಳಿದ ನಂತರ ಕೊನೆಯ ಹಂತದಲ್ಲಿ ಯುವ ಆಟಗಾರರಿಗೆ ಅವಕಾಶ ನೀಡುತ್ತಿದೆ. ರಾಹುಲ್ ತ್ರಿಪಾಠಿ, ದೀಪಕ್ ಹೂಡ ನಿರಾಸೆ ಮೂಡಿಸಿದರು. ಆದರೆ ಕೊನೆಯ ಕೆಲವು ಪಂದ್ಯಗಳಿಂದ ಶೇಖ್ ರಶೀದ್, ಆಯುಷ್ ಮ್ಹಾತ್ರೆ ಮತ್ತು ಉರ್ವಿಲ್ ಪಟೇಲ್ ಅವರಿಗೆ ಅವಕಾಶ ಕೊಟ್ಟು ನೀಡಿದೆ. ಈ ಆಟಗಾರರೂ ನಿರಾಸೆ ಮೂಡಿಸಿಲ್ಲ. ಮ್ಹಾತ್ರೆ, ಆರ್‌ಸಿಬಿ ವಿರುದ್ಧ ಶತಕ ತಪ್ಪಿಸಿಕೊಂಡಿದ್ದರು. ಸನ್‌ರೈಸರ್ಸ್ ಮತ್ತು ಮುಂಬೈ ವಿರುದ್ಧವೂ ಚೆನ್ನಾಗಿ ಆಡಿದ್ದಾರೆ. ಪಟೇಲ್, ಕೆಕೆಆರ್ ವಿರುದ್ಧ ಮಿಂಚಿನ ಆಟವಾಡಿದ್ದಾರೆ. ನಾಯಕ ಋತುರಾಜ್ ಗಾಯಾಳಾಗಿದ್ದು ತಂಡಕ್ಕೆ ಹಿನ್ನಡೆಯಾಯಿತು. ಧೋನಿ ಬಳಗದ ವಿದೇಶಿ ಬ್ಯಾಟರ್‌ಗಳಾದ ರಚಿನ್ ರವೀಂದ್ರ ಮತ್ತು ಡವಾನ್ ಕಾನ್ವೆ ರನ್ ಬರ ಎದುರಿಸಿದ್ದಾರೆ.

ಆಯುಷ್ ಮ್ಹಾತ್ರೆ


ವೈಭವ್ ಸೂರ್ಯವಂಶಿ

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್

ಐಪಿಎಲ್: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
ಗುಜರಾತ್ ಟೈಟನ್ಸ್	12	9	3	18	0.795
ರಾಯಲ್ ಚಾಲೆಂಜರ್ಸ್ ಬೆಂಗಳೂರು	12	8	3	17	0.482
ಪಂಜಾಬ್ ಕಿಂಗ್ಸ್	12	8	3	17	0.389
ಮುಂಬೈ ಇಂಡಿಯನ್ಸ್	12	7	5	14	1.156
ಡೆಲ್ಲಿ ಕ್ಯಾಪಿಟಲ್ಸ್	12	6	5	13	0.260
ಕೋಲ್ಕತ್ತ ನೈಟ್ ರೈಡರ್ಸ್	13	5	6	12	0.193
ಲಖನೌ ಸೂಪರ್ ಜೈಂಟ್ಸ್	12	5	7	10	-0.506
ಸನ್‌ರೈಸರ್ಸ್ ಹೈದರಾಬಾದ್	12	4	7	9	-1.005
ರಾಜಸ್ಥಾನ ರಾಯಲ್ಸ್	13	3	10	6	-0.701
ಚೆನ್ನೈ ಸೂಪರ್ ಕಿಂಗ್ಸ್	12	3	9	6	-0.992

ಆರೆಂಜ್ ಕ್ಯಾಪ್
ಸಾಯಿ ಸುದರ್ಶನ್ (ಜಿಟಿ) 617 ರನ್

ಪರ್ಪಲ್ ಕ್ಯಾಪ್
ಪ್ರಸಿದ್ಧ ಕೃಷ್ಣ (ಜಿಟಿ) 21 ವಿಕೆಟ್

ಆರ್‌ಸಿಬಿಗೆ ಜಿಂಬಾಬ್ವೆಯ ವೇಗಿ ಮುಝುರಾಬಾನಿ

ನವದೆಹಲಿ (ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು, ಜಿಂಬಾಬ್ವೆಯ ವೇಗದ ಬೌಲರ್ ಬ್ಲೆಸಿಂಗ್ ಮುಝುರಾಬಾನಿ ಅವರನ್ನು ಸೇರ್ಪಡೆ ಮಾಡಿಕೊಂಡಿದೆ. ಅವರು ಲುಂಗಿಸಾನಿ ಗಿಡಿ ಸ್ಥಾನದಲ್ಲಿ ಆಡುವರು ಫ್ರಾಂಚೈಸಿಯು ಸೋಮವಾರ ತಿಳಿಸಿದೆ.

ಗಿಡಿ ಅವರು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಆಡುವ ದಕ್ಷಿಣ ಆಫ್ರಿಕಾ ತಂಡಕ್ಕೆ ಆಯ್ಕೆಯಾಗಿದ್ದಾರೆ. ಮೇ 26ರಿಂದ ಈ ಬದಲಾವಣೆ ಅನ್ವಯವಾಗಲಿದೆ. ಮುಝುರಾಬಾನಿ ಅವರು 70 ಟಿ20 ಅಂತರರಾಷ್ಟ್ರೀಯ ಪಂದ್ಯಗಳಿಂದ 78 ವಿಕೆಟ್ ಪಡೆದಿದ್ದಾರೆ. 12 ಟೆಸ್ಟ್ ಮತ್ತು 55 ಏಕದಿನ ಪಂದ್ಯಗಳನ್ನೂ ಆಡಿದ್ದಾರೆ.

ಅವರು ₹75 ಲಕ್ಷಕ್ಕೆ ಆರ್‌ಸಿಬಿ ಸೇರ್ಪಡೆಯಾಗಿದ್ದಾರೆ.

ಈಗಾಗಲೇ ಪ್ಲೇ ಆಫ್ ರೇಸ್‌ನಿಂದ ಹೊರಬಿದ್ದಿರುವ ಹಾಲಿ ಚಾಂಪಿಯನ್ ಕೋಲ್ಕತ್ತ ನೈಟ್‌ರೈಡರ್ಸ್ ತಂಡವು ವೆಸ್ಟ್ ಇಂಡೀಸ್‌ನ ಆಲ್‌ರೌಂಡರ್ ರೋವ್ಮನ್ ಪೊವೆಲ್ ಬದಲು ಮಧ್ಯಪ್ರದೇಶದ ಲೆಗ್ ಸ್ಪಿನ್ನರ್ ಶಿವಂ ಶುಕ್ಲಾ ಅವರಿಗೆ ಅವಕಾಶ ನೀಡಿದೆ. ಪೊವೆಲ್ ಅವರು ಟಾನ್ಸಿಲ್‌ಗೆ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲಿದ್ದಾರೆ. ₹30 ಲಕ್ಷಕ್ಕೆ ಶುಕ್ಲಾ ಅವರು ಅಜಿಂಕ್ಯ ರಹಾನೆ ಪಡೆಗೆ ಸೇರ್ಪಡೆಯಾಗಿದ್ದಾರೆ.

ಬ್ಲೆಸಿಂಗ್ ಮುಝುರಾಬಾನಿ

ಜೆಎಸ್‌ಸಿಎ ಕಾರ್ಯದರ್ಶಿಯಾಗಿ ತಿವಾರಿ


ಸೌರಭ್ ತಿವಾರಿ

ರಾಂಚಿ (ಪಿಟಿಐ): ಭಾರತದ ಮಾಜಿ ಕ್ರಿಕೆಟಿಗರಾದ ಸೌರಭ್ ತಿವಾರಿ ಮತ್ತು ಶಹಬಾಜ್ ನದೀಮ್ ಅವರು ಕ್ರಮವಾಗಿ ಜಾರ್ಖಂಡ್ ರಾಜ್ಯ ಕ್ರಿಕೆಟ್ ಸಂಸ್ಥೆಯ (ಜೆಎಸ್‌ಸಿಎ) ಕಾರ್ಯದರ್ಶಿ ಮತ್ತು ಜಂಟಿ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ.

ಎಡಗೈ ಬ್ಯಾಟರ್ ತಿವಾರಿ ಮತ್ತು ಎಡಗೈ ಸ್ಪಿನ್ನರ್ ನದೀಮ್ ಅವರಿಬ್ಬರೂ 2024ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತರಾಗಿದ್ದಾರೆ. ಹೊಸ ಸಮಿತಿಗೆ ನಡೆದ ಚುನಾವಣೆಯಲ್ಲಿ ತಿವಾರಿ 438-194 ಮತಗಳಿಂದ ಎದುರಾಳಿ ಎಸ್.ಬಿ. ಸಿಂಗ್ ವಿರುದ್ಧ; ನದೀಮ್ 409-199 ಮತಗಳಿಂದ ರಾಜ್ ಕುಮಾರ್ ಶರ್ಮಾ ವಿರುದ್ಧ ಜಯ ಗಳಿಸಿದರು.

ಜೆಎಸ್‌ಸಿಎ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಜಯ್ ನಾಥ್ ಶಹದೇವ್ 421-213 ಮತಗಳಿಂದ ಎಸ್.ಕೆ. ಬೆಹ್ರಾ ಅವರನ್ನು ಸೋಲಿಸಿದರು. ಉಪಾಧ್ಯಕ್ಷರಾಗಿ ಸಂಜಯ್ ಪಾಂಡೆ ಆಯ್ಕೆಯಾದರು.

‘ಏಷ್ಯಾಕಪ್ ಕ್ರಿಕೆಟ್‌ನಿಂದ ಭಾರತ ಹಿಂದೆಸರಿದ ವರದಿ ಊಹಾಪೋಹದ್ದು’

ನವದೆಹಲಿ (ಪಿಟಿಐ): ಪುರುಷರ ಏಷ್ಯಾ ಕಪ್ ಮತ್ತು ಮಹಿಳೆಯರ ಎಮರ್ಜಿಂಗ್ ಟೀಮ್ಸ್ ಏಷ್ಯಾ ಕಪ್ ಟೂರ್ನಿಗಳಿಂದ ಭಾರತ ಹಿಂದೆಸರಿಯಲು ತೀರ್ಮಾನಿಸಿದೆ ಎಂಬ ವರದಿ ಬರೇ ಕಪೋಲಕಲ್ಪಿತವಾದುದು ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಸೋಮವಾರ ಸ್ಪಷ್ಟಪಡಿಸಿದೆ.

ಕೆಲವೇ ದಿನಗಳ ಹಿಂದೆ ಭಾರತ ಮತ್ತು ಪಾಕಿಸ್ತಾನ ನಡುವಣ ಸೇನಾ ಸಂಘರ್ಷ ನಡೆದ ಕಾರಣ ಮತ್ತು ಏಷ್ಯನ್ ಕ್ರಿಕೆಟ್ ಕೌನ್ಸಿಲ್ (ಎಸಿಸಿ) ಹಾಲಿ ಮುಖ್ಯಸ್ಥರು ಪಾಕಿಸ್ತಾನದವರಾದ ಕಾರಣ ಭಾರತ ತಂಡಗಳ ಸ್ಪರ್ಧೆಗೆ ಅನುಮತಿ ನೀಡುತ್ತಿಲ್ಲ ಎಂದು ಬಿಸಿಸಿಐ ಮೂಲಗಳನ್ನು ಉಲ್ಲೇಖಿಸಿ ಮಾಧ್ಯಮವೊಂದು ವರದಿ ಮಾಡಿತ್ತು. ಪಾಕಿಸ್ತಾನ ಆಂತರಿಕ ಭದ್ರತಾ ಸಚಿವ ಮೊಹ್ಸಿನ್ ನಕ್ವಿ ಅವರು ಪಾಕಿಸ್ತಾನ ಕ್ರಿಕೆಟ್ ಮಂಡಳಿ ಅಧ್ಯಕ್ಷರಾಗಿದ್ದು, ಎಸಿಸಿಗೂ ಅಧ್ಯಕ್ಷರಾಗಿದ್ದಾರೆ.

ಟಿ20 ಮಾದರಿಯ ಏಷ್ಯಾ ಕಪ್ ಟೂರ್ನಿಯು ಸೆಪ್ಟೆಂಬರ್‌ನಲ್ಲಿ ಭಾರತದ ಆತಿಥ್ಯದಲ್ಲಿ ನಡೆಯಬೇಕಿದೆ. ಮಹಿಳೆಯರ ಎಮರ್ಜಿಂಗ್ ಏಷ್ಯಾ ಕಪ್ ಶ್ರೀಲಂಕಾದಲ್ಲಿ ಮುಂದಿನ ತಿಂಗಳು ನಡೆಯಬೇಕಿದೆ.

ದೇವಜಿತ್ ಸೈಕಿಯಾ

‘ಬಿಸಿಸಿಐ ಈ ಬಗ್ಗೆ ಏನೂ ಚರ್ಚೆ ನಡೆಸಿಲ್ಲ. ಭಾರತ ಏಷ್ಯಾ ಕಪ್‌ನಿಂದ ಹಿಂದೆಸರಿದಿದೆ ಎಂಬ ವರದಿ ಸತ್ಯಕ್ಕೆ ದೂರವಾದುದು’ ಎಂದು ಮಂಡಳಿ ಕಾರ್ಯದರ್ಶಿ ದೇವಜಿತ್ ಸೈಕಿಯಾ ಪಿಟಿಐಗೆ ತಿಳಿಸಿದ್ದಾರೆ.

‘ಈಗ ನಮ್ಮ ಗಮನ ಇಂಡಿಯನ್ ಪ್ರೀಮಿಯರ್ ಲೀಗ್ ಸುಸೂತ್ರವಾಗಿ ನಡೆಯುವಂತೆ ನೋಡಿಕೊಳ್ಳುವುದರ ಕಡೆ ಮತ್ತು ಮುಂದಿನ ತಿಂಗಳು ಇಂಗ್ಲೆಂಡ್‌ನಲ್ಲಿ ಆರಂಭವಾಲಿರುವ ಐದು ಟೆಸ್ಟ್‌ಗಳ ಸರಣಿಯ ಬಗ್ಗೆಯಷ್ಟೇ ಇದೆ’ ಎಂದು ಅವರು ಹೇಳಿದ್ದಾರೆ.

ಸಿಂಧು, ಪ್ರಣಯ್‌ಗೆ ಮತ್ತೆ ಸತ್ವಪರೀಕ್ಷೆ

ಕ್ವಾಲಾಲಂಪುರ (ಪಿಟಿಐ): ಭಾರತದ ಪ್ರಮುಖ ಬ್ಯಾಡ್ಮಿಂಟನ್ ತಾರೆಯರಾದ ಪಿ.ವಿ.ಸಿಂಧು ಮತ್ತು ಎಚ್.ಎಸ್. ಪ್ರಣಯ್ ಕೆಲ ಸಮಯದಿಂದ ಫಿಟ್ನೆಸ್ ಮತ್ತು ಆಟದಲ್ಲಿ ಲಯದ ಸಮಸ್ಯೆ ಎದುರಿಸುತ್ತಿದ್ದಾರೆ. ಕಳೆದ ತಿಂಗಳು ಸುಧೀರ್‌ಮನ್ ಕಪ್ ಟೂರ್ನಿಯಲ್ಲಿ ಕೊನೆಯ ಬಾರಿ ಸ್ಪರ್ಧಾತ್ಮಕ ಕಣಕ್ಕೆ ಇಳಿದಾಗ ಇವರಿಬ್ಬರು ಕ್ರಮವಾಗಿ ಇಂಡೊನೇಷ್ಯಾ ಮತ್ತು ಡೆನ್ಮಾರ್ಕ್‌ನ ಎದುರಾಳಿಗಳಿಗೆ ಸೋತಿದ್ದರು.

ಮಂಗಳವಾರ ಆರಂಭವಾಗುವ ಮಲೇಷ್ಯಾ ಮಾಸ್ಟರ್ಸ್ ಸೂಪರ್ 500 ಟೂರ್ನಿಯಲ್ಲಿ ಇವರಿಬ್ಬರು ಸುಧಾರಿತ ಆಟವಾಡಲು ಕಾತರರಾಗಿದ್ದಾರೆ. ಈ ಟೂರ್ನಿಯು ಸುಮಾರು ₹4 ಕೋಟಿ ಬಹುಮಾನ ಮೊತ್ತ ಹೊಂದಿದೆ.

ಎರಡು ವಾರದ ವಿರಾಮದ ನಂತರ ಕಣಕ್ಕಿಳಿದು ತಮ್ಮ ಸಹಜ ಆಟ ಕಂಡುಕೊಳ್ಳುವ ಸವಾಲು ಅನುಭವಿಗಳಾದ ಸಿಂಧು ಮತ್ತು ಪ್ರಣಯ್ ಮುಂದಿದೆ. ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧು ಸದ್ಯ ವಿಶ್ವ ಕ್ರಮಾಂಕದಲ್ಲಿ 16ನೇ ಸ್ಥಾನದಲ್ಲಿದ್ದು, ಈ ಟೂರ್ನಿಯ ಮೊದಲ ಸುತ್ತಿನಲ್ಲಿ ಜಪಾನ್‌ನ ನಟ್ಸುಕಿ ನಿದೈರಾ ಅವರನ್ನು ಎದುರಿಸಲಿದ್ದಾರೆ.

ವಿಶ್ವ ರ‍್ಯಾಂಕಿಂಗ್‌ನಲ್ಲಿ 35ನೇ ಸ್ಥಾನದಲ್ಲಿರುವ ಪ್ರಣಯ್ ಅವರಿಗೆ ಮೊದಲ ಸುತ್ತಿನಲ್ಲಿ ಪ್ರಬಲ ಸವಾಲು ಕಾದಿದೆ. ಅವರು ಐದನೇ ಶ್ರೇಯಾಂಕ ಪಡೆದಿರುವ ಜಪಾನ್‌ನ ಕೆಂಟೊ ನಿಶಿಮೊಟೊ ಅವರನ್ನು ಎದುರಿಸಬೇಕಾಗಿದೆ.

ಮಾಳವಿಕಾ ಬನ್ಸೋಡ್, ಉನ್ನತಿ ಹೂಡಾ, ಆಕರ್ಷಿ ಕಶ್ಯಪ್ ಅವರೂ ಕಣದಲ್ಲಿದ್ದಾರೆ.

ಪಿ.ವಿ. ಸಿಂಧು

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾರ್ಪೊರೇಟ್ ಕಛೇರಿ, ಮೆಸ್ಕಾಂ ಭವನ, ಬಿಜೈ, ಮಂಗಳೂರು–575004
ದೂರವಾಣಿ: 0824- 2885759, CIN: U40109 KA 2002 SGC 030425

ಸಂಖ್ಯೆ: MESCOM/GMAHOPER/29/2024&GM ADM HR/I/499 ದಿನಾಂಕ: 17.05.2025

ಅಧಿಸೂಚನೆ

ವಿಷಯ: ಮೆಸ್ಕಾಂನಲ್ಲಿ ಕಿರಿಯ ಪವರ್‌ಮ್ಯಾನ್ ಹುದ್ದೆಯ ನೇಮಕಾತಿಗೆ ಸಹನ ಶಕ್ತಿ ಪರೀಕ್ಷೆ ನಡೆಸುವ ಬಗ್ಗೆ.

ಉಲ್ಲೇಖ:
1. ಕವಿಪ್ರನಿನಿ ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/44953/2023–24 ದಿನಾಂಕ: 14.10.2024.
2. ಈ ಕಛೇರಿ ಅಧಿಸೂಚನೆ ಸಂಖ್ಯೆ: MESCOM/GM(A&HRD)/Per/29/2024/CYS-1 ದಿನಾಂಕ: 25.02.2025.
3. ಈ ಕಛೇರಿ ಅಧಿಸೂಚನೆ ಸಂಖ್ಯೆ: MESCOM/GMAHOPER/ 29/2024-GM ADM HR/I/500 ದಿನಾಂಕ: 17.05.2025.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/ 44953/2023–24 ದಿನಾಂಕ: 14.10.2024ಕ್ಕೆ ಅನುಗುಣವಾಗಿ ಕಿರಿಯ ಪವರ್‌ಮ್ಯಾನ್ ಹುದ್ದೆಯ ನೇಮಕಾತಿಗೆ ಸಂಬಂಧಿಸಿದಂತೆ, ಸಹನ ಶಕ್ತಿ ಪರೀಕ್ಷೆಗೆ 1:5 ಅನುಪಾತದಲ್ಲಿ Shortlist ಆಗಿರುವ ಅಭ್ಯರ್ಥಿಗಳ ಪಟ್ಟಿಯನ್ನು ಕಟ್- ಆಫ್ (Cut-Off) ಅಂಕಗಳೊಂದಿಗೆ ಮೆಸ್ಕಾಂನ ಅಂತರ್ಜಾಲ https://mescom.karnataka.gov.inನಲ್ಲಿ ಪ್ರಕಟಿಸಲಾಗಿದೆ. ಸಹನ ಶಕ್ತಿ ಪರೀಕ್ಷೆಯನ್ನು ದಿನಾಂಕ: 27.05.2025 ರಿಂದ 30.05.2025ರ ವರೆಗೆ ಮಂಗಳೂರು, ಉಡುಪಿ ಮತ್ತು ಶಿವಮೊಗ್ಗದಲ್ಲಿ ನಡೆಸಲಾಗುತ್ತಿದೆ. ಸಹನ ಶಕ್ತಿ ಪರೀಕ್ಷೆಯ ಕರೆ ಪತ್ರಗಳನ್ನು ಮೆಸ್ಕಾಂನ ಅಂತರ್ಜಾಲ https://mescom.karnataka.gov.in ನಿಂದ ದಿನಾಂಕ: 20.05.2025 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಸಹಿ/-
ಪ್ರಧಾನ ವ್ಯವಸ್ಥಾಪಕರು (ಆ & ಮಾ.ಸಂ.ಅ)
DIPR / MNG / 202/ MPL / 25-26

ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ: 1912ಕ್ಕೆ ಕರೆ ಮಾಡಿ

ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಕಾರ್ಯಪಾಲಕ ಅಭಿಯಂತರರವರ ಕಛೇರಿ,
ನೀಸ&ಒಚ(ಪಶ್ಚಿಮ) ವಿಭಾಗ, ವಾವಿನೀಸ ಆವರಣ, ಯಾದವಗಿರಿ, ಮೈಸೂರು

ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಕಾಇಂ/ನೀಸ&ಒಚ(ಪಶ್ಚಿಮ)/ಟಿಎನ್–03/130/2025–26 ದಿನಾಂಕ: 19.05.2025

ಅಲ್ಪಾವಧಿ / ಪೂರ್ಣಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಅನುದಾನಗಳಲ್ಲಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ವಿವರ	ಒಟ್ಟು ಕಾಮಗಾರಿಗಳು	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಸಂಜೆ 5.30 ಗಂಟೆ ನಂತರ (ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ:	ಸಂಜೆ 4.30 ಗಂಟೆ ಒಳಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಸಂಜೆ 4.30 ಗಂಟೆ ನಂತರ ಟೆಂಡರ್/ ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1.	Kw-1, Kw-2 & KW-4	07 ಸಂಖ್ಯೆಗಳು	220.67	21.05.2025	05.06.2025	06.06.2025
2.	KW-4	01 ಸಂಖ್ಯೆ	203.89	21.05.2025	20.06.2025	21.06.2025
3.	EXPRESSION OF INTEREST	02 ಸಂಖ್ಯೆಗಳು	-	21.05.2025	05.06.2025	06.06.2025
4.	SERVICE TENDER	05 ಸಂಖ್ಯೆಗಳು	352.94	21.05.2025	05.06.2025	06.06.2025
5.	SERVICE TENDER	02 ಸಂಖ್ಯೆಗಳು	140.65	20.05.2025	27.05.2025	28.05.2025

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು, ನೀಸ&ಒಚ (ಪಶ್ಚಿಮ) ವಿಭಾಗ
ಮೈಸೂರು ಮಹಾನಗರ ಪಾಲಿಕೆ, ಮೈಸೂರು
DIPR/MYS/KAVITA/219/25-26

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in

ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–12/333/2025–26 ದಿನಾಂಕ: 19.05.2025

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಡಿಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು : ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ಕೈಗಾರಿಕಾ ಪ್ರದೇಶದ, 1ನೇ ಹಂತ ಅಪರಲ್ ಪಾರ್ಕ್‌ನಲ್ಲಿ ಹಳೆಯ UGD ಲೈನ್‌ನ ದುರಸ್ತಿ ಕಾಮಗಾರಿ, ಹಾನಿಗೊಳಗಾದ ಮ್ಯಾನ್‌ಹೋಲ್‌ಗಳ ಪುನಃಸ್ಥಾಪನೆ ಮತ್ತು ಹಾನಿಗೊಳಗಾದ ಪೈಪ್‌ಲೈನ್ ಅನ್ನು ಬದಲಾಯಿಸುವುದು ಮತ್ತು 2ನೇ ಹಂತ ಅಪರಲ್ ಪಾರ್ಕ್‌ನ ಅಡಿಯಲ್ಲಿ DWC ಪೈಪ್‌ಗಳ ಖರೀದಿ ಹಾಗೂ ಅಳವಡಿಕೆ ಮತ್ತು ಹೊಸ ಮ್ಯಾನ್‌ಹೋಲ್‌ಗಳ ನಿರ್ಮಾಣ ಮಾಡುವ ಕಾಮಗಾರಿ. (2ನೇ ಕರೆ).

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 31.05.2025 ಸಂಜೆ 4.00 ಗಂಟೆಯವರೆಗೆ

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು
DIPR/CP/745/Zen/2025-26

ಲೋಕೋಪಯೋಗಿ ಇಲಾಖೆ
ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ವಿಶೇಷ ಭೂಸ್ವಾಧೀನಾಧಿಕಾರಿಯವರ ಕಛೇರಿ, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಸಂಪರ್ಕಸೌಧ ಸರ್ವೆ ನಂ.8, (ಬಿ.ಇ.ಪಿ ಆವರಣ),
ಡಾ॥ ರಾಜ್ ಕುಮಾರ್ ರಸ್ತೆ, ರಾಜಾಜಿನಗರ 1ನೇ ಹಂತ, ಬೆಂಗಳೂರು–560010
ದೂರವಾಣಿ ನಂ: 080–22024000 ಇ–ಮೇಲ್: cekrdcl@gmail.com, laqkrdcl@gmail.com.

ಸಂಖ್ಯೆ: ಲೋಇ 72 ಇಎಪಿ 2019 ದಿನಾಂಕ: 21.04.2025

ಕರ್ನಾಟಕ ಹೆದ್ದಾರಿ ಕಾಯ್ದೆ 1964 ರ ಕಲಂ 15ರಡಿ ಪ್ರಾಥಮಿಕ ಅಧಿಸೂಚನೆ (ಹೆಚ್ಚುವರಿ)

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ಮೂಲಕ ಬೆಂಗಳೂರು ಸುತ್ತಮುತ್ತಲಿನ 155 ಕಿ.ಮೀ. ಉದ್ದದ ರಸ್ತೆಗಳನ್ನು ಅಗಲೀಕರಣಗೊಳಿಸಿ ಅಭಿವೃದ್ಧಿಪಡಿಸುವ ಕುರಿತು ಸರ್ಕಾರದ ಆದೇಶ ಸಂಖ್ಯೆ: ಲೋಇ 71 ಇಎಪಿ 2017 ಬೆಂಗಳೂರು ದಿ:18.09.2017 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ತತ್ಸಂಬಂಧ, 2018–19 ನೇ ಸಾಲಿನಲ್ಲಿ ಆರ್ಥಿಕ ಇಲಾಖೆ ಒದಗಿಸುವ ಅನುದಾನದಲ್ಲಿ ವೆಚ್ಚವನ್ನು ಭರಿಸಬೇಕೆಂಬ ಷರತ್ತಿಗೊಳಪಟ್ಟು ಟೆಂಡರ್ ಪ್ರಕ್ರಿಯೆಗೊಳಿಸಲು ಲೋಇ/159/ಇಎಪಿ/2017, ದಿ.22.12.2017 ರಲ್ಲಿ ಕೆಆರ್‌ಡಿಸಿಎಲ್ ರವರಿಗೆ ನಿರ್ದೇಶನ ನೀಡಲಾಗಿರುತ್ತದೆ. ಈ ಸಂಬಂಧ ಬೆಂಗಳೂರು ಸುತ್ತಮುತ್ತಲಿನ 4 ರಸ್ತೆಗಳನ್ನು 4 ಪಥಗಳಾಗಿ ಅಭಿವೃದ್ಧಿಗೊಳಿಸಲು ಉದ್ದೇಶಿಸಿರುವುದರಿಂದ ಗ್ರೇಡ್ ಸೆಪರೇಟರ್‌ಗಳನ್ನು ನಿರ್ಮಿಸಲು ಭೂಸ್ವಾಧೀನವನ್ನು ಮಾಡಿಕೊಳ್ಳಬೇಕಾಗಿರುತ್ತದೆ ಎಂದು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರು ಸಲ್ಲಿಸಿರುವ ವರದಿಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗಿದೆ. ಹಾಗೂ ಸರ್ಕಾರದ ಪ್ರಕಟಣೆ ಸಂಖ್ಯೆ:ಲೋಇ 05 ಇಎಪಿ 2019 ದಿ:14.01.2019 ರಲ್ಲಿ ಬೆಂಗಳೂರು ಸುತ್ತಮುತ್ತಲಿನ 4 ರಸ್ತೆಗಳನ್ನು 4 ಪಥಗಳ ರಸ್ತೆಗಳನ್ನಾಗಿ ಅಭಿವೃದ್ಧಿಗೊಳಿಸಲು ಉದ್ದೇಶಿಸಿರುವುದರಿಂದ ರಸ್ತೆ ಅಗಲೀಕರಣಗೊಳಿಸಲು ಹಾಗೂ ಸಿಗ್ನಲ್ ಮುಕ್ತ ಜಂಕ್ಷನ್‌ಗಳನ್ನು ಅಭಿವೃದ್ಧಿಗೊಳಿಸಲು ವರ್ತೂರು ಗ್ರಾಮ ಗ್ರೇಡ್ ಸೆಪರೇಟರ್‌ಗಳನ್ನು ನಿರ್ಮಿಸುವ ಬಗ್ಗೆ ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಗೆತ್ತಿಕೊಂಡು ಅನುಷ್ಠಾನಗೊಳಿಸಲು ಮುಖ್ಯ ಅಭಿಯಂತರರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರನ್ನು ಕರ್ನಾಟಕ ಹೆದ್ದಾರಿ ಕಾಯಿದೆ 1964ರ ಕಲಂ 4 ರ ಅಡಿ ತಾತ್ಕಾಲಿಕವಾಗಿ “ಹೆದ್ದಾರಿ ಪ್ರಾಧಿಕಾರಿ (ಹೈವೇ ಅಥಾರಿಟಿ)” ಯನ್ನಾಗಿ ನೇಮಿಸಲಾಗಿರುತ್ತದೆ. ಅಲ್ಲದೇ, ಸರ್ಕಾರದ ಪತ್ರ ಸಂಖ್ಯೆ:ಲೋಇ 5 ಇಎಪಿ 2018(ಪಿ2) ದಿನಾಂಕ: 07.03.2019. ರಲ್ಲಿ ಮೇಲ್ಕಾಣಿಸಿದ ರಸ್ತೆಗಳ ಆರ್ಥಿಕ ಬಿಡ್‌ನ ಪ್ರಸ್ತಾವನೆಯನ್ನು ಸಹಮತಿಸಲಾಗಿದೆಯೆಂದು, ಈ ಬಗ್ಗೆ ಮುಂದಿನ ಕ್ರಮ ವಹಿಸಲು ನಿರ್ದೇಶಿಸಲಾಗಿದೆ. ಈ ಕಾಮಗಾರಿ ಪ್ರಸ್ತಾವನೆಗಳಿಗೆ ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ 123 ಆಕೋ–1/2019 ದಿನಾಂಕ:06.03.2019 ರನ್ವಯ ಅನುಮೋದಿಸಲಾಗಿದೆಯೆಂದು ತಿಳಿಸಲಾಗಿದೆ. ಸದರಿ ಭೂಸ್ವಾಧೀನ ಪ್ರಕ್ರಿಯೆಯನ್ನು ಕರ್ನಾಟಕ ಹೆದ್ದಾರಿ ಕಾಯ್ದೆ 1964ರಡಿ ಕೈಗೊಳ್ಳಲು ಸದರಿ ಕಾಯ್ದೆಯ ಕಲಂ 6 ರಡಿಯಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿ, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರನ್ನು ಸಕ್ಷಮ ಪ್ರಾಧಿಕಾರವನ್ನಾಗಿ ನೇಮಿಸಲಾಗಿದೆ.

ಬೆಂಗಳೂರು ಸುತ್ತಮುತ್ತಲಿನ ರಸ್ತೆಗಳ ಅಭಿವೃದ್ಧಿ ಯೋಜನೆಯಲ್ಲಿ ಒಳಗೊಂಡಿರುವ ಮತ್ತು ಅವಿಭಾಜ್ಯವೆಂದು ಪರಿಗಣಿಸಲ್ಪಟ್ಟಿರುವ ಪ್ಯಾಕೇಜ್–4ಬಿ ಅಡಿಯಲ್ಲಿ ಬೆಂಗಳೂರು ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಗ್ರಾಮದಲ್ಲಿ 1.92 ಕಿ.ಮೀ ಉದ್ದದ ಎಲಿವೇಟೆಡ್ ಕಾರಿಡಾರ್ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಅಗತ್ಯವಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಜಮೀನು ಮತ್ತು ಸ್ವತ್ತುಗಳನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಹಾಗೂ ಈ ರಸ್ತೆಯನ್ನು 2/4/6 ಪಥಗಳನ್ನಾಗಿ ಅಗಲೀಕರಣ ಮಾಡಿ ಅಭಿವೃದ್ಧಿಗೊಳಿಸಲು ಮತ್ತು ಕಾಮಗಾರಿ ಪೂರ್ಣಗೊಂಡ ನಂತರ ಲೋಕೋಪಯೋಗಿ ಇಲಾಖೆಗೆ ನಿರ್ವಹಣೆ ಮಾಡಲು ಹಸ್ತಾಂತರಿಸಲು ಉದ್ದೇಶಿಸಲಾಗಿರುವುದರಿಂದ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ರವರು ಕರ್ನಾಟಕ ಹೆದ್ದಾರಿ ಕಾಯ್ದೆ 1964 ರ ಕಲಂ 15 ರ ಮೇರೆಗೆ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಜಮೀನುಗಳ ಭೂಸ್ವಾಧೀನ ಪ್ರಕ್ರಿಯೆಗೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಸದರಿ ಎಲಿವೇಟೆಡ್ ಕಾರಿಡಾರ್/ ರಸ್ತೆಯ ಭಾಗದ ಅಭಿವೃದ್ಧಿಗೆ ಅವಶ್ಯಕವಾಗಿದೆ ಎಂದು ಈ ಮೂಲಕ ಘೋಷಿಸಲಾಗಿದೆ.

ಕರ್ನಾಟಕ ಹೆದ್ದಾರಿ ಕಾಯ್ದೆ 1964ರ ಅಡಿಯಲ್ಲಿ ಈ ಕೆಳಕಂಡ ಜಮೀನು/ಸ್ವತ್ತುಗಳಲ್ಲಿ ಕೆಲಸ ನಿರ್ವಹಿಸುವ ಅಧಿಕಾರಿ, ಸಿಬ್ಬಂದಿ ಅಥವಾ ಮುಖ್ಯ ಅಭಿಯಂತರರು ಹಾಗೂ ಹೆದ್ದಾರಿ ಪ್ರಾಧಿಕಾರ ಪರವಾಗಿ ಪ್ರತಿನಿಧಿಸುವವರನ್ನು ತಡೆಯುವುದಾಗಲೀ ಅಥವಾ ಅಡ್ಡಿಪಡಿಸುವುದಾಗಲೀ ಮಾಡತಕ್ಕದ್ದಲ್ಲವೆಂದು ಈ ಜಮೀನು/ಸ್ವತ್ತುಗಳಲ್ಲಿ ಆಸಕ್ತಿ ಹೊಂದಿರುವ ಎಲ್ಲಾ ವ್ಯಕ್ತಿಗಳಿಗೆ ಈ ಮೂಲಕ ಸೂಚಿಸಲಾಗಿದೆ.

ಈ ಅಧಿಸೂಚನೆ ಪ್ರಕಟಣೆಯಾದ ನಂತರ ಮುಖ್ಯ ಅಭಿಯಂತರರು ಹಾಗೂ ಹೆದ್ದಾರಿ ಪ್ರಾಧಿಕಾರ, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಮತ್ತು ವಿಶೇಷ ಭೂಸ್ವಾಧೀನಾಧಿಕಾರಿ, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರ ಅನುಮತಿಯಿಲ್ಲದೆ ಸದರಿ ಜಮೀನು/ಸ್ವತ್ತುಗಳನ್ನು ವಿಲೇ ಮಾಡುವ, ಒಪ್ಪಂದದ ಕ್ರಯ, ಕರಾರು, ಭೋಗ್ಯ, ಲೀಜ್, ಅದಲು–ಬದಲು, ಭೂಪರಿವರ್ತನೆ ವಗೈರೆ ಮಾಡುವಂತಿಲ್ಲ. ಸದರಿ ಜಮೀನು/ಸ್ವತ್ತುಗಳಲ್ಲಿ ಈ ಅಧಿಸೂಚನೆ ಪ್ರಕಟಣೆಯ ನಂತರ ಕಟ್ಟಡಗಳ ನಿರ್ಮಾಣ ಮತ್ತಿತರ ಅಭಿವೃದ್ಧಿ ಕೆಲಸಗಳನ್ನು ಮಾಡುವಂತಿಲ್ಲ. ಒಂದು ವೇಳೆ ಮಾಡಿದ್ದರೂ ಪರಿಹಾರ ಹಣ ನಿಗಧಿ ಮಾಡುವಾಗ ಅಂತಹ ವ್ಯವಹಾರದ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.

ಸದರಿ ಜಮೀನು/ಸ್ವತ್ತುಗಳ ವಿವರಗಳನ್ನು ಪರಿಶೀಲನೆಗೆ ಮುಖ್ಯ ಅಭಿಯಂತರರು ಹಾಗೂ ಹೆದ್ದಾರಿ ಪ್ರಾಧಿಕಾರ, ವಿಶೇಷ ಭೂಸ್ವಾಧೀನಾಧಿಕಾರಿಗಳು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಅಲ್ಲದೆ ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ರವರ ಕಛೇರಿಗಳಲ್ಲಿ ಇಡಲಾಗಿದೆ.

ಕೋಷ್ಟಕ
ಕಲಂ 15 ರಂತೆ ಸ್ವಾಧೀನಪಡಿಸಿಕೊಳ್ಳಬೇಕಾದ ಜಮೀನು / ಸ್ವತ್ತುಗಳು ಹಾಗೂ ಖಾತೆದಾರರ ವಿವರ

ಕ್ರಮ ಸಂ.	ಖಾತೆದಾರರ ಹೆಸರು ಪಹಣಿಯಂತೆ	ಸರ್ವೆ ನಂ.	ಹಿಸ್ಸಾ ನಂ	ಭೂಸ್ವಾಧೀನಕ್ಕೆ ಒಳಪಡುವ ವಿಸ್ತೀರ್ಣ: ಒಟ್ಟು ಎ–ಗು–ಆ	ಖರಾಬು ಎ–ಗು–ಆ	ಐನು ಎ–ಗು–ಆ
1	2	3	4	5	6	7
ಗ್ರಾಮ : ವರ್ತೂರು	ತಾಲ್ಲೂಕು : ಬೆಂಗಳೂರು ಪೂರ್ವ					ಜಿಲ್ಲೆ : ಬೆಂಗಳೂರು
1	ವಿ.ಸಿ ರಾಜಮ್ಮ ಬಿನ್ ಲೇ ಚಿನ್ನಪ್ಪ, ಸುನಂದ ಸಿ ಬಿನ್ ಲೇ ಚಿನ್ನಪ್ಪ, ಶಂತಮ್ಮ ಸಿ ಬಿನ್ ಲೇ ಚಿನ್ನಪ್ಪ, ವಿ.ಸಿ ವೆಂಕಟೇಶ ಬಿನ್ ಲೇ ಚಿನ್ನಪ್ಪ, ಪರಮೇಶ ಸಿ ಬಿನ್ ಲೇ ಚಿನ್ನಪ್ಪ, ಆರ್ ವೆಂಕಟೇಶ್ ಬಿನ್ ಲೇ ರಾಜಪ್ಪ, ಆರ್ ರಮೇಶ್ ಬಿನ್ ಲೇ ರಾಜಪ್ಪ	34	2	0–02–08	–	0–02–08
2	3ನೇ ಮುನಿಶಾಮಿ, ಸರ್ಕಾರಿ ಹೈಸ್ಕೂಲ್, ವರ್ತೂರು – ಆಟದ ಮೈದಾನ, ಎಂ.ರಾಮಕೃಷ್ಣ ಬಿನ್ ಜೆ.ಮುನಿಶಾಮಿ, ಪಿ.ಎನ್.ಜಹೋರ ಕೋಂಸಿ.ಕೆ.ಮಹಮದ್, ಪಿ.ಎಂ.ಜಹೋರ, ಬಿ.ಕೆ.ಸದಾಶಿವರಾವ್ ಬಿನ್ ಲೇ. ಬಿ.ವಿ.ಕೃಷ್ಣಾರಾವ್, ವೈ.ರವಿ ಬಿನ್ ಎಂ.ಯಲ್ಲಪ್ಪ, ಎಂ.ಯಲ್ಲಪ್ಪ ಬಿನ್ ಜೆ.ಮುನಿಶಾಮಿ– ಭೂ.ಪ, ಕೆ ಜಿ ರಾಮಯ್ಯ, ಕೆ ಜಿ ಗೋಪಾಲ ಕೃಷ್ಣಯ್ಯ, ಕೃಷ್ಣಪ್ಪ ಬಿನ್ ಲೇ ಮೋಟಪ್ಪ, ಆರ್ ಜಯಮ್ಮ ಬಿನ್ ಲೇ ಜಿ ರಾಮಯ್ಯ, ಸುಬ್ರಮಣಿ ಬಿನ್ ಲೇ ಜೆ ರಾಮಯ್ಯ, ಜಿ ಶಾಂತಮ್ಮ ಕೋಂ ಲೇ ಶ್ರೀನಿವಾಸ, ಆರ್ ವೆಂಕಟೇಶ್ ಬಿನ್ ಲೇ ರಾಜಪ್ಪ, ವೆಂಕಟೇಶ್ ಆರ್ ಬಿನ್ ಲೇ ರಾಜಪ್ಪ, ಆರ್ ರಮೇಶ್ ಬಿನ್ ಲೇ ರಾಜಪ್ಪ, ವಿ ಸಿ ರಾಜಮ್ಮ ಬಿನ್ ಲೇ ಚಿನ್ನಪ್ಪ, ಸಿ ಸುನಂದ ಬಿನ್ ಲೇ ಚಿನ್ನಪ್ಪ, ಸಿ ಶಾಂತಮ್ಮ ಬಿನ್ ಲೇ ಚಿನ್ನಪ್ಪ, ವಿ ಸಿ ವೆಂಕಟೇಶ್ ಬಿನ್ ಲೇ ಚಿನ್ನಪ್ಪ, ಸಿ ಪರಮೇಶ್ ಬಿನ್ ಲೇ ಚಿನ್ನಪ್ಪ, ಮಂಜುಳಮ್ಮ ಕೋಂ ಲೇ ರಾಜಪ್ಪ, ನಂದಿನಿ ಬಿನ್ ಲೇ ಮಾರ್ಕಂಡಯ್ಯ ಉರುಫ್, ಮಾರ್ಕಂಡೇಶ್ವರ, ಕಾರ್ತಿಕ್ ಎಂ ಬಿನ್ ಲೇ ಮಾರ್ಕಂಡಯ್ಯ ಉರುಫ್, ಮಾರ್ಕಂಡೇಶ್ವರ, ನಾರಾಯಣಸ್ವಾಮಿ ಬಿನ್ ಲೇ ಕೃಷ್ಣಪ್ಪ ಎಂ, ಶಿವಪ್ಪ ಕೆ ಬಿನ್ ಲೇ ಕೃಷ್ಣಪ್ಪ ಎಂ	30	1ಎ	0–00–08	–	0–00–08

ಗ್ರಾಮ : ವರ್ತೂರು (ಗ್ರಾಮಠಾಣ) ತಾಲ್ಲೂಕು : ಬೆಂಗಳೂರು ಪೂರ್ವ ಜಿಲ್ಲೆ : ಬೆಂಗಳೂರು

ಕ್ರಮ ಸಂಖ್ಯೆ	ಖಾತೆದಾರರ ಹೆಸರು	ಸ್ವತ್ತಿನ ಸಂಖ್ಯೆ	ಭೂಸ್ವಾಧೀನಕ್ಕೆ ಒಳಪಡುವ ವಿಸ್ತೀರ್ಣ ಚ.ಅಡಿಗಳಲ್ಲಿ
1	ವಿ.ರಾಜಶೇಖರ್ ಬಿನ್ ವೆಂಕಟಗಿರಿಯಪ್ಪ	53–33/1–35/1	250
2	ವಿ.ಗೋಪಿನಾಥ್ ಬಿನ್ ಬಿ.ವೆಂಕಟಗಿರಿಯಪ್ಪ	57–33/3–35/3	99
3	ಆರ್.ಸುರೇಶ್ ಬಿನ್ ಎಂ ರಾಮಯ್ಯ	123–79/90	37
4	ಬಿ.ಎಂ.ಆನಂದ್ ಬಿನ್ ಮುನಿಶಾಮಪ್ಪ	126–23/1/93/1	27
5	ನಂದ ಕುಮಾರ್.ಬಿ.ಎಸ್	127–83/2–93/2	113.40
6	ವಿ.ರವಿ	3501–751/450/486/1	101.49
7	ವಿ.ಸತೀಶ್	3502–751/450/486/2	101.49
8	ನಾಯಾಜ್ ಪಾಷಾ ಬಿನ್ ಅಹ್ಮದ್ ಇಲಿಯಾಸ್	471–246/279/1	140
9	ಜೆ.ಮಾಣಿಕ್ ಚಂದ್	469–244–277	490
10	ಶಮಿಮುನ್ನಿಸಾ	397–474–249–282	49
11	ಎ.ಆರ್.ಅಲ್ಲಾಭಕಾಷ್	468–242–276	1532
12	ಅಬ್ದುಲ್ ಬಾಷೀದ್ ಮಹ್ಮದ್ ಅರೀಫ್	466–242/1,274/1	94

ವಿಶೇಷ ಭೂಸ್ವಾಧೀನಾಧಿಕಾರಿ
ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
ವಾಸಾಸಂಇ/ವಾ.ಪ್ರ/716/ಶ್ರೇಷ್ಠ/2025–26

ವಿಶ್ವ ಟಿಟಿ ಚಾಂಪಿಯನ್‌ಷಿಪ್ • ಸುತೀರ್ಥ– ಐಹಿಕಾ ಜೋಡಿಗೆ ನಿರಾಸೆ

ಪ್ರಿಕ್ವಾರ್ಟರ್‌ಗೆ ಯಶಸ್ವಿನಿ–ಚಿತಳೆ

ದೋಹಾ (ಪಿಟಿಐ): ಭಾರತದ ಮಹಿಳಾ ಡಬಲ್ಸ್ ಜೋಡಿಯಾದ ಯಶಸ್ವಿನಿ ಘೋರ್ಪಡೆ ಮತ್ತು ದಿಯಾ ಚಿತಳೆ ಜೋಡಿ ವಿಶ್ವ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಸೋಮವಾರ ಪ್ರಿಕ್ವಾರ್ಟರ್ ಫೈನಲ್‌ಗೆ ಮುನ್ನಡೆಯಿತು. ಆದರೆ 14ನೇ ಶ್ರೇಯಾಂಕದ ಸುತೀರ್ಥ ಮುಖರ್ಜಿ ಮತ್ತು ಐಹಿಕಾ ಮುಖರ್ಜಿ ಜೋಡಿ ಎದುರಾಳಿಗಳಿಗೆ ಹೆಚ್ಚು ಪ್ರತಿರೋಧ ತೋರದೇ ನಿರ್ಗಮಿಸಿತು.

ಕರ್ನಾಟಕದ ಯಶಸ್ವಿನಿ ಮತ್ತು ಮಹಾರಾಷ್ಟ್ರದ ದಿಯಾ ಅವರು 32ರ ಸುತ್ತಿನಲ್ಲಿ ಹಿನ್ನಡೆಯಿಂದ ಚೇತರಿಸಿಕೊಂಡು ಸಿಂಗಪುರದ ಜೆಂಗ್ ಜಿಯಾನ್ ಮತ್ತು ಸೆರ್ ಲಿನ್ ಕ್ವಿಯಾನ್ ಜೋಡಿಯನ್ನು 6-11, 11-6, 11-6, 11-9 ರಿಂದ ಸೋಲಿಸಿತು.

ಆದರೆ ಐಹಿಕಾ–ಸುತೀರ್ಥ ಜೋಡಿ ತಮಗಿಂತ ಕೆಳ ಕ್ರಮಾಂಕದ ಆ್ಯನೆಟ್ ಕಾಫ್‌ಮನ್– ಷಿಯೊನಾ ಶಾನ್ (ಜರ್ಮನಿ) ಜೋಡಿಗೆ ಕೇವಲ 23 ನಿಮಿಷಗಳಲ್ಲಿ ಶರಣಾಯಿತು. ಆ್ಯನೆಟ್– ಷಿಯೊನಾ 11-1, 13-11, 11-7 ರಿಂದ ಜಯಗಳಿಸಿದರು.

ಮಿಶ್ರ ಡಬಲ್ಸ್‌ನಲ್ಲಿ ಭಾರತದ ಸವಾಲು ಕೊನೆಗೊಂಡಿತು. ಚಿತಳೆ-ಮಾನುಷ್ ಶಾ ಜೋಡಿ 0-3 ರಲ್ಲಿ (8-11, 9-11, 2-11) ಕೊರಿಯಾದ ಒಹ್ ಜುನ್ಸುಂಗ್– ಕಿಮ್ ನೆಯೊಂಗ್ ಎದುರು ಪರಾಭವ ಕಂಡಿತು.

ಮೂರು ಸೋಲುಗಳೊಡನೆ ಶಾ ಅವರಿಗೆ ಸೋಮವಾರ ನಿರಾಸೆಯ ದಿನವಾಗಿ ಪರಿಣಮಿಸಿತು. ಮಿಶ್ರ ಡಬಲ್ಸ್ ಸೋಲಿನ ನಂತರ ಅವರು ಪುರುಷರ ಸಿಂಗಲ್ಸ್ ಎರಡನೇ ಸುತ್ತಿನಲ್ಲಿ ಹೊರಬಿದ್ದರು. ಆರನೇ ಶ್ರೇಯಾಂಕದ ಫೆಲಿಕ್ಸ್ ಲೆಬ್ರುನ್ (ಫ್ರಾನ್ಸ್) ಅವರು 4-0 ಯಿಂದ (11-5, 11-6, 11-6, 11-9) ಶಾ ಅವರನ್ನು ಸುಲಭವಾಗಿ ಮಣಿಸಿದರು.

ಕರ್ನಾಟಕದ ಯಶಸ್ವಿನಿ ಘೋರ್ಪಡೆ

ಪುರುಷರ ಡಬಲ್ಸ್‌ನಲ್ಲೂ ಶಾ ಅವರಿಗೆ ಜಯ ಒಲಿಯಲಿಲ್ಲ. ಎಂಟನೇ ಶ್ರೇಯಾಂಕದ ಪಡೆದಿದ್ದ ಮಾನವ್ ಠಕ್ಕರ್-ಮಾನುಷ್ ಶಾ ಜೋಡಿ 5-11, 9-11, 11-8, 5-11 ರಲ್ಲಿ ಶ್ರೇಯಾಂಕರಹಿತ ಜರ್ಮನಿಯ ಬೆನೆಡಿಕ್ಟ್ ದೂಡ- ದಾಂಗ್ ಕ್ವಿಯು ಜೋಡಿಯೆದುರು ಸೋಲನ್ನು ಒಪ್ಪಿಕೊಂಡಿತು.

ಸಂಕ್ಷಿಪ್ತ ಸುದ್ದಿ

ಹಾಕಿ ಇಂಡಿಯಾ ಲೀಗ್: ಪ್ರವೇಶ ಪ್ರಕ್ರಿಯೆ ಆರಂಭ

ನವದೆಹಲಿ (ಪಿಟಿಐ): ಮರುಜೀವ ಪಡೆದುಕೊಂಡಿರುವ ಹಾಕಿ ಇಂಡಿಯಾ ಲೀಗ್‌ಗೆ ಮೂರು ತಿಂಗಳ ನೋಂದಣಿ ಪ್ರಕ್ರಿಯೆ ಸೋಮವಾರ ಆರಂಭವಾಗಿದೆ. ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ದೇಶ–ವಿದೇಶಗಳ ಸಾವಿರಕ್ಕೂ ಹೆಚ್ಚು ಮಂದಿ ನೋಂದಾಯಿಕೊಳ್ಳುವ ನಿರೀಕ್ಷೆಯಿದೆ.

ಏಳು ವರ್ಷ ಸ್ಥಗಿತಗೊಂಡಿದ್ದ ಹಾಕಿ ಲೀಗ್ 2024ರಲ್ಲಿ ಪುನರಾರಂಭ ಗೊಂಡಿತ್ತು. ಕೊನೆಯ ಬಾರಿ ಲೀಗ್ ನಡೆದಾಗ ಶ್ರಾಚಿ ರರ್ ಬೆಂಗಾಲ್ ಟೈಗರ್ಸ್ ತಂಡವು ಪುರುಷರ ವಿಭಾಗದಲ್ಲಿ ಚಾಂಪಿಯನ್ ಆಗಿತ್ತು. ಮಹಿಳೆಯರ ವಿಭಾಗದಲ್ಲಿ ಒಡಿಶಾ ವಾರಿಯರ್ಸ್ ಪ್ರಶಸ್ತಿ ಗೆದ್ದುಕೊಂಡಿತ್ತು.

ಪುರುಷರ ವಿಭಾಗದಲ್ಲಿ ಆತಿಥೇಯ ಭಾರತದ ಜೊತೆಗೆ ನೆದರ್ಲೆಂಡ್ಸ್, ಬೆಲ್ಜಿಯಂ, ಇಂಗ್ಲೆಂಡ್, ಜರ್ಮನಿ, ಫ್ರಾನ್ಸ್, ಆಸ್ಟ್ರೇಲಿಯಾ, ಸ್ಪೇನ್, ಅರ್ಜೆಂಟೀನಾ, ಐರ್ಲೆಂಡ್, ದಕ್ಷಿಣ ಆಫ್ರಿಕಾ, ನ್ಯೂಜಿಲೆಂಡ್, ಮಲೇಷ್ಯಾ ಮತ್ತು ದಕ್ಷಿಣ ಕೊರಿಯಾ ದೇಶಗಳ ಆಟಗಾರರು ಲೀಗ್‌ನಲ್ಲಿ ಪ್ರವೇಶಕ್ಕೆ ಯತ್ನಿಸಲಿದ್ದಾರೆ.

ಮಹಿಳೆಯರ ವಿಭಾಗದಲ್ಲೂ ಭಾರತ ಮಾತ್ರವಲ್ಲ, ನೆದರ್ಲೆಂಡ್ಸ್, ಅರ್ಜೆಂಟೀನಾ, ಬೆಲ್ಜಿಯಂ, ಸ್ಪೇನ್, ಇಂಗ್ಲೆಂಡ್, ಚಿಲಿ, ಜಪಾನ್, ಅಮೆರಿಕ, ಸ್ಕಾಟ್ಲೆಂಡ್ ದೇಶಗಳ ಆಟಗಾರ್ತಿಯರು ನೋಂದಣಿಗೆ ಅರ್ಹರಾಗಿದ್ದಾರೆ.

ಆಟಗಾರರ ನೋಂದಣಿ ಪ್ರಕ್ರಿಯೆ ಆಗಸ್ಟ್ 20ಕ್ಕೆ ಕೊನೆಗೊಳ್ಳಲಿದೆ.

ಬಲೋನ್ ಡೋ'ರ್ ಪ್ರಶಸ್ತಿ ಪ್ರದಾನ ಸೆ. 22ಕ್ಕೆ

ಪ್ಯಾರಿಸ್ (ಎಎಫ್‌ಪಿ): ವರ್ಷದ ವಿಶ್ವಶ್ರೇಷ್ಠ ಫುಟ್‌ಬಾಲ್ ಆಟಗಾರನಿಗೆ ನೀಡುವ ಬಲೋನ್ ಡೋ'ರ್ ಪ್ರಶಸ್ತಿ ಪ್ರದಾನ ಸಮಾರಂಭವು ಸೆಪ್ಟೆಂಬರ್ 22ರಂದು ನಡೆಯಲಿದೆ ಎಂದು ಆಯೋಜಕರು ಸೋಮವಾರ ತಿಳಿಸಿದ್ದಾರೆ.

ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ನೀಡಲಾಗುವ ಪ್ರಶಸ್ತಿಗಳ ಸಂಖ್ಯೆ ಒಂದೇ ಪ್ರಮಾಣದಲ್ಲಿ ಇರಲಿದೆ. ಇದರಂತೆ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ತಲಾ ಆರು ಪ್ರಶಸ್ತಿಗಳನ್ನು ನೀಡಲಾಗುವುದು. ಇದರ ಜೊತೆಗೆ ಹೆಚ್ಚುವರಿಯಾಗಿ, ಐಕ್ಯಭಾವ ಪ್ರೋತ್ಸಾಹಿಸುವ ಸಾಕ್ರಟಿಸ್ ಪ್ರಶಸ್ತಿಯನ್ನೂ ನೀಡಲಾಗುವುದು. ಈ ಪ್ರಶಸ್ತಿ ಪುರುಷರ ಅಥವಾ ಮಹಿಳಾ ವಿಭಾಗದಲ್ಲಿ ಮುಕ್ತವಾಗಿದೆ.

ನಾಮ ನಿರ್ದೇಶನಗೊಂಡವರ ಪಟ್ಟಿಯನ್ನು ಆಗಸ್ಟ್ ಆರಂಭದಲ್ಲಿ ಘೋಷಿಸಲಾಗುವುದು.

ದುಶಾತುಲೆ ಥಿಯೇಟರ್‌ನಲ್ಲಿ 2024ರ ಪ್ರಶಸ್ತಿ ಸಮಾರಂಭವು ರಿಯಲ್ ಮ್ಯಾಡ್ರಿಡ್ ಬಹಿಷ್ಕಾರದಿಂದ ಕೊಂಚ ಕಳೆಗುಂದಿತ್ತು. ತನ್ನ ತಂಡದಲ್ಲಿದ್ದ ಬ್ರೆಜಿಲ್‌ನ ಫಾರ್ವರ್ಡ್ ಆಟಗಾರ ವಿನಿಸಿಯಸ್ ಜೂನಿಯರ್ ಅವರನ್ನು ಪುರುಷರ ವಿಭಾಗದ ಶ್ರೇಷ್ಠ ಆಟಗಾರ ಪ್ರಶಸ್ತಿಗೆ ಆಯ್ಕೆ ಮಾಡಿಲ್ಲ ಎಂದು ಗೊತ್ತಾಗಿದ್ದರಿಂದ ಆ ಕ್ಲಬ್ ಸಮಾರಂಭ ಬಹಿಷ್ಕರಿಸಿತ್ತು. ಆ ವರ್ಷದ ಪ್ರಶಸ್ತಿ ಸ್ಪೇನ್‌ನ ರೋದ್ರಿ ಅವರ ಪಾಲಾಗಿತ್ತು.

ಬಿಟಿಸಿ: ರೇಸ್ ರದ್ದು

ಬೆಂಗಳೂರು: ಮಳೆಯ ಕಾರಣ ಭಾನುವಾರದಿಂದ ಮಂಗಳವಾರಕ್ಕೆ ಮುಂದೂಡಲಾಗಿದ್ದ ಬೆಂಗಳೂರು ಬೇಸಿಗೆ ರೇಸ್‌ಗಳನ್ನು ಟ್ರ್ಯಾಕ್ ಯೋಗ್ಯವಾಗಿಲ್ಲದ ಕಾರಣ ರದ್ದುಗೊಳಿಸಲಾಗಿದೆ.

ಅದಾಗ್ಯೂ ಈಗಾಗಲೇ ಪ್ರಕಟ ವಾಗಿರುವ ಮಂಗಳವಾರದ ಪ್ರಧಾನ ಆಕರ್ಷಣೆ ವಾರ್ ಹ್ಯಾಮರ್ ಮಿಲಿಯನ್ ರೇಸ್ ಅನ್ನು ಮಾತ್ರ ಮೇ 24ರಂದು (ಶನಿವಾರ) ನಡೆಸಲಾಗುವುದು ಎಂದು ಬೆಂಗಳೂರು ಟರ್ಫ್ ಕ್ಲಬ್ ಪ್ರಕಟಣೆ ತಿಳಿಸಿದೆ.

ರೋಲ್ಯಾಂಡ್ ಗ್ಯಾರೋಸ್‌ನಲ್ಲಿ 25ರಿಂದ ಆರಂಭ

ಫ್ರೆಂಚ್ ಓಪನ್: ಅಲ್ಕರಾಜ್ ಭರ್ಜರಿ ಸಿದ್ಧತೆ

ರೋಮ್ (ಎಪಿ): ಇಟಾಲಿಯನ್ ಓಪನ್ ಪ್ರಶಸ್ತಿ ಮುಡಿಗೇರಿಸಿಕೊಳ್ಳುವ ಮೂಲಕ ಸ್ಪೇನ್‌ನ ಟೆನಿಸ್ ತಾರೆ ಕಾರ್ಲೋಸ್ ಅಲ್ಕರಾಜ್ ಅವರು ಇದೇ 25ರಂದು ಆರಂಭವಾಗುವ ಫ್ರೆಂಚ್ ಓಪನ್ ಟೂರ್ನಿಗೆ ಭರ್ಜರಿ ಸಿದ್ಧತೆ ನಡೆಸಿದ್ದಾರೆ.

ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಕ್ವಾಲಿಫೈಯರ್ ಸುತ್ತುಗಳು ಸೋಮವಾರ ಆರಂಭವಾಗಿದೆ. ಮುಂದಿನ ಭಾನುವಾರ ಮುಖ್ಯಸುತ್ತಿನ ಸ್ಪರ್ಧೆ ಶುರುವಾಗಲಿದೆ. ಪುರುಷರ ಸಿಂಗಲ್ಸ್‌ನಲ್ಲಿ ಹಾಲಿ ಚಾಂಪಿಯನ್ ಅಲ್ಕರಾಜ್ ಪ್ರಶಸ್ತಿ ಉಳಿಸಿಕೊಳ್ಳಲು ಸಜ್ಜಾಗಿದ್ದಾರೆ.

ರೋಮ್‌ನಲ್ಲಿ ಭಾನುವಾರ ನಡೆದ ಎಟಿಪಿ 1000 ಮಾಸ್ಟರ್ ಹಂತದ ಟೂರ್ನಿಯ ಫೈನಲ್‌ನಲ್ಲಿ 22 ವರ್ಷ ವಯಸ್ಸಿನ ಅಲ್ಕರಾಜ್ ಅವರು 7-6 (5), 6-1ರ ನೇರ ಸೆಟ್‌ಗಳಿಂದ ವಿಶ್ವದ ಅಗ್ರಮಾನ್ಯ ಆಟಗಾರ ಯಾನಿಕ್ ಸಿನ್ನರ್ ಅವರನ್ನು ಮಣಿಸಿ ಇಟಾಲಿಯನ್ ಓಪನ್ ಕಿರೀಟ ಗೆದ್ದು, ಆತ್ಮವಿಶ್ವಾಸ ವೃದ್ಧಿಸಿಕೊಂಡಿದ್ದಾರೆ.

ಇಟಲಿಯ ಆಟಗಾರ ಉದ್ದೀಪನ ಮದ್ದು ಸೇವನೆಗಾಗಿ ಮೂರು ತಿಂಗಳ ನಿಷೇಧ ಪೂರ್ಣಗೊಳಿಸಿ ಸ್ಪರ್ಧಾಕಣಕ್ಕೆ ಮರಳಲಿದ್ದರು. ಫ್ರೆಂಚ್ ಓಪನ್‌ನಲ್ಲೂ ಅಲ್ಕರಾಜ್ ಮತ್ತು ಸಿನ್ನರ್ ಪ್ರಶಸ್ತಿ ಗೆಲ್ಲುವ ನೆಚ್ಚಿನ ಆಟಗಾರರಾಗಿದ್ದಾರೆ.

ಇಟಾಲಿಯನ್ ಓಪನ್ ಪ್ರಶಸ್ತಿಯೊಂದಿಗೆ ಕಾರ್ಲೋಸ್ ಅಲ್ಕರಾಜ್ –ಎಎಫ್‌ಪಿ ಚಿತ್ರ

ನಗಾಲ್‌ಗೆ ಮಿಚೆಲ್ ಎದುರಾಳಿ

ಭಾರತದ ಟೆನಿಸ್ ತಾರೆ ಸುಮಿತ್ ನಗಾಲ್ ಅವರು ಫ್ರೆಂಚ್ ಓಪನ್‌ನ ಕ್ವಾಲಿಫೈಯರ್ ಸುತ್ತಿನಲ್ಲಿ ಮಂಗಳವಾರ ಅಮೆರಿಕದ ಮಿಚೆಲ್ ಕ್ರೂಗರ್ ಅವರನ್ನು ಎದುರಿಸಲಿದ್ದಾರೆ.

ಎಟಿಪಿ ರ್‍ಯಾಂಕಿಂಗ್‌ನಲ್ಲಿ 169ನೇ ಸ್ಥಾನದಲ್ಲಿರುವ 27 ವರ್ಷ ವಯಸ್ಸಿನ ನಗಾಲ್ ಕಳೆದ ವಾರ ಫ್ರಾನ್ಸ್‌ನ ಬೋರ್ಡೌನಲ್ಲಿ ನಡೆದ ಎಟಿಪಿ ಚಾಲೆಂಜರ್ ಟೆನಿಸ್ ಟೂರ್ನಿಯಲ್ಲಿ ಮೊದಲ ಸುತ್ತಿನಲ್ಲೇ ಹೊರಬಿದ್ದಿದ್ದರು.

ಫುಟ್‌ಬಾಲ್: ಐಐಎಸ್‌ಸಿ ತಂಡ ಜಯಭೇರಿ

ಬೆಂಗಳೂರು: ಅಕ್ಷಯ್ ಕೃಷ್ಣನ್ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಐಐಎಸ್‌ಸಿ ಎಫ್‌ಸಿ ತಂಡವು ಬಿಡಿಎಫ್‌ಎ ಸಿ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ 7-0ಯಿಂದ ಸ್ಪೋರ್ಟಿಂಗ್ ಯೂತ್ಸ್ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಮತ್ತೊಂದು ಪಂದ್ಯದಲ್ಲಿ ಈಸ್ಟ್ ವೆಸ್ಟ್ ಎಫ್‌ಸಿ 3-2ರಿಂದ ವಿನಾಯಕ ಎಫ್‌ಸಿ ತಂಡವನ್ನು ಸೋಲಿಸಿತು.

ಇತರ ಪಂದ್ಯಗಳಲ್ಲಿ ಹಂಪಿನಗರ ಎಫ್‌ಸಿ ತಂಡವು 9-0ಯಿಂದ ಭಾರತ್ ಮಾತ್ ಎಫ್‌ಸಿ ತಂಡವನ್ನು ಸೋಲಿಸಿತು. ಹಂಪಿನಗರ ತಂಡದ ಪರ ಸೈಖೋಮ್ ಕುಮಾರ್ ತುರಿ ಹ್ಯಾಟ್ರಿಕ್ ಗೋಲು ಗಳಿಸಿದರು.